# ಅಪರಂಜಿ

ತಿಳಿನಗೆಯ ಕಾರಂಜಿ

ಕೊರವಂಜಿ - ಅಪರಂಜಿ ಟ್ರಸ್ಟ್

**ಪ್ರಿಯ ಓದುಗರೇ**

ನನ್ನ ತಂದೆ ಪೂಜ್ಯ ರಾಶಿಯವರು ಕಾಲೇಜಿನಲ್ಲಿರುವಾಗಲೇ ಇಂಗ್ಲೆಂಡಿನಿಂದ ಪ್ರಕಟವಾಗುತ್ತಿದ್ದ ಪಂಚ್ ಹಾಸ್ಯ ಪತ್ರಿಕೆಯಿಂದ ಪ್ರಭಾವಿತರಾಗಿ ಕನ್ನಡದಲ್ಲೂ ಅಂಥಾ ಒಂದು ಪತ್ರಿಕೆ ಇರಬೇಕೆಂದು ಆಶಿಸಿ ಅಡಿಯಿಟ್ಟಾಗ ೧೯೪೨ರಲ್ಲಿ ಹುಟ್ಟಿದ್ದೇ ಕೊರವಂಜಿ. ನಾ ಕಸ್ತೂರಿ, ಅರಾಸೇ, ಆರ್.ಕೆ. ಲಕ್ಷ್ಮಣ್, ಎ.ಕೆ.ರಾಮಾನುಜನ್, ಕೊಳ್ಳೇಗಾಲದ್ನಾರಾಮಾನುಜ, ಶ್ರೀನಿವಾಸ ವೈದ್ಯ, ದಾಶರಥಿ ದೀಕ್ಷಿತ್, ಜಿಪಿ ರಾಜರತ್ನಂ, ಶಿವರಾಮ ಕಾರಂತ, ಕೇಫ, ಎನ್ಕೆ ಮುಂತಾದವರ ಬರಹಗಳಿಂದ ಕಂಗೊಳಿಸಿದ್ದ ಕೊರವಂಜಿ ಅಂದಿನ ದಿನಗಳ ಮನೆಮಾತಾಗಿದ್ದಳು.

೧೯೪೨ರಿಂದ ಪ್ರಾರಂಭವಾಗಿ ೧೯೬೭ರವರೆಗೂ ಸತತವಾಗಿ ೨೫ ವರ್ಷಗಳು ಕಂಗೊಳಿಸಿ ಕನ್ನಡ ಸಾಹಿತ್ಯಪ್ರಿಯರ ಮನೆಮಾತಾಗಿದ್ದ ಕೊರವಂಜಿ ಅನಿವಾರ್ಯ ಕಾರಣಗಳಿಂದ ಪ್ರಕಟಣೆ ನಿಲ್ಲಿಸಿದಾಗ ಅದರ ಮುಂದಿನ ವರ್ಷವೇ ಅಂದರೆ ೧೯೮೩ರಲ್ಲಿ ಜನ್ಮತಾಳಿದ್ದು ಅಪರಂಜಿ. ಅಲ್ಲಿಂದ ಇಲ್ಲಿಯವರೆಗೆ ಅಪರಂಜಿ ಓದುಗರ ಮನಗಳನ್ನು ರಂಜಿಸಿಕೊಂಡು ಬಂದಿದ್ದಾಳೆ. ನಾಡಿನ ಅನೇಕ ಖ್ಯಾತ ಹಾಸ್ಯ ಬರಹಗಾರರು ತಮ್ಮ ಲೇಖನಗಳಿಂದ ಅಪರಂಜಿಯನ್ನು ಸಿಂಗರಿಸುತ್ತಿದ್ದಾರೆ. ಅಪರಂಜಿಯ ನಿರ್ವಹಣೆಗೆ ಒಂದು ಟ್ರಸ್ಟ್ ಪ್ರಾರಂಭಮಾಡಿದ್ದು ಅಪರಂಜಿಯ ಹಾದಿ ಸುಗಮವಾಯಿತು.

ಕೆಲವು ವರ್ಷಗಳಿಂದ ಅಪರಂಜಿ ಹಬ್ಬ ಮತ್ತು ಅಪರಂಜಿ ವಾರ್ಷಿಕ ವಿಶೇಷಾಂಕವನ್ನು ಹೊರತರುವ ಪರಂಪರೆಯನ್ನು ಹಾಕಿಕೊಂಡಿದ್ದೇವೆ. ಅದರಂತೆ ಈ ವರ್ಷವೂ ೫.೪.೨೦೨೦ ರಂದು ಅಪರಂಜಿ ಹಬ್ಬ ಆಯೋಜನೆ ಮಾಡಲಾಗಿತ್ತು ಮತ್ತು ವಿಶೇಷಾಂಕವೂ ಸಿದ್ಧಗೊಳ್ಳುತ್ತಿತ್ತು. ಆದರೆ ನಿಮಗೆಲ್ಲ ತಿಳಿದಿರುವಂತೆ ಮಹಾಮಾರಿ ಕರೋನ ಇಡೀ ಪ್ರಪಂಚವನ್ನೇ ಆವರಿಸಿದ್ದು ಅದರ ಕರಿನೆರಳು ಬಿದ್ದು ಎಲ್ಲ ಕೆಲಸಗಳೂ ತಟಸ್ಥವಾಗಿವೆ. ಹಬ್ಬ ಆಚರಣೆಯಂತೂ ಅಸಾಧ್ಯ. ಇನ್ನು ವಿಶೇಷಾಂಕ ಮುದ್ರಣಗೊಳ್ಳುವುದೂ ಅದನ್ನು ನಿಮಗೆ ಅಂಚೆಯಲ್ಲಿ ತಲುಪಿಸುವುದೂ ಈಗ ಅಡ್ಡಗೋಡೆಯ ಮೇಲಿನ ದೀಪದಂತಾಗಿದೆ. ಆದರೆ ನೀವು ಮನೆಯಲ್ಲೇ ಕೂತು ಅಪರಂಜಿಯ ಒಂದೊಂದೇ ಲೇಖನಗಳನ್ನು ಓದಿ ಆನಂದಿಸಲಿ ಎನ್ನುವ ಉದ್ದೇಶದಿಂದ ವಿಶೇಷಾಂಕವನ್ನು ನಾವು ವಾಟ್ಸಪ್‌ನಲ್ಲಿ ಅಪ್‌ಲೋಡ್ ಮಾಡುತ್ತಿದ್ದೇವೆ.

ಮನೆಯಿಂದ ಆಚೆ ಕಾಲಿಡಬಾರದಂತಹ ಅನಿವಾರ್ಯ ಸನ್ನಿವೇಶದ ಈ ದಿನಗಳಲ್ಲಿ 'ಅಪರಂಜಿ'ಯ ತಿಳಿನಗೆಯ ಲೇಖನಗಳಿಂದ ಓದುಗರ ಮನಸ್ಸು ಹಗುರಾಗಲಿ ಎನ್ನುವುದು ನಮ್ಮ ಉದ್ದೇಶ. **ಈ ಪತ್ರಿಕೆಯನ್ನು ನಿಮ್ಮ ಪರಿಚಿತರಿಗೆಲ್ಲಾ ಹಂಚಿ. ಮಹಾಮಾರಿ ಕರೋನವನ್ನು ಓಡಿಸುವಲ್ಲಿ ನಾವೆಲ್ಲರೂ ಸಹಕರಿಸೋಣ**. ಶಾರ್ವರೀ ನಾಮ ಸಂವತ್ಸರದ ಶುಭಾಶಯಗಳು.

–**ಎಂ. ಶಿವಕುಮಾರ್,** ಪ್ರಧಾನ ಸಂಪಾದಕರು

# ಅಪರಂಜಿ

ತಿಳಿನಗೆಯ ಕಾರಂಜಿ

ಎಪ್ರಿಲ್ - 2020

## ಯುಗಾದಿ ವಿಶೇಷಾಂಕ



**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 37**

**ಸಂಚಿಕೆ – 07**

**ಎಪ್ರಿಲ್ – 2020**

## ಈ ಸಂಚಿಕೆಯಲ್ಲಿ.....

| | | |
|---|---|---|
| ಮೊದಲ ಮಾತು | ಶಿವಕುಮಾರ್ | 5 |
| ಅಪರಂಜಿ ಕಿಡಿ | ಪ್ರಕಾಶ್ | 6 |
| ನಮ್ಮ ನಮ್ಮಲ್ಲಿ | ಶಿವಕುಮಾರ್ | 7 |
| ಒಂದು ಗರ್ವಭಂಗ ಪ್ರಸಂಗವು | ಶ್ರೀನಿವಾಸ ವೈದ್ಯ | 8 |
| ನಂ ಪಾಡು | ಎಚ್.ಗೋಪಾಲಕೃಷ್ಣ | 9 |
| ಎಸ್.ಎನ್.ಶಿವಸ್ವಾಮಿ | ಕೃಷ್ಣ ಸುಬ್ಬರಾವ್ | 14 |
| ಪ್ರವೀಣ್ ಕುಮಾರ್‌ನ ಪಿ.ಎಚ್.ಡಿ.... | ಡಾ. ಸಿ.ಕೆ. ರೇಣುಕಾರ್ಯ | 17 |
| ನಡಿಗೆ ಎಂಬ ವ್ರತ | ಬೇಲೂರು ರಾಮಮೂರ್ತಿ | 20 |
| ಇಂಗ್ಲೀಷಲ್ಲೇನಂತಾರೆ? | ರಕ್ಷಾ ರಮೇಶ್ | 24 |
| ಬಿಷ್ಕಿ ಜೂಸ್ | ಆರತಿ ಘಟಿಕಾರ್ | 26 |
| ವೊ ಕಾಗಜ್ ಕೀ ಕಶ್ತಿ .... | ಜಯಶ್ರೀ ದೇಶಪಾಂಡೆ | 30 |
| ಎಪ್ಪತ್ತರ ತಲ್ಲಣಗಳು | ಶಂಸ ಐತಾಳ | 34 |
| ಹುಂಬ ರಾವಣ | ವೈ. ಎನ್. ಗುಂಡೂರಾವ್ | 36 |

ವ್ಯಂಗ್ಯಚಿತ್ರ
ಮುಖಪುಟ : ನಾಗನಾಥ್
ಒಳಪುಟಗಳಲ್ಲಿ : ರಘುಪತಿ ಶೃಂಗೇರಿ, ನಾಗನಾಥ್

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003. email: koravanji42@hotmail.com ದೂರವಾಣಿ: 080-23345259

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

| | | |
|---|---|---|
| ಪಂತರಿಗೊಂದು ಪತ್ರ | ಕೊಳ್ಳೇಗಾಲದ್ನಾರಾಮಾನುಜ | 39 |
| ಜ್ಯೋತಿಷ್ಯ ಶಾಸ್ತ್ರ ಮತ್ತು ನಾನು | ನಂದಿನಿ ಕಾಪಡಿ | 41 |
| ನೀವು ಹಿರಿಯ ನಾಗರೀಕರೇ? | ಸಿ. ಆರ್. ಸತ್ಯ | 49 |
| ಪ್ರೇತ ಡಾಟ್ ಕಾಂ | ಶಿವು | 52 |
| ಮತ್ತೊಂದು ರಾಮಾಯಣ | ಕುಮುದಾ ಪುರುಷೋತ್ತಮ | 59 |
| ತುಂತುರು | ದಂನಆ | 61 |
| ಡುಂಡಿ ಅಪಾರ್ಥಕೋಶ | ಎಚ್. ಡುಂಡಿರಾಜ್ | 62 |
| ವರ್ಕ್ ಫ್ರಂ ಹೋಂ ಕಲ್ಚರ್ರು | ಎನ್. ರಾಮನಾಥ್ | 65 |
| ತಲೆದಂಡ | ಶರತ್ ಕಲ್ಕೋಡ್ | 69 |
| ಮೀಸೆಯರ ಗಂಡ | ಚಿತ್ರಾ ರಾಮಚಂದ್ರನ್ | 74 |
| ರಘುಪತಿ ಶೃಂಗೇರಿಯವರ ಜೊತೆ | ಸಹನಾ ಪ್ರಸಾದ್ | 84 |
| ಚಾನೆಲ್ ಕಲಾವಿದರಿಗೆ ಕನ್ನಡ ಪಾಠ | ಗಣೇಶ ಹೆಗ್ಗಡೆ | 87 |
| ಖಾಲಿ ಕೈ, ಶಾಲೆಗೆ ಜೈ | ಎಂ.ಎಸ್. ನರಸಿಂಹಮೂರ್ತಿ | 89 |
| ನೀಲಮೇಘಂ ಮತ್ತು ಕನಸುಗಳು | ಪಾಲಹಳ್ಳಿ ವಿಶ್ವನಾಥ | 92 |
| ಕೆ. ಮಾದೇಸನ ಕಾವ್ಯ ಪ್ರಸಂಗ | ಸತ್ಯೇಶ್ ಎನ್. ಬೆಳ್ಳೂರ್ | 96 |
| ಸ್ವಭಾವ | ವಸುಮತಿ ಉಡುಪ | 101 |
| ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಬ್ಯಾನ್ಕ್ವೆಟ್ಟು | ಇ.ಆರ್. ರಾಮಚಂದ್ರನ್ | 103 |
| ಏಕಾಕ್ಷರಿಗಳು | ಗೌತಮ | 106 |
| ಸ್ಪೇಸ್ ಲೈನ್ | ನುಗ್ಗೇಹಳ್ಳಿ ಪಂಕಜ | 110 |
| ಜಾರುವ ಸಮಯ | ಸಾಯಿಲಕ್ಷ್ಮಿ | 112 |
| ಕೊಡೆ ಬಣ್ಣದ ಕೊಡೆ | ಎನ್. ಶೈಲಜಾ ಹಾಸನ್ | 116 |
| ಸಿನಿಮಾ ಸಂಬಂಧ | ಡಾ. ಶ್ಯಾಮಲಾ ರವಿಶಂಕರ್ | 118 |
| ಮಾಬ್ಲಣ್ಣನ ಥಾಯ್ಲಂಡ್ ಪ್ರವಾಸ | ಎಚ್. ಶಾಂತರಾಜ ಐತಾಳ್ | 121 |

# ಮೊದಲ ಮಾತು

**- ಶಿವಕುಮಾರ್**

ಕರೋನಾದ ಕರಾಳ ಛಾಯೆಯಲ್ಲಿ, ಹೊಸ ಸಂವತ್ಸರ ಶಾರ್ವರಿಯನ್ನು ಪ್ರವೇಶಿಸುತ್ತಿದ್ದೇವೆ. ಮುಂದೇನು ಆಗುವುದೆಂಬುದನ್ನು ತಿಳಿಯದೆ ಮುನ್ನಡೆಯಬೇಕಾದ ಪರಿಸ್ಥಿತಿ ನಮ್ಮ ಮುಂದಿದೆ. ಇಂತಹ ಸಂದರ್ಭದಲ್ಲಿ ತೀವ್ರ ಆತಂಕಕ್ಕೆ ಎಡೆಗೊಡದೆ, ಸಾಮಾನ್ಯ ಜೀವನವನ್ನು ನಡೆಸಿಕೊಂಡು ಹೋಗುವುದು ಜಾಣತನ. ಈ ನಿಟ್ಟಿನಲ್ಲಿ ಅಪರಂಜಿ ನಿಮ್ಮನ್ನು ರಂಜಿಸಲು ಹೊಸ ಉಡುಗೆ ತೊಟ್ಟು ಬರುತ್ತಿದ್ದಾಳೆ.

ಈ ಬಾರಿಯ ಯುಗಾದಿ ವಿಶೇಷಾಂಕವನ್ನು ಹೊರತರಲು ಸಹಾಯಮಾಡಿದ ಎಲ್ಲ ಬರಹಗಾರ, ಬರಹಗಾರ್ತಿಯರಿಗೂ ಅಪರಂಜಿ ಆಭಾರಿ. ಅಚ್ಚುಕಟ್ಟಾಗಿ ಸಂಚಿಕೆ ಹೊರಬರಲು ಕಾರಣರಾದ ಒಮೇಗಾ ಲೇಸರ್‌ಟೆಕ್‌ನ ರವೀಂದ್ರ ರಾವ್, ಮುದ್ರಣ ಮತ್ತು ಅಂಚೆ ರವಾನೆಯ ಜವಾಬ್ದಾರಿಯನ್ನು ಹೊತ್ತ ರವಿ ಗ್ರಾಫಿಕ್ಸ್‌ನ ವಿ. ಆರ್. ಭರತ್ ಹಾಗೂ ನಾಗರಾಜ್ ಅವರಿಗೆ ನಮ್ಮ ನಮನಗಳು.

ಈ ಹೊಸ ಸಂವತ್ಸರ ಎಲ್ಲರಿಗೂ ಸಕಲ ಸನ್ಮಂಗಳವನ್ನುಂಟು ಮಾಡಲಿ ಎಂದು ಅಪರಂಜಿ ಮಂಡಿಯೂರಿ ಪ್ರಾರ್ಥಿಸುತ್ತಾಳೆ.

# ಅಪರಂಜಿ ಕಿಡಿ



– **ಪ್ರಕಾಶ್**

ಸೇನಾ ಕಮಾಂಡ್‌ಗೆ ಮಹಿಳೆಯರು – ಸುದ್ದಿ

**ಅಪರಂಜಿ ನಲಿದಾಡಿದಳಂತೆ!!**

★★★

ಅಮೆರಿಕಾದಲ್ಲಿ ಯೋಗ ವಿದ್ಯಾಲಯವನ್ನು ಸ್ಥಾಪಿಸಲಿರುವ ವಿವೇಕಾನಂದ ಕೇಂದ್ರಕ್ಕೆ ಅಪರಂಜಿಯ ಶುಭಾಶಯಗಳು!!

★★★

ಹಗಲು ರಾತ್ರಿ ಕ್ರಿಕೆಟ್ ಟೆಸ್ಟ್ ಪಂದ್ಯ – ಸುದ್ದಿ

**ಅಂಪೈರುಗಳು ಎಚ್ಚರದಿಂದ ಇರಬೇಕಾಗುತ್ತೆ!!**

★★★

ಅತಿ ಸೂಕ್ಷ್ಮವಾದ ಆರ್.ಎನ್.ಎ. ತುಣುಕೊಂದು, ಜಗತ್ತನ್ನೆಲ್ಲ ತಲ್ಲಣಗೊಳಿಸುತ್ತಿದೆಯಲ್ಲ ಎಂದು ಅಪರಂಜಿ ಚಕಿತಳಾದಳಂತೆ!!

★★★

ನಗರಕ್ಕೆ 50 ಮಹಿಳಾ ಪೊಲೀಸ್ ಬೊಂಬೆಗಳು – ಪತ್ರಿಕೆ

**ಅವನ್ನೇ ನೋಡುತ್ತಾ ಅಪಘಾತ!!**

★★★

ಹಬ್ಬದ ಹಿನ್ನೆಲೆ; ಹೂವು, ಹಣ್ಣು ದರ ಏರಿಕೆ – ಪತ್ರಿಕೆ

ಶಿವ, ಶಿವಾ!!

★★★

ಟ್ರಂಪ್ ಕಾರ್ಯಕ್ರಮಕ್ಕೆ 85 ಕೋಟಿ – ಸುದ್ದಿ

**ಆತ ಭಾರತಕ್ಕೆ ಯಾವ ಕಾರ್ಡ್ ತೋರಿಸುತ್ತಾರೋ?!**

★★★

ಪಾಲಿಟೆಕ್ನಿಕ್ ಉಪನ್ಯಾಸಕರಿಗೆ ಶೀಘ್ರ ವೇತನ ಭರವಸೆ – ಪತ್ರಿಕೆ

**ಭರವಸೆಯಿಂದಲೇ ಭಯ?!**

★★★

# ನಮ್ಮ ನಿಮ್ಮಲ್ಲಿ

• ಶಿವಕುಮಾರ್

ಅದು ದಹರಾಕಾಶ. ಅಲ್ಲಿ ಸೂರ್ಯ ಚಂದ್ರರಿಲ್ಲ. ಹಾಗಿದ್ದರೂ ಅಲ್ಲಿನ ಬೆಳಕಿಗೆ ಸಾಟಿಯೇ ಇಲ್ಲ. ಸ್ವಯಂಪ್ರಭೆಯುಳ್ಳ ಬ್ರಹ್ಮದೇವನ ಮುಂದೆ ಪೃಥ್ವೀ ಅವನತವದನೆಯಾಗಿ ನಿಂತಿದ್ದಳು. ಅವಳ ದುಗುಡ ತುಂಬಿದ ಮುಖವನ್ನು ನೋಡಿ ಬ್ರಹ್ಮದೇವ ಅತ್ಯಂತ ವಾತ್ಸಲ್ಯದಿಂದ ಅವಳನ್ನು ಕುರಿತು 'ಹೇಳು ಮಗಳೇ, ಏತಕ್ಕೆ ಈ ವಿಷಾದ?' ಎಂದು ಪ್ರಶ್ನಿಸಿದ.

ಭೂದೇವಿ ಮೆಲುದನಿಯಿಂದ, ''ಹೇ ತಂದೆ, ನೀನು ನನ್ನನ್ನು ಸೃಷ್ಟಿಸಿದಾಗಲೇ, ನೀನು ತಾಳ್ಮೆಯ ಪ್ರತಿರೂಪ, ಸಹನಾಶೀಲತೆ ನಿನ್ನ ಸಹಜ ಗುಣ, ತಾಯಿಯಂತೆ ತಾಳ್ಮೆಯಿಂದ ನಾನು ಸೃಷ್ಟಿಸಿರುವ ಜೀವರಾಶಿಯನ್ನು ಸಲಹು ಎಂದು ಆಣತಿ ನೀಡಿದ್ದೆ. ಇಷ್ಟು ಯುಗಗಳ ಕಾಲ ನಾನು ಸಹನೆಯಿಂದಲೆ ಭೂಲೋಕದ ವಿದ್ಯಮಾನಗಳನ್ನೆಲ್ಲಾ ಸಹಿಸಿರುವೆ. ಆದರೆ ಈಚೆಗೆ ನನ್ನ ಶಕ್ತಿ ಕುಂದುತ್ತಿದೆ. ಮಾನವ ತನ್ನ ದುರಾಶೆ, ದ್ರವ್ಯದ ತೃಷೆ ಇವುಗಳಿಗಾಗಿ ನನ್ನ ಒಡಲನ್ನೆ ಬಗೆದು, ಸಸ್ಯಶಾಲಿನಿಯಾಗಿದ್ದ ನನ್ನನ್ನು ಬತ್ತಲೆಗೊಳಿಸುತ್ತಿದ್ದಾನೆ. ಇದನ್ನೆಲ್ಲಾ ಹೇಗೆ ಸಹಿಸಲಿ?'' ಎಂದು ಗದ್ಗದ ಕಂಠದಿಂದ ನುಡಿಯುತ್ತಾಳೆ. ಕಾರುಣ್ಯ ಸಿಂಧು ಬ್ರಹ್ಮದೇವ, ''ಚಿಂತೆಯನ್ನು ಬಿಡು, ಶುಭಮಸ್ತು'' ಎನ್ನುತ್ತಾ ಪೃಥ್ವಿಯನ್ನು ಬೀಳ್ಕೊಡುತ್ತಾನೆ.

★★★

ತಮ್ಮ ಸ್ವಯಂಪ್ರೇರಣೆಯಿಂದಲೇ ಗೃಹಬಂಧನವನ್ನು ಸ್ವೀಕರಿಸಿದ್ದ ಆ ಜನ ಕಾಲದ ಸದ್ವಿನಿಯೋಗಕ್ಕಾಗಿ ಸಂಗೀತ, ಸಾಹಿತ್ಯಗಳ ಮೊರೆ ಹೋಗಿದ್ದರು. ಕಾಲಕಾಲಕ್ಕೆ ಆಹಾರ ವ್ಯಾಯಾಮಗಳಿಂದ ಕೂಡಿದ ಸಾತ್ವಿಕ ಜೀವನಶೈಲಿ ಅವರದ್ದಾಗಿತ್ತು. ದಿನದ ಬಹುಪಾಲು ಮೌನದಲ್ಲಿ ಕಳೆಯುತ್ತಿದ್ದ ಈ ಜನರಿಗೆ ಮೌನದಲ್ಲಿನ ಬೃಹತ್ ಶಾಂತಿ ಗೋಚರಿಸತೊಡಗಿತು. ಒಟ್ಟಿನಲ್ಲಿ ಈ ಜನರ ಜೀವನ ಶೈಲಿಯೇ ಸಂಪೂರ್ಣವಾಗಿ ಬದಲಾಗತೊಡಗಿತು.

★★★

ಅಪಾಯದ ದಿನಗಳು ಕಳೆದ ನಂತರ ಅವರೆಲ್ಲಾ ಗೃಹಬಂಧನವನ್ನು ತ್ಯಜಿಸಿ ಒಂದುಗೂಡಿದರು. ಅಪಾಯದಲ್ಲಿ ಅಸುನೀಗಿದ್ದವರಿಗೆ ಶ್ರದ್ಧಾಂಜಲಿ ಸಲ್ಲಿಸಿ, ದುರಾಶೆ, ಅಸೂಯೆಗಳಿಲ್ಲದ ಒಂದು ಹೊಸ ಜೀವನ ಶೈಲಿಯನ್ನು ರೂಢಿಸಿಕೊಂಡರು. ಭೂದೇವಿ ಮತ್ತೆ ಸಸ್ಯಶಾಲಿನಿಯಾಗಿ ಕಂಗೊಳಿಸಿದಳು. ಕಾಡುಗಳು ಬೆಳೆದವು. ಮಾನವರು, ವನ್ಯಮೃಗಗಳೊಂದಿಗೆ ಸಹಬಾಳ್ವೆ ನಡೆಸಲು ಮುಂದಾದರು. ಜಾಗತಿಕ ತಾಪಮಾನ ಮತ್ತೆ ಸಹಜ ಸ್ಥಿತಿಯನ್ನು ಪಡೆಯಿತು. ಜೀವರಾಶಿಗಳ ಜೀವನ ಚಕ್ರ ಮತ್ತೆ ಸರಾಗವಾಗಿ ತಿರುಗತೊಡಗಿತು. ■

# ಒಂದು ಗರ್ವಭಂಗ ಪ್ರಸಂಗವು

● ಶ್ರೀನಿವಾಸ ವೈದ್ಯ

ಅಪರಂಜಿ ಸಂಪಾದಕರಾದ ಶಿವಕುಮಾರರಿಗೆ ''ಸಂದೇಶ ಮಾಧ್ಯಮ ಪ್ರಶಸ್ತಿ'' ದೊರೆತ ಸಂದರ್ಭ ಅವರಿಗೆ ಮತ್ತು ಅಪರಂಜಿಗೆ ಶುಭ ಹಾರೈಸುತ್ತ ಈ ಬರಹ.

ಶಿವಕುಮಾರರು ತಮ್ಮ ಕಳೆದ ತಿಂಗಳ ಸಂಪಾದಕೀಯದಲ್ಲಿ ''ಅಪರಂಜಿ''ಯ ಮೊದಮೊದಲ ದಿನಗಳನ್ನು ನೆನಪಿಸಿದಾಗ, ''ಅಪರಂಜಿ'' ಯಿಂದಲೇ ಓರ್ವ ಲೇಖಕನಾದ ನನ್ನದೂ ನೆನಪುಗಳ ಸಾಲು ಹಣತೆ ಹೊತ್ತಿಕೊಂಡಿತು. ಆ ಸಾಲಿನ ಕೆಲವು ಹಣತೆಗಳು.


★

ನೂರಾರು ವರ್ಷಗಳ ಹಿಂದೆ, ನಲವತ್ತರ ದಶಕದ ಕೊನೆಕೊನೆಯ ದಿನಗಳಿರಬೇಕು. ಆಗ ನಮ್ಮ ತಂದೆ ಧಾರವಾಡದಲ್ಲಿ ಅಡ್ವೊಕೇಟ್ ಆಗಿದ್ದವರು, ಅಲ್ಲಿನ ''ಮಿತ್ರ ಸಮಾಜ'' ಎಂಬ ಪ್ರತಿಷ್ಠಿತ ಕ್ಲಬ್‌ನ ಸೆಕ್ರೆಟರಿ ಆಗಿದ್ದರು.

ಅಂದಿನ ದಿನಗಳ ಒಂದು ನಿಯಮವೇ ಏನೋ ಎಂಬಂತೆ ಪ್ರತಿ ಭಾನುವಾರ ನಮ್ಮ ತಂದೆ ಮಕ್ಕಳಾದ ನಮ್ಮನ್ನು (ಸರೋಜಕ್ಕ ಮತ್ತು ನಾನು) ಕ್ಲಬ್‌ಗೆ ಕರಕೊಂಡು ಹೋಗಿ ನಮಗೆ ತಿಂಡಿ ಕೊಡಿಸಿ, ತಾವು ಟೆನ್ನಿಸ್‌ಗೋ, ಇಸ್ಪೀಟಿಗೋ ನಡೆದುಬಿಡುತ್ತಿದ್ದರು.

ತಿಂಡಿ ತಿಂದು ನಾವು ಕ್ಲಬ್‌ನ ವಾಚನಾಲಯಕ್ಕೆ ಜಿಗಿಯುತ್ತಿದ್ದೆವು. ಅಲ್ಲಿ ಅಂದಿನ ಪತ್ರಿಕೆಗಳಾದ, ''ಮೈಸಿಂಡಿಯಾ'', ''ಸದರ್ನ್ ಇಕಾನಮಿಸ್ಟ್'', ''ಶಂಕರ್ಸ್ ವೀಕ್ಲಿ'', ''ಪ್ರಜಾಮತ'', ''ಕರ್ಮವೀರ'', ''ಸಂಯುಕ್ತ ಕರ್ನಾಟಕ'', ಓಲಟಿ. ವಿ.ಗುಪ್ತರ ''ಕತೆಗಾರ'' ಮುಂತಾದ ಗಾತ್ರದ ಪತ್ರಿಕೆಗಳ ನಡುವೆ ಸಿಕ್ಕಿಕೊಂಡ ''ಕೊರವಂಜಿ''ಯನ್ನು ಹುಡುಕಿ ತೆಗೆಯುತ್ತಿದ್ದೆವು. ಹುಡುಕಿ ತೆಗೆದು ಓದಲು ನಾ ಮೊದಲು ತಾ ಮೊದಲೆಂದು ಕಚ್ಚಾಡುತ್ತಿದ್ದೆವು.

ಅಂದಿನ ಎರಡು ಲಕ್ಷ್ಮಣ್ ಕಾರ್ಟೂನುಗಳು ಇಂದಿಗೂ ಕಚಗುಳಿ ಇಡುತ್ತಿವೆ.



" ಆದರ ಹತ್ರ ಹೋಗ್ಬೇಡ ಕಣೋ. ನೆನ್ನೆ ನಮ್ತಂದೆನ ಕಚ್ಬಿಡ್ತಂತೆ.! ಅವರು ಹೇಳ್ತಾ ಇದ್ರು. "

20



"ಸ್ವಾಮಿ, ಇಷ್ಟೆಲ್ಲ ಮಾಡ್ತೀರಲ್ಲ, ಈ ಪೆನ್ನನ್ನ ಸ್ವಲ್ಪ ಬಿಚ್ಚಿಕೊಡಿ ನೋಡೋಣ"

ಏನು ಯೋಗವೋ ಮುಂದೆ ಸುಮಾರು ವರುಷಗಳು ಕಳೆದ ಮೇಲೆ, ನಿವೃತ್ತಿಯ ಹೊತ್ತಿಗೆ ನಾನು ''ಅಪರಂಜಿ''ಗೆ ನನ್ನ ಮೊದಲ ಲೇಖನ ಬರೆದೆ. ಆಗೆಲ್ಲ ಇನ್ನೂ ಶ್ರೀರಂಗ, ಸುನಂದಮ್ಮ, ಅ.ರಾ.ಸೇ., ಕೇಫ, ಎಂ.ಎಸ್.ಕೆ. ಪ್ರಭು ಮುಂತಾದ ಹೆಬ್ಬುಲಿಗಳು ''ಅಪರಂಜಿ''ಗೆ ಬರೆಯುತ್ತಿದ್ದರು.

ಇಂತಹ ದಿಗ್ಗಜರ ಜತೆಗೆ ನನ್ನ ಹೆಸರನ್ನು ಸೇರಿಸಿಕೊಳ್ಳುವುದೇ ಒಂದು ಹೆಮ್ಮೆ. ಅಪರಂಜಿಯಲ್ಲಿ, ನನ್ನ ಕೆಲವು ಬರಹಗಳಾದ ''ಶ್ರದ್ಧಾ'', ''ನಾಮಾಂಕಣ'', ''ಬಿದ್ದೂರಿನ ಬಿಗ್‌ಬೆನ್'', ''ಬದುಕಲು ಕಲಿಯಿರಿ'', ''ದತ್ತೋಪಂತನ ಪತ್ತೇದಾರಿ'', ''ಪಾರ್ಶ್ವ ಸಂಗೀತ'', ''ಗಂಡಭೇರುಂಡ'' ಮುಂತಾದವು ಅಷ್ಟಿಷ್ಟು ಜನ ಮೆಚ್ಚುಗೆ ಗಳಿಸಿದ್ದವೆಂದು ತೋರುತ್ತದೆ. ಕೆಲ ಕೆಲವು ಹವ್ಯಾಸಿಗಳೂ, ಹಿರಿಯರೂ, ನನ್ನ ಬರಹಗಳಲ್ಲಿ ಅದೇನು ಕಂಡರೋ ಅವುಗಳನ್ನು ರಂಗಕ್ಕೆ ರೂಪಾಂತರಿಸತೊಡಗಿದರು. ಹಾಗೆ ರಂಗಕ್ಕೆ ಬಂದವುಗಳಲ್ಲಿ, ''ಹೆಗ್ಗೋಡಿ''ನವರ ''ಶ್ರದ್ಧಾ'', ''ರಂಗಾಯಣ''ದ ''ಬದುಕಲು ಕಲಿಯಿರಿ'', ''ರಂಗವಲ್ಲಿ''ಯ (ಪ್ರಶಾಂತ ಹಿರೇಮಠ) ''ಪಾರ್ಶ್ವ ಸಂಗೀತ'' ಮುಂತಾದವುಗಳನ್ನು ನೆನೆಯಬೇಕು.

''ಶ್ರದ್ಧಾ''ವಂತೂ ಶತಮಾನೋತ್ಸವ...........ಭೇ.

ವಾಚಕ ಮಹಾಶಯರೇ ಕ್ಷಮಿಸಬೇಕು. ''ಹೆಮ್ಮೆ'' ಹೆಚ್ಚಾಗಿ, ಜಂಭವಾಗುತ್ತಿದೆಯೋ ಏನೋ ಮಹಿಷನಿಗೊಬ್ಬ ಚಾಮುಂಡಿ ಇರಲೇ ಬೇಕಲ್ಲವೇ? ಹಾಗೇ ನನಗೂ ಆಯಿತು.

★

ಮೊನ್ನೆ ಯಾವದೋ ತಾಲೂಕಾ ಸ್ಥಳದಲ್ಲಿ ''ಶ್ರದ್ಧಾ'' ನಾಟಕ ಆಡುತ್ತಿದ್ದರಂತೆ. ಪ್ರದರ್ಶನಕ್ಕಿಂತ ಎರಡು ದಿನ ಮುಂಚೆ ಭರದಿಂದ ಪ್ರಚಾರ ಸಾಗಿತ್ತಂತೆ. ಒಂದು ಆಟೋರಿಕ್ಷಾದಲ್ಲಿ ಕರಪತ್ರ ಹಂಚುತ್ತಾ ಮೈಕಿನಲ್ಲಿ ಆರ್ಭಟಿಸುತ್ತಿದ್ದರಂತೆ.

''ಬನ್ನಿ, ಬನ್ನಿ, ನಿಮ್ಮವರನ್ನೂ ಕರೆತನ್ನಿ, ನೋಡಿ, ನೋಡಿ, ನೋಡಿ ಆನಂದಿಸಿ. ಶ್ರೀನಿವಾಸ ವೈದ್ಯರ ''ಶ್ರಾದ್ಧ... ಶ್ರಾದ್ಧ... ಶ್ರಾದ್ಧ... ಶ್ರೀನಿವಾಸ ವೈದ್ಯರ ಶ್ರಾದ್ಧ''.

■

# ನಂ ಪಾಡು..... !

● ಎಚ್. ಗೋಪಾಲಕೃಷ್ಣ

ಮೊನ್ನೆ ನನ್ನ ಮಾಜಿ ಕೊಲೀಗ್ ಸುಬ್ಬು ಸಿಕ್ಕಿದ. ಮಾರ್ಕೆಟ್‌ನಲ್ಲಿ ನಿಂಬೆಹಣ್ಣು ಚೌಕಾಸಿ ಮಾಡ್ತಾ ಇದ್ದೆ. ಐದಕ್ಕೆ ಇಪ್ಪತ್ತು ಅಂತ ಆಕೆ, ಅಂದರೆ ನಿಂಬೆ ಮಾರೋ ಹೆಂಗ್ಸು, ಹದಿನೇಳಕ್ಕೆ ಕೊಡು, ಇಲ್ಲ ಅಂದರೆ ಆರು ಮಾಡ್ಕೋ ಅಂತ ನಾನು..

ಆಗಲೇ ಮೂವತ್ತು ಪ್ಲಸ್ ಎಂಟು ನಿಮಿಷದ ಚೌಕಾಸಿ ಆಗಿ, ಇನ್ನೇನು ಹಾಳಾಗಿ ಹೋಗಲಿ ಈ ಯಪ್ಪನ ಹತ್ರ ಅದೇನ್ಮಾತು ಅಂತ ಆಕೆ ಕೊಟ್ಟುಬಿಡಬೇಕು, ಅಷ್ಟರಲ್ಲಿ ಹೋಯ್ ಗೋಪಿ ಅಂತ ಬೆನ್ನ ಮೇಲೆ ಯಾರೋ ಬಾರಿಸಿದರು ಅಂತ ತಿರುಗಿದರೆ ಈ ಸುಬ್ಬಣ್ಣ !

ಏನೋ ಇನ್ನೂ ಈ ಚಾಳಿ ಬಿಟ್ಟಿಲ್ಲವಾ....? ಅಂದ.

ವಯಸ್ನಲ್ಲಿ ತರಕಾರಿ ಅವರ ಹತ್ತಿರ ಕಷ್ಟ ಸುಖ ವಿಚಾರಮಾಡಿಕೊಂಡು ಗಂಟೆ ಗಟ್ಟಲೆ ಸಮಯ ಕಳೆಯುತ ಇದ್ದೆ. ಪಾಪ ಅವರೂ ಎಲ್ಲೇ ಸಿಕ್ಕಿದರೂ ಮಕ್ಕರಿ ಕೆಳಗಿಟ್ಟು  ಸುಮಾರು ಹೊತ್ತು ಕಷ್ಟ ಸುಖ ಹಂಚಿ ಕೊಳ್ಳೋರು. ಯಾರೇ ತರಕಾರಿ ಮಾರುವ ಜನ ಸಿಕ್ಕಿದರೂ ಮಾತಿಗೆ ಅಂತ ನಿಲ್ಲಿಸುವರು. ಇದು ನನ್ನ ಗೆಳೆಯರ ಗುಂಪಿನಲ್ಲಿ ಭಾರೀ ನಗೆ ಪಾಟಲಿನ ಸಂಗತಿ ಆಗಿತ್ತು. ತರಕಾರಿ ರೇಟು ತಿಳ್ಕೋಬೇಕು ಅಂದರೆ ನನಗೆ  ಫೋನ್ ಮಾಡಿ ಬದನೇಕಾಯಿ ಹೇಗೆ, ಬೆಂಡೆಕಾಯಿ ಹೇಗೆ, ಆಲೂಗೆಡ್ಡೆ ಹೇಗೆ, ಗೋರಿ ಕಾಯಿ ಎಷ್ಟು ತೂಕಕ್ಕೆ,  ಟೊಮೊಟೊ ಹೇಗೆ, ಅವರೇ ಕಾಯಿ ಬಂದಿದೆಯಾ ಮಾರ್ಕೆಟ್‌ಗೆ...... ಅಂತ ವಿಚಾರಿಸಿ ತಿಳ್ಕೋತಾ ಇದ್ದರು.

ತರಕಾರಿ ಮಾರುವ ಹೆಂಗಸಿನ ಸಂಗಡ ಮಾತು ಕಥೆ ಆಡೋದು ಕೆಲವರಿಗೆ ನಿಷೇಧ! ಅದರಿಂದ ಅವರಿಗೆ ನಾನು ಫನ್ನಿ ಫೆಲ್ಲೋ! ನಾನು ಅವರಿಗೆ ತರಕಾರಿ ಮಾರೋರು ಮತ್ತು ನಾನೂ ಸಹ  ಶ್ರಮಿಕ ವರ್ಗಕ್ಕೆ ಸೇರಿದೋರು ಅಂತ ಸಮಜಾಯಿಷಿ  ಕೊಡುತ್ತಿದ್ದೆ. ಕೆಲಸದಿಂದ ರಿಟೇರ್ ಆದಮೇಲೆ ಸೊಪ್ಪು  ಮಾರುವವರ ಸಂಘ ಕಟ್ಟಿ ಬೆಳೆಸಬೇಕು ಅಂತ ಆಸೆ ಇತ್ತು ಅವ್ವಾಗ! ಆದರೆ ವಯಸ್ಸಿನಲ್ಲಿ  ನೆನೆಸಿಕೊಂಡದ್ದು ಯಾವುದೂ ಈಡೇರಲ್ಲ ವಂತೆ.

ಈಗ ಅದೆಲ್ಲಾ ಅಂದರೆ ಆಸೆಗಳು ಆವಿಯಾಗಿದೆ, ಬಿಡಿ ಈ ಕತೆ.

ಸುಬ್ಬು  ಮಾಜಿ ಕೊಲೀಗ್ ಅಂದೆ, ಆಮೇಲೆ ಬೇರೆ ದೊಡ್ಡ ಕೆಲಸ ಸೇರಿದ್ದ, ದೊಡ್ಡ ಸಂಪಾದನೆ ಮಾಡಿದ. ಊರ ಆಚೆ ಗೇಟ್ ಕಮ್ಯೂನಿಟಿಯಲ್ಲಿ ಮೂವತ್ತು ಮತ್ತೆ ಏಳನೇ ಮಹಡಿಲಿ ಮನೆ ತಗೊಂಡು ಜನ ಸಂಪರ್ಕ ಇಲ್ಲದೇ ಫುಲ್ ಸೆಮಿ ಆಗಿದಾನೆ. ತರಕಾರಿ ತಗೋಳ್ಳೋಕೆ ಅವನು ರಸ್ತೆಗೆ ಬರಬೇಕಿಲ್ಲ. ಫೋನು ಹೊಡೆದರೆ ಸಾಕು ಅವನ ಮನೆ ಬಾಗಿಲಿಗೆ ಬರುತ್ತಂತೆ. ಹತ್ತು ರೂಪಾಯಿ ಸೊಪ್ಪಿನ ಕಂತೆ ನೂರು, ಸಾವಿರ  ರೂಪಾಯಿ ಆಗಿ ಬಿಡುತ್ತೆ ಅಂತ ಅವನಿಗೆ ಗೊತ್ತಿಲ್ಲದೇ ಇಲ್ಲ. ಆದರೂ ಪ್ರೆಸ್ಟೀಜ್ ನೋಡಿ, ತೆಪ್ಪಗೆ ಇದಾನೆ ಮತ್ತು ಅವನ ಸಿಸ್ಟಮ್ ಒಳ್ಳೇದು ಅಂತ ವಾದ ಮಾಡ್ತಾನೆ.

ಮಾಡಲಿ ಬಿಡಿ, ಸೇರಿಸಿ ಇಟ್ಟಿರೋ ಪುಡಿ ಕಾಸು ತರಕಾರಿ ಅವರಿಗೆ ಕೊಟ್ಟು ಕೈ ಖಾಲಿ ಆದಮೇಲೆ ಅವನೂ ರಸ್ತೆಗೆ ಬರಲೇಬೇಕು, ಅವರಪ್ಪನೂ ರಸ್ತೆಗೆ ಬರಲೇಬೇಕು ಅನ್ನೋ ಲಾಜಿಕ್ಕು ನಂದು.

ಆದರೂ ನನಗೆ ಕೊರೆಯೋದು ಪಾಪ ಮುಂಡೇದು ತರಕಾರಿ ಅವರ ಹತ್ರ ಮಾತಾಡೋ ಖುಷಿ ಕಳಕೊಂಡನಲ್ಲ ಈತ ಅಂತ.

ಅವನ ಪಾಡು ಅಯ್ಯೋ ಅನಿಸುತ್ತೆ.......

ವಾಕಿಂಗ್ ಮುಗಿಸಿ ಹಾಲಿನ ಬೂತ್‌ಗೆ ಹೋಗಿ ಮೂರು ನೀಲಿ ಹಾಲು, ಅರ್ಧ ಮೊಸರು ತರೋದು ನನ್ನ ರೂಢಿ. ಅದನ್ನ ಬ್ಯಾಗ್ ನಲ್ಲಿ ಇಟ್ಟುಕೊಂಡು ಅದೇ ವಾಕಿಂಗ್ ಶೈಲಿ ಮುಂದುವರೆಸಿ ದರ್ಶಿನಿಗೆ ಬಂದು ಸ್ಟ್ರಾಂಗ್ ಶುಗರ್ ಲೆಸ್ ಕಾಫಿ ಹೀರುತ್ತಾ ವಾಟ್ಸ್ ಅಪು, ಮೇಲು, ಫೇಸ್ ಬುಕ್ ನೋಡಿ ಇನ್ನೊಂದು ಶುಗರ್ ಲೆಸ್ ಹೀರಿ ಬ್ಯಾಗ್ ತಗೊಂಡು ವಾಕಿಂಗ್ ಶೈಲಿ ಮುಂದುವರೆಸಿ ಗೂಡು ಸೇರ್ಕೊತೀನಿ. ಅದಕ್ಕೆ ಮೊದಲು ಒಂದು ಲೋಟ ನೀರು ಹಿಡಕೊಂಡು ಅರ್ಧ ಕುಡಿದು ಅರ್ಧ ಬನಿಯನ್ ಮೇಲೆ ಚೆಲ್‌ಕೋತೀನಿ, ಬೆವರು ಬಂತು ವಾಕಿಂಗ್ ಮಾಡಿದ್ದಕ್ಕೆ ಅಂತ ನಂಬಿಸ ಬೇಕಲ್ಲ ಮನೇಲಿ !

ದರ್ಶಿನಿನಲ್ಲೇ ವಾಟ್ಸ್ ಅಪು, ಮೇಲು, ಫೇಸ್ ಬುಕ್ ಇದೆಲ್ಲಾ ಯಾಕೆ ನೋಡ್ತೀನಿ ಅಂದರೆ ಮನೆಗೆ ಬಂದ ಕೂಡಲೇ ಹೊರೆ ಕೆಲಸ ಹೇಳ್ತಾನೆ ಇರ್ತಾರೆ ನಮ್ ಬಾಸು. ಅಲ್ಲಿ ಅಂದರೆ ಮನೇಲಿ ಫೋನು ಹಿಡಿದು ಕೂತರೆ ಜನ್ಮ ಜಾಲಾಡಿ ಹೋಗುತ್ತೆ. ಅದರಿಂದ ವಾಕಿಂಗ್ ನೆವ ಹಾಕ್ಕೊಂಡು ಕಾಫಿ ಕುಡಿತಾ ನಿಲ್ಲೋದು ಮತ್ತು ಅಲ್ಲೇ ಮನೇಲಿ ಅವಕಾಶ ಇಲ್ಲದ ಮೊಬೈಲ್ ಕೆಲಸ ಮುಗಿಸಿಕೊಳ್ಳೋದು !

ದಿನಾ ಅದೇ ದರ್ಶಿನಿಗೆ ಕಾಫಿಗೆ ಹೋಗ್ತೀನಲ್ಲ, ಅಲ್ಲಿ ಇರೋ ಎಲ್ಲರೂ ಪರಿಚಯ. ಓನರ್ ಹೆಂಡತಿ ಅಲ್ಲೇ ಕೂತಿರೋದು ಒಂದು ಚೇರ್ ಮೇಲೆ. ಮೊದಲನೇ ಕಾಫಿ ಮುಗಿಸೋ ಹೊತ್ತಿಗೆ ಆಕೆ ಮುಂದೆ ಒಂದು ಬ್ಯಾಗ್ ಮಾಣಿ ತಂದು ಇಡ್ತಾನೆ. ಜೋರಾಗಿ ಬ್ಯಾಗ್‌ನಲ್ಲಿ ಏನಿದೆ ಅಂತ ಒದರುತ್ತಾನೆ. ಎಂಟು ಇಡಲಿ, ಮೂರು ಮಸಾಲೆ, ಆರು ಪೂರಿ, ಮೂರು ಖಾರ ಭಾತ್... ಎಂಟು ಕಾಫಿ....... ಹೀಗೆ. ಪ್ರತಿದಿನ ಅದೇ ತಿಂಡಿ, ಅವನು ಒದರುವ ರೀತಿ ಬದಲಾಗಬಹುದೇನೋ ಆದರೆ ಅದೇ ತಿಂಡಿ. ಬ್ಯಾಗ್ ತಗೊಂಡು ಅದೇ ಓನರ್ ಅಕ್ಕ, ಓಲಾಡ್ತಾ ಆಚೆ ಹೋಗುತ್ತೆ, ಆಚೆ ನಿಲ್ಲಿಸಿರೋ ಸ್ಕೂಟಿ ಪಕ್ಕ ನಿಲ್ಲುತ್ತೆ. ಓನರ್ ಒಂದು ನಿಮಿಷದ ನಂತರ ಅವಸರ ಅವಸರವಾಗಿ ಆಚೆ ಬರ್ತಾನೆ, ಬ್ಯಾಗ್ ಇಸ್ಕೊಂಡು ಸೀಟು ಪಕ್ಕ ನೇತು ಹಾಕಿ ಗಾಡಿ ಸ್ಟಾರ್ಟ್ ಮಾಡ್ತಾನೆ. ಹೆಂಡತಿ ಒಂದು ಸಲ ಸಿಡಿ ಸಿಡಿ ಮಾಡಿ ಸೀಟು ಏರ್ತಾಳೆ, ತುಟಿ ಕೊಂಕು ಮಾಡಿ ಅವಳನ್ನ ನೋಡ್ತಾ ಕಾಫಿ ಕುಡೀತೀರೋ ಮಂಗಗಳಿಗೆ ಒಂದು ಸ್ಮೈಲ್ ಎಸೆದು ಹೊರಡ್ತೇನಿ ಅನ್ನೋ ಹಾಗೆ ಕೈ ಬೀಸುತ್ತಾಳೆ. ಗಾಡಿ ಹೊರಡುತ್ತೆ.

ಪಾಪ ಅವಳ ಪಾಡು ನೋಡಿ ನನಗೆ ಸಂಕಟ ಆಗುತ್ತೆ. ಸಂಕಟ ಯಾಕೆ ಅಂತೀರೋ? ಈಗ ಅದಕ್ಕೇ ಬಂದೆ. ನಾವು ನೋಡಿ, ಹೋಟಲ್ ಫೋಟೋಲು ಇಲ್ಲದೆ ಇರೋರು ರಾಜಾ ರೋಷವಾಗಿ ಯಾವುದಾದರು ಹೋಟಲ್‌ಗೆ

ನುಗ್ಗಿ ಬೇಕಾದ್ದು ತಗೋಬೋದು. ಅದು ಬೇಡಾ ಅಂದರೆ ಇನ್ನೊಂದು ಹೋಟಲ್ ನಮಗೆ ಇದ್ದೇ ಇದೆ. ಹೋಟಲ್ ತಿಂಡಿ ಚೆನ್ನಾಗಿ ಇಲ್ವಾ, ಗಲ್ಲದ ಮೇಲೆ ಕೂತಿರೋ ಗಡವನಿಗೆ ರೋಪ್ ಹಾಕಿ ಕಾಸು ಕೊಡದೇ ಆಚೆ ಬರಬಹುದು..

ಪಾಪ ಈ ಯಮ್ಮನಿಗೆ ಅಂತಾ ಯಾವುದೇ  ಆಪ್ಷನ್ ಇಲ್ಲವೇ ಅಂತ ನನಗೆ ಫೀಲಿಂಗ್ ಅಂದರೆ ಫೀಲಿಂಗ್.

ಪಾಪ ಈ ಹೋಟಲ್ ಓನರ್‌ನ ಕಟ್ಕೊಂಡು ದಿನಾ ಅದೇ ಇಡ್ಲಿ, ಅದೇ ದೋಸೆ, ಅದೇ ಉಪ್ಪಿಟ್ಟು, ಅದೇ ಪೂರಿ ತಿಂತಾ ಜೀವನ ಅದೆಷ್ಟು ಬೇಸರ ಬಂದಿರಬೇಕು ಅಕ್ಕನಿಗೆ ಅಂತ. ಪಾಪ ಅವಳ, ಆ  ಅಕ್ಕನ ಪಾಡು ಬೇಗ ಬದಲಾಗಲಿ ಅಂತ ನಾನು ದೇವರಲ್ಲಿ ಬೇಡ್ಕೊತೀನಿ! ಅವರ ಹೋಟಲ್‌ಗೆ ಬೇರೆ ಅಡಿಗೆ ಅವನು ಬರಲಿ ಅನ್ನೋದರಿಂದ ಹಿಡಿದು ಅವಳಿಗೆ, ಅಕ್ಕನಿಗೆ ಬೇರೆ ಓನರ್ ಸಿಗಲಿ ಅನ್ನೋ ಗಂಟ ನನ್ನ ಬೇಡಿಕೆ ಉಂಟು!

ಪಾಪ ಆ ಅಕ್ಕನ ಪಾಡು ಅಯ್ಯೋ ಅನಿಸುತ್ತೆ..

ನಮ್ಮ ಬ್ಯಾಂಕಿಗೆ ವಾರಕ್ಕೆ ಒಂದು ಸಲ ಭೇಟಿ ಕೊಡೊ ಹವ್ಯಾಸ ನಂದು. ಯಾಕಪ್ಪಾ ಅಷ್ಟೊಂದು ಕಾಸು ಮಡಗಿದೀಯಾ ಅಂತ ನೀವು ಕೇಳ್ತೀರಿ ಅಂತ ಗೊತ್ತು. ಅಷ್ಟು ಕಾಸು ಇಡೋ ಅಷ್ಟು ಸಾಹುಕಾರರು ಅಲ್ಲ ನಾವು. ರೀಟೇರ್ಡ್ ಆದಾಗ ಬಂದ ಪುಡಿಕಾಸು ಜೋಪಾನವಾಗಿ ಎರಡು ಮೂರು ಬ್ಯಾಂಕ್‌ಗೆ ಹಂಚಿದೀನಿ. ಲೈಟ್, ವಾಟರ್, ಗ್ಯಾಸ್ ಮುಂತಾದ ಎಲ್ಲಾ ಬಿಲ್ಲು ಅಲ್ಲೇ ಕಟ್ಟೋದು. ಒಂದು ದಿನ ಲೈಟ್. ಮತ್ತೊಂದು ದಿನ ವಾಟರ್ ಬಿಲ್ಲು ಹೀಗೆ ಕಟ್ಟೋದು. ಒಂದೇ ದಿವಸ ಎಲ್ಲಾ ಮುಗಿಸಬಹುದಲ್ಲವಾ ಅಂತ ನೀವು ಕೇಳ್ತೀರಿ. ಒಂದೇ ಸಲ ಮುಗಿಸಿದರೆ ಟೈಮ್ ಹೇಗೆ ಕಳಿಲಿ? ಅದರಿಂದ ದಿವಸಕ್ಕೆ ಒಂದೇ ಕೆಲಸ ಇದು ನನ್ನ ಪಾಲಿಸಿ!

ಅದರಿಂದ ಬ್ಯಾಂಕಿನಲ್ಲಿ ಸಂಬಳ ತಗೋಳೋ ಎಲ್ಲರಿಗೂ ನಾನು ಚೆನ್ನಾಗಿ ಗೊತ್ತು. ಇವತ್ತು ಬ್ಯಾಂಕಿಗೆ ಹೋಗಿದ್ನಲ್ಲ, ಅಲ್ಲಿ ಅವರ ಪಾಡು ನೋಡಿದೆ. ಯಾರೋ ಒಬ್ಬ ಗಿರಾಕಿ ಕೌಂಟರ್‌ನಲ್ಲಿದ್ದ ಹುಡುಗಿಗೆ ಹಿಗ್ಗಾಮುಗ್ಗಾ ರೋಪ್ ಹಾಕ್ತಾ ಇದ್ದ. ಕಾರಣ ಹಿಂದಿನ ದಿವಸ ಆತ ಕೊಟ್ಟ ಚೆಕ್ಕ್ ಸಹಿ ಸರಿ ಇಲ್ಲ ಅಂತ ರಿಜೆಕ್ಟ್ ಆಯ್ತಂತೆ. ಮೂವತ್ತು ವರ್ಷದಿಂದ ಚೆಕ್ ಬರೀತಿದಿನಿ, ಯಾರೂ ಹಿಂಗೆ ಅವಮಾನ ಮಾಡಿಲ್ಲಾ ಅಂತ ಅವನು ಭುವನೇಶ್ವರಿ ಭಾಷೆ ಅಂದರೆ ಕಸ್ತೂರಿ ಕನ್ನಡದಲ್ಲಿ. ಕೌಂಟರ್‌ನಲ್ಲಿ ಕೂತಿರೋ ಹುಡುಗಿ ಇಂಗ್ಲಿಷ್‌ನಲ್ಲಿ ಅದೇನೋ ಬಡ ಬಡ ಅಂತಿತ್ತು. ಮೂರು ದಿನ ಹಿಂದೆ ಬಂದಾಗಲು ಇದೇ ಕತೆ, ಅದರ ಮೂರು ದಿನ ಹಿಂದೆ ಬಂದಾಗಲು ಇದೇ ಕತೆ, ಅದರ ಮೂರು ದಿನ ಹಿಂದೆ.... ಬಿಡಿ, ಲಾಗಾಯ್ತ್‌ನಿಂದ ಇದು ನಡೀತಾ ಇರೋದೇ. ಹುಡುಗಿಗೆ ಕನ್ನಡ ಬರುಲ್ಲ, ಗಿರಾಕಿಗೆ ಇಂಗ್ಲಿಷ್ ಬರುಲ್ಲ....! ಜಗಳ ನಿರಂತರ. ಪಾಪ ಹುಡುಗಿ ಪಾಡು ನೋಡಿ ಕಣ್ಣಲ್ಲಿ ನೀರು ಬಂತೂರೀ. ಯಾವುದೋ ಒಳ್ಳೆ ಮನೆತನದ ಹುಡುಗಿ ಓದಿ ಬರೆದು ಪರೀಕ್ಷೆ ಪ್ಯಾಸು ಮಾಡಿ ಗೊತ್ತಿಲ್ಲದೇ ಇರೋ ಊರಿಗೆ ಬಂದು ಯಾರ ಕೈಲೋ ಪ್ರತಿ ದಿವ್ಸ ಬೈಸ್ಕೊ ಬೇಕು ಅಂದರೆ ಅವರ ಪಾಡು ಯಾರಿಗೂ ದೇವರಾಣೆ ಬೇಡ್ರಿ...

ಜಗಳ ತಣ್ಣಗೆ ಆದಮೇಲೆ ಕೌಂಟರ್ ಹತ್ರ ಹೋದೆ. ಯಾಕವ್ವಾ ಜಗಳ ಆಡ್ತೀಯ...ಸುಮ್ನೆ ಚೆಕ್ ಪಾಸ್ ಮಾಡಿ ಕಳಿಸಬಾರದೇ ಅಂತ ಕೇಳಿದೆ. ಹುಡುಗಿ ಸುತ್ತ ಮುತ್ತ ನೋಡ್ತು. ಅಂಕಲ್ ಜಗಳ ಬೇಕಂತ ಆಡಿದ್ದು ಅಂದಳು ಕನ್ನಡದಲ್ಲಿ. ಶಾಕ್ ಹೊಡೆದ ಹಂಗೆ ಆತು.

ಯಾಕವ್ವಾ... ಅಂದೆ. ದನಿಲಿ ಜೇನು ಹರೀತಿತ್ತು. ನಾನು ಝಾರ್‌ಖಂಡ್‌ನವಳು. ಇಲ್ಲಿ ಬಂದು ಕನ್ನಡ ಕಲ್ತಿದೀನಿ, ಇಲ್ಲಿನ ಹುಡುಗನ್ನ ಹುಡುಕಿ ಗಂಟು ಹಾಕೋಕ್ಕೆ ರೆಡಿ ಇದೀನಿ.

ಇಲ್ಲಿ ಪೋಸ್ಟ್ ಮಾಡಬೇಕಾದರೇನೇ ಬೇರೆ ಕಡೆ ಹಾಕಿ ಅಲ್ಲಿ ನಮ್ಮ ರಿಲೇಟಿವ್ಸು ಇದಾರೆ ಅಂತ ರಿಕ್ವೆಸ್ಟ್ ಮಾಡಿದ್ದೆ. ಕೊಡಲಿಲ್ಲ, ಅದಕ್ಕೇ ದಿವಸಕ್ಕೆ ಹತ್ತು ಜನರ ಹತ್ರ ಜಗಳ ಕಾಯ್ತಿನಿ, ಅದರಲ್ಲಿ ಇಬ್ಬರು ರಿಪೋರ್ಟ್ ಮಾಡಿದರೂ ಸಾಕು ಟ್ರಾನ್ಸಫರ್ ಆಗುತ್ತೆ, ಬೇರೆ ಕಡೆಗೆ ಅಂದಳು.

ಅಯ್ಯೋ ಹುಡುಗಿ ಅಂದುಕೊಂಡೆ. ನಮ್ಮ ಕೆಲಸ ನೆನಪು ಆತು. ಟ್ರಾನ್ಸಫರ್ ಇಲ್ಲದೇ ಇರೋ ಕೆಲಸ, ನಲವತ್ತು ವರ್ಷ ಒಂದೇ ಕಡೆ ಗೂಟ ಹೊಡೆದ ಹಾಗೆ ವರ್ಗ ಗಿರ್ಗ ಇಲ್ಲದೇ ಇರೋ ಕೆಲಸ. ಆರಾಮಾಗಿ ಸೈಟು, ಪಾಟು, ಮನೆ ಪನೆ  ಮಸ್ತ್ ಮಾಡ್ಕೊಂಡು ಸುಖ ಸಂತೋಷದಲ್ಲಿ ತೇಲೋ ಕೆಲಸ! ಅಯ್ಯೋ ಈಗಿನ ಜನಾಂಗದ ಪಾಡು.... ಕಣ್ಣಲ್ಲಿ ನೀರು ಬರೋದು ಬಾಕಿ ಇವರೇ.....

ಆ ಚೆಲುವೆ ನೋಡಿ ಪಾಡು ಅಯ್ಯೋ ಅನಿಸುತ್ತೆ.......

ಹಾಗೆ ನೋಡಿದರೆ ನಮ್ ಪಾಡು ಎಷ್ಟೋ ಎಷ್ಟೋ ಎಷ್ಟೋ ಪಾಲು ವಾಸಿ ಅನಿಸಿಬಿಟ್ಟಿತು ಇವ್ರೇ !! ■

---



# ಎಸ್.ಎನ್. ಶಿವಸ್ವಾಮಿ

(06-02-1920 - 13-08-2007)

● ಕೃಷ್ಣಸುಬ್ಬರಾವ್

## ಸಂಕ್ಷಿಪ್ತ ನುಡಿಯ ಸರದಾರ



ಪ್ರಜಾವಾಣಿ ಪತ್ರಿಕೆಯಲ್ಲಿ 'ಛೂಬಾಣ' ಬರುತ್ತಿದ್ದ ಸ್ಥಳವನ್ನು ವೈ.ಎನ್.ಕೆ.ರವರು ಕನ್ನಡದ ಮಿಡ್ಲ್‌ಗಳಿಗಾಗಿ ಮೀಸಲಾಗಿಟ್ಟರು. ಪ್ರಾರಂಭದಲ್ಲಿ 'ಲಂಕೇಶ್ ಪತ್ರಿಕೆ'ಯ ಲಾಂಚಿಂಗ್ ಪ್ಯಾಡ್ ಆಗಿದ್ದ ಜಾಗವನ್ನು ತರುಣ ಹಾಸ್ಯ ಲೇಖಕರಿಗೆ ತೆರದಿಟ್ಟಿದ್ದು ಹಾಸ್ಯ ಲೇಖಕರ ಒಕ್ಕೂಟ ಹಾಸ್ಯಬ್ರಹ್ಮದ ಹುಟ್ಟಿಗೆ ಕಾರಣವಾಯಿತು. ಆ ಕಾಲಂ ಬರೆಯುತ್ತಿದ್ದವರು ಇಬ್ಬರು ಹಿರಿಯರು ಇದ್ದಾರೆಂಬುದು ತಿಳಿದಿದ್ದು ಅವರನ್ನು ಭೇಟಿಯಾದಾಗಲೆ. ಕೊರವಂಜಿ ಬಳಗದ ಅ.ರಾ.ಸೇ ಹಾಗೂ ಎಸ್.ಎನ್. ಶಿವಸ್ವಾಮಿಯವರು ತರುಣ ಲೇಖಕರ ಜೊತೆ ಸೇರಿಕೊಂಡರು. ಹಾಸ್ಯಪುಸ್ತಕಗಳ ಪ್ರಕಟಣೆ ಹಾಗೂ ಬಿಡುಗಡೆ ಸಮಾರಂಭಗಳು ಬಿರುಸಿನಿಂದ ನಡೆಯಿತು. ಆಕಾಶವಾಣಿಯ ನಿರ್ದೇಶಕರಾಗಿದ್ದ ಎಂ.ಎಸ್.ಕೆ. ಪ್ರಭು ಅಪರಂಜಿ ಹಾಗೂ ಹಾಸ್ಯಬ್ರಹ್ಮಕ್ಕೆ ಬಹುಮುಖ್ಯ ಕೊಂಡಿಯಾಗಿ ಮುಂದೆ ಸಾಹಿತ್ಯಾಧಾರಿತ ಸದಭಿರುಚಿಯ ಹಾಸ್ಯೋತ್ಸವಗಳಿಗೆ ಕಾರಣಕರ್ತರಾದರು. ವಯಸ್ಸಿನ ಅಂತರದ ಸಮಸ್ಯೆ ಇಲ್ಲದೆ ಎಲ್ಲ ಕಾರ್ಯಕ್ರಮಗಳಲ್ಲೂ ಅ.ರಾ.ಸೇ., ಶಿವಸ್ವಾಮಿ, ಹೆಚ್.ಆರ್. ಶಂಕರನಾರಾಯಣ (ಹಾ.ರಾ) ಎಚ್.ಕೆ. ರಂಗನಾಥ್ ಹಾಗೂ ಅ.ರಾ.ಮಿತ್ರರವರು ಕಿರಿಯರ ಬೆನ್ನಿಗೆ ನಿಂತರು.

ಆಕಾಶವಾಣಿಯ ನಿವೃತ್ತ ಅಧಿಕಾರಿ ಶಿವಸ್ವಾಮಿ ಶಿಸ್ತಿನ ಸಿಪಾಯಿ. ಮಿತಭಾಷಿ, ಅವರ ಮನೆ ನಮ್ಮೆಲ್ಲರ ತಂಗುದಾಣವಾಯಿತು. ಸಮಯ ಪ್ರಜ್ಞೆ ಹಾಸ್ಯಪ್ರಜ್ಞೆಗೆ ತುಂಬ ಮುಖ್ಯವೆನ್ನುವುದನ್ನು ತಮ್ಮ ನಡವಳಿಕೆಯಿಂದ ಕಿರಿಯರಿಗೆ ಮನದಟ್ಟು ಮಾಡಿದರು. ಹೇಳಿದ ಸಮಯಕ್ಕೆ ಮುಂಚೆಯೇ ತಮ್ಮ ಮನೆ ಮುಂದೆ ಠಳಾಯಿಸುತ್ತಾ ಕಾಯುತ್ತಿದ್ದವರ ಮುಂದೆ ಲೇಟಾಗಿ ಬರಲು ಯಾರಿಗೂ ಸಾಧ್ಯವಿರಲಿಲ್ಲ, ಅಮೂಲ್ಯ ಸಲಹೆ ಸೂಚನೆಗಳನ್ನು ಕೊಡುತ್ತಿದ್ದರು. ಹದಿಮೂರನೇ ವಯಸ್ಸಿನಲ್ಲೆ ನಗೆಬರಹ ಬರೆದ ಭೂಪತಿ. ಒಂದು ಭಯಾನಕ ಪತ್ತೆದಾರಿ ಕಾದಂಬರಿ ಬರೆದರು. ಅದರ ಮೊದಲನೆ ಓದು - ಭಾಗ್ಯ ಸಿಕ್ಕಿದ್ದು ಅವರ ಸಹೋದರಿಗೆ. ಮುಂದೆ ಕೊರವಂಜಿ ರಾಶಿ ಮತ್ತು ನಾ.ಕಸ್ತೂರಿ ನಾಯಕತ್ವದಲ್ಲಿ

ಒಂದು ಯುವ ಪೀಳಿಗೆಯ ದಂಡೇ ಬೆಳೆಯಿತು. ಅದರಲ್ಲಿ ಶಿವಸ್ವಾಮಿ, ಅ.ರಾ.ಸೇ., ದಾಶರಥಿ ದೀಕ್ಷಿತ್, ಟಿ. ಸುನಂದಮ್ಮ, ಹಾ.ರಾ. ಮುಖ್ಯರಾದವರು. ಪಾತಾಳದಲ್ಲಿ ಪಾಪಯ್ಯ ಎಂಬ ಜನಪ್ರಿಯ ಅಂಕಣವನ್ನು ಪುಂಗನೂರು ಪಾಪಯ್ಯ ಎಂಬ ಗುಪ್ತನಾಮದಲ್ಲಿ ಬರೆದವರು ಶಿವಸ್ವಾಮಿಗಳು. ಪಿ.ಜಿ. ವುಡ್‌ಹೌಸ್‌ನ ಅತ್ಯಂತ ಜನಪ್ರಿಯ 'ಜೀವ್ಸ್'ನನ್ನು ಕನ್ನಡಕ್ಕೆ ಜೀವಣ್ಣನಾಗಿ ಕರೆತಂದವರು ಈ ಸ್ವಾಮಿಗಳೆ. 'ಕತೆಗಾರ' ಪತ್ರಿಕೆಗಳಲ್ಲಿ ಶಿವಸ್ವಾಮಿಗಳ 'ತುಂತುರು'ಗಳು ಪ್ರಕಟವಾಗುತ್ತಿತ್ತು. ವೈ.ಎನ್.ಕೆ. ಅವರ ಆಪ್ತಬಳಗದ ಖಾಯಂ ಸದಸ್ಯರಾಗಿದ್ದವರು ಅವರು. 'ಬ್ರೇವಿಟಿ ಈಸ್ ದ ಸೋಲ್ ಆಫ್ ವಿಟ್' ಅನ್ನುವ ತತ್ವವನ್ನು ಅಕ್ಷರಷಃ ಪಾಲಿಸಿದವರು. ಭಾಷಣ ದ್ವೇಷಿ. ಸಮಾರಂಭಕ್ಕೆ ಅವರನ್ನು ಒಪ್ಪಿಸುವುದು ಬಹಳ ಕಷ್ಟವಾಗುತ್ತಿತ್ತು. ಹತ್ತು ನಿಮಿಷ ಮಾತನಾಡಿದ್ದು ದಾಖಲೆ. ನಾ.ಕಸ್ತೂರಿಯವರ ಮೇಲೆ ಬರೆದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ.

ಸದಭಿರುಚಿಯ ಹರಿಕಾರರಾಗಿ 'ಸುಧಾ' ಪತ್ರಿಕೆಗೆ ಜೋಕ್ಸ್‌ಗಳನ್ನು ಆಯ್ಕೆ ಮಾಡುತ್ತಿದ್ದರು. ನವಕರ್ನಾಟಕ ಪ್ರಕಾಶನದವರು ಪಾಕೆಟ್ ಸಿರೀಸ್‌ನಲ್ಲಿ 'ನಗೆಬುಗ್ಗೆ' 'ನಗೆಮಿಂಚು' 'ನಗೆ ತುಂತುರು' 'ನಗೆ ಮುಗಿಲು' ಮತ್ತು 'ನಗೆ ಗೊಂಚಲು' ಕೃತಿಗಳನ್ನು ಹೊರತಂದರು. ಹಾಸ್ಯಬ್ರಹ್ಮ ಬಳಗ ಸ್ಕೂಲು ಕಾಲೇಜುಗಳಲ್ಲಿ ಜೋಕ್ ಹೇಳುವ ಸ್ಪರ್ಧೆಗಳನ್ನು ಏರ್ಪಡಿಸಿದಾಗ ಆ ಸಂಗ್ರಹಗಳನ್ನು ಮಾರ್ಗದರ್ಶನಕ್ಕಾಗಿ ಹಂಚಿದರು.

ಬಿ.ಎಸ್ಸಿ ಆನರ್ಸ್ ಓದಿ ಬರೋಡದ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ ಆಲ್ ಇಂಡಿಯಾ ರೇಡಿಯೊದಲ್ಲಿ ಕೆಲಸಕ್ಕೆ ಅರ್ಜಿ ಹಾಕಿ ಹುದ್ದೆ ಗಿಟ್ಟಿಸಿದರು. ಮದ್ರಾಸು, ಮುಂಬೈ, ದೆಹಲಿ, ತಿರುವನಂತಪುರ ತಿರುಗಾಡಿಕೊಂಡು ಬೆಂಗಳೂರು, ಆಕಾಶವಾಣಿಗೆ ನಿರ್ವಹಣಾಧಿಕಾರಿಯಾಗಿ ಬಂದರು. ನಾಟಕ ಹಾಗೂ ಸಂಗೀತ ಅವರ ನೆಚ್ಚಿನ ಕ್ಷೇತ್ರವಾಗಿತ್ತು. ಕೈಲಾಸಂ ನಾಟಕಗಳನ್ನು ಆಡುತ್ತಿದ್ದರು. ಸಂಗೀತ ದಿಗ್ಗಜರ ಸತತ ಸಂಪರ್ಕದಲ್ಲಿ ಇರುತ್ತಿದ್ದರು. ಜಿ.ಎನ್. ಬಾಲಸುಬ್ರಮಣ್ಯ ನಿಲಯ ಪ್ರವೇಶಿಸಿದರೆ ಅಲ್ಲೊಂದು ಅನೌಪಚಾರಿಕ ಹಾಸ್ಯಗೋಷ್ಠಿ ನಡೆಯುತ್ತಿತ್ತು. ಅವರ ಮಾತುಗಳನ್ನು ಕೇಳಲು ಆರ್.ಕೆ. ಶ್ರೀಕಂಠನ್, ದೊರೆಸ್ವಾಮಿ ಅಯ್ಯಂಗಾರ್, ಹೆಚ್.ಕೆ. ರಂಗನಾಥ್ ಹಾಗೂ ಎಂ.ಎಸ್. ಕೃಷ್ಣಮೂರ್ತಿ ಪಾಲ್ಗೊಳ್ಳುತ್ತಿದ್ದರಂತೆ.

ಮದ್ರಾಸಿನಲ್ಲಿದ್ದಾಗ ಬಳ್ಳಾರಿ ಬೀಚಿ ಹಾಗೂ ಬಿ.ಆರ್. ಪಂತಲು ಅವರನ್ನು ಕರೆತಂದು ರೇಡಿಯೊ ನಾಟಕಗಳನ್ನು ಆಡಿಸಿದರು. ಬಾನುಲಿ ನಾಟಕದ ಪರಿಕಲ್ಪನೆ ಹುಟ್ಟಿದ್ದೆ ಆಗ. ಮುಂದೆ ಗ್ರಾಂಡ್‌ಸ್ಲಾಮ್ ಎಂಬ ವಿಡಂಬನೆಯ ಪ್ರಯೋಗ ಎಲ್ಲ ಭಾಷೆಗಳಲ್ಲೂ ಆಡಿಸಿ, ವಿದೇಶ ಪ್ರಸಾರದಲ್ಲೂ ಬಿತ್ತರಿಸಿದರು. ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಸಾಹಿತ್ಯ ದಿಗ್ಗಜರಾದ ಕೈಲಾಸಂ, ರಾಶಿ, ನಾ. ಕಸ್ತೂರಿ, ಸಿ.ಕೆ. ವೆಂಕಟರಾಮಯ್ಯ, ಬೇಂದ್ರೆ ಹಾಗೂ ಮಾಸ್ತಿಯವರನ್ನು ಆಕಾಶವಾಣಿಗೆ ಕರೆದು ಒಂದು ದಿಢೀರ್ ಗೋಷ್ಠಿಯನ್ನು ಏರ್ಪಡಿಸಿದರು. ಆಗ ತೆಗೆದ ಒಂದು ಅಪೂರ್ವ ಫೋಟೊ ಕನ್ನಡಿಗರ ಆಸ್ತಿಯಾಗಿದೆ. ಆಕಾಶವಾಣಿಗೆ ಜಾಹಿರಾತು ಕಲ್ಪನೆ ಕೊಟ್ಟವರು ಶಿವಸ್ವಾಮಿಗಳು ಹೀಗಾಗಿ ನಿವೃತ್ತಿ ಅಂಚಿನಲ್ಲಿ ಭಾರತದ ಸರ್ಕಾರದ ದೂರದರ್ಶನದ ವಾಣಿಜ್ಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ರೇಡಿಯೊದಲ್ಲಿ


ಶಿಕ್ಷಣದ ಜ್ಞಾನವಾಣಿ ಪ್ರಾರಂಭಿಸಿದ ಕೀರ್ತಿ ಸ್ವಾಮಿಗಳಿಗೆ ಸಲ್ಲತಕ್ಕದ್ದು.

ಸಾಹಿತ್ಯ ರಚಿಸಿದ್ದು ಬೆರಳೆಣಿಕೆಯಷ್ಟೆ ಆದರೆ ಬರೆದದ್ದೆಲ್ಲ ಅಮೂಲ್ಯ. ವಿಡಂಬನೆಯ ಲೇಖನಗಳ ಸಂಗ್ರಹ 'ಬೂಸಾದಹನ' ಹಾಗೂ ಹಾಸ್ಯಲೇಖನಗಳ ಸಂಕಲನವಾಗಿ 'ಲಕವಳ್ಳಿಯಲ್ಲಿ ಲಾಲಿಪಪ್ಸ್' 'ಮನೆಯೊಳಗೊಬ್ಬ ಮಿಲಿಟರಿ ಮಾಮ' 'ಜಾತ್ರೆಯಲ್ಲಿ ಜಾಗರಣೆ' 'ಸಿನ್ಸಿನಾಟಿಯಲ್ಲಿ ಕರಿಬೇವು ಸೊಪ್ಪು' 'ಹಾತ್ಯಾವಕಾರ' ''ಏನೆ ಬರಲಿ ರಮ್ಮಿ ಇರಲಿ'' ಮುಖ್ಯವಾದವು. ಅವರ ಹಾಸ್ಯಪ್ರಜ್ಞೆಗೆ ಒಂದೆರಡು ಉದಾಹರಣೆಗಳೆಂದರೆ ಅವರು ಮಾಡಿದ ವೈಜ್ಞಾನಿಕ ಸಂಶೋಧನೆಗಳು – ಹಳೆಯ ವಸ್ತುಗಳಿಂದ ಹೊಸ ಉಪಯೋಗ ಎಂಬುದರಲ್ಲಿ ತುಪ್ಪ ಬಹಳ ದುಬಾರಿಯಾದಾಗ ಅದನ್ನು ಬಡಿಸಲು ಮಿಳ್ಳೆಗೆ ಹೊಸ ಕೆಲಸ ಕೊಡಬಹುದೆಂದು ಸೂಚಿಸುತ್ತಾ ಕಿವಿಯಲ್ಲಿ ತುಂಬಿ ಕೊಳ್ಳುವ ಕೊಳೆಯನ್ನು ತೆಗೆಯಲು ಮಿಳ್ಳೆಯನ್ನೇ ಗುಗ್ಗೆಯಾಗಿ ಬಳಸಿ ಎನ್ನುತ್ತಾರೆ. ಬರಗಾಲದಲ್ಲಿ ಒಬ್ಬ ಸಂಗೀತಗಾರ ತನಗಾದ ಸಾಮಾಜಿಕ ಕಾಳಜಿ ತೋರಿಸುತ್ತಾನೆ. ಜಲತರಂಗ ನುಡಿಸುವುದನ್ನು ನೀರಿನ ಸಮಸ್ಯೆ ಸುಧಾರಿಸುವವರೆಗೂ ನಿಲ್ಲಿಸುತ್ತೇನೆ ಎಂದು ವಚನಕೊಡುತ್ತಾನೆ.

ಒಂದು ದೇಶಕ್ಕೆ ರಾಷ್ಟ್ರಗೀತೆ, ರಾಷ್ಟ್ರಭಾಷೆ, ರಾಷ್ಟ್ರಪಕ್ಷಿ ಇದ್ದಂತೆ ಹಾಸ್ಯವನ್ನು ರಾಷ್ಟ್ರೀಯ ರಸವಾಗಿ ಪರಿಗಣಿಸಬೇಕೆಂದು ಶಿವಸ್ವಾಮಿ ಹೇಳುತ್ತಿದ್ದರು. ಅವರು ಹಾಸ್ಯಕ್ಕೆ ಎಂತಹ ಸ್ಥಾನಕೊಡುತ್ತಿದ್ದರು ಎಂಬುದಕ್ಕೆ ಸಾಕ್ಷಿ. ಪ್ರಶಸ್ತಿಗಳ ಬಗ್ಗೆ ಎಂದೂ ತಲೆಕೆಡಿಸಿಕೊಳ್ಳಲಿಲ್ಲ. ಆದರೂ ಪರಮಾನಂದ ಪ್ರಶಸ್ತಿ ಹಾಗೂ ಹಾಸ್ಯೋತ್ಸವದಲ್ಲಿ ಟಿ. ಸುನಂದಮ್ಮನವರ ಜೊತೆ ಗೌರವ ಸನ್ಮಾನ ನಡೆಸಿದ್ದು ಹಾಸ್ಯಬ್ರಹ್ಮ ಹಾಗೂ ಅಪರಂಜಿ ಬಳಗಕ್ಕೆ ಸಮಾಧಾನ. ಶತಮಾನೋತ್ಸವದಲ್ಲಾದರೂ ಅವರ ಸಮಗ್ರ ಲೇಖನಗಳು ಪುನರ್ ಮುದ್ರಣಕಂಡರೆ ಅದೇ ಒಂದು ದೊಡ್ಡ ಪ್ರಶಸ್ತಿ ಎನಿಸುವುದಿಲ್ಲವೆ?

■

---



# ಪ್ರವೀಣ್ ಕುಮಾರ್‌ನ ಪಿ.ಎಚ್.ಡಿ. ಪ್ರಸಂಗ

● ಡಾ ಸಿ.ಕೆ.ರೇಣುಕಾರ್ಯ

ಪ್ರವೀಣ್ ಕುಮಾರ್ ನನ್ನ ಎಂ.ಎ. ಎಕನಾಮಿಕ್ಸ್ ವಿದ್ಯಾರ್ಥಿ. ಚಾಮರಾಜನಗರದ ಗ್ರಾಮೀಣ ಪ್ರದೇಶದಿಂದ ಬಂದವನು. ಹೇಗೋ ಏನೋ. ಬಿ.ಎ. ಪಾಸು ಮಾಡಿಕೊಂಡು ಎಂ.ಎ.ಗೆ ಗಂಗೋತ್ರಿಯಲ್ಲಿ ದಾಖಲಾಗಿದ್ದವನು. ಅವನ ಇಂಗ್ಲೀಷ್ ಜ್ಞಾನ ಶೂನ್ಯ. ಹೀಗಾಗಿ ಎಂ.ಎ. ತರಗತಿಯಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ನಡೆಯುತ್ತಿದ್ದ ಪಾಠ ಪ್ರವಚನ ಅವನ ಪಾಲಿಗೆ ಶೂನ್ಯ ಸಂಪಾದನೆ. ಹೀಗಿದ್ದರೂ ಅವನು ಗಣಿತದಲ್ಲಿ ತುಂಬಾ ಬುದ್ಧಿವಂತ. ಗಣಿತದಿಂದ ಒಳಗೊಂಡಿರುವ ಎಕನಾಮಿಕ್ಸ್ ಪೇಪರ್‌ನಲ್ಲಿ ಅವನಿಗೆ ನೂರಕ್ಕೆ ಎಂಬತ್ತು ಅಂಕಗಳು. ಆದರೆ ಇದನ್ನು ಬಿಟ್ಟರೆ ಉಳಿದ ಎಲ್ಲ ಪತ್ರಿಕೆಗಳಲ್ಲೂ ಅವನ ಅಂಕ ಐವತ್ತನ್ನು ಮೀರಿದ್ದಿಲ್ಲ. ಹೇಗೋ ಏನೋ ಮೊದಲನೇ ವರ್ಷ ಮುಗಿಸಿದ. ಎರಡನೇ ವರ್ಷದಲ್ಲಿ ಸಮಾಜಶಾಸ್ತ್ರದ ಎಂ.ಎ. ವಿದ್ಯಾರ್ಥಿನಿ ಮಂಜುಳಾಳೊಡನೆ ಪ್ರೇಮ ಪ್ರಕರಣ ಪ್ರಾರಂಭವಾದದ್ದರಿಂದ ಎರಡನೇ ವರ್ಷದಲ್ಲಿ ಎರಡು ಪತ್ರಿಕೆಗಳಲ್ಲಿ ನಪಾಸಾದ. ಉಳಿದ ಪತ್ರಿಕೆಗಳಲ್ಲಿ ಹರಸಾಹಸದಿಂದ ಐವತ್ತೈದು ಅಂಕ ಪಡೆದುಕೊಂಡಿದ್ದು, ತನ್ನ ಪ್ರತಿಯೊಬ್ಬ ಅಧ್ಯಾಪಕರ ಮನೆಗೂ ಅವನು ಹೋಗುತ್ತಿದ್ದುದರಿಂದ ಮತ್ತು ತನ್ನ ಅತಿ ವಿನಯ ಸ್ವಭಾವ ಪ್ರದರ್ಶನದಿಂದ ಈ ಅಂಕಗಳನ್ನು ಪಡೆಯುವುದು ಅವನಿಗೆ ಸಾಧ್ಯವಾಗಿತ್ತು. ಆದರೆ ಫೇಲಾದ ಎರಡು ಪತ್ರಿಕೆ ಅಧ್ಯಾಪಕರುಗಳಲ್ಲಿ ಅವನ ಈ ಆಟ ನಡೆಯಲಿಲ್ಲ. ಅವರಲ್ಲಿ ಒಬ್ಬ ಅಧ್ಯಾಪಕರು ಆಗ ತಾನೇ ಅಮೆರಿಕಾದಿಂದ ಪಿ.ಎಚ್.ಡಿ ಮಾಡಿ ಬಂದು ವಿದ್ಯಾರ್ಥಿಗಳಿಂದ ತುಂಬಾ ಸ್ಟಾಂಡರ್ಡ್ ನಿರೀಕ್ಷಿಸುತ್ತಿದ್ದುದರಿಂದ ಇವನಿಗೆ ಅವರು ಪಾಠ ಮಾಡುತ್ತಿದ್ದ ಪತ್ರಿಕೆಯಲ್ಲಿ ಸಿಕ್ಕ ಅಂಕ ನೂರಕ್ಕೆ ಹತ್ತು ಅಷ್ಟೇ. ಇವನು ಫೇಲಾದ ಇನ್ನೊಂದು ಪತ್ರಿಕೆ ಪಾಠ ಮಾಡುತ್ತಿದ್ದ ಅಧ್ಯಾಪಕರು ಬಹಳ ವಸ್ತುನಿಷ್ಠರಾದ್ದರಿಂದ ಆ ಪತ್ರಿಕೆಯಲ್ಲಿ ಅವನಿಗೆ ದೊರೆತ ಅಂಕ ನೂರಕ್ಕೆ 20 ಅಷ್ಟೇ. ಒಂದು ಕಡೆ ಪ್ರೇಮ ಪ್ರಕರಣ ಮತ್ತೊಂದು ಕಡೆ ಎಂ.ಎ. ಯಲ್ಲಿ ಫೇಲಾದ ಪ್ರವೀಣ್ ಕುಮಾರ್ ನಾಪತ್ತೆಯಾದ. ನಾನು ಪಾಠ ಮಾಡುತ್ತಿದ್ದ ಗಣಿತದ ಪತ್ರಿಕೆಯಲ್ಲಿ ಅವನಿಗೆ ನೂರಕ್ಕೆ ಎಂಭತ್ತು ಅಂಕ. ಮೊದಲೇ ನಾನು ಹೇಳಿದಂತೆ ಗಣಿತದಲ್ಲಿ ಮಾತ್ರ ಅವನು ತುಂಬಾ ಚುರುಕು. ಪ್ರವೀಣ್ ನನಗೆ ಆ ದಿನಗಳಲ್ಲಿ ಆತ್ಮೀಯನಾದ ಸಹ.

ಮತ್ತೆ ನನಗೆ ಅವನು ಭೇಟಿಯಾದದ್ದು ಎರಡು ವರ್ಷಗಳ ನಂತರ, ಮಂಗಳೂರಿನಲ್ಲಿ ನಾನು ಒಂದು ಸೆಮಿನಾರ್‌ಗೆ ಉಪನ್ಯಾಸ ಕೊಡಲು ಹೋದಾಗ. ನಮ್ಮ ಸಂಭಾಷಣೆ ಕೆಳಗಿನಂತೆ :

ನಾನು : ಏನು ಪ್ರವೀಣ್ ಕುಮಾರ್ ಇಲ್ಲಿ ?

ಪ್ರವೀಣ್ ಕುಮಾರ್ : ಸರ್, ನಾನು ಸೆಮಿನಾರ್‌ನಲ್ಲಿ ಭಾಗವಹಿಸಲು ಬಂದಿದ್ದೇನೆ. ಗದಗದ ಹತ್ತಿರದ ಒಂದು ಕಾಲೇಜಿನಲ್ಲಿ ಅರ್ಥಶಾಸ್ತ್ರದಲ್ಲಿ ಅಧ್ಯಾಪಕನಾಗಿದ್ದೇನೆ.

ನಾನು : ಅರೆ ! ಎಂ.ಎ. ಯಾವಾಗ ಪಾಸು ಮಾಡಿದಿರಿ ? ಮೈಸೂರಿಗೆ ಯಾವಾಗಲೂ ಪರೀಕ್ಷೆಗೆ ಬರಲೇ ಇಲ್ಲವಲ್ಲ ?

ಪ್ರ ಕು : ಹೌದು ಸರ್, ಮೈಸೂರು ವಿಶ್ವವಿದ್ಯಾನಿಲಯ ತುಂಬಾ ಸ್ಟಾಂಡರ್ಡ್ ಸರ್. ಅಲ್ಲಿ ಎರಡು ಪತ್ರಿಕೆ ಫೇಲಾಗಿ ಬಿಟ್ಟೆ. ಅಲ್ಲಿ ನಾನು ಪಾಸಾಗುವ ಸಾಧ್ಯತೆ ಇರಲೇ ಇಲ್ಲ. ಹೀಗಾಗಿ ಸಿಕ್ಕಿಂನಲ್ಲಿ ಒಂದು

ವಿಶ್ವವಿದ್ಯಾನಿಲಯದಿಂದ ಎಂ.ಎ. ಪಾಸು ಮಾಡಿದೆ ಸರ್. ಅಲ್ಲಿ ಸುಮ್ಮನೆ ಪರೀಕ್ಷೆ ಬರೆದರೆ ಸಾಕು ಸರ್. ರೂ.25,000/– ಕೊಟ್ಟರೆ ಸಾಕು ಸರ್. ಎಂ.ಎ. ಪದವಿ ಸಿಕ್ಕಿತು. ಶೇ.60 ಮಾರ್ಕ್ಸ್ ಸಹ ಬಂತು ಸರ್.

ನಾನು : ಮತ್ತೆ ಲೆಕ್ಚರರ್ ಹೇಗೆ ಆದಿರಿ ?

ಪ್ರ ಕು : ಅದು ನಾನು ಎಂ.ಎ. ಪಾಸು ಮಾಡಿದ್ದಕ್ಕಿಂತ ಸುಲಭವಾಗಿ ಆಯಿತು ಸರ್. ನಮ್ಮ ಸಂಬಂಧಿಕರೊಬ್ಬರು ಕೆ.ಪಿ.ಎಸ್.ಸಿ. ಸದಸ್ಯರಾಗಿದ್ದರು ಸರ್. ಅವರಿಗೆ ರೂ.15 ಲಕ್ಷ ಕೊಟ್ಟೆ ಸರ್. ಕೆಲಸ ಆಯಿತು. ಅವರ ಸಂಬಂಧಿಕರ ಮಗಳನ್ನೂ ಮದುವೆ ಆದೆ ಸರ್.

ನಾನು : ಹಾಗಾದರೆ ನಿಮ್ಮ ಪ್ರೀತಿ. ಮಂಜುಳಾ ......

ಪ್ರ ಕು : (ಬಹಳ ದುಃಖದಿಂದ) ನಾನು ಎಂ.ಎ ಫೇಲಾದ್ದರಿಂದ ಅವಳು ನನ್ನನ್ನು ತಿರಸ್ಕರಿಸಿಬಿಟ್ಟಳು ಸರ್. ನಿನಗೆ ಉದ್ಯೋಗ ಸಿಕ್ಕುವುದಿಲ್ಲ. ಇಂಗ್ಲೀಷ್ ಬರುವುದಿಲ್ಲ ಎಂದು ನನ್ನ ಪ್ರೇಮವನ್ನು ತಿರಸ್ಕರಿಸಿ ಬಿಟ್ಟು ಹೊರಟು ಹೋದಳು ಸರ್. ಒಂದು ದುಃಖದ ವಿಷಯವೆಂದರೆ ಈಗ ತುಂಬಾ ಸಂಕಟ ಪಡುತ್ತಿದ್ದಾಳೆ ಸರ್. ಬೆಂಗಳೂರಿನಲ್ಲಿದ್ದಾಳೆ ಸರ್. ಅವಳ ಗಂಡ ಕುಡುಕ ಸರ್. ನನಗೆ ಆ ವಿಷಯದಲ್ಲಿ ತುಂಬಾ ದುಃಖವಿದೆ ಸರ್.

ನಾನು : ನಿಮಗೆ ಇಂಗ್ಲೀಷೇ ಬರುವುದಿಲ್ಲವಲ್ಲ ಪ್ರವೀಣ್. ಪಾಠ ಹೇಗೆ ಮಾಡುತ್ತೀರಿ.

ಪ್ರ.ಕು : ಅದು ಒಂದು ತಮಾಷೆ ಸರ್. ನನಗೆ ಇಂಗ್ಲೀಷ್ ಮತ್ತು ಕನ್ನಡ ಮಾಧ್ಯಮ ತರಗತಿಗಳೆರಡೂ ಇರುತ್ತವೆ ಸರ್. ಕನ್ನಡ ನಿಭಾಯಿಸುತ್ತೇನೆ ಸರ್. ಆದರೆ ಇಂಗ್ಲೀಷ್ ಮೀಡಿಯಂ ಕ್ಲಾಸ್‌ಗೆ ಪಿಪಿಟಿ ತೆಗೆದುಕೊಂಡು ಹೋಗಿ ಅದನ್ನು ಹಾಕಿ ಬಿಡುತ್ತೇನೆ ಸರ್. ವಿದ್ಯಾರ್ಥಿಗಳಿಗೆ ಇದನ್ನು ಬರೆದುಕೊಳ್ಳಿ ಎಂದು ಹೇಳಿ ಬಿಡುತ್ತೇನೆ ಸರ್. ಏನೂ ತೊಂದರೆಯಿಲ್ಲ ಸರ್. ಇಂಗ್ಲೀಷ್ ನನಗೂ ಬರುವುದಿಲ್ಲ ಮತ್ತು ವಿದ್ಯಾರ್ಥಿಗಳಿಗೂ ಬರುವುದಿಲ್ಲವಾದ್ದರಿಂದ ಏನೂ ತೊಂದರೆ ಇಲ್ಲ ಸರ್.

ಈ ಘಟನೆ ನಡೆದ ಆರು ತಿಂಗಳ ನಂತರ ಬೆಳಗ್ಗೆ ಬೆಳಗ್ಗೆಯೇ ಪ್ರವೀಣ್ ಕುಮಾರ್ ನಮ್ಮ ಮನೆಗೆ ಬಂದಿದ್ದ.

ನಾನು : ಏನು ಪ್ರವೀಣ್ ಕುಮಾರ್? ಹೇಗಿದ್ದೀರಿ? ಎಲ್ಲಿದ್ದೀರಿ?

ಪ್ರ.ಕು : ಸರ್. ನನಗೆ ಚಿತ್ರದುರ್ಗಕ್ಕೆ ವರ್ಗ ಆಗಿದೆ ಸರ್. ಅಲ್ಲಿ ಕೆಲಸ ಮಾಡುತ್ತಿದ್ದೇನೆ ಸರ್. ನಿಮ್ಮಿಂದ ಒಂದು ಸಹಾಯ ಆಗಬೇಕಾಗಿದೆ ಸರ್. ಅದಕ್ಕೆ ಬಂದೆ.

ನಾನು : ಹೇಳಿ ಏನು ವಿಷಯ.

ಪ್ರ.ಕು : ನಾನು ಈಗ ಪಿ.ಎಚ್.ಡಿ ಮಾಡಬೇಕಾದ ಪ್ರಸಂಗ ಬಂದು ಬಿಟ್ಟಿದೆ ಸರ್. ಸರ್ಕಾರದವರು ಕಾಲೇಜಿನ ಪ್ರಿನ್ಸಿಪಲ್ ಆಗಬೇಕಾದರೆ, ಪಿ.ಎಚ್.ಡಿ. ಆಗಿರಲೇಬೇಕೆಂಬ ನಿಯಮ ಮಾಡಿಬಿಟ್ಟಿದ್ದಾರೆ ಸರ್. ಆದ್ದರಿಂದ ಪಿ.ಎಚ್.ಡಿ ತೆಗೆದುಕೊಳ್ಳಲೇಬೇಕಾಗಿದೆ ಸರ್.

ನಾನು : ನನ್ನಿಂದ ಏನಾಗಬೇಕಾಗಿದೆ. ನಿಮಗೆ ಪಿ.ಎಚ್.ಡಿ. ಮಾಡುವುದು ಕಷ್ಟ. ಪ್ರವೀಣ್ ಕುಮಾರ್ ಸುಮಾರು 200 ಪುಟಗಳಷ್ಟು ಮಹಾ ಪ್ರಬಂಧವನ್ನು ಇಂಗ್ಲೀಷ್‌ನಲ್ಲಿ ಬರೆಯಬೇಕಾಗುತ್ತದೆ. ನಿಮಗೆ ಇಂಗ್ಲೀಷ್ ಬರುವುದಿಲ್ಲ ತುಂಬಾ ಕಷ್ಟ. ಅದರ ಯೋಚನೆ ಬಿಟ್ಟು ಬಿಡಿ.

ಪ್ರ.ಕು : ಇಲ್ಲ ಸರ್. ನಾನು ಪಿ.ಎಚ್.ಡಿ ಮಾಡಿಕೊಳ್ಳಲೇ ಬೇಕು. ನನಗೆ ನೀವು ಟಾಪಿಕ್ ಹೇಳಿ ಸರ್ ಅಷ್ಟೇ. ಉಳಿದಿದ್ದನ್ನು ನಾನು ಮಾಡಿಕೊಳ್ಳುತ್ತೇನೆ.

ಟಾಪಿಕ್ ಮಾತ್ರ ನನಗೆ ಪ್ರಮೋಷನ್ ಬರುವಂತಿರಬೇಕು ಸರ್.

ರೈತರಿಗೆ ಸಂಬಂಧಪಟ್ಟಿದ್ದರೆ ಒಳ್ಳೆಯದು ಸರ್. ಏಕೆಂದರೆ ಈಗ ಎಲ್ಲರಿಗೂ ರೈತರ ಬಗ್ಗೆ ಸಹಾನುಭೂತಿ ಇದೆ ಸರ್. ಸರಿ, ನಾನು ಸರಳವಾದ ಎರಡು ಮೂರು ಟಾಪಿಕ್ ಸೂಚಿಸಿದೆ. ಇದಾದ ಸುಮಾರು 5 ವರ್ಷ ಪ್ರವೀಣ್‌ಕುಮಾರ್‌ನ ಭೇಟಿ ಆಗಲೇ ಇಲ್ಲ. ಒಂದು ಕಾಲೇಜಿನಲ್ಲಿ ನನ್ನನ್ನು ಮುಖ್ಯ ಅತಿಥಿಯಾಗಿ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದರು. ಅಲ್ಲಿಗೆ ಹೋದಾಗ, ಡಾ. ಪ್ರವೀಣ್‌ಕುಮಾರ್ ಪ್ರಾಂಶುಪಾಲರು ಎನ್ನುವ ಬೋರ್ಡ್ ನೋಡಿದೆ. ನನ್ನನ್ನು ಆ ಕೊಠಡಿಗೆ ಕರೆದುಕೊಂಡು ಹೋದರು. ನೋಡಿದರೆ ನಮ್ಮ ಪ್ರವೀಣ್ ಕುಮಾರ್ರೇ ಈಗ ಡಾ. ಪ್ರವೀಣ್ ಕುಮಾರ್.

ನಾನು : ಏನು ಪ್ರವೀಣ್ ಕುಮಾರ್? ಯಾವಾಗ ಡಾಕ್ಟರೇಟ್ ಮಾಡಿದಿರಿ?

ಪ್ರ.ಕು : ಎರಡು ವರ್ಷ ಆಯಿತು ಸರ್. ನಿಮ್ಮ ಮನೆಗೆ ಎರಡು ಬಾರಿ ಬಂದಿದ್ದೆ ಸರ್. ನೀವು ಎರಡು ಬಾರಿಯೂ ಊರಿನಲ್ಲಿಲ್ಲ ಎಂದು ತಿಳಿಯಿತು. ಇನ್ನು ನನ್ನ ಡಾಕ್ಟರೇಟ್ ವಿಷಯ ಹೇಳುತ್ತೇನೆ ಸರ್.

ಸರ್, ನಿಮಗೆ ಗೊತ್ತಿರುವ ಹಾಗೆ ನನಗೆ ಇಂಗ್ಲೀಷ್ ಬರುವುದಿಲ್ಲ ಸರ್. ನಾನು ಕೊಯಮತ್ತೂರಿಗೆ ಹೋಗಿದ್ದಾಗ ಒಂದು ಹೋಟೆಲ್‌ನಲ್ಲಿ ಉಳಿದುಕೊಂಡಿದ್ದೆ ಸರ್. ಅದರ ಎದುರುಗಡೆ ಒಂದು ಕಟ್ಟಡದಲ್ಲಿ ಒಂದು ಬೋರ್ಡ್ ಇತ್ತು ಸರ್. ಅದರಲ್ಲಿ "ಇಲ್ಲಿ ನಾವು ಎಂ.ಫಿಲ್ ಪ್ರಾಜೆಕ್ಟ್, ಪಿ.ಎಚ್.ಡಿ ಥೀಸಿಸ್' ಎಲ್ಲ ತಯಾರು ಮಾಡಿಕೊಡುತ್ತೇವೆ ಎಂದಿತ್ತು ಸರ್. ನಾನು ಆ ಆಫೀಸ್‌ಗೆ ಹೋಗಿ ವಿಚಾರಿಸಿದೆ ಸರ್. ಅವರು ನೀವು ಏನೂ ಮಾಡಬೇಕಾಗಿಲ್ಲ. ನಮಗೆ ಟಾಪಿಕ್ ಕೊಡಿ ಅಷ್ಟೇ. ನಾವು ಪಿ.ಎಚ್.ಡಿ. ಕೊಡಿಸುತ್ತೇವೆ. ಫೀಸು 2 ಲಕ್ಷ ಅಂದರು ಸರ್. ನಾನು ಗ್ಯಾರಂಟಿನಾ ಅಂದೆ. ಅವರು ಇದುವರೆಗೆ ಪಿ.ಎಚ್.ಡಿ. ಕೊಡಿಸಿರುವ ಲಿಸ್ಟೇ ಕೊಟ್ಟರು ಸರ್. ನಾನು ನೀವು ಕೊಟ್ಟಿದ್ದ ಟಾಪಿಕ್ ಕೊಟ್ಟು, ಪಿ.ಎಚ್.ಡಿ. ಗೆ ಎಷ್ಟು ದಿನ ಬೇಕಾಗುತ್ತದೆ ಅಂತ ಕೇಳಿದೆ ಸರ್. ಅದಕ್ಕೆ ಅವರು ನೀವು ಫೀಸು ಕಟ್ಟಿದ ದಿನದಿಂದ ಎರಡು ವರ್ಷ ಮುಗಿಯುತ್ತಿದ್ದಂತೆ ನಿಮಗೆ ಪಿ.ಎಚ್.ಡಿ. ಅಂದರು ಸರ್. ಅವರು ಏನು ಮಾಡಿದರೋ ನನಗೆ ಗೊತ್ತೇ ಇಲ್ಲ. ಎರಡು ವರ್ಷಕ್ಕೆ ಸರಿಯಾಗಿ ನನಗೆ ಫೋನ್ ಮಾಡಿ, ನಿಮ್ಮ ಪಿ.ಎಚ್.ಡಿ ಸರ್ಟಿಫಿಕೇಟ್ ರೆಡಿಯಿದೆ ಬಂದು ತೆಗೆದುಕೊಳ್ಳಿ ಅಂದರು. ನೀವು ಬೇಕಾದರೆ ಕಾನ್ವೋಕೇಷನ್‌ಗೆ ದೆಹಲಿಗೆ ಹೋಗಬಹುದು. ನಾವು ದಿನಾಂಕ ತಿಳಿಸುತ್ತೇವೆ ಅಂದರು ಸರ್. ನಾನು ಅನುಮಾನದಿಂದ ಇದು ಬೋಗಸ್ ಡಿಗ್ರಿ ಅಲ್ಲ ತಾನೆ ಅಂತ ಕೇಳಿದೆ ಸರ್.

ಅವರು ಇಲ್ಲಿ ನೋಡಿ. ಈ ವಿಶ್ವವಿದ್ಯಾನಿಲಯದ ಹೆಸರು "ಸತ್ಯಂ ಶಿವಂ ಸುಂದರಂ". ನೀವು ಧೈರ್ಯವಾಗಿ 'ಡಾಕ್ಟರ್ ಪ್ರವೀಣ್ ಕುಮಾರ್' ಎಂದು ಬರೆದುಕೊಳ್ಳಿ. ಇನ್ನೂ ಎಷ್ಟೋ ಜನಕ್ಕೆ ಮಾಡಿಕೊಟ್ಟಿದ್ದೇವೆ. ಒಂದೂ ಕಂಪ್ಲೆಂಟ್ ಇಲ್ಲ ಅಂದರು ಸರ್. ಅದಕ್ಕೆ ನಾನು ಡಾ.ಪ್ರವೀಣ್ ಕುಮಾರ್ ಅಂತ ಬೋರ್ಡ್ ಹಾಕಿಕೊಂಡಿದ್ದೇನೆ ಸರ್. ಇನ್ನೊಂದು ವಿಷಯ ಸರ್. ನನಗೆ ಪಿ.ಎಚ್.ಡಿ ಸಿಕ್ಕಿ ನೆನ್ನೆ ತಾನೇ ಈ ಕಾಲೇಜಿಗೆ ಪ್ರಿನ್ಸಿಪಾಲಾಗಿ ನೇಮಕಗೊಂಡೆ ಸರ್. ಇವತ್ತು ನೀವು ನಮ್ಮ ಕಾಲೇಜಿಗೆ ಬರುವ ವಿಷಯ ಗೊತ್ತಾಯಿತು ಸರ್. ನಿಮ್ಮನ್ನು ನೋಡಿ ತುಂಬಾ ಸಂತೋಷವಾಗಿದೆ ಸರ್.

ಪ್ರ. ಕು : ಸರ್. ನನಗೆ ಮಂಜುಳಾನ ಮರೆಯೋಕ್ಕಾಗೇ ಇಲ್ಲ ಸರ್. ಪ್ರಮೋಷನ್ ಪಡೆಯಕ್ಕೂ 20 ಲಕ್ಷ ಕೊಡಬೇಕಾಯಿತು ಸರ್ ಎಂದ ನನ್ನ ಶಿಷ್ಯ.

ನನಗೆ ತುಂಬಾ ಅದ್ದೂರಿಯಾಗಿ ಕಾಲೇಜಿನಲ್ಲಿ ಸನ್ಮಾನ ನಡೆಯಿತು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ■

# ನಡಿಗೆ ಎಂಬ ವ್ರತ

● ಬೇಲೂರು ರಾಮಮೂರ್ತಿ

ನನ್ನ ಅಜ್ಜ ನುಡಿದಂತೆ ನಡೆದವರು ಮತ್ತು ನಡೆದಂತೆ ನುಡಿದವರು. ಈ ಮಾತು ಅವರ ನಡಿಗೆಯ ವಿಚಾರಕ್ಕೆ ಅನ್ವಯವಾಗುತ್ತದೆ. ಅವರು ಎಂದೂ ಯಾವ ವಾಹನವನ್ನೂ ಹತ್ತಿದವರಲ್ಲ. ಅವರ ಮದುವೆಗೆ ಆಗಿನ ಕಾಲದಲ್ಲೇ ಅವರ ಮಾವ ನಾನು ಒಂದು ಕುದುರೆ ಕಳಿಸುತ್ತೀನಿ ಅದರ ಮೇಲೆ ಕೂತು ಬನ್ನಿ ಅಂತ ಹೇಳಿದ್ದಕ್ಕೆ ಮದುವೆಯಾಗುವುದು ನನ್ನ ಸಂತೋಷಕ್ಕೆ, ಪಾಪ ಕುದುರೆ ಯಾಕೆ ನನ್ನ ಭಾರ ಹೊತ್ತು ವೇದನೆ ಅನುಭವಿಸಬೇಕು ಅಂದು ಮದುವೆಗೆ ನಡೆದೇ ಹೋಗಿದ್ದರಂತೆ. ಇನ್ನು ಅವರ ವ್ಯವಹಾರಗಳು, ಸ್ನೇಹಿತರು, ನೆಂಟರು ಎಲ್ಲಾ ಇದ್ದದ್ದು ಸುಮಾರು ಐದಾರು ಮೈಲಿಗಳ ಆಸುಪಾಸಿನಲ್ಲೇ. ವಾಹನಗಳೇ ಅಪರೂಪ ಎಂಬ ಕಾಲದಲ್ಲಿ ಒಂದು ಸಣ್ಣ ಊರಿನವರಾದ ನನ್ನಜ್ಜ ಕಡೆಗಾಲದವರೆವಿಗೂ ನಾನು ಇದುವರೆವಿಗೂ ಯಾವ ವಾಹನವನ್ನೂ ಹತ್ತಿಲ್ಲ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರಂತೆ. ಅನೇಕ ವೇಳೆ ಅವರ ಸ್ನೇಹಿತರೂ, ನೆಂಟರೂ ಒಂದು ಸೈಕಲ್ಲಾದರೂ ಇಟ್ಕೊಳಿ ಅಂತ ಹೇಳಿದ್ದರೂ ನನ್ನ ಕಾಲೇ ಒಂದು ವಾಹನ ಇನ್ನು ಅದಕ್ಕಿಂತ ಇನ್ನೊಂದು ವಾಹನ ಬೇಕೇ ಅಂದಿದ್ದರಂತೆ. ಇಂಥಾ ಮಾತುಗಳು ನನ್ನಜ್ಜನಿಗೆ ಪ್ರಿಯವಾದರೂ ನನ್ನಜ್ಜಿಗೆ ಅಷ್ಟು ಹಿಡಿಸುತ್ತಿರಲಿಲ್ಲ. ಮನೆ ಅಂದ ಮೇಲೆ ಹೇಗೆ ಒಬ್ಬರು ಯಜಮಾನರು, ಯಜಮಾನ್ತಿ, ಇರ್ತಾರೋ ಹಾಗೆ ಒಂದು ವಾಹನವೂ ಇರಬೇಕು ಅಂತ ನಂಬಿ ಆಸೆಯನ್ನೂ ಪಟ್ಟಿದ್ದರು. ಅಜ್ಜಿಯ ತಂದೆ ಆಗಿನ ಕಾಲಕ್ಕೇ ಅಮಲ್ದಾರರಾಗಿದ್ದು ಒಂದು ಸೊಗಸಾದ ಸೈಕಲ್ ಇಟ್ಟಿದ್ದರಂತೆ. ಸೈಕಲ್‌ಕಚ್ಚೆ ಸುಬ್ಬರಾಯರು ಅಂದರೆ ಬಹಳ ಹೆಸರುವಾಸಿ. ಸೈಕಲ್‌ಕಚ್ಚೆ ಹಾಕಿದ ಪಂಚೆಯುಟ್ಟು ಮೇಲೊಂದು ಷರಟು, ಕೋಟು ಹಾಕಿಕೊಂಡು ಸೈಕಲ್ ಹತ್ತಿ ಜಮಾಬಂಧಿಗೆ ಹೋದರೆ ಹತ್ತು ಹಳ್ಳಿ ಸುತ್ತಿದರೂ ಪಂಚೆ ಒಂಚೂರೂ ಅಳ್ಳಾಡುತ್ತಿರಲಿಲ್ಲವಂತೆ. ನನ್ನಜ್ಜನಿಗೆ ಮದುವೆಯಾದಾಗ ಅವರ ಮಾವ ಅವರು ಉಪಯೋಗಿಸುತ್ತಿದ್ದ ಸೈಕಲನ್ನೇ ವರದಕ್ಷಿಣೆಯಾಗಿ ಕೊಡ್ತೀನಿ ಅಂದಿದ್ದಕ್ಕೆ ನನ್ನಜ್ಜ ನನಗೆ ಸೈಕಲ್ ಅಗತ್ಯವಿಲ್ಲ ಅಂದಿದ್ದರಂತೆ. ನನ್ನಜ್ಜನ ಪಕ್ಕದ ಮನೆಯಲ್ಲಿದ್ದ ಶಾಮರಾಯರು ಆಗಿನ ಕಾಲಕ್ಕೇ ಒಂದು ಸೆಕೆಂಡ್ ಹ್ಯಾಂಡ್ ಸ್ಕೂಟರ್ ಹೊಂದಿದ್ದರು. ನೂರು ಹೆಜ್ಜೆ ಹೋದರೆ ಸಿಗುವ ದೇವಸ್ಥಾನಕ್ಕೂ, ಇನ್ನೂರು ಹೆಜ್ಜೆ ಹೋದರೆ ಸಿಗುವ ಸಿನಿಮಾ ಟೆಂಟಿಗೂ, ಐದು ನಿಮಿಷದ ಹಾದಿಯ ಸಂತೆಗೂ, ಹತ್ತು ನಿಮಿಷದ ಹಾದಿಯ ದಿನಸಿ ಅಂಗಡಿಗೂ ಶಾಮರಾಯರು ಹೆಂಡತಿಯನ್ನು ಸ್ಕೂಟರಿನಲ್ಲಿ ಕೂರಿಸಿಕೊಂಡು ಹೋಗುತ್ತಿದ್ದುದು ಊರಿನಲ್ಲೆಲ್ಲಾ ಸುದ್ದಿಯಾಗಿತ್ತು. ನನ್ನಜ್ಜಿ ತಾನೂ ತನ್ನ ಗಂಡನ ಜೊತೆ ಹೀಗೆ ಸ್ಕೂಟರಿನಲ್ಲಿ ಹೋಗಬೇಕೂಂತ ಆಸೆ ಪಟ್ಟಿದ್ರಂತೆ. ಒಂದು ದಿನ ಏಕಾಂತದಲ್ಲಿ ಅಜ್ಜ ರಸಿಕತೆಯ ಪರಮಾವಧಿಯಲ್ಲಿದ್ದಾಗ ನನ್ನಜ್ಜಿ ಏನೊಂದ್ರೆ ಪಕ್ಕದ ಮನೆ ಶಾಮರಾಯರು ಅವರ ಹೆಂಡತಿನ ಸ್ಕೂಟರಿನಲ್ಲಿ ಕೂರಿಸ್ಕೊಂಡ್ ಹೋಗ್ತಾರೆ. ನನಗೂ ಆಸೆ ಆಗುತ್ತಲ್ಲಾಂದ್ರೆ ಅಂದಿದ್ದಕ್ಕೆ ನನ್ನಜ್ಜ ಮಾತು ತಿರುಗಿಸಿ ನೀನು ಶಾಮರಾಯರ ಜೊತೆ ಸ್ಕೂಟರಿನಲ್ಲಿ ಹೋಗೋದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಅವರು ಒಪ್ತಾರಾ

ಕೇಳು ಅಂದು ನಕ್ಕಿದ್ದರಂತೆ. ಇಂಥಾ ಹಲವಾರು ಸಂಗತಿಗಳು ನಡೆದ ಮೇಲೆ ನನ್ನಜ್ಜಿ ವಾಹನದ ಆಸೆಯನ್ನೇ ಬಿಟ್ರಂತೆ. ಭಾವಿ ಕಟ್ಟೆಯಲ್ಲಿ ವಾಹನದ ಮಾತು ಬಂದಾಗ ನನ್ನಜ್ಜಿ ಅಯ್ಯೋ ನನ್ನ ಹಣೇಲಿ ಬರೆದಿರೋದು ಕಡೆಗಾಲದಲ್ಲಿ ನಾಲ್ಕು ಜನ ಹೊತ್ಕೊಂಡು ಹೋಗೋ ವಾಹನ ಯೋಗ ಮಾತ್ರ ಅಂದಿದ್ದರಂತೆ. ವಿಷ್ಣು ಅಲಂಕಾರಪ್ರಿಯ, ಶಿವ ಅಭಿಷೇಕಪ್ರಿಯ, ಆದರೆ ಎಷ್ಟೇ ದೂರವಾದರೂ ನಡೆದೇ ಹೋಗುತ್ತಿದ್ದ ನನ್ನಜ್ಜನಿಗೆ ಊರಿನವರು ನಡಿಗೆಪ್ರಿಯ ಅನ್ನುತ್ತಿದ್ದರಂತೆ. ಒಂದು ಸಾರಿ ನನ್ನಜ್ಜ ರಟ್ಟೇಹಳ್ಳಿಗೆ ನಡೆದು ಹೊರಟಿದ್ದಾಗ ಪಟೇಲರು ಎದುರಿಗೆ ಕಂಡು ಒಟ್ಟು ಹತ್ತು ಮೈಲಿ ನಡೆಯಬೇಕಾಗುತ್ತಲ್ಲ. ನಿಮ್ಮ ಕಾಲು ಸಹಕರಿಸುತ್ತದೆಯೇ ಅಂತ ಕೇಳಿದ್ದಕ್ಕೆ ನನ್ನಜ್ಜ ಅಯ್ಯೋ ಹತ್ತು ಮೈಲಿ ಎಲ್ಲಿ ಅದು ಬರೀ ಐದು ಮೈಲಿ ಅಲ್ಲವೇ ಅಂದಿದ್ದರಂತೆ. ಪಟೇಲರು ಹೋಗೋದು ಐದು ಮೈಲಿ ಬರೋದು ಐದು ಮೈಲಿ ಒಟ್ಟು ಹತ್ತು ಮೈಲಿ ಅಲ್ಲವೇ ಅಂತ ಕೇಳಿದ್ದಕ್ಕೆ ನನ್ನಜ್ಜ ನಾನು ಹೋದ ಮೇಲೆ ಮತ್ತೆ ಹಿಂದಕ್ಕೆ ಬರಲೇಬೇಕಲ್ಲ. ಹೀಗಾಗಿ ನನ್ನ ನಡಿಗೆ ಬರೀ ಐದು ಮೈಲಿ ಅಂದು ಕಣ್ಣು ಮಿಟುಕಿಸಿದ್ದರಂತೆ. ನನ್ನಜ್ಜ ಎಲ್ಲಾದರೂ ದೂರದ ಹಳ್ಳಿಗೆ ಒಂದೆರಡು ಮೈಲಿ ಹೋಗಿ ಬರಬೇಕು ಅಂದರೆ ಒಬ್ಬರೇ ಹೋಗುತ್ತಿರಲಿಲ್ಲ. ದಾರಿಯಲ್ಲಿ ಸಿಕ್ಕ ಯಾರನ್ನಾದರೂ ಸರಿ ಬಾರೋ ಹೋಗಿಬರೋಣ ಅಂತ ಕರೆದೊಯ್ಯುತ್ತಿದ್ದರಂತೆ. ಇನ್ನು ಕೆಲವರು ನನ್ನ ಅಜ್ಜನ ಮಾತು ಕೇಳೋದು ಚೆಂದ ಅಂತ ನಾನೂ ಬರ್ತೀನಿ ನಡೀರಿ ಅಂತ ಜೊತೇಲಿ ಹೋಗೋರು. ಎರಡು ಮೈಲಿ ಕ್ರಮಿಸೋದರಲ್ಲಿ ಎಷ್ಟೊಂದು ಮಾತುಕತೆಗಳು, ಎಳನೀರು, ಕಬ್ಬಿನ ಹಾಲಿನ ಸೇವನೆಗಳ ಜೊತೆ ಕೆಲವರ ಸಮಸ್ಯೆಗಳಿಗೆ ಪರಿಹಾರವೂ ಸಿಕ್ಕಿರೋದು, ಕೆಲವು ಸಂಬಂಧಗಳು ಚಿಗುರಿರುತ್ತಿತ್ತು. ನನ್ನಜ್ಜನ ನಡಿಗೆಯಲ್ಲಿ ಒಂದು ರಿಥಮ್ ಇರುತ್ತಿತ್ತು ಅಂತ ಜನ ಹೇಳ್ತಾರೆ. ಅದೆಂದ್ರೆ ಅವರ ಮೊದಲ ಹೆಜ್ಜೆಯನ್ನು ಯಾವ ಉತ್ಸಾಹದಿಂದ ಇಡ್ತಿದ್ರೋ ಕಡೇ ಹೆಜ್ಜೆಯನ್ನೂ ಅದೇ ಉತ್ಸಾಹದಲ್ಲಿ ಇಡುತ್ತಿದ್ದರಂತೆ. ಅಯ್ಯೋ ಯಾವೋನು ಅಷ್ಟು ದೂರ ನಡೀತಾನೆ, ಸಾಕಾಯ್ತಪ್ಪ ಅನ್ನೋ ಮಾತುಗಳೇ ಅವರ ಸಂಗ್ರಹದಲ್ಲಿರಲಿಲ್ಲವಂತೆ. ಚಿಕ್ಕ ಹುಡುಗರನ್ನೂ ನಾಚಿಸೋ ಹಾಗೆ ನಡೀತಿದ್ದರಂತೆ. ನಮ್ಮಜ್ಜಿ ಯಾವತ್ತೂ ನಮ್ಮಜ್ಜನಿಗೆ ಸರಿಸಮನಾಗಿ ನಡೆಯೋಕೆ ಆಗ್ತಿರಲಿಲ್ಲ. ಅವರಿಬ್ಬರೂ ಅಪರೂಪಕ್ಕೆ ಸಿನಿಮಾಕ್ಕೆ ಹೊರಟರು ಅಂದ್ರೆ ನನ್ನಜ್ಜನಿಗೂ ನನ್ನಜ್ಜಿಗೂ ಸುಮಾರು ಇಪ್ಪತ್ತು ಮೂವತ್ತು ಅಡಿಗಳಷ್ಟು ಅಂತರವಿರೋದಂತೆ. ಒಂದು ಸಾರಿ ನನ್ನಜ್ಜ ಮೊದಲು ಸಿನಿಮಾ ಟೆಂಟ್ ತಲುಪಿ ಕೌಂಟರಿನಲ್ಲಿ ಎರಡು ಟಿಕೆಟ್ ಕೊಡಿ ಅಂತ ಕೇಳಿದ್ದಕ್ಕೆ ಕೌಂಟರಿನವನು ಒಬ್ಬರೇ ಬಂದಿದೀರ ಎರಡು ಯಾಕೆ ಅಂತ ಕೇಳಿದ್ದಕ್ಕೆ ನನ್ನಜ್ಜ ಹಿಂದೆ ನನ್ನ ಹೆಂಡತಿ ಬರ್ತಿದಾಳೆ ಅಂದಿದ್ದರಂತೆ. ಸಿನಿಮಾ ಬಿಡುವಾಗ ಕತ್ತಲಾಗಿರೋದು. ಆಗ ನನ್ನಜ್ಜಿ ನೋಡಿ ಈಗ ನೀವು ನನ್ನ ವೇಗದಲ್ಲೇ ನಡೆಯಬೇಕು. ನೀವು ಮಾತ್ರ ಮುಂದೆ ಮುಂದೆ ಹೋದರೆ ನನಗೆ ಹೆದರಿಕೆ ಆಗುತ್ತೆ ಅಂದಿದ್ದರಂತೆ. ಈಗಿನವರಂತೆ ನನ್ನಜ್ಜ ಬೆಳಗಿನ ವಾಕಿಂಗ್ ಅಂತ ಹೋಗುತ್ತಿರಲಿಲ್ಲ. ಅವರು ಏಳುತ್ತಿದ್ದುದೇ ಆರು ಗಂಟೆಗೆ. ಬೆಳಗಿನ ಕೆಲಸಗಳನ್ನು ಮುಗಿಸಿ ಸುಮಾರು ಎರಡು ಮೈಲು ಕ್ರಮಿಸಿ ದಿಬ್ಬದ ಮೇಲಿನ ತೋಟಕ್ಕೆ ಹೋಗಿ ಪೂಜೆಗೆ ಹೂಗಳನ್ನು ಕುಯ್ದು ತರೋರು. ಆಯ್ತಲ್ಲ ಅಲ್ಲಿಗೆ ಬೆಳಗಿನ ವಾಕಿಂಗು. ಸ್ನಾನ, ಪೂಜೆ, ತಿಂಡಿ ಆದ ಮೇಲೆ ಪೇಟೆಗೆ ಹೋಗಿ ಬಂದರೆ ಒಂದು

ಮೈಲಿ. ಸಂಜೆ ಗೆಳೆಯರ ಜೊತೆ ಸುತ್ತಾಟ ಅಂದರೆ ಇನ್ನೊಂದೆರಡು ಮೈಲಿ. ಹೀಗೆ ನನ್ನಜ್ಜ ದಿನಕ್ಕೆ ಏನಿಲ್ಲವೆಂದರೂ ನಾಲ್ಕೈದು ಮೈಲಿ ಆರಾಮವಾಗಿ ನಡೆದಿರೋರಂತೆ. ಇನ್ನು ತಿಂಗಳಿಗೆ ಒಂದೆರಡು ಸಾರಿಯಾದರೂ ಸ್ನೇಹಿತರನ್ನು ನೋಡಬೇಕು, ಸ್ನೇಹಿತರ ಮನೆಗೆ ಹೋಗಬೇಕು ಅಂತ ಅಕ್ಕಪಕ್ಕದ ಹಳ್ಳಿಗಳಿಗೆ ಹೋಗೋರಂತೆ. ಕೆಲವು ದಿನಗಳ ನಂತರ ಒಂದು ದಿನ ನನ್ನಜ್ಜಿ ಏನು ನಿಮಗೆ ವಯಸ್ಸು ಕಡಿಮೆಯೇ, ಮೊದಲಿನ ಹಾಗೇ ನಡೀತಾ ಇದೀರಲ್ಲ, ಕಾಲು ನೋವು ಬಂದ್ರೆ ಏನ್ಮಾಡ್ತೀರ ಅಂತ ಕೇಳಿದ್ದಕ್ಕೆ ಅಜ್ಜ ಕಾಲು ನೋವು ಬಂದ್ರೆ ನೀನು ಎಣ್ಣೆ ನೀವಿ ಬಿಸಿ ನೀರು ಶಾಖ ಕೊಡ್ತೀಯಲ್ಲ. ಆ ಸುಖ ಅನುಭವಿಸೋಕ್ಕಾದರೂ ನಾನು ನಡೀಬೇಕು ಅಂದಿದ್ರಂತೆ. ನನ್ನಜ್ಜಿ ತಲೆ ಚಚ್ಕೊಂಡು ನೋಡಿ ನಿಮಗೆ ಯಾವಾಗ ಬೇಕೋ ಅವಾಗ ಕಾಲಿಗೆ ಎಣ್ಣೆ ಹಚ್ಚಿ ನೀವಿ ಬಿಸಿ ನೀರು ಶಾಖ ಕೊಡ್ತೀನಿ. ಅದಕ್ಕೋಸ್ಕರ ನೀವು ನಡೆದು ಕಾಲು ನೋವು ಮಾಡ್ಕೊಬೇಕಾಗಿಲ್ಲ ಅಂದಿದ್ರಂತೆ. ನನ್ನಜ್ಜನಿಗೆ ಹತ್ತಿರದ ತಾಣಗಳಿಗೆ ಯಾರಾದರೂ ವಾಹನ ಬಳಸಿದರೆ ಸಿಟ್ಟು ಬರುತ್ತಿತ್ತಂತೆ. ದೇಹಾನ ದಂಡಿಸ್ರೋ, ಕೈ ಕಾಲುಗಳಿಗೆ ವ್ಯಾಯಾಮ ಮಾಡಿಸ್ರೋ ಅನ್ನುತ್ತಿದ್ದರಂತೆ. ಒಂದು ಸಾರಿ ಒಂದು ಫರ್ಲಾಂಗು ದೂರದ ಮನೆಯಿಂದ ಹುಡುಗನೊಬ್ಬ ಸ್ಕೂಟರಿನಲ್ಲಿ ಬಂದು ನಮ್ಮಪ್ಪ ನಿಮ್ಮನ್ನು ಕರೀತಿದಾರೆ, ಸ್ಕೂಟರಿನಲ್ಲೇ ಕರ್ಕೊಂಡು ಬಾ ಅಂದಿದಾರೆ ಅಂದಾಗ ಅಪ್ಪ ಮಗ ಇಬ್ರಿಗೂ ಬುದ್ಧಿ ಇಲ್ಲ ನೀನು ನಡಿ ನಾನು ನಡ್ಕೊಂಡು ಬರ್ತೀನಿ ಅಂದು ಅವರ ಮನೆಗೆ ಹೋಗಿ ಈಗಲೇ ಮಕ್ಕಳಿಗೆ ಸ್ಕೂಟರು ಕೊಟ್ಟು ಅವರನ್ನು ಹಾಳು ಮಾಡಬೇಡಿ. ಅವರು ನಡೀಲಿ, ನಡೆಯೋದು ಕಲೀಲಿ, ದೇಹ ದಂಡನೆ ಬದುಕಿಗೆ ಮುಖ್ಯ ಅಂದಿದ್ದರಂತೆ. ನನ್ನಜ್ಜನಿಗೆ ನಮ್ಮಪ್ಪ ಒಬ್ಬನೇ ಮಗ. ಆಗಿನ ಕಾಲಕ್ಕೆ ನಮ್ಮ ತಂದೆಗೆ ಓದು ತಲೆಗೆ ಹತ್ತಲಿಲ್ಲ. ಅಜ್ಜನ ಜಮೀನನ್ನೇ ನೋಡ್ಕೊಂಡು ಅದೇ ಊರಿನಲ್ಲಿ ಇದ್ದುಬಿಟ್ಟರು. ನಮ್ಮಪ್ಪನೂ ಬೇರೆ ಮಕ್ಕಳಂತೆ ಓದಿ ವಿದ್ಯಾವಂತರಾಗಿ ನಗರಕ್ಕೆ ಬಂದು ಕೆಲಸಕ್ಕೆ ಸೇರಿ ಅಲ್ಲೇ ಮನೆ ಮಾಡಿದ್ದರೆ ನನ್ನಜ್ಜ ವಾಹನ ಹತ್ತಿ ಮಗನ ಮನೆಗೆ ಬರಲೇಬೇಕಾಗುತ್ತಿತ್ತು. ಆಗ ವಾಹನ ಏರಲೇಬೇಕಾಗಿತ್ತು. ನನ್ನ ಅಜ್ಜ ಅವರ ಮಗನಿಗೆ ಅಂದರೆ ನಮ್ಮಪ್ಪನಿಗೆ ಅದೇ ಊರಿನ ಹೆಣ್ಣು ತಂದಿದ್ರಿಂದ ಮದುವೆಗೆ ಬೇರೆ ಊರಿಗೆ ವಾಹನ ಹತ್ತಿ ಹೋಗೋ ಪ್ರಮೇಯವೇ ಬರಲಿಲ್ಲ. ಅನೇಕರು ನಾವು ಕಾಶಿ ಯಾತ್ರೆ ಹೊರಟಿದೀವಿ ರೈಲು, ಬಸ್ಸಿನ ಪ್ರಯಾಣ, ನೀವೂ ಬನ್ನಿ ಅಂತ ಕರೆದದ್ದಕ್ಕೆ ವಿಶ್ವನಾಥ ಕಾಶೀಲಿ ಮಾತ್ರ ಇರೋದು ಅಂದ್ಕೊಂಡಿದೀರ. ನೆನೆದಲ್ಲೇ ಕಾಶಿ, ಮನದಲ್ಲೇ ರಾಮೇಶ್ವರ ಅಂದಿದ್ರಂತೆ. ನನ್ನಜ್ಜನ ಕಾಲದಲ್ಲಿ ಪ್ರವಾಸ ಅಂದ್ರೆ ಪ್ರಯಾಸವೇ. ಕಾಶಿಗೆ ಹೋದೋರು ಹಿಂದಕ್ಕೆ ಬಂದರೆ ಅದೊಂದು ಪವಾಡ ಅಂತ ನಂಬಿದ್ದರು. ಕಾಶಿಯಿಂದ ಹಿಂದಕ್ಕೆ ಬಂದೋರನ್ನು ಬಸ್ ಸ್ಟಾಂಡಿಗೆ ಹೋಗಿ ಓಲಗ, ಡೋಲು ಸಮೇತ ಸ್ವಾಗತ ಮಾಡುವ ಪದ್ಧತಿಯೂ ಇತ್ತು. ಕಾಶಿ ಸಮಾರಾಧನೆಯೂ ನಡೆಯುತ್ತಿತ್ತು. ನನ್ನಜ್ಜಿಯ ಆಸೆ ನನ್ನಜ್ಜನ ಆಸೆಗೆ ಬೆಸೆದುಕೊಂಡಿದ್ದರಿಂದ ಅವಳದು ಅಂತ ಪ್ರತ್ಯೇಕವಾದ ಆಸೆ ಇರಲಿಲ್ಲ. ನನ್ನಜ್ಜ ನನ್ನಜ್ಜಿಗೆ ನೀನೂ ನನ್ನಂತೆ ದಿನಾ ಸ್ವಲ್ಪ ಸ್ವಲ್ಪ ನಡಿ. ಮನೇಲೇ ಕೂತು ಯಾಕೆ ದೇಹ ಜಡ್ಡುಗಟ್ಟಿಸ್ತೀಯಾ ಅಂದಿದ್ರಂತೆ. ನನ್ನಜ್ಜಿ ದಿನಾ ಸಂಜೆ ದೇವಸ್ಥಾನಕ್ಕೆ ನಡೆದು ಹೋಗಿ ಹಿಂದಕ್ಕೆ ಬರೋದು ಬಿಟ್ಟರೆ ಬೇರೆ ನಡಿಗೆ ಇರಲಿಲ್ಲ. ಈಗಿನಂತೆ ಹೆಂಗಸರೇ ಆಗ ಷಾಪಿಂಗು ಅದು ಇದು

ಅಂತ ಹೋಗ್ತಿರಲಿಲ್ಲ. ಪಕ್ಕದ ಊರಿನ ಜಾತ್ರೆ ಅಂದರೆ ಮೂರ್‍ನಾಲ್ಕು ಮನೆ ಹೆಂಗಸರು ಸೇರಿ ಒಂದು ಗಾಡಿ ಮಾಡಿಕೊಂಡು ಹೋಗಿ ಬರ್‍ತಿದ್ರಂತೆ. ನನ್ನಜ್ಜ ಮಾತ್ರ ಜಾತ್ರೆಯೋ, ತೇರೋ, ಇನ್ನೊಂದೋ ಏನಾದರೂ ಸರಿ ನಡೆದೇ ಹೋಗೋರು.

ನನ್ನಜ್ಜ ನಮ್ಮೂರಿನಿಂದ ತಿರುಪತಿಗೆ ನಡಿಗೆಯಲ್ಲೇ ಹೋಗಿಬಂದಿದ್ರಂತೆ. ನೋಡ್ರಯ್ಯ ಅನೇಕರು ಇಲ್ಲಿಂದ ಬಸ್ಸಿನಲ್ಲಿ ಹೋಗಿ ಅಲ್ಲಿ ಬೆಟ್ಟ ಹತ್ತುತ್ತಾರೆ. ಆದರೆ ನಾನು ನಮ್ಮ ಮನಯಿಂದ ತಿಮ್ಮಪ್ಪನ ಪಾದ ದರ್ಶನದವರೆವಿಗೂ ಪಾದಯಾತ್ರೆ ಮಾಡಿದೀನಿ ಅಂತ ಹೆಮ್ಮೆಯಿಂದ ಹೇಳ್ಕೊತಾ ಇದ್ರಂತೆ. ಆಗಿನ ಕಾಲಕ್ಕೆ ಇದೊಂದು ದಾಖಲೆ.

ಇಂಥಾ ನನ್ನಜ್ಜನಿಗೆ ಅವರ ಅಂತ್ಯವೂ ವಿಚಿತ್ರವಾಗಿತ್ತಂತೆ. ನಾಲ್ಕು ಮೈಲಿ ನಡೆದು ಪಕ್ಕದೂರಿಗೆ ಹೋಗಿದ್ದ ನನ್ನಜ್ಜ ವಾಪಸ್ ಬರುವಾಗ ಎದೆ ನೋವು ಅಂತ ಕುಸಿದದ್ದು ಸ್ಮಶಾನದ ಗೇಟಿನ ಬಳಿಯೇ. ಅಲ್ಲಿ ಬಿದ್ದಿದ್ದ ಅಜ್ಜನನ್ನು ನೋಡಿದೋರು, ಬೇಗ ಯಾವುದಾದರೂ ಗಾಡಿ ನಿಲ್ಲಿಸಿ ಇವರನ್ನು ಆಸ್ಪತ್ರೆಗೆ ಕರ್‍ಕೊಂಡು ಹೋಗೋಣ ಅಂದ್ರೆ ಇನ್ನೊಬ್ಬರು ಪ್ರಾಣ ಇರೋದು ಅನುಮಾನ, ಅವರು ಬದುಕಿನಲ್ಲಿ ಯಾವ ವಾಹನವನ್ನೂ ಹತ್ತಿದೋರಲ್ಲ. ಈಗ್ಯಾಕೆ ವ್ರತಭಂಗ ಮಾಡಬೇಕು ಡಾಕ್ಟರನ್ನೇ ಇಲ್ಲಿಗೆ ಕರೆಸೋಣ ಅಂದರಂತೆ. ಡಾಕ್ಟರು ಸ್ಮಶಾನಕ್ಕೇ ಬಂದು ಅಜ್ಜನನ್ನು ಪರೀಕ್ಷಿಸಿ ಪ್ರಾಣ ಹೋಗಿದೆ ಅಂತ ಖಚಿತಪಡಿಸಿದರಂತೆ. ನನ್ನಪ್ಪ ನನ್ನಜ್ಜಿಯ ಅನುಮತಿ ಕೇಳಿ ಮತ್ತೆ ಕಳೇಬರವನ್ನು ಮನೆಗೆ ತರೋದು ಯಾಕೆ ಅಂತ ಸ್ಮಶಾನದಲ್ಲೇ ಎಲ್ಲ ಕೆಲಸಗಳನ್ನೂ ಮುಗಿಸಿದರಂತೆ. ನನ್ನಜ್ಜನ ಕಳೇಬರವನ್ನು ನೋಡಲು ಊರಿನ ಜನಗಳೇ ಅಲ್ಲದೇ ಅಕ್ಕಪಕ್ಕದ ಊರಿನ ಸ್ನೇಹಿತರೂ ಸ್ಮಶಾನಕ್ಕೆ ಬಂದಿದ್ದರಂತೆ. ಹೀಗಿದ್ದ ನನ್ನಜ್ಜ ಅವರ ಜೀವಿತ ಕಾಲದಲ್ಲಿ ಯಾವ ವಾಹನವನ್ನೂ ಬಳಸದೇ ಕಾಲ್ನಡಿಗೆಯನ್ನೇ ನಂಬಿದ್ದೋರು, ಚಟ್ಟದ ವಾಹನವನ್ನೂ ಏರದೇ ಕಾಲ್ನಡಿಗೆಯಲ್ಲೇ ಸ್ಮಶಾನ ತಲುಪಿಬಿಟ್ಟಿದ್ದರು. ■

---

## ಹಣ ಒಂದೇ ಆದರೆ ವಿಪ್ರಾಃ ಬಹು ವದಂತಿ

ಮಂದಿರದಲ್ಲಿ ಅದು ಚಂದಾ
ಶಾಲೆಯಲ್ಲಿ ಅದು ಶುಲ್ಕ
ಮದುವೆಯಲ್ಲಿ ಅದು ವರದಕ್ಷಿಣೆ
ಡೈವೋರ್ಸ್ ಆದರೆ ಅದು ಪರಿಹಾರ
ಬೇರೆಯವರಿಂದ ಪಡೆದಿದ್ದರೆ ಅದು ಸಾಲ
ಸರಕಾರಕ್ಕೆ ಕೊಡುವದಿದ್ದರೆ ಅದು ತೆರಿಗೆ
ಕೋರ್ಟಗೆ ಕಟ್ಟಿದರೆ ಅದು ದಂಡ
ರಿಟೈರ್ ಆದರೆ ಪಿಂಚಣಿ
ಮಾಲೀಕ ಕೊಟ್ಟರೆ ಅದು ಸಂಬಳ
ಯಜಮಾನ ನೀಡಿದರೆ ಅದು ಜೀತ
ಮಕ್ಕಳಿಗೆ ಕೊಟ್ಟರೆ ಅದು ಪಾಕೆಟ್ ಮನಿ
ಬ್ಯಾಂಕ್‌ನಿಂದ ಪಡೆದರೆ ಅದು ಸಾಲ
ಸಪ್ಲೆಯರ್‌ಗೆ ಕೊಟ್ಟರೆ ಅದು ಟಿಪ್ಸ್
ಅಪಹರಣಕಾರರರಿಗೆ ಕೊಟ್ಟರೆ
ಅದು ಸುಲಿಗೆ ಹಣ
ಸರ್ಕಾರಿ ನೌಕರರರಿಗೆ ಕೊಟ್ಟರೆ
ಅದು ಲಂಚ
ಹೆಂಡತಿಗೆ ನೀಡಿದರೆ?
ಅದು ಡ್ಯೂಟಿ.
ಎಲ್ಲ ಗಂಡಂದಿರೂ ಈ ಡ್ಯೂಟಿ
ಮಾಡಲೇ ಬೇಕು ಏಕೆಂದರೆ
ಹೆಂಡತಿಯರು ಡ್ಯೂಟಿ ಫ್ರೀ ಅಲ್ಲ.

# ಇಂಗ್ಲಿಷಲ್ಲೇನಂತಾರೆ?!!

● ರಕ್ಷಾ ರಮೇಶ್

ನನ್ನ ಮೂರು ವರ್ಷದ ಮಗ ಅಗಸ್ತ್ಯನಿಗೆ ಒಂದು ಹೊಸ ಕ್ರೇಜ್ ಶುರುವಾಗಿದೆ. ಏನಂತೀರಾ.. ಎಲ್ಲದಕ್ಕೂ ಒಂದೇ ಪ್ರಶ್ನೆ ಕೇಳುತ್ತಾನೆ.. ಅದಕ್ಕೆ ಇಂಗ್ಲಿಷಲ್ಲೇನಂತಾರೆ??! ನಾವು ಮನೆಯಲ್ಲಿ ಇಂಗ್ಲಿಷ್ ಮಾತಾಡುವುದು ಬಹಳ ಕಡಿಮೆ. ಕನ್ನಡವೇ ಮಾತೃಭಾಷೆ, ಹೊರಗಡೆಯೂ ಕನ್ನಡದವರೊಂದಿಗೆ ನಾನು ನನ್ನ ಗಂಡ ಕನ್ನಡದಲ್ಲೇ ವ್ಯವಹರಿಸುವುದು. ಭಾಷೆ ಬರೋಲ್ಲ ಅನ್ನೋ ಕೆಲವರೊಂದಿಗೆ ಕೂಡ ಕನ್ನಡದಲ್ಲೇ ವ್ಯವಹರಿಸಿ ಅವರಿಗೆ ಕಲಿಸಲು ಪ್ರಯತ್ನಿಸುತ್ತೇವೆ. ತೀರಾ ಅನಿವಾರ್ಯವಾದಾಗ ಮಾತ್ರ ಇಂಗ್ಲಿಷ್ ಬಳಸುವುದು. ನಾವೇನು ಇಂಗ್ಲಿಷ್ ಭಾಷೆಯ ವಿರೋಧಿಗಳಲ್ಲ. ಖಂಡಿತಾ ಅಂತರರಾಷ್ಟ್ರೀಯ ಭಾಷೆಯಾದ ಇಂಗ್ಲಿಷ್ ಒಂದು ಉತ್ತಮ ಸಂವಹನ ಮಾಧ್ಯಮ. ಆದರೆ ಹಾಗಂತ ನಮ್ಮ ಭಾಷೆಯನ್ನ ಬಳಸದೇ ಇರುವುದು ತಪ್ಪು. ಕನ್ನಡ ಬಲ್ಲವರೊಂದಿಗೆ ಕನ್ನಡದಲ್ಲಿ ಮಾತಾಡುವುದು ನನಗೆ ಇಷ್ಟ, ಇಲ್ಲಿ ಇಂಗ್ಲೀಷ್ಗೆ ಏನು ಕೆಲಸ ??!!

ನಾನೇನು ಹೇಳುತ್ತಿದ್ದೆ ಎಂದರೆ, ನನ್ನ ಮಗ ಸ್ಕೂಲಿಗೆ ಹೋಗೋಕೆ ಶುರು ಮಾಡಿದ ಮೇಲೆ ಇಂಗ್ಲಿಷ್ ಪ್ರಭಾವ ಸ್ವಲ್ಪ ಜಾಸ್ತಿಯಾಗಿದೆ. ಇತ್ತೀಚಿಗಂತೂ ಹಿಂದೀ ಬೇರೆ ಶುರು ಮಾಡಿದ್ದಾನೆ. ಮೊದಮೊದಲು ನನಗೂ ಇದು ಚೆನ್ನಾಗಿತ್ತು. ಅಕ್ಷರಮಾಲೆ ಕಲಿಸಿದ್ದೇ ಹಾಗೆ. ಸಿಂಹ ಅಂದ್ರೆ ಲಯನ್, ಅರಸ ಅಂದ್ರೆ ಕಿಂಗ್, ಆನೆ ಅಂದ್ರೆ ಎಲಿಫ್ಯಾಂಟ್, ಹುಲಿ ಅಂದ್ರೆ ಟೈಗರ್, ಇಲಿ ಅಂದ್ರೆ ಮೌಸ್ ಅಂತ ಹೇಳಿಕೊಂಡು ಆರಾಮವಾಗಿ ನನಗೇ ಇಂಗ್ಲಿಷ್ ಗೊತ್ತಿರೋದು ಅಂತ ಜಂಭ ಪಡ್ತಾ ಇದ್ದೆ. ಎಲ್ಲದಕ್ಕೂ ಇಂಗ್ಲಿಷ್ನಲ್ಲಿ ಅದಕ್ಕೇನಂತಾರೆ ? ಇದಕ್ಕೇನಂತಾರೆ ಅಂತ ಕೇಳುತ್ತಿದ್ದ ಮಗ ಇದ್ದಕ್ಕಿದ್ದಂತೆ ಸರಾಗವಾಗಿ ಇಂಗ್ಲಿಷ್ನಲ್ಲೇ ಮಾತಾಡಲು ಶುರು ಮಾಡಿಬಿಟ್ಟ. ಉದ್ದುದ್ದ ವಾಕ್ಯಗಳು. ಅಮ್ಮ, ಪ್ಲೀಸ್ ಕಮ್ ಡೋಂಟ್ ವಾಂಟ್ ದಿಸ್, ಐ ವಾಂಟ್ ಪಡ್ಡು ಟುಡೇ ಹೀಗೆ ಹಲವಾರು ವಾಕ್ಯಗಳು. ಇವನ ಇಂಗ್ಲಿಷ್ ಸಾಮರ್ಥ್ಯದ ಬಗ್ಗೆ ಬೆರಗಾಗಿ ನಾನು ಅವರ ಟೀಚರ್‌ಗೆ ಕೇಳಿದೆ, ನೀವು ಅವನೊಂದಿಗೆ ಯಾವ ಭಾಷೆಯಲ್ಲಿ ಮಾತಾಡುತ್ತೀರಾ ಅಂತ, ನನಗೆ ಅಚ್ಚರಿ ಕಾದಿತ್ತು! ಅವರು ಕನ್ನಡದಲ್ಲೇ, ಯಾಕೆ ಮೇಡಂ? ಅಂತ ಅಂದ್ರು!!! ನಾನು ಇವನ ಇಂಗ್ಲಿಷ್ ವ್ಯಾಮೋಹದ ಬಗ್ಗೆ ಅವರಿಗೆ ವಿವರಿಸಿದೆ. ಆವಾಗ ತಿಳಿಸಿದರು, ಮಕ್ಕಳೆಲ್ಲ ಪರಸ್ಪರ ಇಂಗ್ಲಿಷ್, ಕೆಲವು ನಾರ್ತ್ ಇಂಡಿಯನ್ ಮಕ್ಕಳು ಇದ್ದಾರಲ್ಲ, ಅವರ ಜೊತೆ ಹಿಂದೀ ಮಾತಾಡುತ್ತಾರೆ ಅಂತ ಹೇಳಿದ್ರು. ಪರವಾಗಿಲ್ಲವೇ ಈ ಚಿಕ್ಕ ಮಕ್ಕಳು ಅಂತ ಅಂದುಕೊಂಡೆ.ಮೊದಲು ಬರೀ ವಸ್ತುಗಳು, ಪ್ರಾಣಿಗಳು ಇವಕ್ಕೆಲ್ಲಾ ಇಂಗ್ಲಿಷ್ ಅಲ್ಲಿ ಏನಂತಾರೆ ಅಂತ ಕೇಳ್ತಿದ್ದ ಮಗನಿಗೆ, ಎಲ್ಲವೂ ಗೊತ್ತಾಗಿ ಬಿಟ್ಟಿದೆ. ಮತ್ತೆ ನನ್ನ ಕೇಳುವುದೇನಿದೆ. ಆದರೆ ಈಗ ಹೊಸದಾಗಿ ನನ್ನ ಇಂಗ್ಲಿಷ್ ಭಾಷಾ ಪ್ರೌಢಿಮೆಯ ಸತ್ವ ಪರೀಕ್ಷೆ ಮಾಡಲು ಶುರು ಮಾಡಿದ್ದಾನೆ. ಹೇಗೆ ಅಂತೀರಾ... ಹೇಳ್ತೀನಿ ಕೇಳಿ....

ಒಮ್ಮೆ ಹೀಗೆ, ಶಂಕರ್ ಗುರು ಸಿನಿಮಾ ಟಿ.ವಿ. ಯಲ್ಲಿ ನೋಡುತ್ತಿದ್ದೆವು. ರಾಜಕುಮಾರ್ ಮತ್ತು ವಜ್ರಮುನಿ ದೃಶ್ಯ ಬರುತ್ತಿತ್ತು. ರಾಜಕುಮಾರ್ ಇವನಿಗೆ

ಗೊತ್ತು. ವಜ್ರಮುನಿಯನ್ನು ಮೊದಲ ಬಾರಿ ನೋಡಿದ್ದು. ಅವನ್ಯಾರು? ಅಂತ ಕೇಳಿದ. ನಾನು ವಜ್ರಮುನಿ ಅಂದೆ. ಅದಕ್ಕೆ ಇಂಗ್ಲಿಷಲ್ಲೇನಂತಾರೆ? ಅಂದ. ನಾನೇನು ಹೇಳುವುದು ಅಂತ ತಿಳಿಯದೆ ತಡಬಡಾಯಿಸಿದೆ. ನನ್ನ ಗಂಡ ಸ್ವಲ್ಪ ತಲೆ ಓಡಿಸಿ ಡೈಮಂಡ್ ಸೇಜ್ (ವಜ್ರ + ಮುನಿ) ಅಂದರು. ಓಹ್. ... ರಾಜ್‌ಕುಮಾರ್‌ಗೆ ಏನಂತಾರೆ ?? ಅಂದ. ನಾನು ತಕ್ಷಣ ಪ್ರಿನ್ಸ್ ಅಂದೆ. ಡೈಮಂಡ್ ಸೇಜ್ ಅಂತ ಎರಡು ಶಬ್ದ ಕೇಳಿದ್ದ ಅವನಿಗೆ ರಾಜ್‌ಕುಮಾರ್‌ಗೆ ಬರೀ ಪ್ರಿನ್ಸ್ ಅಂದಿದ್ದು ಇಷ್ಟ ಆಗಲಿಲ್ಲ. ಅದನ್ನು ಗಮನಿಸಿದ ನನ್ನ ಗಂಡ ಕಿಂಗ್ಸ್ ಸನ್ ಅಂದ್ರು.

ಅವನಿಗೆ ಇಷ್ಟ ಆಯ್ತು. ಅವನಿಗೆ ಈ ಆಟದ ರುಚಿ ಹತ್ತಿಬಿಡ್ತು. ಟಿ.ವಿ.ಯಲ್ಲಿ ಕಂಡ ಕಂಡವರನ್ನೆಲ್ಲ ತೋರಿಸಿ ಇಂಗ್ಲಿಷಲ್ಲೇನಂತಾರೆ? ಅಂತ ಕೇಳಲು ಶುರು ಮಾಡಿಬಿಟ್ಟ. ಅಂಬರೀಶ್ ಸ್ಕೈ + ಕಿಂಗ್ (ಅಂಬರ + ಈಶ), ವಿಷ್ಣುವರ್ಧನ್‌ಗೆ ಅಡ್ವೆಂಚರಸ್ ಲಯನ್ (ಸಾಹಸ ಸಿಂಹ), ರವಿಚಂದ್ರನ್‌ಗೆ ಸನ್‌ಮೂನ್ ಅನಂತ್‌ನಾಗ್‌ಗೆ ಇನ್ಫೈನೈಟ್ ಸ್ನೇಕ್ ಹೀಗೆ ಶುರು ಆಯಿತು ಇವನ ಇಂಗ್ಲಿಷಲ್ಲೇನಂತಾರೆ? ಪರ್ವ.

ನನ್ನ ಗಂಡ ಡೈಮಂಡ್ ಸೇಜ್ ಮತ್ತು ಕಿಂಗ್ಸ್ ಸನ್' ಪರಿಚಯಿಸಿ ಕೈ ತೊಳೆದುಕೊಂಡಿದ್ದಾರೆ. ಉಳಿದವರಿಗೆಲ್ಲಾ ಇಂಗ್ಲಿಷಲ್ಲೇನಂತಾರೆ? ಅಂತ ಕಂಡು ಹಿಡಿಯುವ ಕಾಯಕ ನನ್ನ ತಲೆಗೆ ಬಿದ್ದಿದೆ. ಒಮ್ಮೆ ಶಿವರಾಜ್ ಕುಮಾರ್ ನೋಡಿ ಅವನ ಮಾಮೂಲಿ ಪ್ರಶ್ನೆ ಕೇಳಿದ. ನಾನು ತುಂಬಾ ಯೋಚಿಸಬೇಕಾಗಿ ಬಂದು ಬಿಡ್ತು. ಜೀವನದಲ್ಲಿ ಯಾವಾಗಲೂ ಇಂಥದ್ದೊಂದು ಪ್ರಶ್ನೆ ಇದೆ ಅಂತ ಇಷ್ಟೊಂದು ಯೋಚಿಸಿರಲಿಲ್ಲ. ನಾನು ತುಂಬಾ ಯೋಚಿಸಿ ಕೊನೆಗೆ ಶಿವ ಅಂದರೆ ಮಂಗಳಕರ ಅಲ್ಲವೇ, ಅದಕ್ಕೆ, ಆಸ್ಪೀಷಿಯಸ್ ಕಿಂಗ್ಸ್ ಸನ್ ಅಂತ ಹೇಳಿದೆ. ತಕ್ಷಣ ಮತ್ತೆ ಕೇಳಿದ ಹಾಗಾದರೆ ಪುನೀತ್ ರಾಜಕುಮಾರ್ಗೆ ಏನಂತಾರೆ? (ಪುನೀತ್ ಅವನಿಗೆ ತುಂಬಾ ಇಷ್ಟ). ನಾನು ಪ್ಯೂರ್ ಕಿಂಗ್ಸ್ ಸನ್ ಅಂತಾ ಹೇಳಿದೆ. ಮೂರು ಶಬ್ದ ಕೇಳಿದ ಇವನಿಗೆ ಈ ಆಟ ಇನ್ನೂ ರುಚಿಸಿಬಿಟ್ಟಿದೆ.

ಇತ್ತೀಚೆಗೆ ಕೆ. ಬಿ.ಸಿ ಸುಧಾಮೂರ್ತಿ ಎಪಿಸೋಡ್ ನೋಡಿ ಅವರಿಬ್ಬರಿಗೂ ಏನನ್ನುತ್ತಾರೆ ಅಂತ ಕೇಳಿಬಿಟ್ಟ. ನಾನು ಬೌಂಡ್ಲೆಸ್ ಚೈಲ್ಡ್ ಲೈಕ್ ಮತ್ತು ನೆಕ್ಟರ್ ಐಡಲ್ ಅಂತ ಹೇಳಿದ್ದೇನೆ.

ಅವನಿನ್ನೂ ಶಾರುಖ್ ಖಾನ್, ಸಲ್ಮಾನ್ ಖಾನ್ ಇವರನ್ನೆಲ್ಲಾ ನೋಡಿಲ್ಲ. ನನಗೆ ತೋರಿಸುವ ಮುಂಚೆ ಅದಕ್ಕೆಲ್ಲಾ ಏನಂತಾರೆ ಇಂಗ್ಲೀಷಲ್ಲಿ ಅಂತ ತಿಳಿಯಬೇಕಿದೆ. ನೀವು ಯೋಚಿಸಿ ತಿಳಿಸಿ ಪ್ಲೀಸ್.

ಮುಗಿಸುವ ಮುನ್ನ: ಮೊನ್ನೆ ಮಗಳು ಜಾನಕಿ ನೋಡಿ ಇಂಗ್ಲೀಷಲ್ಲೆನಾಂತರೇ...?? ಅಂತ ಕೇಳಿದ. ನಾನು ಡಾಟರ್ ಡಾಟರ್ ಫಾದರ್ (ಜನಕನ ಮಗಳು ಜಾನಕೀ) ಅಂತ ಹೇಳಿದ್ದೇನೆ. ಸರಿಯಾಗಿದೆ ಅಲ್ವೇ?

■

# ಭಿಷ್ಕಿ ಜ್ಯೂಸ್

● ಆರತಿ ಘಟಿಕಾರ್

ಪುಟ್ಟ ಮಕ್ಕಳ ತೊದಲು ನುಡಿಗಳು ಪೋಷಕರಿಗೆ ಸದಾ ಅಪಾರ ಖುಷಿ ಕೊಡುವಂತಾದ್ದು. ಅವರ ಮುದ್ದಾದ ಆಟ ಪಾಠ ಎಲ್ಲವೂ ಕಣ್ಣಿಗೆ ಹಬ್ಬ, ಬೆಲೆ ಕಟ್ಟಲಾಗದಂತ ಆನಂದವನ್ನು ಉಂಟು ಮಾಡುತ್ತದೆ. ಆದರೆ ಒಮ್ಮೊಮ್ಮೆ ಈ ಪುಟಾಣಿಗಳು ಅತಿ ಉತ್ಸಾಹದ ಬುಗ್ಗೆಗಳಾಗಿ ಚಟಪಟ ಮಾತಾಡುತ್ತಾ ಬಂದವರ ಮುಂದೆ ನಮ್ಮ ಗುಟ್ಟುಗಳ ಸೈರನ್ ಊದಿ ನಮಗೆ ಫಜೀತಿ ತಂದೊಡ್ಡಿ ಬಿಡುತ್ತವೆ.

ಈಗ ಕಾಲೇಜು ಮೆಟ್ಟಿಲೇರಿರುವ ನನ್ನ ಮಗ ಆಗ ನಾಲ್ಕು ವರ್ಷದ ತುಂಟ ಪೋರ. ಅವನಿಗೆ ತೊದಲು ಮಾತು ಬಂದಿದ್ದೆ ತಡ ಆಗಾಗ ಮನೆಯಲ್ಲಿ ನಾವು ಮಾತಾಡಿಕೊಂಡ ವಿಷಯಗಳನ್ನು ಡಿಶ್ ಆಂಟೆನಾದಂತ ತೆರೆದ ಕಿವಿಯಲ್ಲಿ ಕೇಳಿಸಿಕೊಂಡು ಕಂಪ್ಯೂಟರ್ ಚಿಪ್ಪಿನಂತ ತನ್ನ ಪುಟ್ಟ ತಲೆಯಲ್ಲಿ ಕಾಪಿಟ್ಟುಕೊಂಡು ಬಿಡುತಿದ್ದ. ಸಾಮಾನ್ಯವಾಗಿ ಪ್ರಶ್ನೆ ಪತ್ರಿಕೆಯಲ್ಲಿ ಬರುವ ಯಾರು ಯಾರಿಗೆ ಯಾವ ಸಂದರ್ಭದಲ್ಲಿ ಹೇಳಿದ್ದು ಎಂಬ ಪ್ರಶ್ನೆಯಂತೆ ಈ ತುಂಟ ಸಹ ನಾವು ಬಾಯಿತಪ್ಪಿ ಮಾತಾಡಿಕೊಂಡ ವಿಷಯಗಳನ್ನು ಆ ಸಂಬಂಧಪಟ್ಟವರು ಎದಿರು ಸಿಕ್ಕಲ್ಲಿ ಅವನ ಮೆಮೊರಿ ಚಿಪ್ಪಿನಿಂದ ಸಕಾಲಕ್ಕೆ ತೆರೆದಿಟ್ಟು ನಮ್ಮನ್ನು ಮುಜುಗರಕ್ಕೀಡು ಮಾಡಿ ಬಿಡುತ್ತಿದ್ದ.

ಒಮ್ಮೆ ಪಕ್ಕದ ಮನೆಯ ಪುಟ್ಟ ಸೂರಜನ ಹುಟ್ಟು ಹಬ್ಬದ ಪಾರ್ಟಿಯಲ್ಲಿ ಅವನಿಗೆ ಉಡುಗೊರೆ ನೀಡುತ್ತಿದ್ದಾಗ ಅವನ ಅಮ್ಮನ ಕೈ ಜಗ್ಗಿ ಇದು ಸೋನಿ ಆಂಟಿ ಕೊಟ್ಟ ಗಿಫ್ಟು ಎಂದು ತನ್ನ ಬಾಲ ಭಾಷೆಯಲ್ಲಿ ಗುಟ್ಟು ರಟ್ಟು ಮಾಡಿದ್ದ. ತಿಂಗಳ ಹಿಂದಷ್ಟೇ ಆಚರಿಸಿದ ನನ್ನ ಮಗನ ಹುಟ್ಟು ಹಬ್ಬಕ್ಕೆ ಬಂದ ಉಡುಗೊರೆಯಲ್ಲಿ ಕೆಲವನ್ನು ಮುಂದೆ ಉಪಯೋಗಕ್ಕೆ ಬರಬಹುದು ಎಂಬ ದೂ(ದು)ರಾಲೋಚನೆಯಿಂದ ಎತ್ತಿಟ್ಟಿದ್ದು ಅವನ ಸೀಸೀ ಟೀವೀಯಂತ ಕ್ಯಾಮೆರ ಕಣ್ಣುಗಳು ಸೆರೆ ಹಿಡಿದ ಸುಳಿವೂ ಸಹ ನಮಗಿರಲಿಲ್ಲ. ಅಂತೂ ಸೂರಜನ ಅಮ್ಮನಿಗೆ ಮಕ್ಕಳ ಗಲಾಟೆಯಲ್ಲಿ ಇವನ ಬಾಲ ಭಾಷೆ ಅರ್ಥವಾಗದೆ ನಾವು ಬಚಾವಾಗಿ ಪಾರ್ಟಿ ಸಂಪನ್ನವಾಗುವ ತನಕ ಆಕೆಯ ಮುಂದೆ ಇವನು ಸುಳಿದಾಡದಂತೆ ಎಚ್ಚರವಹಿಸಿ ಉಸ್ಸಪ್ಪ ಎಂದು ನಿಟ್ಟಿಸಿರು ಬಿಟ್ಟೆವು.

ಇವನ ಅಗಾಧ ಬುದ್ಧಿಮತ್ತೆ, ನೆನಪಿನ ಶಕ್ತಿ, ವಿಷಯ ಸಂಗ್ರಹಣೆಯ ಪ್ರದರ್ಶನಗಳು ನಮ್ಮ ಊಹೆಗೂ ಮೀರಿ ಆಗಾಗ ನಡೆದಾಗ ನಮಗೂ ಸಹ ಬಿಟ್ಟಿ ಮನರಂಜನೆ ಈ ತರಲೆ ಪುಟ್ಟನಿಂದ ಗಿಟ್ಟುತ್ತಿತ್ತು.

ಮತ್ತೊಂದು ಸಂದರ್ಭದಲ್ಲಿ ನಮ್ಮದೇ ಫ್ಲೋರಿಗೆ ಹೊಸದಾಗಿ ವಾಸಕ್ಕೆ ಬಂದ ಮೇಘಾ ದಂಪತಿಗೆ ನಾ ಮಾಡಿದ ಕೋಡುಬಳೆ ಬಹಳ ಇಷ್ಟವಾಗಿ ಮಾಡುವ ವಿಧಾನ ಹೇಳಿಕೊಡಿ ಎಂದು ದುಂಬಾಲು ಬಿದ್ದಳು. ಒಮ್ಮೆ ಬಿಡುವು ಮಾಡಿಕೊಂಡು ಅವಳ ಮನೆಗೆ ತೆರಳಿ ಕೋಡುಬಳೆ ಹಿಟ್ಟನ್ನು ಮಾಡಿ ಕರಿಯುವ ವಿಧಾನವನ್ನು ತೋರಿಸಿ ಬಂದಾಗ, ಒಂದು ಡಬ್ಬಿ ಬಿಸಿ

ಬಿಸಿ ಕೋಡುಬಳೆಗಳನ್ನು ಪಾಪ ಗುರು ದಕ್ಷಿಣೆಯಾಗಿ ತಂದಿಟ್ಟಳು .

ಆದರೆ ಅದೇ ಸಂಜೆ ಅಚಾನಕ್ಕಾಗಿ ಆಗಮಿಸಿದ ನಮ್ಮ ನಾದಿನಿ ಕುಟುಂಬಕ್ಕೆ ಕಾಫಿಯ ಜೊತೆ ಗರಿ ಗರಿ ಕೋಡುಬಳೆ ನೀಡಿದಾಗ ಬಹಳ ರುಚಿಯಾಗಿದೆ ಹೇಗೆ ಮಾಡಿದ್ರಿ ಎಂದವರ ಹೊಗಳಿಕೆಗೆ ನಾನು ಉಬ್ಬಿ ಇನ್ನೇನು ವಿಧಾನವನ್ನು ಬಾಯಿ ಬಿಡುವಷ್ಟರಲ್ಲಿ ನಮ್ಮ ಪುಟಾಣಿ ಸತ್ಯ ಹರಿಶ್ಚಂದ್ರ ಅತ್ತೆ ಅದು ಅಮ್ಮ ಮಾಡಿಲ್ಲಾ! ಮೇಘಾ ಆಂಟಿ ಕೊಟ್ಟಿದ್ದು ಎಂದು ಸತ್ಯ ವಚನದ ಪಾಲನೆ ಮಾಡಿಯಾಗಿತ್ತು. ನಂತರ ಅದು ನನ್ನದೆ ರೆಸಿಪಿ ಎಂದು ಅವರನ್ನು ತಕ್ಕ ವಿವರಗಳೊಂದಿಗೆ ನಂಬಿಸಿದ ಪರಿಣಾಮ ಒಂದು ಡಬ್ಬಿ ಕೋಡುಬಳೆ ಅವರಿಗೂ ಮಾಡಿಕೊಡುವ ಹೊರೆ ನನ್ನ ತಲೆಯ ಮೇಲೆ ಬಿದ್ದಿತ್ತು!

ಏನೇ ಅನ್ನಿ ಈ ಪ್ರಚಂಡ ಪುಟಾಣಿಯು ದೆಸೆಯಿಂದ ನಾವು ಮುಜುಗರಕ್ಕೀಡಾಗುವ ಇಂತ ಅನೇಕ ಪೇಚಿನ ಪ್ರಸಂಗಗಳು ಆಗಾಗ ನಡೆದು ಒಮ್ಮೊಮ್ಮೆ ಕಾಮಿಡಿ ಶೋಗಳ ರೂಪದಲ್ಲಿ ಮರು ನೆನಪಾಗಿ ನಗೆ ಉಕ್ಕಿಸುತ್ತಿದ್ದವು .

ಅಂದು ಡಿಸೆಂಬರ್ ಮೂವತ್ತೊಂದರ ವರ್ಷದ ಕೊನೆಯ ದಿನ. ಎಲ್ಲೆಲ್ಲೂ ಹೊಸ ವರ್ಷದ ಆಗಮನವನ್ನು ಎದಿರು ನೋಡುವ ಸಂಭ್ರಮ ಮನೆ ಮಾಡಿತ್ತು. ಅಂದು ನಮ್ಮ ಮನೆಯಲ್ಲಿ ಹೊಸ ವರ್ಷದ ಪಾರ್ಟಿಯೊಂದನ್ನು ಹಮ್ಮಿಕೊಂಡು ಅಕ್ಕ ಭಾವ, ಒಂದಿಷ್ಟು ಆಪ್ತ ಗೆಳೆಯರ ಬಳಗವನ್ನು ಊಟಕ್ಕೆ ಆಹ್ವಾನಿಸಿದ್ದೆವು. ಮುಂಜಾನೆಯಿಂದಲೇ ಔತಣಕೂಟದ ಏರ್ಪಾಡು ಭರದಿಂದ ಸಾಗಿತ್ತು .

ಇಳಿ ಸಂಜೆಯ ಹೊತ್ತಿಗೆ ಮೊದಲು ಗಂಡಸರ ಗುಂಡು ಪಾರ್ಟಿ ನಂತರ ವಿಶೇಷ ಅಡುಗೆ ಕಾರ್ಯಕ್ರಮ ಎಂಬ ಯೋಜನೆ ಹಾಕಿಕೊಂಡು ಮಾರ್ಕೆಟ್ಟಿಗೆ ಹೋಗಿ ಬೇಕಾಗುವ ಸಾಮಾನು ದಿನಸಿಗಳನ್ನು ತರಲು ಹೊರಟೆವು. ನಮ್ಮ ಮುದ್ದು ಪುಟಾಣಿ ಕೂಡ ನಮ್ಮ ಜೊತೆಯಲ್ಲಿ ಇದ್ದ.

ಪಾರ್ಟಿಯ ಸಲುವಾಗಿ ಒಂದಿಷ್ಟು ಬೀರ್ ಕ್ಯಾನುಗಳು, ಜೊತೆಗೆ ತಿನ್ನಲು ಚಿಪ್ಸ್, ಕುರುಕಲು ತಿಂಡಿ ತಿನಸುಗಳು ಹಾಗೂ ಇತರ ಅವಶ್ಯಕ ಸಾಮಾನುಗಳನ್ನೆಲ್ಲ ಖರೀದಿಸಿದೆವು. ತುಂಟ ಮಗ ಕೂತೂಹಲದಿಂದ ಎಲ್ಲವನ್ನೂ ಗಮನಿಸುತ್ತಾ ನಮ್ಮ ಹಿಂದೆಯೆ ಸುತ್ತುತ್ತಿದ್ದ. ಹಿಂದೊಮ್ಮೆ ಸ್ನೇಹಿತರ ಮನೆಗೆ ಪಾರ್ಟಿಗೆಂದು ಹೋದಾಗ ಯಜಮಾನರು ಹಾಗೂ ಅವರ ಇತರ ಗೆಳೆಯರ ಮುಂದಿದ್ದ ಬೀರ್ ಕ್ಯಾನು ವಿಸ್ಕಿ ಬಾಟಲ್ಲು ಕಂಡು ಮಗ ಕೂತೂಹಲದಿಂದ "ಅಪ್ಪ ಅದೇನು ಕುಡೀತಾ ಇದ್ದೀಯಾ, ನಂಗೂ ಕೊಡು" ಎಂದು ದುಂಬಾಲು ಬಿದ್ದಾಗ ಇವರು ಅದು ವಿಸ್ಕಿ ಅಲ್ಲಲ್ಲ ಜೂಸು ಪುಟ್ಟಾ! ತುಂಬಾ ತಣ್ಣಗಿದೆ, ಕುಡಿದರೆ ನಿನಗೆ ಕೆಮ್ಮು ಬರುತ್ತೆ, ಹೊರಗೆ ಆಟ ಆಡ್ಕೊ ಹೋಗು ಮರಿ ಎಂದು ಅವನ ಮುಗ್ಧ ಪ್ರಶ್ನೆಗೆ ಹಾರಿಕೆಯ ಉತ್ತರ ನೀಡಿ ತಪ್ಪಿಸಿಕೊಂಡಿದ್ದರು. ದೊಡ್ಡವರು ನೀಡುವ ಈ ಉತ್ತರಗಳೆ ಮುಂದೆ ಯಾವುದೋ ಸಂದರ್ಭದಲ್ಲಿ ಎಳ್ಳಷ್ಟೂ ಸೂಚನೆಯಿಲ್ಲದೆ ಮೋಜಿನ (ತಿರುಗು) ಬಾಣಗಳಂತೆ ನಮಗೇ ಚುಚ್ಚುಬಹುದು.

ಇನ್ನು ಪೆಪ್ಸಿ ಕೋಲಾಗಳ ರುಚಿ ನೋಡಿದ್ದ ನಮ್ಮ ತುಂಟ ಪುಟಾಣಿಗೆ ಅಂದು ಈ ಕ್ಯಾನುಗಳಲ್ಲಿರುವ ಭಿಸ್ಕಿ ಜೂಸು ತಲೆಯಲ್ಲಿ ಕೂತೂಹಲದ

ತರಂಗಗಳನ್ನೆ ಹುಟ್ಟು ಹಾಕಿರಬಹುದು. ಅಂತೂ ನಮ್ಮ ಖರೀದಿಯೆಲ್ಲಾ ಮುಗಿದು ಇವರು ಹೊಸ ವರ್ಷದ ಪಾರ್ಟಿಗೆ ಜೋರಾದ ತಯಾರಿ ನಡೆಸಿ ಒಂದೆರಡು ಕ್ರೇಟು ಬೀರ್ ಕ್ಯಾನುಗಳನ್ನು ಹಿಡಿದು ಹೊರ ಬಂದರು.

ಸಂಜೆಗೆ ನಾನು ರಾತ್ರಿಯ ವಿಶೇಷ ಭೋಜನದ ತಯಾರಿಯಲ್ಲಿದ್ದಾಗ ನಮ್ಮ ಮನೆಗೆ ಪೂಜೆ ಪುನಸ್ಕಾರಗಳನ್ನು ಮಾಡಿಸುವ ಕೃಷ್ಣ ಶಾಸ್ತ್ರಿಗಳು ಅಕಸ್ಮಾತಾಗಿ ಬಂದರು. ಸರಿ ಉಭಯ ಕುಶಲೋಪರಿಗಳೆಲ್ಲ ಮುಗಿದ ನಂತರ, ಶಾಸ್ತ್ರಿಗಳೇ ಅಪರೂಪಕ್ಕೆ ಬಂದಿದ್ದೀರಿ ಒಂಚೂರು ಹಾಲು ಕುಡೀರಿ ಇಲ್ಲಾ ಹಣ್ಣಾದರೂ ತಿನ್ನಿ, ಎಂದವರ ಉಪಚಾರದಲ್ಲಿ ತೊಡಗಿದ್ದಾಗ "ಅಯ್ಯೊ! ಮಠದಲ್ಲಿ ಮಧ್ಯಾಹ್ನ ಊಟ ತುಂಬಾ ತಡ ಆಯಿತು, ಅದೇ ಕರಗಿಲ್ಲ ಏನೂ ಬೇಡ ಬಿಡಮ್ಮ ಎಂದು ಹೊರಗೆ ಯಾರ ಮನೆಯಲ್ಲೂ ಏನನ್ನೂ ತಿನ್ನದ ಶಾಸ್ತ್ರಿಗಳು ಸಂಕೋಚದಿಂದ ನುಡಿದರು.

ಅಲ್ಲೇ ಕಿವಿ ನಿಮಿರಿಸಿಕೊಂಡು ಶಾಸ್ತ್ರಿಗಳಿಗೆ ನಾನು ಮಾಡುವ ಆದರಾತಿಥ್ಯವನ್ನೆಲ್ಲ ಗಮನಿಸುತ್ತಿದ್ದ ನನ್ನ ತುಂಟ ಮಗ ತಕ್ಷಣ ಅಮ್ಮ ಭಿಷ್ಕಿ ಕೊಡಮ್ಮ, ಭಿಷ್ಕಿ ಎನ್ನುವ ವರಾತ ಶುರು ಮಾಡಿದ. ಶಾಸ್ತ್ರಿಗಳು ನನ್ನ ಮಗನ ತೊದಲು ಭಾಷೆಯನ್ನು ತಮಗೆ ತೋಚಿದಂತೆ ಅರ್ಥೈಸಿಕೊಂಡು ಅಯ್ಯೋ! ಪಾಪ ಮಗು ಬಿಶ್ಕೀಟ್ (ಬಿಸ್ಕೆಟ್) ಕೇಳ್ತಾ ಇದೆ ನೋಡಿ, ನಾನು ಕೂಡ ನಿನಗೆ ಏನೂ ತರಲಿಲ್ಲವಲ್ಲೋ ಮರಿ ಎಂದು ಮುದ್ದು ಮಾಡಿದಾಗ ಮಗ ಅವರ ಕೈ ಕೊಸರಿಕೊಂಡು ಇಲ್ಲಾ ಭಿಷ್ಕಿ ಜೂಸ್ ತೊಗೋ ಬತ್ತೀನಿ ನಿಮಗೆ, ಒಲಗದೆ ತುಂಬಾ ಇದೆ ಎಂದು ಒಳಗೋಡಿಯೇ ಬಿಟ್ಟ ! ನಾನಾಗ ಗಾಬರಿಯಿಂದ ಪೀಟಿ ಉಷಾಳಂತೆ ಅವನ ಹಿಂದೆ ಸ್ಪೀಡಿನಲ್ಲಿ ಓಡಿ ಅವನನ್ನು ಹಿಡಿದು (ತಡೆದು) ಪುಟ್ಟಾ ! ನಿನಗೆ ಬಿಷ್ಕೆಟ್ ಬೇಕಾ ಇರು ಕೊಡ್ತೀನಿ ಎಂದು ಅಡುಗೆ ಕೋಣೆಗೆ ಧಾವಿಸಿ ಬಂದೆ. ಅವನು ಅಮ್ಮ ಇದಲ್ಲ ಅದು ಎಂದು ಒಳಗಡೆ ಕೈ ತೋರಿಸಿ ಅಲ್ಲಗೆಳೆಯುತ್ತಿರುವಾಗಲೇ ಅವನ ಬಾಯಿಗೆ ಬಲವಂತವಾಗಿ ಒಂದು ಬಿಸ್ಕೆಟ್ ತುರುಕಿ ಪಕ್ಕದ ಮನೆ ಪುಟ್ಟಿ ಬಂದಿದ್ದಾಳೆ ನೋಡು ಆಡ್ಕೊ ಹೋಗು ಮರಿ ಎಂದು ಅವನನ್ನು ಹೊರಗೆ ಸಾಗು ಹಾಕಿ ಅಬ್ಬಾ ಸಧ್ಯ, ಈ ತುಂಟ ಮಗನಿಂದ ಈ ಶಾಸ್ತ್ರಿಗಳ ಮುಂದಾಗುವ ಫಜೀತಿ ಹೇಗೂ ತಪ್ಪಿತಲ್ಲ ಎಂದು ಸಮಾಧಾನದ ನಿಟ್ಟುಸಿರು ಬಿಟ್ಟಿದ್ದಾಯಿತು. ಏನೇ ಅನ್ನಿ ಈ ಮೋಜಿನ ಪ್ರಸಂಗ ನೆನಪಾದಾಗಲ್ಲೆಲ್ಲ ನಗು ಉಕ್ಕಿ ಬರುತ್ತದೆ



TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## Beechi Prakashana

**Get your Book Published !**

We provide Publishing, Marketing & Distribution support to Authors

- Sell your books both online & Retail( Book Shops)
- Get 100/ Royalty
- Retain Full copy Rights
- Publish your book faster
- Get paid for every book sold

## ಬೀಚಿ ಪ್ರಕಾಶನ



**ಲೇಖಕರೇ, ತಮ್ಮ ಪುಸ್ತಕಗಳು ಪ್ರಕಟವಾಗಬೇಕೆ?**

ನಾವು ಲೇಖಕರಿಗೆ ಪುಸ್ತಕಗಳನ್ನು ಮುದ್ರಿಸಲು, ಮಾರಾಟ ಮಾಡಲು ಹಾಗೂ ವಿತರಿಸಲು ಸಹಕರಿಸುತ್ತೇವೆ.

- ನಿಮ್ಮ ಪುಸ್ತಕಗಳನ್ನು ಆನ್‌ಲೈನ್ ಮತ್ತು ಸಗಟು ವ್ಯಾಪಾರ ಮಳಿಗೆಗಳಿಂದ ಮಾರಾಟ ಮಾರಬಹುದು.(ಪುಸ್ತಕ ಅಂಗಡಿ).
- ರಾಯಧನ ೧೦೦% ಪಡೆಯುತ್ತೀರಿ.
- ನಕಲು ಹಕ್ಕುಗಳನ್ನು ಉಳಿಸಿಕೊಳ್ಳಿ.
- ನಿಮ್ಮ ಪುಸ್ತಕಗಳನ್ನು ತ್ವರಿತವಾಗಿ ಮುದ್ರಿಸಬಹುದು.
- ಪ್ರತಿ ಪುಸ್ಕಕ ಮಾರಾಟದ ಬಳಿಕ ಹಣ ಪಡೆಯುತ್ತೀರಿ.

**CONTACT: 9845264304**

# ವೊ ಕಾಗಜ್ ಕೀ ಕಶ್ತೀ ವೋ ಬಾರಿಶ್ ಕಾ ಪಾನೀ!

● ಜಯಶ್ರೀ ದೇಶಪಾಂಡೆ

ಮನಸ್ಸು /ವಯಸ್ಸು ಜೀವನದ ಒಂದು ಹಂತಕ್ಕೆ ಮುಟ್ಟಿದಾಗ ಅಗತ್ಯಗಳು ಮತ್ತು ಪ್ರಾಶಸ್ತ್ಯ ಎರಡಕ್ಕೂ ಸ್ವರೂಪ ಬದಲಾವಣೆ ಅಥವಾ– ಕಾಯಾಪಾಲಟ್– ಅನ್ನಬಹುದು, ಬಂದಿಳಿದುಬಿಡುತ್ತೆ. 'ಅರವತ್ತಕ್ಕೆ ಅರಳು ಮರಳು' ಎಂದು ಯಾರೋ ತಮಾಷೆ ಮಾಡಿದ್ದೂ ಇದೇನಾ? ಬೇಕಲ್ಲ  ಹಿಂದು ಮುಂದನ್ನು ಇಂದಿಗೆ ಬ್ಯಾಲೆನ್ಸ್ ಮಾಡುವ ಚೈತನ್ಯ... ಕಷ್ಟ, ನೋವು ಇದ್ದರೆ– ಇರುವಾಗ – ಇವೆರಡನ್ನೂ ಸಹಿಸುವ, ಸ್ವೀಕರಿಸುವ, ಎದುರಿಸುವ ಹೊಸ ಹೊಸ ನಮೂನೆಗಳನ್ನು ಹುಡುಕುವ ಹಂತವಂತೆ. ಇಂಥ  ಹುಡುಕಾಟದ ಸಮಯಗಳಲ್ಲಿ ಮತ್ತೆ ಕಿಶೋರಿಯಾಗುವ, ಹುಡುಗಿಯಾಗುವ ಅಪರೂಪದ ಅವಕಾಶ, ಗಂಭೀರವಲ್ಲದ, ಪರೀಕ್ಷೆ ಬರೆಯಬೇಕಿಲ್ಲದ ಓದಿನ ಸುಖ ಅಕಸ್ಮಾತ್ ಇಳಿದು ಬಂದು, ಭೂಮಿಯ ಯಾವ್ಯಾವುದೋ ತುಣುಕಿನಿಂದ ಎದ್ದು ಬಂದಿರಬಹುದಾದ,  ಹಿಂದೆ ಕಂಡಿಲ್ಲದ, ಮುಂದೆಂದೂ ಬಹುಶಃ ಕಾಣಲಾರದ ಜನರ ಜೊತೆ ಕೈಗೆ ದಕ್ಕಿದ ಚೆಂದದ ಗಳಿಗೆಗಳ ಸುದ್ದಿಯಿದು. ಅರಿವಿನೆಡೆಗೆ ಹರಿವ ನೀರಿಗೆ ಸಿಗುವ ದಡಗಳ ಲೆಕ್ಕವೇಕೆ?

ಮತ್ತೊಮ್ಮೆ ನೆಲದಂಚಿಗೆ ಬಿದ್ದುರುಳಿ ಹರಿವ ಮಳೆ ನೀರಿನಲ್ಲಿ ಆ  'ಕಾಗಜ್ ಕೀ ಕಶ್ತೀ' ತೇಲಿ ಬಿಡಲು ಸಿಕ್ಕರೆ ಕೈ ತಡೆದೇನೇ...?

ಪೆನ್ನು ಎಕ್ಸರ್‌ಸೈಜ್ ಮುಂದಿಟ್ಟುಕೊಂಡು ಕ್ಲಾಸಿನಲ್ಲಿ ಸೆಕೆಂಡ್ ಬೆಂಚರ್ ಆಗಿ ಕೂತುಕೊಳ್ಳೋದು ಹೇಗಿರುತ್ತೆ ಅನ್ನುವ ಸುಖ...ಸುಖವೇ ತಾನೆ ಅದು? ಅಷ್ಟೇ ಹುಡುಕ್ಕೊಂಡು ಕಳೆದ ಹನ್ನೆರಡ್ಡದಿಮೂರು ವರ್ಷದಿಂದ "ಶಾಲೆಗೆ" ಹೋಗ್ತಿದ್ದೀನಿ ನಾನು!

ಫಸ್ಟ್ ಬೆಂಚಿನ ಪ್ರೈಮ್ ಸುಖ ಹೈಸ್ಕೂಲಿಗೆ ಮುಗಿಸಿ, ಅಂದಹಾಗೆ ಮನೆಯೆ ಮೊದಲ ಪಾಠಶಾಲೆ ಅಮ್ಮನ ಮಡಿಲು ತಾನೆ? ಅದಾಯ್ತು, ಮುಂದೆ ಓದು.. ಓದು.. ಓದು!

ತಮಾಷೆಯೆಂದರೆ ಹೈಸ್ಕೂಲು, ಕಾಲೇಜಿನಿಂದ ಹೊರಬರುವಾಗ ಆಗದೇ ಇದ್ದ ಬೇಜಾರು ಮುಂದೆಂದೋ ಆಗಿದ್ದು!

ಉತ್ತರ ಧ್ರುವಕ್ಕೆ ಹತ್ತಿರ.. ಬಲು ಹತ್ತಿರ ಇರುವ ಫಿನ್ಲೆಂಡ್ ದೇಶಕ್ಕೆ ಹಾಗೆ ಪದೇ ಪದೇ  ಭೇಟಿಕೊಡುವ ನಾನು ಇಲ್ಲಿಗೆ ಬಂದು– ಬಂದಾಗಲೆಲ್ಲ ಬೆಳಗಾಗೆದ್ದು ನೋಡ್ತಾ ಇದ್ದೆ.. ಸೈಕಲ್ ಮೇಲೋ, ನಡ್ಕೊಂಡೋ ಬೆನ್ನಿಗೊಂದು ಬ್ಯಾಕ್ ಪ್ಯಾಕ್ ಏರಿಸಿ ಜುರು ಜುರು ಅಂತ ದಾಟಿ ದಾಟಿ ಹೋಗುವ ಪೋರ ಪೋರಿಯರು ನನಗೆ  ಒಂದ್ ಬಗೆ ಕಾಂಪ್ಲೆಕ್ಸ್ ಕೊಟ್ಟ ಹಾಗೆ ಹೊಟ್ಟೆ ಚುರ್‌ರೆಂದು ಅಲ್ಲಿ, ಇಲ್ಲಿ ಎಲ್ಲಿಯಾದರೂ ಒಟ್ಟು  ನಾನು ಇನ್ನೊಂದು ಬಾರಿ ವಿದ್ಯಾರ್ಥಿನಿ ಆಗಿ ಪೆನ್ನು ಎಕ್ಸರ್ಸೈಜಿನ ಬೆನ್ನು ಹತ್ತಬೇಕನಿಸಿಬಿಟ್ಟಿತ್ತು! ಅದರಲ್ಲೂ ಏನಾದರೂ ವಿಶೇಷ, ಈ ಮೊದಲು ಮಾಡದೆ ಇದ್ದುದನ್ನು ಮಾಡಬೇಕೆನ್ನುವ ತುಡಿತ..

ಹದಿನೈದು ವರ್ಷಗಳಿಂದ ಒಂದೂವರೆ, ಎರಡು ವರ್ಷಕ್ಕೊಮ್ಮೆ ಫಿನ್ಲೆಂಡ್‌ನ ಅತಿಥಿಯಾಗಿ ಇಲ್ಲಿಗೆ ಬರ್ತಾ ಬರ್ತಾ...ಫಿನ್ನಿಶ್ ಭಾಷೆ ಕಲಿಸುವ ಕ್ಲಾಸಿಗೆ

ಹೋಗಿ ಕೂತುಕೊಳ್ಳಲಿಕ್ಕೆ ಅಭ್ಯಾಸ ಮಾಡ್ಕೊಂಬಿಟ್ಟಿದ್ದೆ. ಉಳಿದದ್ದು ಅತ್ಲಾಗಿಟ್ಟರೆ ಭಾಷೆ ಎಂಬ ಸಾಂಸ್ಕೃತಿಕ ಸೇತುವೆ ಏರುವುದೂ ದಾಟುವುದೂ, ಅದರ ಒಳಗಣ ಸೊಬಗನ್ನು ಸವಿಯುವ ಭಾಗ್ಯ ಪಡೆಯುವುದೂ ನನ್ನ ಒಂದು ಕನಸು. ಅದು ಸಾಕಾರ ಆಗುವ ಗಳಿಗೆಗಳಿಗೆ ತೆರೆದುಕೊಳ್ಳುವವಳು ನಾನು.

ನಾ ಈ ದೇಶಕ್ಕೆ ಬರ್ತಾ ಇರ್ತೀನಿ. ಆಗೀಗ ಟೀಚರುಗಳು ಬದಲಾಗ್ತಾ ಇದ್ದಾರೆ.. ನಾನು ಮಾತ್ರ ಇವರ ಪೊಟೆನ್ಶಿಯಲ್ ಸ್ಟೂಡೆಂಟ್ ಆಗಿಬಿಟ್ಟಿದ್ದೀನಿ. ಮುಕ್ತ ತರಗತಿಗಳಲ್ವೇ.. ಮೊನ್ನೆಯ ಸಲವೂ ಇಲ್ಲಿ ಬಂದಿಳಿದು ಕೆಲವು ದಿನ ಬಿಟ್ಟು ಕ್ಲಾಸಿಗೆ ಹೋದೆ.

ಅಲ್ಲಿ ಕೂತ ಇಪ್ಪತ್ತರಿಂದ ಎಪ್ಪತ್ತರ ವಯಸ್ಸಿನ ನಡುವೆಲ್ಲೋ ಇರೋ 'ವಿದ್ಯಾರ್ಥಿಗಳು' ಸಡನ್ನಾಗಿ ಅಲರ್ಟ್..

ನನ್ನ ಬಣ್ಣ, ನಾ ತೊಟ್ಟ ಟಾಪು, ಕಂಫರ್ಟ್ ಪೈಜಾಮ/ಪ್ಯಾಂಟು, ಹಣೆಯ ಕೆಂಪು ಟಿಕಲಿ, ಈ ಸ್ವರೂಪ ಅಷ್ಟು ಕಂಡಿಲ್ಲದ ಜನ ಅವರೆಲ್ಲ.... ಪ್ರತಿ ಬಾರಿಯೂ ನನಗೆ ಸಿಗುವವರು ಹೊಸ ಹೊಸ ಮುಖಗಳೇ.. ಹಾಗೂನೂ ಕೆಲವೊಮ್ಮೆ ಒಬ್ಬಿಬ್ಬರು 'ನೀವು ಹೊಸ ಸ್ಟೂಡೆಂಟಾ?' ಎಂದು ನನ್ನನ್ನೇ ಕೇಳ್ತಾರೆ ಅನ್ನಿ.. "ಇಲ್ಲ ಕಣೇ/ಣೋ ಹತ್ ವರ್ಷಗಳ ಎಕ್ಸ್‌ಪೀರಿಯನ್ಸು ನಂದು" ಎಂದು ಹೇಳಿ ಅವರಿಗೇ ತಾವೇ ಹೊಸಬರೆಂಬ ಜ್ಯೂನಿಯರ್ ಫೀಲಿಂಗು ಬರುವಂತೆ ಮಾಡಿಬಿಡ್ತೀನಿ.

ಕಳೆದ ಬಾರಿ ಇದ್ದ ಟೀಚರೇ ಆಗಿದ್ರೆ ನಕ್ಕು ನಂಗೊಂದು ಹಾಯ್ ಹಲೋ ಹೇಳಿ 'ಬಂದೆಯಾಮ್ಮಾ.. ಬಾ, ಒಳ್ಳೇದಾತ್' ಎಂದು ಅಪರೋಕ್ಷವಾಗಿ ಆಶೀರ್ವದಿಸಿ ಪಾಠ ಶುರು ಹಚ್ಚಿಕೊಳ್ತಾರೆ. ಹೊಸ ಟೀಚರಮ್ಮ ಯಾರಾದರೂ ಬಂದಿದ್ದರೆ ನಮ್ಮ ವರ್ಷಾ ಬಂದು ಇಬ್ಬರನ್ನೂ ಪರಿಚಯಿಸಿ 'ನನ್ನ ಅಮ್ಮ –ನಿಮ್ಮ ಸ್ಟೂಡೆಂಟು... ಒಪ್ಪಿಸಿಕೊಳ್ಳಿ' ಎಂದು ಹೇಳಿ ಹೋಗ್ತಾಳೆ. (ಅಂದ ಹಾಗೆ ಅವಳ ಆಫೀಸಾದ 'ಕಂಪಾಸ್ಸಿ'ಯ ಆವರಣದಲ್ಲೇ ಈ ಫಿನ್ನಿಶ್ ತರಗತಿಗಳು ನಡೆಯುತ್ತವೆ. 'ಕೊಂಪಾಸ್ಸಿ' ಎನ್ನೋದು ಫಿನ್ಲೆಂಡ್‌ಗೆ ಬಂದಿಳಿಯುವ ಕಾನೂನುಬದ್ಧ ವಲಸೆಗಾರರು ಅಥವಾ ಲೀಗಲ್ ಇಮಿಗ್ರಂಟ್ಸ್ ಜನರನ್ನು ಅಲ್ಲಿನ ಮುಖ್ಯ ಸಾಂಸ್ಕೃತಿಕ, ಸಾಮಾಜಿಕ ಜೀವನಕ್ಕೆ ಸೇರಿಸಿಕೊಳ್ಳಲು ಸಹಾಯ ಮಾಡುವ ಒಂದು ಸಂಸ್ಥೆ. ನನ್ನ ಮಗಳು ವರ್ಷಾ ಇಲ್ಲಿ ಕೌನ್ಸಿಲರ್ ಉದ್ಯೋಗಿಯಾಗಿದ್ದಾಳೆ)

ಫಿನ್ನಿಶ್ ಕಲಿವ ನನ್ನ ಉತ್ಸಾಹ ನೋಡ್ತಾ ನಿಮ್ಮಲ್ಲಿ 'ಇಷ್ಟೆಲ್ಲಾ ಆಗಿ, ನಿಂಗೆ ಫಿನ್ನಿಶ್ ಬಂತಾ? ಎನ್ನುವ ಒಂದು ಪ್ರಶ್ನೆ ಮೂಡಿಸಲಿಕ್ಕೂ ಸಾಕು....' ಕೇಳಬೇಡಿ.

ಕಲಿಕೆ ಮತ್ತು ಕುತೂಹಲ hand in hand ಅಷ್ಟೇ! ನಿಜ ಹೇಳಲೇ? ಭಾಷೆ ಕಲಿಯುವುದಕ್ಕಿಂತ ಇಲ್ಲಿನ ಹೊರ ವಾತಾವರಣ, ಅಲ್ಲಿಗೆ ಬರುವ ಹಲವಾರು ದೇಶಗಳ ಜನಗಳ ಥರಾವರಿ ಸುದ್ದಿ, ಎಲ್ಲಿ ಯಾವ ದೇಶಗಳಲ್ಲಿ ಏನೆಲ್ಲ ನಡೆದಿದೆ, ನಮ್ಮ ನಾಡಿನ ಬಗ್ಗೆ ಅವರೇನು ಹೇಳ್ತಾರೆ ಎಲ್ಲ ಅವರವರ ಮಾತಿನಲ್ಲೇ ತಿಳಿಯುವ, ಅರಿಯುವ ಕುತೂಹಲ ನನಗೆ. ಅವರೇ ಇಲ್ಲಿ ಭಾಷೆ ಕಲಿಯಲು ಬರುವುದು. ಮೈಬಣ್ಣವೋ ಬಿಳಿ, ತೆಳುಬಿಳಿ, ಗುಲಾಬಿ, ತೆಳುಗೆಂಪು, ಗೋಧಿ, ಕಪ್ಪು, ಕಡುಗಪ್ಪು,... ಆದರೆ 'ಮನುಜಕುಲಂ ಒಂದೇ ವಲಂ!'

ಕೊಂಪಾಸಿಯಲ್ಲಿ ಪ್ರಪಂಚದ ಯಾವುದೇ ದೇಶದಿಂದ ಬಂದವರಿಗೂ ಫಿನ್ನಿಶ್ ಕಲಿಸುತ್ತಾರೆ. ಅದೂ ಸಂಪೂರ್ಣ ಫ್ರೀ! ದುಡ್ಡಿಲ್ಲ, ಫೀಸಿಲ್ಲ ಜೊತೆಗೆ ಪ್ರತಿ ಕ್ಲಾಸು ಮುಗಿದ ಬ್ರೇಕ್ ನಲ್ಲಿ ಅವರೇ ಫ್ರೀಯಾಗಿ ಕುಡಿಯಲಿಟ್ಟಿರುವ ಟೀ ಕಾಫಿ... ಯಾಕೆಂದರೆ ಇಲ್ಲಿ ಬದುಕಬೇಕೆಂದರೆ ಅವರ ಭಾಷೆ ಕಲಿಯತಕ್ಕದ್ದು, ಅದರ ಕಾರಣವೇನೆಂದರೆ ಡಚ್, ಸ್ಪಾನಿಶ್ ಇಂಗ್ಲಿಷ್, ಸ್ವಿಡಿಷ್, ರಶಿಯನ್, ಇಂಥ ನೆರೆಹೊರೆಯ ದೇಶದ ಭಾಷೆಗಳನ್ನು ಈ ಜನ ದೈನಂದಿಗೆ ಅಷ್ಟಾಗಿ ಅಳವಡಿಸಿಕೊಂಡಿಲ್ಲ. ಇಲ್ಲಿ ಸಾಮಾನ್ಯವಾಗಿ ಬಳಕೆಯಾಗುವುದು ಫಿನ್ನಿಶ್. ಇಂಗ್ಲಿಷ್ ಅಗತ್ಯವಿದ್ದಲ್ಲಿ, ಇದ್ದರೆ ಮಾತ್ರ.

ಈಗ ನನ್ನ ಕ್ಲಾಸಿನ ಸುದ್ದಿ ಕೇಳಿ.

ಇಲ್ಲಿ ರಶ್ಯನ್ನರು, ಜರ್ಮನ್ನರು, ಸ್ಲೋವಾಕ್, ಹಂಗೆರಿ, ಅಫ್ಘಾನಿಸ್ತಾನ, ಫ್ರಾನ್ಸ್, ಡೆನ್ಮಾರ್ಕ್, ನೆದರ್ಲ್ಯಾಂಡ್ಸ್ ಮತ್ತು ಸ್ವೀಡನ್ನಿನವರು ಹೀಗೆ ಎಷ್ಟೆಷ್ಟೋ ದೇಶದ ಮುಖಗಳು ಕಂಡಾಗ ವಿಸ್ಮಿತಳಾಗಿದ್ದೆ ಆನಂತರ ನನ್ನ ಹಾಗೆ ಭಾರತೀಯರು ಸಹ... ಈ ವಿದ್ಯಾರ್ಥಿ ಗಣದಲ್ಲಿ ಎಲ್ಲ ಬಗೆಯ ಹುಡುಗ ಹುಡುಗಿಯರಿಂದ ಹಿಡಿದು ಆಂಟಿ, ಅಂಕಲ್‌ಗಳೂ ಅಜ್ಜನೂ ಇದ್ದರು! ಎಲ್ಲರೂ ತಮ್ಮದೇ ನಮೂನೆಯ ಇಂಗ್ಲೀಶ್ ಬಳಸಿ ಪರಸ್ಪರ ಮಾತಾಡಿ ನಿಸ್ಸಂಕೋಚವಾಗಿ ನಕ್ಕಿದ್ದು ಬಲು ಚಂದವೆನಿಸಿತು. ಮ್ಯಾಡಂ ಬಂದು ಬೋರ್ಡಿನೆದುರು ನಿಲ್ಲುವವರೆಗೂ ಬಗೆ ಬಗೆಯ ನಗೆಗಳು!

"ಸರಿ ಎಲ್ಲ ಇಲ್ಲಿ ನೋಡಿ. ಮತ್ತು ನಾನು ಹೇಳಿದಂತೆ ಹೇಳಿ, ಈಗ ನೀವೆಲ್ಲ ಆ–ಬೇ–ಸೇ ಅನ್ನಿ" ಅಂದರು ಮ್ಯಾಡಂ, ಬೆಚ್ಚಿ ನೋಡಿದರೆ ಅಲ್ಲಿ ಬೋರ್ಡಿನ ಮೇಲೆ ABC ಅಂತಲೇ ಬರೆದಿತ್ತು, ಇದೊಳ್ಳೆ ತಮಾಷೆ ABC..ಬರೆದರೆ ಎ ಬಿ ಸಿ ಅಂತ ತಾನೇ ಹೇಳಬೇಕು ?

"ಇಲ್ಲ ನಮ್ಮಲ್ಲಿ ಹಾಗಿಲ್ಲ, ಅಂದರು ಮೇಡಮ್ಮು. ನಾವು Aಗೆ ಆ, Bಗೆ ಬೇ, Cಗೆ ಸೇ ಅಂತೀವಿ ನೀವೂ ಹಾಗೇನೆ ಹೇಳಬೇಕು.."

ಅರ್ಥಾತ್ ಇಲ್ಲಿ ಇಂಗ್ಲೀಷ್ ಮೂಲಾಕ್ಷರಗಳೇ ಇದ್ದರೂ ಅವುಗಳಿಗೆ ಅವರದೇ ಆದ ವಿಭಿನ್ನ ಉಚ್ಚಾರಗಳನ್ನು ಬಳಸ್ತಾರೆ, ಎಲ್ಲೀದಪ್ಪ ಈ ವಿಚಿತ್ರ? ಅನಿಸಿದರೂ 'ಸರಿಯಪ್ಪ ನಿಮ್ಮ ಭಾಷೆ.. ನೀವು ಹೇಗೆ ಬೇಕಾದರೂ ಮಾತಾಡಿ' ಅಂತ ಮನಸ್ಸಿನಲ್ಲೇ ಹೇಳಿಕೊಂಡು ಬರೆಯಲು ಶುರು ಹಚ್ಚಿದೆ. ಒಂದು ಗಂಟೆ ಪಾಠ ಮಾಡಿ "ಸರಿ ನೀವೆಲ್ಲ ಹತ್ತು ನಿಮಿಷ ಹೊರಗೆ ಹೋಗಿ ಬನ್ನಿ ರಿಲ್ಯಾಕ್ಸ್ " ಅಂತ ಮುಗುಳ್ನಕ್ಕರು ಮ್ಯಾಡಂ, ಅವರ ನಗೆ ಎಷ್ಟು ಚಂದ ಅನಿಸಿತು.

ಎಲ್ಲರೊಂದಿಗೆ ಬುದುಬುದು ಹೊರಗೆ ಹಾಲಿಗೆ ಬಂದರೆ. ಅಲ್ಲಿ ಬಿಸಿಬಿಸಿ ಚಹಾ ಕಾಫಿ, ಕುಕ್ಕೀಗಳು ಸ್ವಾಗತಿಸಿದುವು. ತನ್ನ ಕ್ಯಾಬಿನ್ನಿನಿಂದ ಹೊರಬಂದ ಮಗಳು 'ಅಮ್ಮ ಕ್ಲಾಸ್ ಹೇಗಿತ್ತು ?' ಎಂದು ಕೇಳಿ ಬಾ ಚಹಾ ಕುಡಿ" ಎಂದವಳು ನಾನು ಉತ್ತರಿಸದೆ ಅನುಮಾನಿಸಿದ್ದಕ್ಕೆ 'ಓ ಅದಾ? ಇದೆಲ್ಲ ಇಲ್ಲಿ ಉಚಿತ ಡೋಂಟ್ ವರಿ.' ಎನ್ನುತ್ತಾ ದೊಡ್ಡ ಚಹದ ಮಗ್ ಒಂದನ್ನು ನನ್ನೆದುರು ಹಿಡಿದಳು. 'ಮೈ ಕೊರೆಯುವ ಚಳಿಯಲ್ಲಿ ಹೀಗೆ ಫ್ರೀಯಾಗಿ ಬಿಸಿ ಕಾಫಿ,ಟೀ ಕೊಟ್ಟು ಪಾಠ ಕಲಿಸುವ ಶಾಲೆಯ ಹೊಟ್ಟೆ ತಣ್ಣಗಿರಲಿ' ಎಂದು ಆಶೀರ್ವದಿಸಿದೆ. ಮತ್ತೆ ಕ್ಲಾಸುಗಳು ಶುರುವಾದುವು.

ಅದೇಕೋ ಮೂರ್ನಾಲ್ಕು ಕ್ಲಾಸುಗಳು ಮುಗಿಯುವ ಹೊತ್ತಿಗೆ ಆ ಅಪರಿಚಿತ ಭಾಷೆಯ ಮೇಲೆ ನನಗಂತೂ ಏನೋ ಅಕ್ಕರತೆ ಹುಟ್ಟಿಬಿಟ್ಟಿತು. ವಾರಕ್ಕೆ ಮೂರು ದಿನ ಮಾತ್ರ ಕ್ಲಾಸು ಎಂದು ಟೈಮ್ ಟೇಬಲ್ ಕೊಟ್ಟುಬಿಟ್ಟಿದ್ದರು. ಹಾಗಾಗಿ ಮಂಗಳವಾರ, ಗುರುವಾರ, ಶುಕ್ರವಾರಗಳಿಗಾಗಿ ಜಾತಕಪಕ್ಷಿಯಂತೆ ಕಾದು ಕೂತಿರುತ್ತಿದ್ದೆ.

ಮೊದಮೊದಲಿನ ದಿನಗಳಲ್ಲಿ ನಾವೆಲ್ಲಾ ಝೀರೋ ಲೆವೆಲ್ಲಿನವರಾದ್ದರಿಂದ ಅವರು ಮೂಲಾಕ್ಷರ ವ್ಯಂಜನಗಳಿಂದಲೇ ಆರಂಭಿಸುವುದು ಸಹಜ ಅಲ್ಲವೇ? ಆ –ಬೇ –ಸೇ ಇತ್ಯಾದಿ ಬರವಣಿಗೆ ಆದ ಮೇಲೆ ಇನ್ನೇನು ಕಾಗುಣಿತವನ್ನು ಹೇಳಿಕೊಡುತ್ತಾರೆ ಅಂತ ಬಾಯಿಪಾಠ ಮಾಡಲು ತಯಾರಾದೆ ಆದರೆ ಅವರ ಕಾಗುಣಿತವೇ ಬೇರೆ, ಸರಿಪ್ಪ ಈಗ ಒಂದು, ಎರಡು ಬಾಳೆಲೆ ಹರಡು...ಇಲ್ಲ ಅದೂ ಇಲ್ಲ. ಅದಕ್ಕೆ ಯೂಕ್ಸಿ, ಕಾಕ್ಸಿ, ನೆಲ್ಯ್ಯಾ, ಕೂಸಿ ಅಂತ ಶುರುವಾಯ್ತು ..ಹೋಗ್ಲಿ ಅಂತ ಅದನ್ನೇ ಕಲಿತೆ. ಇನ್ನು ಅವರು ಕೊಟ್ಟ ಬಣ್ಣ ಬಣ್ಣದ ಚಿತ್ರಗಳ ಹಾಳೆ ಹಿಡಿದು ಅದರ ಮೇಲೆ ಬೆರಳಿಟ್ಟು ಇದು ಗುಬ್ಬಿ, ಇದು, ಪಾರಿವಾಳ, ಇದು ನಾಯಿ...ಹಾವು..ಮತ್ತೆ ಕೋತಿ ಸಹ ಎಲ್ಲಾ ಕಲಿತೆ. ಆಮೇಲೆ ಮ್ಯಾಡಮ್ಮು ತರಕಾರಿಗಳ ಚಿತ್ರ ತೋರಿಸಿದರು 'ಟೊಮಾಟ್ಟೀ' ಅಂತಾರೆ, ಅಲ್ಲ ಇಷ್ಟ್ಯಾಕೆ ಕಷ್ಟಪಡಬೇಕು ಸುಮ್ಮನೇ ನಾವಂದ ಹಾಗೆ ಟೊಮೆಟೊ ಅಂತ ಸರಳ ಮಾಡಿಕೊಳ್ಳಬಾರದೇ ಅನಿಸಿದರೂ "ಬಟಾಟ್ಟೀ.. ಸೋಕೇರೀ (ಸಕ್ರೆ) ರೀಸೀ (ಅಕ್ಕಿ)" ಅಂತೆಲ್ಲ ಮುಂದುವರಿದಾಗ ಇವರಿಗೆ ಕಷ್ಟಪಟ್ಟು ಮಾತಾಡೋದೇ ಇಷ್ಟ ಅದಕ್ಕೇನು ಮಾಡುವುದು ಎಂದು ಅವರನ್ನು ಕ್ಷಮಿಸಿದೆ.

ಪಾಠಗಳ ಕಂತು ಮುಂದುವರಿಯಿತು.

'ಇವತ್ತು ಒಂದಾದರೂ ಸುವೋಮೀ ಶಬ್ದ ಆಡಿಯೇಬಿಟ್ಟೇನು ಅಂತ ಪ್ರತಿಜ್ಞೆ ಮಾಡಿಕೊಂಡೇ ಪ್ರತಿ ಬಾರಿ ಮನೆಗೆ ಹೋಗ್ತಿದ್ದೆ. ಹಾಗೆಯೆ ಮುಂದೆ ಒಂದು ದಿನ ಕ್ಲಾಸು ಮುಗಿಸಿ ಮನೆಗೆ ಹೋಗಿ ರಾತ್ರಿ ಊಟ ಮಾಡುವಾಗ ಜೋರಾಗಿ "ಮಿನಾ ಹಲುವಾನ್ ರೀಸಿ ..ರೀಸಿ" ಅಂದೆ! ಬಾಯಿಗೆ ಅನ್ನ ಸಾರು ಕಲಿಸಿ ತುತ್ತು ಇಟ್ಟುಕೊಳ್ಳುತ್ತಿದ್ದ ಮಗಳು ಅಳಿಯ ಮೊಮ್ಮಗಳು ಇವಳಿಗೇನಾಯಿತು? ಇಷ್ಟು ಹೊತ್ತು ಚೆನ್ನಾಗಿದ್ದಳಲ್ಲ ಎಂಬಂತೆ ಬೆಚ್ಚಿ ಕತ್ತು ಹೊರಳಿಸಿದವರು ಮತ್ತೆ ಸುಧಾರಿಸಿಕೊಂಡು 'ಹ್ಯೂವಾ'(ಗುಡ್) ಅಂತ ನಕ್ಕರು. ಮಗಳು ನಸುನಕ್ಕು "ಓ ಪರವಾಗಿಲ್ವೇ , "ಈರಿತ್ತಾಯಿನ್ ಕಿವಾ" (ವೆರಿ ನೈಸ್) ಅನ್ನುತ್ತ ಅನ್ನ ಅರ್ಥಾತ್ ರೀಸಿ ಬಡಿಸಿದಳು. ಯುದ್ಧ ಗೆದ್ದ ಖುಷಿ ನನಗೆ. ಏನೆಲ್ಲಾ ಕಲಿತುಬಿಟ್ಟೆ ಅನಿಸಿ ಹಿಗ್ಗಿದೆ.

ಆದರೂ ಭಾಷೆ ಬೇರೆ, ಅಲ್ಲಿದ್ದ ಆ ಪ್ರಪಂಚವೇ ಬೇರೆ ಅನಿಸುವ ಸಂದರ್ಭದಲ್ಲೂ ನನಗೆ ಒಂದು ಹೊಸ ಹುಮ್ಮಸ್ಸು ಹುಟ್ಟಿಸಿ, ಹೊಸದರ ಅನುಭವವನ್ನು ಧಾರಾಳವಾಗಿ ನೀಡಿದ ಅಲ್ಲಿನ ನೆಲಜಲ, ಪರಿಸರ ಶಾಲೆ ಶಿಕ್ಷಕಿಯರು ಎಲ್ಲರೂ ನನಗೆ ಆತ್ಮೀಯತೆಯ ಸಂಗಾತಿಗಳಾಗಿದ್ದು ಅವಿಸ್ಮರಣೀಯ.

ಇದು "ಮಾನವನಾಗಿ ಹುಟ್ಟಿದ ಮೇಲೆ ಏನೇನ್ ಕಂಡಿ..ಇರೋದ್ರೊಳಗೆ ಒಮ್ಮೆ ನೋಡು ಬ್ಯಾರೆ ಭಾಷಾದ್ ಕಿಂಡಿ!!" ಆಗಿಬಿಟ್ಟ ಸುಖದಂತೆ!

ಕೊನೆಯಲ್ಲಿ ಮನಸ್ಸು ಒಂದು ಮಾತು ಹೇಳುತ್ತದೆ.. 'ವರ್ಣಮಾತ್ರಂ ಕಲಿಸಿದಾತಂ ಗುರು' ನನಗೆ ಒಂದಿಷ್ಟಾದರೂ ಪಾಠ ಹೇಳಿಕೊಟ್ಟ ಈ ಫಿನ್ನಿಶ್ ಗುರುಗಳಿಗೂ ನನ್ನ ಉಳಿದೆಲ್ಲಾ ಗುರುಗಳೊಂದಿಗೆ ನಮನ ಸಮರ್ಪಣೆ. ■

# ಎಪ್ಪತ್ತರ ತಲ್ಲಣಗಳು

● ಶಂಸ ಐತಾಳ

ಬೆಳಿಗ್ಗೆ ಎದ್ದೊಡೊನೆ ಬಾತ್‌ರೂಮಿಗೂ ಹೋಗುವಷ್ಟು ಉತ್ಸಾಹವಿರದೆ ಮಂಚದ ಮೇಲೆಯೇ ಮಂಕಾಗಿ ಕುಳಿತಿದ್ದರು ಪ್ರೊ. ಪಾಂಡುರಂಗ ರಾವ್. ನಿವೃತ್ತಿ ಹೊಂದಿದನಂತರ ತಾವು ಸರ್ವ ತಂತ್ರ ಸ್ವತಂತ್ರರು, ತಮಗಿಷ್ಟ ಬಂದಂತೆ ಊರೂರು ಅಲೆಯಬಹುದು, ಸಾರ್ವಜನಿಕ ಕಾರ್ಯಕ್ರಮಗಳಿಗೆ, ಆಹ್ವಾನವಿಲ್ಲದಿದ್ದರೂ, ಹಾಜರಿಹಾಕಿದ 'ಶಾಸ್ತ್ರ' ಮಾಡಿ ಬಗೆಬಗೆಯ ಊಟತಿಂಡಿಗಳ ರುಚಿಯನ್ನು ಸವಿಯಬಹುದು, ಯಾರ ನಿಯಂತ್ರಣವೂ ಇಲ್ಲದ ಸ್ವಚ್ಛಂದ ಜೀವನವನ್ನು ಸಾಗಿಸಬಹುದು ಎಂದು ನಿವೃತ್ತಿ ಪೂರ್ವದಲ್ಲಿ ಕಂಡ ಹಗಲುಗನಸುಗಳೆಲ್ಲ ನುಚ್ಚುನೂರಾಗಿದ್ದವು. ಸಮೀಪದ ಸ್ವಪ್ನಸೌಧ ದೂರದ ಮರೀಚಿಕೆಯಾಗಿತ್ತು. ಕುಟುಂಬದ ಯಜಮಾನರಾಗಿದ್ದ ಅವರು ಮಡದಿ–ಮಕ್ಕಳ ದೃಷ್ಟಿಯಲ್ಲಿ ಯಃಕಶ್ಚಿತ್ ಆಗಿದ್ದರು. ಸರ್ವಾಧಿಕಾರಿಗಳೆನಿಸಿದ್ದ ಅವರು ಜೀತದಾಳಾಗುವ ದುರ್ದಿನ ದೂರದಲ್ಲಿರಲಿಲ್ಲ. ತಾವೇನೇ ಮಾಡಿದರೂ ತಪ್ಪು, ಏನು ಮಾಡದಿದ್ದರೂ ತಪ್ಪು 'ಬಾಯಿ ಮುಚ್ಚಿ ಕುಳಿತುಕೊಳ್ಳಿ, 'ನಿಮಗೆ ಏನೇನೂ ತಿಳಿಯುವುದಿಲ್ಲ', 'ಹೇಳಿದಷ್ಟು ಮಾಡಿ ಇತ್ಯಾದಿ ಸುಗ್ರೀವಾಜ್ಞೆಗಳು. ಹೇಳಿದಷ್ಟು–ಮಾಡುವುದೆಂದರೆ, ಫೋನ್ ಕರೆಂಟ್, ವಾಟರ್ ಮುಂತಾದ ಬಿಲ್‌ಗಳನ್ನು ಪಾವತಿಮಾಡಲು ಆಯಾಯ ಕೌಂಟರ್‌ಗಳಿಗೆ ಹೋಗಿ ಮೀಟರ್‌ಗಟ್ಟಲೆ ಉದ್ದದ ಕ್ಯೂನಲ್ಲಿ ಕಾಯುವುದು. ಮನೆಯಲ್ಲಿ ಬಿಡುವಿದ್ದಾಗ ಏನಾದರೂ ಓದುತ್ತ ಕುಳಿತುಕೊಂಡಿರೋಣವೆಂದರೆ ಆಗಲೂ 'ಕೊಯ್‌ಸಣೆ ಮಾತೇ: 'ಇಡೀ ದಿನ ಓದುತ್ತ ಕಾಲಹರಣ ಮಾಡುವ ಬದಲು ಏನಾದರೂ ಕೆಲಸ ಮಾಡಬಾರದೇ?'

ನಿವೃತ್ತ ಹಿರಿಯ ನಾಗರಿಕರಿಗೆ ಬೆಂಗಳೂರು ಕಿರಿಕಿರಿಯ ನಗರವೇ ಸರಿ. ಬೆಳಿಗ್ಗೆ ವಾಕಿಂಗ್ ಹೋಗೋಣವೆಂದರೆ, ಫುಟ್‌ಪಾತ್‌ಗಳೆಲ್ಲ ಟೂವ್ಹೀಲರ್‌ಗಳ ಪಾರ್ಕಿಂಗ್ ಆಗಿರುತ್ತವೆ. 9 ಅಥವಾ 10 ಗಂಟೆಯ ವೇಳೆಗೆ ಮೆಕ್ಯಾನಿಕ್ ಶಾಪ್‌ಗಳೋ ಗೂಡಂಗಡಿಗಳೋ ಆಗಿರುತ್ತವೆ ಅಥವಾ ರೆಡಿಮೇಡ್ ಬಟ್ಟೆ, ಫ್ಯಾನ್ಸಿ ಐಟಮ್‌ಗಳನ್ನು ಪ್ರದರ್ಶಿಸುವ ಮಿನಿ–ಮಾರ್ಕೆಟ್‌ಗಳೇ ಆಗಿ ''ಬನ್ನಿ, ಬನ್ನಿ'' ಎಂದು ಗ್ರಾಹಕರನ್ನು ಕರೆಯುತ್ತ ಇರುತ್ತವೆ. ಸಂಜೆಯಂತೂ ಅದ್ಭುತ ಟ್ರಾಫಿಕ್ ಜಾಮ್! ತಮ್ಮಂಥವರು ಜನದಟ್ಟಣೆಯಲ್ಲಿ ಕಾಲ್ತುಳಿತಕ್ಕೆ ಸಿಲುಕಿ ಗಾಯಾಳುಗಳಾದರೂ ಆಶ್ಚರ್ಯವಿಲ್ಲ. ಕೈಯಲ್ಲಿ ಜೀವ ಹಿಡಿದುಕೊಂಡೇ ಮುಂದೆ ಹೆಜ್ಜೆಯಿಡಬೇಕು ರಸ್ತೆ ದಾಟುವುದಂತೂ ಎವರೆಸ್ಟ್ ಏರುವುದಕ್ಕಿಂತಲೂ ಕಷ್ಟ, ಅಪಾಯಕರ.

ಪತ್ರ ವ್ಯವಹಾರದ ಮೂಲಕ ಹಳೆಯ ಗೆಳೆಯರೊಂದಿಗೆ, ನೆಂಟರಿಷ್ಟರೊಂದಿಗೆ ನಿರಂತರ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಸಾಧ್ಯವೆನಿಸಿದೆಯಲ್ಲ ಈಗ? ಅಂಚೆ ಇಲಾಖೆ ಪೋಸ್ಟ್ ಕಾರ್ಡ್, ಇನ್‌ಲ್ಯಾಂಡ್ ಕವರ್‌ಗಳನ್ನು ಮುದ್ರಿಸುವುದನ್ನೇ ನಿಲ್ಲಿಸಿ ಬಿಟ್ಟಿದೆ. ಪತ್ರ ಬರೆದು ಪೋಸ್ಟ್ ಮಾಡಲು ಅಂಚೆ ಪೆಟ್ಟಿಗೆ ಹುಡುಕುವುದೆಲ್ಲ ಹಳೆಯ ಪದ್ಧತಿ ಎಂದು ಕುಶಾಲು ಮಾಡುವ ಹಿರಿಯ ಮಗಳು, ಈಚೆಗೆ ಅಮೆರಿಕದಿಂದ ಭಾರತಕ್ಕೆ ಕಮ್‌ಬ್ಯಾಕ್ ಆದಾಗ ರಾಯರಿಗೊಂದು ಸ್ಮಾರ್ಟ್‌ಫೋನ್ ತಂದು ಕೊಟ್ಟಿದ್ದಳು. ಮೂರು ದಿನಗಳ ತರಬೇತಿ ತರಗತಿ ಪಡೆದು ಅವನ್ನು ಬಳಸುವ ಶಾಸ್ತ್ರೀಯ ವಿಧಾನವನ್ನೂ ಹೇಳಿ ಕೊಟ್ಟಿದ್ದಳು. ಆದರೆ ನಾಲ್ಕನೆಯ ದಿನ ಬೆಳಿಗ್ಗೆಯ ವೇಳೆಗೇ ಅವಳು ಹೇಳಿಕೊಟ್ಟ ಪಾಠವೆಲ್ಲ ಸಂಪೂರ್ಣ ಮರೆತು ಹೋಗಿತ್ತು.

ಸರ್ವಿಸ್‌ನಲ್ಲಿರುವಾಗ ಪುಸ್ತಕದ ನೆರವಿಲ್ಲದೆ 'ಶಬ್ದಮಣಿದರ್ಪಣಮ್' ಅನ್ನೂ ಹೇಗೆ ಪಾಠಮಾಡುತ್ತಿದ್ದೆನೋ ಆ ಪರಮಾತ್ಮನೇ ಬಲ್ಲ. ಅಮೆರಿಕಕ್ಕೆ ಹಿಂದಿರುಗುವ ಮೊದಲು ಮಗಳು ಇ-ಮೇಲ್ ಐಡಿಯನ್ನು ಮಾಡಿಸಿಕೊಟ್ಟಿದ್ದಳು. ಒಂದು ಸಲವೇನೋ ಅವರು ಮನೆಕೆಲಸದವಳ ನೆರವು ಪಡೆದು ಮಗಳಿಗೆ ಮಿಂಚಂಚೆ ಕಳುಹಿಸಿ ಹೆಮ್ಮೆಯಿಂದ ಬೀಗಿಹೋಗಿದ್ದರು. ಆದರೆ ಅವರು ತಮ್ಮ ಸ್ಮಾರ್ಟ್ ಫೋನಿನ ಶೇ. 20ರಷ್ಟೂ ಸ್ಮಾರ್ಟ್ ಆಗಿರಲಿಲ್ಲ. ಕೆಲಸದವಳ ಸಹಾಯವನ್ನಾದರೂ ಎಷ್ಟು ಸಲ ಕೇಳುವುದು? ಹೀಗಾಗಿ ಅವರು ಈಗೀಗ ಮೊಬೈಲನ್ನು ಬಳಸುವುದು ಕರೆ ಮಾಡಲು, ಕರೆ ಸ್ವೀಕರಿಸಲು ಹಾಗೂ ಎಸ್ಸೆಮ್ಮೆಸ್‌ಗಳನ್ನು ಕಳುಹಿಸಲು ಮಾತ್ರ ಹೇಳಿಸಿಕೊಂಡ ಪಾಠ ಮತ್ತು ಕಟ್ಟಿಸಿಕೊಂಡ ಬುತ್ತಿ – ಇವು ಎಷ್ಟು ಕಾಲ ತಾನೇ ಉಳಿದಾವು?

ಕಿರಿಯ ಮಗಳು ಕೊಯಮತ್ತೂರಿನಿಂದ ಬಂದಾಗಲೆಲ್ಲ ಪಿಜ್ಜಾ ತರಿಸುತ್ತಾಳೆ. ಅವಳ ಎರಡು ಮಕ್ಕಳಿಗೂ ಅದು ಇಷ್ಟವಂತೆ. ತಂದಾಗ 'ರುಚಿ ನೋಡಿ' ಎಂದು ಒತ್ತಾಯ ಮಾಡುತ್ತಾಳೆ. ತಮಗೆ ಇಂಥ ಆಧುನಿಕ ತಿಂಡಿ-ತಿನಿಸುಗಳೆಂದರೆ ಅಲರ್ಜಿ. ಆದರೆ ತಾವು ಪಿಜ್ಜಾಪ್ರಾಶನ ಮಾಡದಿದ್ದರೆ, ಬಾಲ್ಯದಲ್ಲಿ ತಾವೇ ಶೃಂಗೇರಿಯಲ್ಲಿ ಅನ್ನಪ್ರಾಶನವನ್ನು ವಿಧ್ಯುಕ್ತವಾಗಿ ಮಾಡಿಸಿದ ಮಗಳಿಗೆ ಬೇಸರವಾಗುತ್ತದೆಂದು, ಇಷ್ಟವಿಲ್ಲದಿದ್ದರೂ ತಿಂದ 'ಶಾಸ್ತ್ರ' ಮಾಡಿ ನಾಲಿಗೆ ರುಚಿಯನ್ನು ಕೆಡಿಸಿಕೊಳ್ಳಬೇಕು.

ಕಾಲಕಾಲಕ್ಕೆ ನಿದ್ರೆಯಿಲ್ಲ. ನಿದ್ರೆ ಬಂದಾಗ ಕೂಡ ಒಂದಕ್ಕೊಂದು ಸಂಬಂಧವಿಲ್ಲದ ವಿಚಿತ್ರ, ವಿಲಕ್ಷಣ ಕನಸುಗಳು.

ಆಗಾಗ ಬರುವ ಸಾವಿನ/ಅಪಘಾತದ/ಆತ್ಮಹತ್ಯೆಯ ಸಮಾಚಾರಗಳು, ಚಡ್ಡಿದೋಸ್ತಿ ಗೋಪಾಲ ಶೇರೀಗಾರ ಹೃದಯಾಘಾತವಾಗಿ ಗುಟುಕ್ ಅಂದನಂತೆ. ಸಹೋದ್ಯೋಗಿಗಳಾಗಿದ್ದ ಎಮ್.ಡಿ. ಬಾಯರಿಯವರು 'ನನ್ನ ಸಾವಿಗೆ ಯಾರೂ ಕಾರಣರಲ್ಲ' ಎಂಬ ಡೆತ್‌ನೋಟ್ ಬರೆದಿಟ್ಟು ನೇಣುಹಾಕಿಕೊಂಡರಂತೆ. ತನ್ನ ಬಹುತೇಕ ಕೃತಿಗಳನ್ನು ಪ್ರಕಟಿಸಿದ್ದ 'ತ್ವರಿತ್' ಪಬ್ಲಿಕೇಷನ್ನಿನ ಕುಲಕರ್ಣಿ ಕುಂದಾಪುರಕರ ಅವರು ಬಾತ್‌ರೂಮಿನಲ್ಲಿ ಕಾಲುಜಾರಿ ಬಿದ್ದು ತಲೆಗೆ ಪೆಟ್ಟಾಗಿ ಸತ್ತೇ ಹೋದರಂತೆ. ತಮ್ಮ ಅಚ್ಚುಮೆಚ್ಚಿನ ಶಿಷ್ಯನೆನಿಸಿದ್ದ ತಮ್ಮದೇ ಮಾರ್ಗದರ್ಶನದಲ್ಲಿ 'ದಲಿತ ಕವಯಿತ್ರಿಯರ ಸಾಹಿತ್ಯ'ದ ಬಗ್ಗೆ ಪಿಎಚ್‌ಡಿ ಮಾಡಿದ್ದ... ಛೇ ಛೇ, ಹೆಸರೇ ನೆನಪಿಗೆ ಬರುತ್ತಿಲ್ಲವಲ್ಲ. ... ಇನ್ನೂ ಮೂವತ್ತು ವರ್ಷ ದಾಟಿಲ್ಲದ ಹುಡುಗ, ಮೊನ್ನೆ ಮೊನ್ನೆ... ಯಾವ ಊರೆಂದು ನೆನಪಿಗೆ ಬರುತ್ತಿಲ್ಲ.... ಸಂಭವಿಸಿದ ಭೀಕರ ಅಪಘಾತದಲ್ಲಿ ಇನ್ನಿಲ್ಲವಾದನಂತೆ. ಅದೇಕೆ? ತಮ್ಮ ಸ್ವಂತ ಸೋದರ ಮಾವನ ಮಗ, ಇನ್ನೂ ಇಪ್ಪತ್ತು ವರ್ಷದ, ಪಿಯುಸಿ ಓದುತ್ತಿರುವ ಹುಡುಗ, ಕಾಲೇಜಿಗೆಂದು ಮನೆಯಿಂದ ಹೊರಟವನು ಮರಳಿ ಮನೆಗೆ ಬರಲೇ ಇಲ್ಲವಂತೆ; ನಾಪತ್ತೆಯಾಗಿದ್ದಾನಂತೆ.

ಆದುದರಿಂದ ತಾವು ಆರೋಗ್ಯವಾಗಿದ್ದೇನೆಂಬುದು ಕೇವಲ ಭ್ರಮೆ. ಯಾರಿಗೆ ಯಾವಾಗ ಏನು ಬೇಕಾದರೂ ಆಗಬಹುದು. ಸಾವಿನ ಬಗ್ಗೆ ಏಕಾದರೂ ಚಿಂತಿಸಬೇಕು ಎನಿಸಿದರೂ ನಿನ್ನೆಯಷ್ಟೇ ದಿನಪತ್ರಿಕೆಯೊಂದರಲ್ಲಿ ಓದಿದ್ದ ''ಖಿನ್ನತೆಯಾಗಿ ಕ್ಯಾನ್ಸರಿನ ಕಾರಣಗಳಲ್ಲಿ ಒಂದಾಗ ಬಹುದು' ಎಂಬ ಸುದ್ದಿ ನೆನಪಿಗೆ ಬಂದು ಕೊಂಚ ಭಯವಾಯಿತು. ಮೂರನೆಯ ಅಥವಾ ನಾಲ್ಕನೆಯ ಹಂತದಲ್ಲಿ ಕ್ಯಾನ್ಸರ್ ಪತ್ತೆಯಾದರೆ ಗುಣಪಡಿಸುವುದು ತುಂಬ ಕಷ್ಟವಂತೆ.

ಆ ರಾತ್ರಿಯೂ ನಿದ್ರಾದೇವಿಯನ್ನು ಆಲಂಗಿಸಿಕೊಳ್ಳಲಾರದಷ್ಟು ಅವರಿಗೆ ಮಂಕು ಕವಿದಿತ್ತು. ■

# ಹುಂಬರಾವಣ

● ವೈ.ಎನ್. ಗುಂಡೂರಾವ್

ಹೈಸ್ಕೂಲಿನ ಕಡೆಯ ವರ್ಷ. ಪರೀಕ್ಷೆಗೆ ಮುಂಚೆ ಶಾಲಾ–ಕಾಲೇಜುಗಳಲ್ಲಿ ಸಂತೋಷ ಕೂಟಗಳನ್ನೇರ್ಪಡಿಸಿ (ಕ್ಲಾಸ್ ಸೋಶಿಯಲ್ಸ್) ವಿದ್ಯಾರ್ಥಿಗಳನ್ನು ಬೀಳ್ಕೊಡುವುದು ಸಾಮಾನ್ಯ. ಅಂದಿನ ಕಾರ್ಯಕ್ರಮದಲ್ಲಿ ವಿವಿಧ ವಿನೋದಾವಳಿ, ಆಶುಭಾಷಣ, ನಾಟಕ ಮುಂತಾದ ಹಲವಾರು ಕಾರ್ಯಕ್ರಮಗಳಿದ್ದೇ ಇರುತ್ತದೆ. ಹಳ್ಳಿಯ ಸ್ಕೂಲೆಂದರೆ ಅಲ್ಲಿನ ಮಕ್ಕಳಿಗೆ ಹವ್ಯಾಸಿ ನಾಟಕಗಳಿಗಿಂತ ಕಂಪನಿ ನಾಟಕಗಳನ್ನು ನೋಡಿ ಬೆಳೆದ ಬಾಲಕರೇ ಜಾಸ್ತಿ. ಅಂಥವರ ಕೈಯಲ್ಲಿ ಹವ್ಯಾಸಿ ನಾಟಕ ಮಾಡಿಸುವುದು ಕಷ್ಟ ಎಂದರಿತ ಒಬ್ಬ ಉಪಾಧ್ಯಾಯರು ಕಂಪನಿ ನಾಟಕದ ಮಾದರಿಯಲ್ಲೇ ರಾಮಾಯಣದಲ್ಲಿ ಬರುವ ಪ್ರಸಂಗವೊಂದನ್ನು ಪ್ರಸ್ತುತ ಪಡಿಸಲು ತಯಾರಿ ನಡೆಸಿದರು. ಪಾತ್ರಗಳು ಕಡಿಮೆಯಿದ್ದಷ್ಟೂ ತಾಲೀಮಿಗೆ ಅನುಕೂಲ ಎನ್ನುವುದು ಅದರ ಯೋಚನೆ.

ರಾವಣನು ಸೀತೆಯನ್ನು ಹೊತ್ತು ತಂದು ಅಶೋಕವನದಲ್ಲಿರಿಸುತ್ತಾನೆ. ಪ್ರತಿದಿನವೂ ತನ್ನ ಸೇವಕ, ಸೇವಕಿಯರ ಕೈಯಲ್ಲಿ ತನ್ನ ವ್ಯಕ್ತಿತ್ವವನ್ನು ಹೊಗಳಿಸಿಕೊಂಡು ಸೀತೆಯನ್ನು ಒಲಿಸಿಕೊಳ್ಳಲು ಪ್ರಾರಂಭಿಸುತ್ತಾನೆ. ಕಡೆಗೆ ತಾನೇ ಬಂದು ಸೀತೆಯ ಬಳಿ ತನ್ನ ಪ್ರೇಮ ನಿವೇದನೆ ಮಾಡುತ್ತಾನೆ.

''ಸೀತೆ ಅಶೋಕವನದಲ್ಲಿ ಕುಳಿತಿರುತ್ತಾಳೆ. ರಾವಣ ಬಂದು ತನ್ನ ಪ್ರೇಮ ನಿವೇದನೆ ಮಾಡುತ್ತಾನೆ. ಅವನ ಜೊತೆಗೆ ಮೂವರು ರಾಕ್ಷಸರು ರಾವಣನ ಹಿಂದೆಯೇ ಓಡಾಡುತ್ತಿರುತ್ತಾರೆ''. ಇವಿಷ್ಟೇ ದೃಶ್ಯ. ಹತ್ತು ನಿಮಿಷಗಳ ಅವಧಿಯ ನಾಟಕ. ಈ ನಾಟಕಕ್ಕೆ 'ಹುಂಬರಾವಣ' ಎಂದು ಹೆಸರಿಟ್ಟಿರುತ್ತಾರೆ. ಬಹುಶಃ ಈ ಹೆಸರಿಡಲು ತಮಿಳಿನ ಕಂಬ ರಾಮಾಯಣ ಎಂಬ ಹೆಸರಿನಿಂದ ಪ್ರಚೋದನೆಯಾಗಿರಬಹುದೇನೋ ಈ ಉಪಾಧ್ಯಾಯರಿಗೆ.

ಅಂದು ನಾಟಕ ಪ್ರಾರಂಭವಾಯಿತು. ರಾವಣ ಎಂಟ್ರಿ ತೆಗೆದುಕೊಂಡ. ಬಲದ ಕೈಯಲ್ಲಿ ದೊಡ್ಡ ಕತ್ತಿ... ಎಡಗೈಯಲ್ಲಿ ಮೀಸೆ ಹುರಿಮಾಡುತ್ತಿದ್ದಾನೆ. ಮೂವರು ಮರಿ ರಾಕ್ಷಸರು ಅವನು ಹೋದೆಡೆಯಲ್ಲೆಲ್ಲಾ ಹಿಂಬಾಲಿಸುತ್ತಿದ್ದಾರೆ. ಸೀತೆ ಕಾರ್ಡ್‌ಬೋರ್ಡ್ ಅಶೋಕ ಮರದ ಕೆಳಗೆ ತಲೆ ತಗ್ಗಿಸಿ ಕುಳಿತು ಬಿಟ್ಟಿದ್ದಾಳೆ. ಸೀತೆ ಮಹಾಪತಿವ್ರತೆ ಎಂಬುದನ್ನು ತೋರಿಸಲು ತಲೆತಗ್ಗಿಸಿ ಕುಳಿತದ್ದಕ್ಕಿಂತ ರಂಗದ ಮೇಲೆ ಬಂದದ್ದಕ್ಕೆ ಹೆದರಿ, ಬಗ್ಗಿಸಿದ ತಲೆಯನ್ನು ಫೋಟೋಗೆ ಕೂಡಾ ಎತ್ತಲಾರದಷ್ಟು ಭಯಗೊಂಡು ಡೈಲಾಗ್ ಮರೆತು ಕುಳಿತುಬಿಟ್ಟಿದ್ದಾಳೆ.

ಇದು ಒಂದು ಕಡೆ ಇರಲಿ..

ರಾವಣ ರೋಷದಿಂದ ಅತ್ತಿಂದಿತ್ತ ಓಡಾಡುತ್ತಾ ತನ್ನ ಸಂಭಾಷಣೆಯನ್ನು ಉಚ್ಚ ಕಂಠದಿಂದ ಪಠಿಸುತ್ತಿದ್ದರೆ ನಾಟಕ ನೋಡುತ್ತಿದ್ದವರೆಲ್ಲರೂ 'ಭೇಷ್' ಎನ್ನಬೇಕು ಹಾಗಿತ್ತು ಹುಡುಗನ ಅಭಿನಯ. ದುಂಡುದುಂಡಗೆ ಎತ್ತರದ ಮೈಕಟ್ಟಿನ ರಾವಣನ ಪಾತ್ರಕ್ಕೆ ಲಾಯಕ್ಕು ಎನಿಸಿಕೊಂಡ.

ಆದರೆ ಕತ್ತಿಯನ್ನು ಹಿಡಿದು ಓಡಾಡುತ್ತಿದ್ದಾಗ ಅದು ನೆಲವನ್ನು ಕೆರೆದುಕೊಂಡು ಹೋಗುತ್ತಿದ್ದುದನ್ನು ಕಂಡ ಒಬ್ಬ ಮರಿ ರಾಕ್ಷಸ ''ಪ್ರಭು, ಕತ್ತಿ ಮೊಂಡಾದೀತು, ನೆಲದ ಮೇಲೆ ಎಳೆಯ ಬೇಡಿ. ನಾನು ಹೊತ್ತು ತರುತ್ತೇನೆ ಕೊಡಿ'' ಎಂದು ತೆಗೆದುಕೊಂಡು ಹೆಗಲಿಗೇರಿಸಿಯೇ ಬಿಟ್ಟ ಈ ಚಾಲಾಕಿ ಹುಡುಗ. ನಾಟಕದಲ್ಲಿಲ್ಲದ ಡೈಲಾಗ್ ಹೊಡೆದು ಚಪ್ಪಾಳೆಯನ್ನೂ ಗಿಟ್ಟಿಸಿಕೊಂಡ. ರಾವಣನು ಮೀಸೆ ಹುರಿಮಾಡುತ್ತಾ ರೋಷದಿಂದ ಸ್ಟೇಜಿನ ಮೇಲೆಲ್ಲಾ ಓಡಾಡುತ್ತಿದ್ದರೆ ಅವನ ಹಿಂದೆಯೇ ಕತ್ತಿಯನ್ನು ಹೆಗಲಿಗೇರಿಸಿ ಹಿಂದೆ ಹಿಂದೆ ಓಡಾಡತೊಡಗಿದ ಈ ಬಾಲಕ. ಇನ್ನಿಬ್ಬರು ಮರಿ ರಾಕ್ಷಸರಿಗೆ ಚಡ್ಡಿ, ಮೇಲ್ಭಾಗ ಬರಿ ಮೈಗೆ ಹಚ್ಚಿದ ಇದ್ದಿಲು ಬಣ್ಣ. ಈ ಹುಡುಗನಿಗೆ ಮಂಡಿಯ ಮೇಲೆ ಕಚ್ಚೆ, ಮೇಲ್ಭಾಗಕ್ಕೆ ಇದ್ದಿಲು ಬಣ್ಣ. ದುಂಡು ದುಂಡಗಿದ್ದು ತೊಡೆಯ ಮೇಲೆ ಹಾಕಿದ ಬಿಗಿದ ಕಚ್ಚೆಯಲ್ಲಿ ಈ ಹುಡುಗ ಉಳಿದ ಇಬ್ಬರಿಗಿಂತ ಚೂಟಿಯಾಗಿ ಓಡಾಡುತ್ತಾ ನಾಟಕಕ್ಕೆ ಕಳೆಕಟ್ಟುವಂತೆ ಮಾಡಿದ್ದ. ಕತ್ತಿ ಹೊತ್ತು ರಾವಣನು ಹೋದೆಡೆಯಲ್ಲೆಲ್ಲಾ ಅಡ್ಡಗಾಲು ಹಾಕುತ್ತಾ, ಎಡಗೈ ಬೀಸುತ್ತಾ ಹಿಂಬಾಲಿಸುವುದು, ರಾವಣ ನಿಂತೆಡೆಯಲ್ಲೆಲ್ಲಾ ವಿಶಿಷ್ಟ ಭಂಗಿಯಲ್ಲಿ ನಿಲ್ಲುವುದು, ರಾವಣನು ಮೀಸೆ ಹುರಿಮಾಡಿದರೆ ಇವನು ಎಡಗೈಯನ್ನು ಸೊಂಟಕ್ಕೇರಿಸಿ ಕುತ್ತಿಗೆಯನ್ನು ಎಡಕ್ಕೆ ತಿರುಗಿಸಿ ಪೋಸು ಕೊಡುವುದು.. ಇದನ್ನು ನೋಡಿದ ಜನ ಬಿದ್ದೂ ಬಿದ್ದು ನಕ್ಕರು. ಹುಡುಗ ತನ್ನ ಆಕ್ಟಿಂಗ್‌ನಿಂದ ರಾವಣನನ್ನೂ ಮೀರಿಸಿ ಚಪ್ಪಾಳೆ ಗಿಟ್ಟಿಸಿಕೊಂಡಿದ್ದಲ್ಲದೆ ಬಹುಮಾನವನ್ನೂ ಗಿಟ್ಟಿಸಿಕೊಂಡನು. ರಾವಣನ ನಟನೆಯೂ ಚೆನ್ನಾಗಿದ್ದರೂ ಇದಕ್ಕೆ ಬಹುಮಾನವೆಂಬುದಿಲ್ಲವಾದರೂ ಹುಡುಗನನ್ನು ಹುರಿದುಂಬಿಸಲು ಕೊಟ್ಟ ಬಹುಮಾನವಾಗಿತ್ತಷ್ಟೆ.

ರಾವಣನ ಪಾತ್ರ ಮಾಡಿದವನು, ನನಗಿಂತ ಕತ್ತಿ ಹೊರುವವನಿಗೆ ಬಹುಮಾನ ಕೊಟ್ಟರಲ್ಲ ಎಂಬ ಅಸಮಾಧಾನ ಮನಸ್ಸಿನಲ್ಲಿ ತುಂಬಿಕೊಂಡದ್ದು ಮತ್ತೊಂದು ರಾಮಾಯಣಕ್ಕೆ ನಾಂದಿಯಾಯಿತು.

ಸಮಾರಂಭವೆಲ್ಲ ಮುಗಿಯಿತು. ಹುಡುಗರೆಲ್ಲರೂ ತಮ್ಮ ತಮ್ಮ ಹಳ್ಳಿಗೆ ತೆರಳಿದರು. ಭಾನುವಾರ ಕಳೆದು ಸೋಮವಾರ ಶಾಲೆಗೆ ತೆರಳಿದಾಗ ಕತ್ತಿ ಹೊತ್ತಿದ್ದ ಹುಡುಗ ಅಳುತ್ತಲೇ ಬಂದ. ''ಸಾರ್ ನೀವು ಕೊಟ್ಟ ಬಹುಮಾನವನ್ನು ರಾವಣ ಕಿತ್ಕೊಂಬಿಟ್ಟ ಸಾರ್'' ಎಂದು ಕಂಪ್ಲೇಂಟ್ ಮಾಡಿದ. (ಇಬ್ಬರೂ ಒಂದೇ ಊರಿನವರಾಗಿದ್ದರಿಂದ ರಾವಣನ ಪಾತ್ರಧಾರಿ ಆ ಬಹುಮಾನ ನನಗೆ ಸೇರಬೇಕಾದ್ದು, ನನ್ನ ಆಕ್ಟಿಂಗ್‌ಗೆ ಕೊಟ್ಟದ್ದು, ನಿನಗಲ್ಲ ಎಂದು ಅವನ ಮನೆಗೆ ಹೋಗಿ ಕಿತ್ತು ಕೊಂಡಿದ್ದನಂತೆ). ರಾವಣನನ್ನು ಕರೆಸಿದರು. ಅವನಿಗೂ ಸಾಕಷ್ಟು ಬುದ್ಧಿಹೇಳಿ ''ನಿಮ್ಮಿಬ್ಬರ ನಟನೆಯೂ ಚೆನ್ನಾಗಿತ್ತಪ್ಪ. ನೀನು ಆಗಾಗ್ಗೆ ಬಯಲು ನಾಟಕಗಳಲ್ಲಿ ಮಾಡುತ್ತಿರುತ್ತೀಯಂತೆ. ಅವನಿಗೆ ಹೊಸದು. ಅವನನ್ನು ಹುರಿದುಂಬಿಸಲು ಕೊಟ್ಟಿದ್ದಷ್ಟೆ'' ಎಂದು ಸಮಾಧಾನ ಪಡಿಸಿ ಅವನ ಬಳಿ ಇದ್ದ ಬಹುಮಾನವನ್ನು ಕತ್ತಿ ಹೊತ್ತ ಹುಡುಗನಿಗೆ ಕೊಡಿಸಿದರು. ರಾವಣನು ಕೊಂಚ ಕೋಪದಿಂದಲೇ ಬಹುಮಾನವನ್ನು ಹಿಂದಿರುಗಿಸಿ ಹೊರಟುಹೋದನು.

ನಾಲ್ಕೈದು ದಿವಸ ಕಳೆಯಿತು. ಶಾಲೆ ಬಿಡುವ ಸಮಯ ರಾವಣದ ಪರಿವಾರದ

ಐದಾರು ಮಂದಿ ಹೆಡ್ಮಾಸ್ಟರ ಆಫೀಸಿನ ಬಳಿ ಬಂದು ನಿಂತಾಗ ಹೆಡ್ಮಾಸ್ಟರು ದಿಗಿಲುಗೊಂಡರು. ‘‘ಏನ್ಸಾರೂ, ನಮ್ ಹುಡ್ಗ ರಾವಣನ ಆ್ಯಕ್ಟಿಂಗ್ ಬಲೇ ಚೆಂದಾಗಿ ಮಾಡಿದ್ರೂ ಅದ್ಯಾರ್ದೊ ಕತ್ತಿ ಹೊತ್ತ ಹುಡ್ಗಂಗೆ ಬಹುಮಾನ ಕೊಟ್ರಂತೆ? ತತ್ರನ್ನಿ ನಮ್ ಹುಡ್ಗಂಗೂ ಬೋಮಾನವ’’ ಎಂದು ದೊಡ್ಡವರು ವಾದಿಸತೊಡಗಿದರೆ ಹಿಂದೆ ನಿಂತಿದ್ದ ತುಷಾಂಡಿ ಹುಡಗ ‘‘ಕೊಡ್ದಿದ್ರೆ ಸ್ಕೂಲ್‌ಗೆ ಬೆಂಕಿನೇ...’’ ಎಂದು ಬಿಟ್ಟ. ಇದೊಳ್ಳೆ ಗ್ರಹಚಾರಕ್ಕೆ ಬಂತಲ್ಲಪ್ಪ ಅಂತ ಹೆಡ್ಮಾಸ್ಟರಿಗೆ ಭಯ ಶುರುವಾಯಿತು. ನೀವೆಲ್ಲ ಪಕ್ಕದ ರೂಮಿನಲ್ಲಿ ಕುಳಿತಿರಿ ಕರೆಯುತ್ತೇನೆ ಎಂದು ಸಮಾಧಾನ ಮಾಡಿ ಖಾಲಿಯಿದ್ದ ರೂಮಿಗೆ ಕಳುಹಿಸಿದರು.

ನಾಟಕ ಮಾಡಿಸಿದ ಉಪಾಧ್ಯಾಯರನ್ನು ಕರೆಸಿದರು. ‘‘ಏನ್ರೀ ಅದು, ರಾವಣನ ವಂಶದವರೆಲ್ಲ ಬಹುಮಾನ ಕೊಡ್ಲಿಲ್ಲಾಂತ ಬಂದು ಗಲಾಟೆ ಮಾಡ್ತಿದ್ದಾರೆ. ಹನುಮಂತ ಲಂಕೆ ಸುಟ್ಟದ್ದೇನೋ ಸರಿ. ಬಹುಮಾನ ಕೊಡ್ಲಿಲ್ಲಾಂದ್ರೆ ಸ್ಕೂಲ್ ಸುಡ್ತೀವಿ ಅಂತಿದ್ದಾರಲ್ಲಪ್ಪ ಆ ರಾವಣನ ಪರಿವಾರದವರು’’ ಎಂದರು ಭಯದಿಂದಲೇ.

ಬಿಡಿ ಸಾರ್, ನಾನು ಸರಿಮಾಡ್ತೇನೆ ಎಂದು ಹೇಳಿ ಕತ್ತಿ ಹೊತ್ತ ಹುಡುಗನಿಗೆ ಕೊಟ್ಟಿದ್ದ ಬಹುಮಾನದಂತೆಯೇ ಇರುವ ಇನ್ನೊಂದು ಬಹುಮಾನವನ್ನು ಆಫೀಸಿನಲ್ಲಿ ಹುಡುಕಿದರು. ಇವರ ಅದೃಷ್ಟ ಚೆನ್ನಾಗಿತ್ತು. ಉಳಿದು ಹೋಗಿದ್ದ ಯಾವುದೋ ಒಂದು ಬಹುಮಾನ ಸಿಕ್ಕಿತು. ಹಳ್ಳಿಯವರನ್ನು ಕರೆದು ‘‘ನೋಡಪ್ಪ ರಾವಣನಿಗೆ ಕೊಟ್ಟುಬಿಡಿ. ಇದು ಇನ್ನೂ ಚೆನ್ನಾಗಿರುವ ಬಹುಮಾನ’’ ಎಂದು ಹೇಳಿ ಕೊಟ್ಟಾಗ, ಹಳ್ಳಿಯವರು ಬಹುಮಾನವನ್ನು ಪಡೆದು ಊರ ದಾರಿ ಹಿಡಿದರು.

ನಾಟಕಕ್ಕೆ ‘ಹುಂಬ ರಾವಣ’ ಅಂತ ಹೆಸರಿಟ್ಟಿದ್ದೆ ತಪ್ಪಾಯ್ತು ಎಂದು ನಾಟಕ ಮಾಡಿಸಿದ ಉಪಾಧ್ಯಾಯರು ತಲೆ ಚಚ್ಕೊಂಡ್ರು. ■



ಕೊರವಂಜಿಯಿಂದ

# ಪಂತರಿಗೊಂದು ಪತ್ರ

● **ಕೊಳ್ಳೇಗಾಲದ್ನಾರಾಮಾನುಜ**

ಇಂದ್ರಪ್ರಸ್ಥ

ಗ್ರೀಷ್ಮ-ಜ್ಯೇಷ್ಠ ಕೃಷ್ಣ ಪಕ್ಷ

॥ ಓಂ ಶುಭಮಸ್ತು ॥

ಅರಿಕೇಸರಿ ಪ್ರತಿವಾದಿ ಭಯಂಕರ ವೇದ ವಿದ್ಯಾ ಪಾರಂಗತ ಅಗ್ರಹಾರದ ಗುಂಡೂ ಪಂತನಿಗೆ ಜೋತಿಷ್ಯ ಕೇಸರಿ ಜಗಲಿ ಭೀಮಸೇನನ ಸಸ್ನೇಹ ನಮಸ್ಕಾರಗಳು. ಆದಾಗಿ ಗುಂಡೂಪಂತ, ನೀನು ಅದೃಷ್ಟಶಾಲಿ. ಇದೇನು! ಅನೇಕ ಸಂವತ್ಸರಗಳ ಬಳಿಕ ಅಪರೂಪಕ್ಕೆ ಬರೆಯುತ್ತಿರುವ ಪತ್ರದಲ್ಲಿ ಈ ಭೀಮಸೇನ ಹೀಗೆ ಕರುಬುತ್ತಿರುವನಲ್ಲಾ ಎಂದು ಕಳಕಳಿಯಾಗಬೇಡ. ನಾನು ಯಃಕಶ್ಚಿತ್ ಸತ್ಯವನ್ನೇ ನುಡಿಯುತ್ತಿರುವೆ. ನಿನ್ನ ಪುತ್ರರೂ ತೊಟ್ಟೀಮನೆ ಹೊಸಲು ದಾಟಿ ಶೂದ್ರರ ಸಂಗಡ ಶಾಲೆಯಲ್ಲಿ ಕಲಿತು ಕಾಲೇಜು ಓದಿ ಶಹರು ಶೇರಿದರೂ, ನೀನೇ ಧನ್ಯ! ಕೊಳ್ಳೇಗಾಲಕ್ಕೆ ಕೆಲವೇ ಯೋಜನಗಳಲ್ಲಿ ನಿನ್ನ ವಂಶಪೂರ ನೆಲಸಿದೆ ಮತ್ತು ಅವರುಗಳು ಎಷ್ಟೇ ಜುಲುಮು ಮಾಡಿದರೂ ನೀನು ತಾತನ ಆಲದ ಮರ ಎಂದು ತೊಟ್ಟೀಮನೆಯಲ್ಲೇ ಭದ್ರವಾಗಿ ನೆಲಸಿ ಕಾವೇರಿ ಸ್ನಾನ ಮಾಡುತ್ತಾ ಭಗವತ್ ಕೃಪಾಪಾತ್ರನಾಗಿ ವೊಂಗಲು-ಪುಳಿಯೋಹರೆ ಎನ್ನುತ್ತಾ ಆನಂದವಾಗಿದ್ದೀಯ. ನನ್ನ ಪಾಡನ್ನು ಏನೆಂದು ಬರೆಯಲಿ? ಹುಟ್ಟಿದ ಒಬ್ಬ ವಂಶೋದ್ಧಾರಕನ ಬೆನ್ನು ಬಿದ್ದು ಈ ದಿನವನ್ನು ನೋಡಬೇಕಾಯಿತು. ಯಾವ ಜನ್ಮದ ಶಾಪವೋ, ನಿಂಮೆಲ್ಲರ ಬಂಧನವನ್ನು ಹರಿದು ಕೊಳ್ಳೇಗಾಲವನ್ನು ಬಿಟ್ಟೆ. ಚಿರಂಜೀವಿಗೆ ಒಂದು ನಾಲ್ಕು ಸಂಸ್ಕೃತ ಶ್ಲೋಕಗಳನ್ನು ಬಾಯಿಪಾಠ ಮಾಡಿಸಿ ತಿಥಿ ತಿರುಮಂಜಲಗಳಿಗೆ ಕಳುಹಿಸಿ ತೃಪ್ತೋಸ್ಮಿ ಎಂದು ಇರದೆ, ಕಾಲಾಯ ತಸ್ಮೈನಮಃ ಎಂದು ಪಟ್ಟಣದ ಸೋಗಿಗೆ ಮರುಳಾಗಿ ಕಾಲೇಜಿಗೆ ಕಳಿಸಿ ಯವನ ಭಾಷೆಯನ್ನು ಕಲಿಸಿದೆ. ಅದೇ ನೋಡು! ಸ್ವರ್ಗದಲ್ಲಿರುವ ಪಿತೃಗಳಿಗೂ ಹೇಳ ಹೆಸರಿಲ್ಲದಷ್ಟು ಕೋಪ ಬಂದಿರಬೇಕು. ಅವರುಗಳ ಕಣ್ಗಳಲ್ಲಿ ನೀರು ಬರಸಿದ್ದಕ್ಕೆ ಇಂದು ನನಗೆ ಈ ಸ್ಥಿತಿ ಬಂದಿದೆ. ಇಂಗ್ಲೀಷು ಎರಡು ಮಾತು ಬರುವುದಕ್ಕಿಲ್ಲ, ಪುತ್ರರತ್ನನಿಗೆ ಕುಡುಮಿಯ ಮೇಲೆ ಇಲ್ಲದ ಕೋಪ ಬಂದು, ಅದೇನೋ ಅಂಗ್ರೇಜಿ ಕ್ರಾಪ್ ಅಂತೆ - ಮಾಡಿಸಿಕೊಂಡ ನನ್ನನ್ನು ತಿಥಿ ಊಟಕ್ಕೆ ಹೋಗಬಾರದೆಂದು ಕಟ್ಟು ಮಾಡಿದ. ದೇಹಾರೋಗ್ಯಕ್ಕೆ ಬಲು ಕೆಟ್ಟದಂತೆ. ಪಂತೂ, ಈಗಿನ ಈ ಮರಿಗಳಿಗೆ ಏನು ಗೊತ್ತಾಗಬೇಕು? ತಿಂಗಳಿಗೆ ಸರಾಸರಿ ನಾಲ್ಕರಂತೆ ತನ್ನ ಹದಿನೆಂಟನೆಯ ವಯಸ್ಸಿನಿಂದ ತಿಥಿಯೂಟ ಹೊಡೆದಿರುವ ಅಪ್ರಮೇಯ ಶಾಮು ಎಂಬತ್ತು ತುಂಬಿದ್ದರೂ ಹೇಗಿದಾನೆ ಹೇಳು! ಈಗ ಹುಟ್ಟುವುದಕ್ಕಿಲ್ಲ ರಕ್ತವಿಲ್ಲದೆ, ಬಿಳಿಚಿಕೊಂಡಿರುತ್ತಾರೆ!

ಇರಲಿ; ಮಗನಿಗೆ ದಿಲ್ಲಿಯಲ್ಲಿ ದೊಡ್ಡ ಕೆಲಸವಾಗಿದೆ - ಆದರೆ ಕೊಳ್ಳೇಗಾಲವನ್ನೆಲ್ಲಿ

ಬಿಡಲಿ? ನನ್ನ ಬ್ರಾಹ್ಮಣಿಕೆಗೆ ತರ್ಪಣ ಕೊಡಲೇ! ಎನ್ನುತ್ತಿದ್ದವನನ್ನು ನೀವುಗಳೆಲ್ಲಾ ಹುರಿದುಂಬಿಸಿ, –''ದಿಲ್ಲಿಯೇನು ಭೀಮೂ, ಇಂದ್ರಪ್ರಸ್ಥವಲ್ಲವೇನೋ! ಕೃಷ್ಣ ಓಡಾಡಿದ ಜಾಗವಲ್ಲವೇನೋ! ಧರ್ಮರಾಯನಿಗಿಂತ ಇನ್ನೇನೋ?. ಭೀಷ್ಮಾಚಾರ್ಯರೇನು ಬಿಟ್ಟಿಯೋ? ನಿನಗೂ ನಿನ್ನ ವಂಶಕ್ಕೂ ಇರುವವ ಅವನೊಬ್ಬನೇ ಮಗ ಸುಮ್ಮನೆ ಅವನನ್ನು ಬಿಟ್ಟು ಕೂಪ ಮಂಡೂಕದಂತೆ ಅಗ್ರಹಾರದ ಜಗಲೀ ಮೇಲೆ ಕುಳಿತು ಜಿಗಣೆ ಹೊಡೆಯಬೇಕಷ್ಟೆ! ಎಲ್ಲ ಅವನಿಚ್ಛೆ ಅಂತ ಹೊರಡು.'' ಎಂದು ಊರಿನಿಂದ ಇಲ್ಲಿಗೆ ದಬ್ಬಿದಿರಿ. ಈಗ ಇಲ್ಲಿ ನನ್ನ ಕರ್ಮ ದೇವರಿಗೆ ಪ್ರೀತಿ. ದೇವರ ಕೋಣೆಯಲ್ಲಿ ರಾಮಾ-ಕೃಷ್ಣಾಂತ ಇರೋಣವೆಂದರೆ ಮಂದಾಸನದೊಳಕ್ಕೆ ತಾಜ ಮಹಲನ್ನು ತಂದಿರಿಸಿದ್ದಾನೆ ಪುತ್ರರತ್ನ. ಕಲೆಯೇ ದೇವರಂತೆ. ಅದು ಅಮರ ಪ್ರೇಮದ ಸ್ಮಾರಕವಂತೆ. ಅಂದಮಾತ್ರಕ್ಕೆ ಆ ಸಾಬರ ಗೋರಿಯ ಪ್ರತಿಮೆಯನ್ನು ಮಂದಾಸನಕ್ಕೆ ಮುಟ್ಟಿಸಿ ವೈದಿಕಕ್ಕೆ ಇತಿಪೂರ್ತಿ ಮಾಡುವುದೇ? ತುರುಕರ ಹುಡುಗನೇ ಮನೆಯಲ್ಲಿ ಅಡಿಗೆಗೆ ಅಣಿಮಾಡುವವನು. ಇದೆಲ್ಲಾ ಆಯಿತು ನನ್ನ ಜೀವಂತ ಸಮಾಧಿ.

''ದಿಲ್ಲಿಯು ಶಹರು. ಸಾಯುವ ಮಂದಿ ಹೆಚ್ಚು. ಎಲ್ಲರನ್ನೂ ಸುಡುತ್ತಾ ಹೋಗುವುದು ಈ ಯಾಂತ್ರಿಕ ಯುಗಕ್ಕೆ ಒಂದು ಪ್ರಶ್ನೆಯಂತೆ. ದಿನಪೂರ ಹರಿಶ್ಚಂದ್ರಘಾಟಿನಲ್ಲಿ ಕಾಯುವುದು ಬಲು ತಾಪತ್ರಯ ಎಂದು ಎಲ್ಲವೂ ಹತ್ತು ಘಳಿಗೆಯಲ್ಲಿ ಮುಗಿದು ಹೋಗುವಂತೆ ವಿದ್ಯುತ್ ಗೋರಿಯೊಂದನ್ನು ಮೊನ್ನೆ ಆರೋಗ್ಯ ಸಚಿವೆ ಸುಶೀಲೆಯಂತೆ ಉದ್ಘಾಟಿಸಿದಳಂತೆ. ಶಾಂತಂ ಪಾಪಂ, ನಾನು ಕಂಡ ಹಾಗೆ ಹೆಣ್ಣು ಸ್ಮಶಾನಕ್ಕೆ ಒಂದೇ ಬಾರಿ ಹೋಗುವುದು. ಹಿಂದಕ್ಕೆ ಬರುವ ಪ್ರಶ್ನೆಯೇ ಇಲ್ಲ. ಇಂದ್ರಪ್ರಸ್ಥದಲ್ಲಿ ಅದರ ಉದ್ಘಾಟನೆಯೇ ಹೆಂಗಸಿಂದ! ಎಲೆಕ್ಟ್ರಿಕ್ ಕ್ರಿಮೆಟೋರಿಯಂನಲ್ಲಿ ಕಟ್ಟಿಗೆಯ ಅಗತ್ಯವಿಲ್ಲ. ಹತ್ತು-ಹದಿನೈದು ಹೆಣಗಳನ್ನು ಒಟ್ಟಿಗೆ ಹಾಕಿ ಗುಂಡಿ ಅದುಮಿಬಿಟ್ಟರೆ ಆಯಿತು ಕ್ಷಣದಲ್ಲಿ ಭಸ್ಮ! ಇನ್ನೇನು ಬರೆಯಲಿ ಪಂತೂ, ನನ್ನ ಕುಮಾರ ''ಹುಟ್ಟು ಸಾವು ಎಲ್ಲ ಪ್ರಕೃತಿ ಅಷ್ಟೆ! ನಿರ್ಜೀವ ದೇಹಕ್ಕೆ ಇಲ್ಲದ ಸಂಸ್ಕಾರವೇಕೆ? ಕಾಲ ವ್ಯರ್ಥ ಅಷ್ಟೆ'' ಅನ್ನುವುದೇ?!

ಗೂಂಡೂಪಂತ, ಈ ವಿಚಾರದ ಬಗ್ಗೆ ನಾವು ಏನೂ ಹೇಳುವುದು ಬೇಡ ಬಿಡು. ಅವರುಗಳಿಗೆ ರೌರವ ನರಕ ಇದ್ದೇ ಇದೆ. ಕೊಳ್ಳೇಗಾಲದಲ್ಲಿ ಏನಿಲ್ಲದಿದ್ದರೂ ಕೊನೆಗಾಲದಲ್ಲಿ ಕಟ್ಟಿಗೆಗೆ ಬರಗಾಲವಿಲ್ಲ. ಕಾವೇರಿ ನದಿ ಇದ್ದೇ ಇದೆ. ಈ ಪತ್ರ ಕಂಡ ಕೂಡಲೆ ಅಗ್ರಹಾರದ ನನ್ನ ಮನೆಯ ದುರಸ್ತಿಗೆ ಏರ್ಪಾಡು ಮಾಡು. ನಾನು ಈ ನವಮಿ ಕಳೆದು ಇಂದ್ರಪ್ರಸ್ಥವನ್ನು ಬಿಡುವವನೇ. ವಿದ್ಯುತ್ ಗೋರಿಯನ್ನು ನೆನೆದಂತೆಲ್ಲಾ ಎಲ್ಲಿ ಪ್ರಾಣ ಹೋಗಿಬಿಡುವುದೋ ಎಂದು ಮನಸ್ಸು ಹುಯ್ದಾಡುತ್ತಿದೆ.

ಇಂತಿ

**ಮಿಕ್ಕದ್ದೆಲ್ಲ ಮೊಖ್ತಾ**

**ಜಗಲಿ ಭೀಮಸೇನ.**

■

# ಜ್ಯೋತಿಷ ಶಾಸ್ತ್ರ ಮತ್ತು ನಾನು

● ನಂದಿನಿ ಕಾಪಡಿ

ಚಿಕ್ಕ ವಯಸ್ಸಿನಿಂದ ದೊಡ್ಡವರು ಜಾತಕದ ಬಗ್ಗೆ ಮಾತನಾಡುವುದು ಕೇಳಿ ನನಗೂ ಕುತೂಹಲ. ಶಾಲೆಯಲ್ಲಿ ವಿಜ್ಞಾನ ಕಲಿಸುವ ಟೀಚರ್ ಜ್ಯೋತಿಷ ಶಾಸ್ತ್ರ ಬರೀ ನಂಬಿಕೆ ಮಾತ್ರ ಅದಕ್ಕೆ ಯಾವುದೇ ಪುರಾವೆಯಿಲ್ಲ ಎಂದು ಹೇಳಿ ಹೇಳಿ ಆಗಿನಿಂದ ಒಂದು ತರಹ ಅರ್ಧ ನಂಬಿಕೆ. ಅದೇ ಅರ್ಧ ನಂಬಿಕೆ ಈಗಲೂ ನನ್ನನ್ನು ತುಂಬಾ ಸತಾಯಿಸುತ್ತದೆ. ಒಂದು ಕಡೆ ತಾಯಿ ಹೇಳುವ ಗ್ರಹಣ ಪರಿಣಾಮ ಇರಲಿ ಬಿಡಿ....

ಆಗ ನಾನು ಭಾರತ ಸರಕಾರದಲ್ಲಿ ಮಧ್ಯಮ ಸ್ತರದ ಅಧಿಕಾರಿ. ನನ್ನ ಹಿರಿಯ ಸಹೋದ್ಯೋಗಿಗಳು ಬೆಳಗಿನ ಚಹಾ ದ ಮೀಟಿಂಗಿಗೆ ಕರೆದರು. ಖಾನ್ ಸಾಹೇಬರು ತಾವು ಅಂದೇ ಓದಿದ್ದ ಉರ್ದು ಶೇರ್ ನಮಗೆ ಹೇಳಿ ಎಲ್ಲರೂ ತಲೆತೂಗಿ ಚಹಾ ಕುಡಿಯುತ್ತ ''ಇವತ್ತು ಯಾಕೋ ನೀವು ಚಹಾದಲ್ಲಿ ಮನಸ್ಸಿಟ್ಟಿಲ್ಲ. ಸಾಹೇಬರ ಹತ್ತಿರ ಹೋಗಿ ಬಂದಿರಾ ಎಂದು ಬಾಣ ಬಿಟ್ಟರು. ನಮ್ಮ ಸತ್ಯಪಾಲ್‌ಸಿಂಗ್ ಸಾಹೇಬರು ಪಿತ್ತ ಪ್ರವೃತ್ತಿಯವರು. ಬೇಗ ಸಿಟ್ಟಾಗುತ್ತಿದ್ದರು. ಅದರಲ್ಲೂ ಮಹಿಳಾ ಅಧಿಕಾರಿಗಳೆಂದರೆ ಆಗದವರು. ''ಇಲ್ಲ ಸರ್. ಹೆಡ್ ಆಫೀಸ್ ಕೇಳಿದ್ದ ಮಾಹಿತಿಯನ್ನು ಇಂದು ಕಳಿಸಬೇಕು. ಹೀಗಾಗಿ ಬೇಗ ಹೋಗಬೇಕು ಎನ್ನುತ್ತಾ ಎದ್ದೆ. ಅಲ್ಲೇ ಇದ್ದ ಶಿವರಾಮಕೃಷ್ಣನ್ ಅವರು ನೋಡಿ ಇಂದಿನ ದಿನ ಅಷ್ಟೊಂದು ಗ್ರಹಗತಿ ಸರಿಯಾಗಿಲ್ಲ. ಗುರು ಮೇಷ ರಾಶಿಯಿಂದ ವೃಷಭಕ್ಕೆ ಹೋಗುತ್ತಿದ್ದಾನೆ. ಇತ್ತ ಕೇತು ಧನುವಿನಿಂದ ಪ್ರಯಾಣ ಮಾಡುತ್ತಿದ್ದಾನೆ. ಉತ್ತರ ದಿಕ್ಕು ಅಂದರೆ ದೆಹಲಿಗೆ ಕಳಿಸಲು ಅಡೆ ತಡೆ ಜಾಸ್ತಿಯಿದೆ. ಸ್ವಲ್ಪ ನಿಧಾನಿಸಿ ಮುಂದಿನ ವಾರ ಕಳಿಸಿ ಎಂದು ಅಡ್ಡ ಮಾತಾಡಿದರು. ''ಸರ್. ಈಗಾಗಲೇ ದೊಡ್ಡ ಸಾಹೇಬರು ನನ್ನನ್ನು ಜಾಲಾಡಿ ಕಳಿಸಿದ್ದಾರೆ. ನನಗೆ ನಿಮ್ಮ ತರಹ ಮೂಢ ನಂಬಿಕೆಯಿಲ್ಲ'' ಎನ್ನುತ್ತಾ ನನ್ನ ಕೋಣೆಯ ಕಡೆ ನಡೆದೆ. ಆಗೆಲ್ಲ ಪೋಸ್ಟಿನಲ್ಲೇ ಕಳಿಸಬೇಕು. ಸ್ಪೀಡ್ ಪೋಸ್ಟ್ ಕೂಡ ಇರಲಿಲ್ಲ. ಕಳಿಸಿ ಸಾಹೇಬರ ಹತ್ತಿರ ಸುದ್ದಿ ತಲುಪಿಸಿದ್ದಾಯಿತು. ಮೊದಲಿಗೆ ಪೋಸ್ಟಲ್ ಡಿಪಾರ್ಟ್ಮೆಂಟಿನವರು ತಡ ಮಾಡಿದರು. ನಂತರ ಎಷ್ಟೊಂದು ತಡೆಗಳು! ತಾತ್ಪರ್ಯ ಅತ್ತ ಇತ್ತ ಸುತ್ತಾಡುತ್ತ ''ಇನ್ನೊಮ್ಮೆ ತಪಾಸಣೆ ಮಾಡಿ ಮತ್ತೆ ಕಳಿಸುವುದು'' ಎಂಬ ರಿಮಾರ್ಕಿನೊಂದಿಗೆ ವಾಪಸು ಬಂದಿತು. ಶಿವರಾಮಕೃಷ್ಣನ್ ಚಹಾ ಕುಡಿಯುತ್ತಾ ''ನೋಡಿದಿರಾ ಗ್ರಹಗಳ ಚಮತ್ಕಾರ'' ಎಂದು ಕೊಂಕಾಗಿ ಹೇಳಿದಾಗ ''ಸರ್, ನೀವೇನೋ ನನ್ನ ಕುಂಡಲಿ ಜಾಲಾಡಿದ್ದಿರಾ ಆದರೆ ಫೈಲಿನ ಕುಂಡಲಿ ಹೇಗೆ ನೋಡುತ್ತೀರಾ ಎಂದೆ. ''ತುಂಬಾ ಸುಲಭ. ಎಲ್ಲಿಂದ ಮಾಹಿತಿ ತಯಾರಾಗಿದೆ ಯಾರು ಅದನ್ನು ಮೊದಲಿಗೆ ಹುಡುಕಿದರು, ಯಾರು ಪರಿಶೀಲಿಸಿದರು ಮತ್ತು ಯಾರು ಅಪ್ರೂವಲ್ ಕೊಟ್ಟರು ಮತ್ತು ಎಲ್ಲಿ ಹೋಗುವುದಿದೆ ಇವೆಲ್ಲ ಮಾಹಿತಿಯಿಂದ ಕುಂಡಲಿ ತಯಾರಿಸಬಹುದು. ಖಂಡಿತ ಈ ವರ್ಷದ ರಿಪೋರ್ಟಿನಲ್ಲಿ ಬರುವುದಿಲ್ಲ ಎಂದು ಖಡಾ ಖಂಡಿತವಾಗಿ ಹೇಳಿದರು. ನನಗೂ ಪಿತ್ತ ನೆತ್ತಿಗೇರಿ ''ಸರ್, ನಾನೂ ನೋಡಿಬಿಡುತ್ತೇನೆ ಈ ವರ್ಷದ ರಿಪೋರ್ಟಿನಲ್ಲಿ ಬಂದರೆ ನೀವು ನಮ್ಮೆಲ್ಲರಿಗೂ ಲಂಚ್ ಕೊಡಿಸಬೇಕು. ಕ್ಯಾಂಟೀನಿನ ಲಂಚ್ ಅಲ್ಲ ಕಾಪರ್ ಚಿಮ್ನಿ

ರೆಸ್ಟೋರೆಂಟಿನದು ಎಂದು ಸವಾಲು ಹಾಕಿದೆ. ಆ ಮಾಹಿತಿ ಅದೇ ವರ್ಷದ ರಿಪೋರ್ಟಿನಲ್ಲಿ ಬಂದಿತು ಆದರೆ ಶಿವರಾಮಕೃಷ್ಣನ್ ಸಾಹೇಬರು ಅಷ್ಟರಲ್ಲಿ ವರ್ಗವಾಗಿ ಹೋಗಿದ್ದರು.!''

ತಂಬಿಗೆ ತಮ್ಮ ವರ್ಗಾವಣೆಯ ಬಗ್ಗೆ ಗ್ರಹಗಳು ತಿಳಿಸಲಿಲ್ಲವಲ್ಲ ಎನ್ನುತ್ತಾ ಖಾನ್ ಸಾಹೇಬರು ನಗಾಡಿದರು. ಸ್ವಲ್ಪೇ ದಿನಗಳಲ್ಲಿ ಭವಾನಿ ಶಂಕರ್ ಶರ್ಮ ಶಿವರಾಮಕೃಷ್ಣನ್ ಅವರ ಜಾಗಕ್ಕೆ ದೆಹಲಿಯಿಂದ ವರ್ಗಾವಣೆ ಆಗಿ ಬಂದರು. ಹತ್ತೂ ಬೆರಳುಗಳಲ್ಲಿ ಹತ್ತು ತರಹ ರತ್ನಗಳ ಉಂಗುರಗಳು. ಹಣೆಯಲ್ಲಿ ದೊಡ್ಡ ತಿಲಕ. ಕೊರಳಿನಲ್ಲಿ ರುದ್ರಾಕ್ಷಿ ಹಾರ. ಕೈನಲ್ಲಿ ಕಟ್ಟಿದ್ದ ಕೆಂಪು ಹಳದಿ ದಾರಗಳು. ತಮಾಷೆಯೆಂದರೆ ಇವರು ಕೂಡ ಬಹಳ ದೊಡ್ಡ ಜ್ಯೋತಿಷಿ. ತಲಾಂತರಗಳಿಂದ ಜ್ಯೋತಿಷ ಶಾಸ್ತ್ರ ಇವರ ಕುಟುಂಬಕ್ಕೆ ಬಂದಿತ್ತು. ಕೆಲಸದಲ್ಲೂ ತುಂಬಾ ನುರಿತವರು. ಈಗ ನಮ್ಮ ಅಧಿಕಾರಿಗಳ ಚಹಾ ಸಮಯ ಯಾರಿಗೆ ವರ್ಗ ಮಾಡುವರು, ಯಾರಿಗೆ ಫಾರಿನ್ ಪ್ರವಾಸ ಮತ್ತು ಆಫೀಸಿನಲ್ಲಿ ನಡೆಯುತ್ತಿದ್ದ ಪ್ರಣಯ ನಾಟಕಗಳಲ್ಲಿ ಯಾರಿಗೆ ಯಶಸ್ಸು ಎಲ್ಲವನ್ನೂ ಶರ್ಮಾಜಿ ಸುಲಭವಾಗಿ ಹೇಳಿಬಿಡುತ್ತಿದ್ದರು. ಆಫೀಸಿನ ನಂತರ ಹಿಂಡು ಹಿಂಡಾಗಿ ಜನ ತಮ್ಮ ಜಾತಕ ಪತ್ರಿಕೆಗಳನ್ನು ಶರ್ಮಾಜಿಯವರಿಗೆ ಕೊಡುವರು. ನನ್ನ ಅರೆ ನಂಬಿಕೆ ಬಗ್ಗೆ ಕೇಳಿ ವರಾಹ ಮಿಹಿರನ ಕಥೆ ಹೇಳಿ ಮನ ಬದಲಿಸುವ ಪ್ರಯತ್ನ ಮಾಡುವರು.

ಒಂದು ದಿನ ನನಗೆ ಮುಖ್ಯಾಲಯದಿಂದ ತುರ್ತಾಗಿ ಕರೆ ಬಂದು, ಒಂದು ಪತ್ರವನ್ನು ನಮ್ಮ ದೊಡ್ಡ ಸಾಹೇಬರು ನನ್ನ ಹೆಸರಿಗೆ ಕಳಿಸುವರು, ಅದನ್ನು ಗುಪ್ತವಾಗಿ ಶರ್ಮಾಜಿಗೆ ಕೊಡಬೇಕು ಎಂಬ ಆದೇಶ ಬಂದಿತು. ನನ್ನ ವೈಯಕ್ತಿಕ ವಿಳಾಸಕ್ಕೆ ಬಂದ ಪತ್ರವನ್ನು ಶರ್ಮಾಜಿಗೆ ಕೊಟ್ಟೆ. ಅವರು ನಗುತ್ತ ಸ್ವೀಕರಿಸಿ ಸಾಹೇಬರಿಗೆ ವಾಪಸು ಹೇಳುವ ವಿಷಯವನ್ನು ಸಹಾ ನನ್ನ ಮೂಲಕ ಕಳಿಸಿದರು. ಆಮೇಲೆ ಗೊತ್ತಾದದ್ದು ಇಷ್ಟು, ದೊಡ್ಡ ಸಾಹೇಬರ ಮಗಳು ವಿದೇಶಿಯ ಹುಡುಗನನ್ನು ಮದುವೆಯಾಗುವಳು. ಕಷ್ಟ ಪಟ್ಟು, ಆ ಹುಡುಗನ ಹುಟ್ಟಿದ ಸಮಯ ಮತ್ತು ತಾರೀಖನ್ನು ಹುಡುಕಿದ್ದಾರೆ. ಜಾತಕ ಹೊಂದುವುದೇ ಎಂದು ನೋಡುವುದು. ''ಶರ್ಮಾಜಿ, ಹೊಂದುವುದು ಎಂದು ಹೇಳಿಬಿಡಿ. ಇಲ್ಲವೆಂದರೂ ಸಾಹೇಬರ ಮಗಳು ಆ ಹುಡುಗನ್ನು ವರಿಸುವುದು ಖಂಡಿತ. ನೀವು ಯಾಕೆ ನಿಷ್ಠೂರ ಕಟ್ಟಿಕೊಳ್ಳುವಿರಿ'' ಎಂದು ನನ್ನ ಸಲಹೆ. ''ಮೇಡಂ ನಾವು ಕುಲೀನ ಜ್ಯೋತಿಷಿಗಳು ಹಾಗೆಲ್ಲಾ ಸುಳ್ಳು ಹೇಳಿದರೆ ನಮ್ಮ ವಿದ್ಯೆ ನಮ್ಮನ್ನು ಬಿಟ್ಟುಬಿಡುವುದು. ಸದ್ಯಕ್ಕೆ ನನ್ನ ಗ್ರಹಗಳು ನನಗೆ ಸಹಾಯ ಮಾಡುತ್ತಿವೆ. ಏನಿದ್ದರೂ ಹೇಳಿಬಿಡುತ್ತೇನೆ'' ಎಂದರು. ಮಾರನೇ ದಿನ ನನ್ನ ಕೈಗೆ ಪತ್ರ ತಂದುಕೊಟ್ಟರು. 36ಕ್ಕೆ 32 ಗುಣಗಳು ಕೂಡುತ್ತವೆ ಮದುವೆಯಾಗಲು ಅಡ್ಡಿಯಿಲ್ಲ ಎಂಬ ಸಲಹೆ.

ಪಾಪ, ಶರ್ಮಾಜಿಯವರ ಭವಿಷ್ಯ ಸುಳ್ಳಾಯಿತು. ಮದುವೆಯಾದ 6 ತಿಂಗಳಲ್ಲಿ ವಿಚ್ಛೇದನವಾಯಿತು. ದೊಡ್ಡ ಸಾಹೇಬರ ಪತ್ನಿಗೆ ಡಿಪ್ರೆಶನ್! ಶರ್ಮಾಜಿಯವರಿಗೆ ಮುಂಬೈನಿಂದ ಉತ್ತರ ಪೂರ್ವದಲ್ಲಿದ್ದ ಶಿಲ್ಲಾಂಗ್ ಊರಿಗೆ ವರ್ಗವಾಯಿತು! ಎಲ್ಲ ಗ್ರಹಗಳ ಮಾಯೆ ಎನ್ನುತ್ತಾ ಶರ್ಮಾಜಿ ಹೊರಟರು.

ಪ್ರತಿದಿನ ಪತ್ರಿಕೆಯಲ್ಲಿ ಬರುವ ದಿನಭವಿಷ್ಯ ಓದುವುದು ನನ್ನ ಹವ್ಯಾಸ. ಸ್ವಲ್ಪ ಕೊಂಕು ಬುದ್ಧಿಯೂ ಇರುವುದರಿಂದ ಪ್ರತಿ ರಾಶಿಯ ಭವಿಷ್ಯ ಇನ್ನೊಂದು

ರಾಶಿಯ ಕೆಳಗೆ ಮಾರನೇ ದಿನ ಛಾಪಿಸುವುದು. ಯಾವಾಗಲೊಮ್ಮೆ ಅಲ್ಲೊಂದು ಇಲ್ಲೊಂದು ಪದ ಬದಲಾಯಿಸುವುದು ಎಷ್ಟು ಸುಲಭವೆಂದು ಗೊತ್ತಾಯಿತು. ಕೆಲವರಿಗೆ ಶುಭ ಕೆಲವರಿಗೆ ಅಶುಭ ಕೆಲವರಿಗೆ ಅದೃಷ್ಟ... ಕೆಲವರಿಗೆ ಗಂಡಾಂತರ! ಆ ''ಕೆಲವರು'' ಯಾರಿರಬಹುದು?

ಈಗ ನನ್ನ ಗ್ರಹಗತಿ ಬದಲಾಯಿಸಿತು. ವರ್ಗವಾಯಿತು. 90ನೇ ದಶಕದ ಮೊದಲ ಭಾಗ. ನನಗೆ ಕೇಂದ್ರ ಸರ್ಕಾರದ ಕಾರ್ಯಾಲಯದ ಮುಖ್ಯಸ್ಥೆಯಾಗಿ ಚೆನ್ನೈಗೆ ಕಳಿಸಿದಾಗ ಮುಂಬೈನ ಸಹೋದ್ಯೋಗಿಗಳು ಬೀಳ್ಕೊಡುತ್ತ ಬೆಸ್ಟ್ ಲಕ್. ಆ ಕಾರ್ಯಾಲಯ ಸಂಭಾಳಿಸುವುದು ಸುಲಭವಲ್ಲ ಎಂದು ಹೆದರಿಸಿಯೂ ಆಗಿತ್ತು. ಕುಟುಂಬದಲ್ಲಿ ಏರುಪೇರು ಮಕ್ಕಳಿಗೆ ಶಾಲೆ ಮತ್ತು ಮಿತ್ರರ ಬದಲಾವಣೆ ಈಗ ನಾನು ಕಾರ್ಯಾಲಯದ ಮುಖ್ಯಸ್ಥೆ. ಮೊದಲಿನ ಹಾಗೆ ಒಂದೇ ಸ್ತರದ ಸಹೋದ್ಯೋಗಿಗಳು ಚಹಾ ಹೀರುತ್ತಾ ಹರಟೆ ಹೊಡೆಯುವ ಸಮಯ ಮೀರಿ ಹೋಗಿತ್ತು. ಎಲ್ಲರೂ ಹೆದರುತ್ತ ಮಾತನಾಡುವರು. ನನ್ನ ಕಾರ್ಯದರ್ಶಿ ವೆಂಕಟರಾಮನ್‌ರನ್ನು ಎಲ್ಲರೂ ಟ್ರಿಪಲ್X ಎಂದು ಕರೆಯುವರು. ಆಫೀಸಿನಲ್ಲಿ ಈಗಾಗಲೇ 51 ವೆಂಕಟರಾಮನ್ ಎಂಬ ನಾಮಧೇಯದವರಿದ್ದರು. ಹೀಗಾಗಿ ಇವರ ಹೆಸರಿನ ಪಕ್ಕ ರೋಮನ್ ಲಿಪಿಯಲ್ಲಿ 30 ಅಂದರೆ ಟ್ರಿಪಲ್X ಎಂದು ಕರೆಯುವರು. ಹಣೆಯ ತುಂಬಾ ನಾಮ ಕೊರಳಲ್ಲಿ ತುಳಸಿ ಹಾರದ ಈ ಮಹಾಶಯರನ್ನು ಎಲ್ಲರೂ ಕರೆಯುವ ಹೆಸರು ಕುಡಿಯುವವರಲ್ಲಿ ಅಚ್ಚು ಮೆಚ್ಚಾದ ಮಾದಕ ಪೇಯದ ಹೆಸರು. ಸರಿ ಬಿಡಿ. ಈ ನಮ್ಮ ಮಹಾಶಯ ಮುಖಸಾಮುದ್ರಿಕಾ ಶಾಸ್ತ್ರ ಕಲಿತವರು. ನಾನು ಚಾರ್ಜ್ ತೆಗೆದುಕೊಂಡ ದಿನವೇ ನನ್ನ ಮುಖ ನೋಡಿ ನಾನು ಹುಟ್ಟಿದ ವಾರ ನನ್ನ ಮುಖ್ಯ ಗುಣಗಳು ಎಲ್ಲವನ್ನೂ ಬಿತ್ತರಿಸಿ ನಮ್ಮ ಮೇಡಂ ಸ್ವಲ್ಪ ಅನ್‌ಪ್ರೆಡಿಕ್ಟೇಬಲ್, ಹುಷಾರಾಗಿರಬೇಕು ಎಂದೂ ಬೇರೆಯವರ ಮುಂದೆ ಹೇಳಿಯಾಗಿತ್ತು.

ಮನೆ ಸಿಕ್ಕಿರಲಿಲ್ಲ. ಮಧ್ಯಾಹ್ನ ಪಕ್ಕದ ಹೋಟೆಲಿನಿಂದ ಮೊಸರನ್ನ ತರಿಸಿ ತಿಂದಾಗ ನಮ್ಮ ಮಹಾಶಯ ಪೆಚ್ಚಾಗಿ ನಿಮ್ಮನ್ನು ಉತ್ತರ ಭಾರತದವರು ಎಂದುಕೊಂಡಿದ್ದೆ. ನೀವು ದಕ್ಷಿಣ ಭಾರತದವರು ಎಂದು ಕಾಣಿಸುತ್ತದೆ. ನೆನ್ನೆ ಇಡ್ಲಿ ಸಾಂಬಾರ್ ತಿಂದಿದ್ದೀರಾ. ಇವತ್ತು ಮೊಸರನ್ನ ಎಂದು ನನ್ನ ಗುಣ ಗಾನ ಮಾಡಿದ. ''ಸ್ವಾಮಿ, ನೀವು ದೊಡ್ಡ ಮುಖ ಸಾಮುದ್ರಿಕ ಶಾಸ್ತ್ರಿಗಳು. ಮುಖ ಕೂಡ ಒಮ್ಮೊಮ್ಮೆ ಮೋಸ ಮಾಡುತ್ತದೆ ತಾನೇ? ನನ್ನ ಹಳೆಯ ಆಫೀಸಿಗೆ ಫೋನ್ ಮಾಡಿ ಕೇಳಿದ್ದರೆ ನನ್ನ ಜನ್ಮ ಕುಂಡಲಿಯನ್ನೇ ಕೊಡುತ್ತಿದ್ದರಲ್ಲ'' ಎಂದು ನಗುತ್ತಲೇ ಹೇಳಿದೆ. ಮಹಾಶಯ, ನನಗೆ ಗೊತ್ತಿಲ್ಲದೇ ಮಂಗಳವಾರ ಕೆಲವು ಫೈಲ್‌ಗಳನ್ನೂ ನನ್ನಿಂದ ದೂರವಿಟ್ಟು ಗುರುವಾರ ಕಳಿಸುವನು. ಗುರುವಾರ ನಾನು ಅಪ್ರೂವಲ್ ಕೊಡುತ್ತೇನೆ ಎಂಬ ನಂಬಿಕೆ. ನನ್ನ ಪ್ರೊಬೇಷನರ್ ಆಗಿ ಬಂದಿದ್ದ ಸಿಮ್ರನ್ ಅದನ್ನು ನಂಗೆ ಹೇಳಿದಾಗ, ಬೇಕೆಂದು, ಸತಾಯಿಸಲು ಗುರುವಾರ ಅಪ್ರೂವಲ್ ಕೊಡುತ್ತಿರಲಿಲ್ಲ. ಎರಡು ತಿಂಗಳ ನಂತರ ನಮ್ಮ ಇಬ್ಬರ ಮಧ್ಯೆ ಇದ್ದ ಮಂಜು ಕರಗಿ ನಮ್ಮ ಕೆಲಸ ಸುಗಮವಾಯಿತು. ಗ್ರಹಗಳ ಕಾಟ. ನೂರಾರು ಸಮಸ್ಯೆಗಳು ಬಂದರೂ ಅತ್ಯುತ್ತಮ ಕೆಲಸಕ್ಕಾಗಿ ನಮ್ಮ ಆಫೀಸಿಗೆ ಸರ್ಟಿಫಿಕೇಟ್ ಬಂದಿತು.

ಒಮ್ಮೆ ಕೆಲಸದ ಮೇಲೆ ದೆಹಲಿಗೆ ಹೋಗಿದ್ದೆ. ಏರ್ಪೋರ್ಟಿನಲ್ಲಿ ನನ್ನ ಪಕ್ಕ ಕುಳಿತಿದ್ದ ಮಹಾಶಯರೊಬ್ಬರು ಇದ್ದಕ್ಕಿದ್ದ ಹಾಗೆ ಜ್ಯೋತಿಷ ಶಾಸ್ತ್ರದ ಬಗ್ಗೆ ಸಂಭಾಷಣೆ

ನಡೆಸುತ್ತ ''ನಿಮಗೆ ಇದು ಶಾಸ್ತ್ರವಲ್ಲ ಎಂಬ ಭಾವನೆ ಇದೆ. ಆದರೆ ಅದು ದೂರವಾಗುವುದು ನಿಶ್ಚಿತ ಅಂದರು. ಕೋಪ ಬಂದರೂ ಅವರ ಅತಿ ಹಿರಿಯ ವಯಸ್ಸನ್ನು ನೋಡಿ ''ನನ್ನ ನಿಮ್ಮ ಪರಿಚಯವೇ ಇಲ್ಲ. ಆದರೂ ನನ್ನ ಬಗ್ಗೆ ಭವಿಷ್ಯ ಹೇಳುತ್ತಿದ್ದೀರಾ ಎಂದು ಆಶ್ಚರ್ಯ'' ಎನ್ನುತ್ತಾ ವಿನಯದಿಂದಲೇ ಕೇಳಿದೆ. ''ನೋಡಿ, ಈಗ ನೀವು ಹೋಗುವ ಊರಿನಿಂದ ಇನ್ನು ಹದಿನೈದೇ ದಿನಗಳಲ್ಲಿ ಸ್ಥಾನ ಪಲ್ಲಟವಾಗಿ ನೀವು ಹೋಗುವ ಮುಂದಿನ ಊರು ನಿಮಗೆ ಮಿಶ್ರ ಫಲ ಕೊಡುವುದು'' ಎಂದು ಬಿಟ್ಟರು. ಸುಮ್ಮನೆ ಪುಸ್ತಕ ಓದುತ್ತಿದ್ದ ನನ್ನನ್ನು ಮಾತಿಗೆಳಿಸಿ ಅಪಶಕುನ ನುಡಿದರೆಂಬ ಕೋಪದಿಂದ ಎದ್ದು ಬೇರೆ ಕಡೆ ಕುಳಿತೆ. ಆಶ್ಚರ್ಯವೆಂದರೆ ತಲುಪಿದ ತಕ್ಷಣವೇ ನನಗೆ ಬೇರೆ ಊರಿಗೆ ವರ್ಗ ಮಾಡಿ. ಅಲ್ಲಿ ಹೊಸದಾಗಿ ನಿರ್ಮಿಸಿರುವ ಆಫೀಸಿನ ಚಾರ್ಜ್ ಅನ್ನು ಈ ವಾರವೇ ತೆಗೆದುಕೊಳ್ಳಬೇಕೆಂಬ ಆದೇಶವನ್ನು ಕೈಯಲ್ಲೇ ಕೊಟ್ಟರು. ನಮ್ಮ ಟ್ರಿಪಲ್X ಮಾತ್ರ ತುಂಬಾ ಪೆಚ್ಚಾದರು. ''ನಾನು ಮತ್ತು ನನ್ನ ಗುರುಗಳು ನಿಮ್ಮ ವರ್ಗ ಕ್ಯಾನ್ಸಲ್ ಮಾಡಿಸುತ್ತೇವೆ ನೋಡುತ್ತಿರಿ'' ಎಂದರು. ಎರಡು ದಿನ ಆಫೀಸಿಗೆ ಬರಲಿಲ್ಲ, ಅವರ ಗುರುಗಳೊಂದಿಗೆ ಚರ್ಚಿಸಿ ಶನಿವಾರ 11 ಹಸುಗಳಿಗೆ ಬಾಳೆಹಣ್ಣು ತಿನ್ನಿಸಿ ವೆಂಕಟರಮಣ ಸ್ವಾಮಿ ಗುಡಿಯಲ್ಲಿ 21 ದೀಪಗಳು ಹಚ್ಚಿಸಿ 1000 ತುಳಸಿ ಜಪ ಮಾಡಿಸಿದರು. ನನ್ನ ಹತ್ತಿರ ಕೇವಲ 500 ರೂಪಾಯಿಗಳನ್ನು ತೆಗೆದುಕೊಂಡು ಪ್ರತಿ ರೂಪಾಯಿಯ ಖರ್ಚಿನ ಲೆಕ್ಕ ಕೊಟ್ಟರು. ಆಶ್ಚರ್ಯವೆಂದರೆ ಸೋಮವಾರ ನಾನು ಚಾರ್ಜ್ ಹ್ಯಾಂಡ್ ಓವರ್ ಮಾಡಬೇಕಾಗಿತ್ತು. ಅಂದು ಬೆಳಗ್ಗೆಯೇ ಮುಖ್ಯ ಆಫೀಸಿನ ಆದೇಶ. ನನ್ನ ವರ್ಗವನ್ನು ಕ್ಯಾನ್ಸಲ್ ಮಾಡಿದ್ದರು. ಟ್ರಿಪಲ್X ನಗುತ್ತ ಒಳಗೆ ಬಂದರು. ನೋಡಿ ಚಮತ್ಕಾರ!

ಸದ್ಯ ಬಂದಿದ್ದ ಗಂಡಾತರದಿಂದ ಪಾರಾದೆ. ಆದರೆ ಟ್ರಿಪಲ್Xನ ಹೊಸ ನಾಟಕ ಪ್ರಾರಂಭವಾಯಿತು. ಮೇಡಂ ನಿಮ್ಮ ಸಮಯ ಸರಿಯಾಗಿಲ್ಲ ಇವತ್ತು ಯಾವುದೇ ಫೈಲಿನ ಮೇಲೆ ನಿಮ್ಮ ಅಪ್ರೂವಲ್ ಕೊಡುವುದೇ ಬೇಡ. ಇಷ್ಟರಿಂದ ಇಷ್ಟರವರೆಗೆ ರಾಹುಕಾಲ. ಹೀಗೆ ಪ್ರತಿದಿನ ಈ ಭೂಪನ ಸಲಹೆಗಳು. ಬೇಕೆಂದು ಅವನ ಸಲಹೆ ವಿರುದ್ಧ ನಡೆದುಕೊಂಡಾಗ ಏನಾದರೂ ಕಾರಣದಿಂದ ಮುಖ್ಯಾಲಯ ವಾಪಸು ಕಳಿಸಿಬಿಡುತಿತ್ತು. ನನ್ನ ಹಿರಿಯ ಸಹೋದ್ಯೋಗಿಗಳೊಂದಿಗೆ ಮಾತು ಬಿಚ್ಚಿದಾಗ ಅವರು ಹೇಳಿದ್ದು ಹೀಗೆ. ನೋಡಿ, ಇಲ್ಲಿನ ಜನ ನಿಜವಾಗಿಯೂ ಜ್ಯೋತಿಷ ಶಾಸ್ತ್ರದ ಪಾರಂಗತರು. ಸುಮ್ಮನೆ ಅವರ ಹತ್ತಿರ ವಾದ ವಿವಾದ ಮಾಡಬೇಡಿ.

ಶಿವಸಮುದ್ರಂ ಶಿವತಾಂಡವನ್ ಎಂಬ ಇನ್ನೊಬ್ಬ ಅಧಿಕಾರಿ ನಾಡಿ ಶಾಸ್ತ್ರದ ಪಾರಂಗತ. ನಾನು ಅವರನ್ನು ದೂರವೇ ಇಟ್ಟಿದ್ದರೂ ಬೇರೆ ಬೇರೆ ಕಾರ್ಯಾಲಯಗಳ ಮುಖ್ಯಸ್ಥ ಸಹೋದ್ಯೋಗಿಗಳು ಅವರನ್ನು ಬೆಂಬಲಿಸಿ ಅವರಿಗೆ ಗೌರವ ಕೊಟ್ಟಾಗಿತ್ತು. ನಮ್ಮ ಮುಖ್ಯ ಕಾರ್ಯಾಲಯ ವಿವಿಧ ದೇಶಗಳಿಂದ ಬಂದಿರುವ ಅಧಿಕಾರಿಗಳಿಗೆ ತರಬೇತಿ ನೀಡಲು ನಮ್ಮ ಕಾರ್ಯಾಲಯಕ್ಕೆ ಕಳಿಸಿದ್ದರು. ಪೂರ್ವ ಯೂರೋಪ್‌ನ ಒಂದು ದೇಶದ ಮಿಖಾಯಿಲ್ ಎಂಬ ಹೆಸರಿನ ಅಧಿಕಾರಿ ನಮ್ಮ ಶಿವ ತಾಂಡವನ್ ಅವರ ಸಲಹೆಯ ಮೇರೆಗೆ ಚೆನ್ನೈನ ಅಗಸ್ತ್ಯನಾಡಿ ಕೇಳಲು ಸಿದ್ಧರಾದರು. ನನಗೆ ಸುಳುವೂ ಕೊಡದೆ ಅಂದು ಸಂಜೆಯೇ ನಾಡಿ ಓದಿಸಿಕೊಂಡುಬರಲು ಕರೆದು ಕೊಂಡುಹೋದರು. ನಾಡಿಯಲ್ಲಿ ಮಿಖಾಯಿಲ್ ಅವರ ಸರ್ವಸ್ವ ಹಳೆಯ ಜೀವನ ಸರಿಯಾಗಿ ಬಂದಿತಂತೆ. ''ಸ್ವಲ್ಪೇ ದಿನಗಳಲ್ಲಿ ನಿಮ್ಮ ಹೆಂಡತಿ ನಿಮ್ಮನ್ನು

ಬಿಟ್ಟು ಹೋಗುವಳು'' ಎಂದೂ ಹೇಳಿದರಂತೆ. ನಮ್ಮ ಅಧಿಕಾರಿ ತುಂಬಾ ಸಿಟ್ಟಾಗಿ ''ನಿಮ್ಮ ದೇಶದಲ್ಲಿ ಕುರುಡು ನಂಬಿಕೆ ಜಾಸ್ತಿ'' ಎನ್ನುತ್ತಾ ಬುಸುಗುಡುತ್ತ ಹೊರಗೆ ಹೋದನಂತೆ. ಚೆನ್ನೈನ ಹಳೆಯ ರಸ್ತೆಗಳಲ್ಲಿ ಓಡಾಡುತ್ತ ಯಾವುದೊ ಟ್ಯಾಕ್ಸಿ ಹಿಡಿದು ಹೋಗಬೇಕಾದ ಜಾಗದ ವಿಳಾಸ ತೋರಿಸಿದನಂತೆ. ವಿದೇಶಿಯನ್ನು ಮೋಸ ಮಾಡಲು ಟ್ಯಾಕ್ಸಿಯವನು ಅಲ್ಲಿ ಇಲ್ಲಿ ಸುತ್ತಾಡಿಸಿದನಂತೆ. ಅಧಿಕಾರಿ ಕಾಣಿಸಲಿಲ್ಲವೆಂದು ಗಾಬರಿಯಾದ ಶಿವತಾಂಡವಂ ಹೆದರಿ ನನಗೆ ಫೋನ್ ಮಾಡಿದರು. ಪೊಲೀಸಿನವರ ಸಹಾಯದಿಂದ ರಾತ್ರಿ ಆ ಟ್ಯಾಕ್ಸಿಯನ್ನು ಪತ್ತೆ ಮಾಡಿಸಿ ಅಸಾಮಿಯನ್ನು ಅವರ ಹೋಟೆಲಿನ ಕೋಣೆಗೆ ತಲಿಪಿಸುವ ಹೊತ್ತಿಗೆ ನನ್ನ ಜಂಘಾ ಬಲ ಉಡುಗಿ ಹೋಗಿತ್ತು. ಮಾರನೇ ದಿನ ಮಿಖಾಯಿಲ್ ನನ್ನ ಕೋಣೆಗೆ ಬಂದು ತಮಗೆ ತುರ್ತಾಗಿ ತಮ್ಮ ದೇಶಕ್ಕೆ ವಾಪಸು ಹೋಗಬೇಕೆಂದೂ ದೆಹಲಿಗೆ ಹೋಗಲು ಟಿಕೆಟ್ ಕೊಡಿಸಬೇಕೆಂದೂ ಗಲಾಟೆ ಮಾಡಿದ. ನಮ್ಮ ಮುಖ್ಯ ಆಫೀಸಿನ ಪರವಾನಗಿ ಬರಲಿಲ್ಲ. ಮೊದಲೇ ವಿದೇಶಿ ಅಧಿಕಾರಿಗಳ ವಿಷಯ. ವಿದೇಶ ಮಂತ್ರಾಲಯದಿಂದ ಎಂತಹ ಬೈಗುಳ ಬರುವುದೋ? ನನಗೆ ಈ ಕಾರಣದಿಂದ ಉತ್ತರ ಪೂರ್ವಕ್ಕೆ ವರ್ಗ ಮಾಡುವರೇ ಹೀಗೆ ಭಯದಿಂದ ಮೊದಲ ಬಾರಿಗೆ ಬಿಪಿ ಏರಿಬಿಟ್ಟಿತು. 4 ದಿನ ನಮ್ಮ ಶಿವತಾಂಡವಂ ಪತ್ತೆಯಿಲ್ಲ. ಅಧಿ ಕಾರಿಗಳೆಲ್ಲ ವಾಪಸು ಹೋದ ನಂತರ ಮತ್ತೆ ಆಫೀಸಿಗೆ ಬಂದರು.

ತಮಾಷೆಯೆಂದರೆ ನಮ್ಮ ಆಫೀಸಿನ ನಾಲ್ಕಾರು ಅಧಿಕಾರಿಗಳ ಮಕ್ಕಳು ಅಮೆರಿಕಾದ ನಾಸಾ ಸಂಸ್ಥೆಯಲ್ಲಿ ಮುಖ್ಯ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಅಂತಹ ಒಬ್ಬ ತಂದೆ ನಮ್ಮ ಆಫೀಸಿನ ಮುಖ್ಯ ಜ್ಯೋತಿಷ ಶಾಸ್ತ್ರದ ಸಲಹೆಗಾರ. ಮಕ್ಕಳ ಮದುವೆಯ ಮುಹೂರ್ತ, ಗೃಹ ಪ್ರವೇಶದ ಸಮಯ, ಪ್ರವಾಸಕ್ಕೆ ಪ್ರಶಸ್ತ ತಾರೀಖು ಎಲ್ಲವನ್ನೂ ಇವರೇ ಹೇಳಬೇಕು. ನಮ್ಮ ಆಫೀಸಿನ ಕಾರು ಹಳೆಯದಾಗಿ. ಎರಡು ವರ್ಷದ ನಂತರ ಹೆಡ್ ಆಫೀಸ್ ಹೊಸ ಕಾರು ತೆಗೆದುಕೊಳ್ಳಲು ಪರವಾನಗಿ ಮತ್ತು ಧನ ಮಂಜೂರು ಮಾಡಿತ್ತು. ಬಿಳಿ ಬಣ್ಣದ ಅಂಬಾಸೆಡರ್ ಗಾಡಿ ಬರಬೇಕಿತ್ತು. ಈ ಮನುಷ್ಯ ನಾಳೆಯ ತನಕ ಡೆಲಿವರಿ ತೆಗೆದುಕೊಳ್ಳುವುದು ಬೇಡ ಎಂದು ಹೇಳಿದ್ದರು. ಬಿಸಿ ರಕ್ತದ IIT ಗ್ರ್ಯಾಜುಯೆಟ್ ಅರಾವ ಮುದಂ ಆಗಷ್ಟೇ ಅಡ್ಮಿನಿಸ್ಟ್ರೇಷನ್ ನೋಡಿಕೊಳ್ಳಲು ನೇಮಕಗೊಂಡಿದ್ದ. ಈ ಹುಚ್ಚಾಟ ನನಗೆ ಸರಿಹೋಗುವುದಿಲ್ಲ ಇಂದೇ ಗಾಡಿ ಬರಬೇಕು ಎಂದು ಹಠ ಮಾಡಿ ಗಾಡಿಯನ್ನು ತರಿಸಿದ. ನಮ್ಮ ಟ್ರಿಪಲ್X ಈಗಾಗಲೇ ಚೆನ್ನೈನ ದೊಡ್ಡ ವಿಷ್ಣು ಮಂದಿರಗಳಿಂದ ಹೂವು, ಗಂಧ ಪ್ರಸಾದ ತರಿಸಿದ್ದರು. ಗಾಡಿಗೆ ಪೂಜೆ ಮಾಡಿ ಎಂದು ನಂಗೆ ಆಗ್ರಹ. ನೋಡಿ ಸ್ವಾಮಿ ಇದು ಆಫೀಸಿನ ಗಾಡಿ. ಸರ್ಕಾರಕ್ಕೆ ಯಾವುದೇ ಧಾರ್ಮಿಕ ಸಂಪ್ರದಾಯ ಅನುವಾಗುವುದಿಲ್ಲ. ನಾನು ಪೂಜೆ ಮಾಡುವುದಿಲ್ಲ ಎಂದೆ. ಅಷ್ಟರಲ್ಲಿ ಸ್ವಾಮಿನಾಥನ್ ಅಧಿಕಾರಿ ಶಿವನ ದೊಡ್ಡ ದೇವಸ್ಥಾನಂದಿಂದ ತಂದಿದ್ದ ವಿಭೂತಿ ಗಾಡಿಗೆ ಹಚ್ಚಲು ಬಂದರು. ಪರಿಸ್ಥಿತಿ ಬಿಕ್ಕಟ್ಟಾಗಿತು. ಅಷ್ಟರಲ್ಲಿ ನಮ್ಮ ಚಾಲಕ ಷರೀಫ್ ಗಾಡಿಯ ಬಾನೆಟ್ಟಿನ ಮೇಲೆ ಕಾಣಿಸಿದ ಕಪ್ಪು ಕಲೆ ತೋರಿಸಿ ನಗಾಡಿದ. ನಾನು ಸಿಟ್ಟಿನಿಂದ ನನ್ನ ಕೋಣೆಗೆ ಹೋದೆ. ಅರಾವಮುದಂ ಮತ್ತು ಸಿಮ್ರನ್ ನನ್ನ ಜೊತೆಗೆ ಬಂದು ನನ್ನ ಸಂಗಡ ಚಹಾ ಹೀರುತ್ತ ನನ್ನ ಕೋಪ ಇಳಿಸಿದರು. ಮಾರನೆಯ ದಿನ ನಮ್ಮ ಜ್ಯೋತಿಷಿ ಹೇಳಿದನಂತೆ. ದಿನ, ಮುಹೂರ್ತ ನೋಡದೆ ತಂದ ಗಾಡಿಯಲ್ಲಿ ನಮ್ಮ ಮೇಡಂ ಕುಳಿತುಕೊಳ್ಳುವುದು ಬೇಡ. ಒಂದು ವೇಳೆ ಆಕ್ಸಿಡೆಂಟ್ ಆಗಬಹುದು ಎಂದು. ಹಾಗೇನೂ ಆಗಲಿಲ್ಲ, ನಾಲ್ಕೂ ವರ್ಷಗಳು ಗಾಡಿ ಚೆನ್ನಾಗಿ ನಡೆಯಿತು.

ಆಫೀಸಿನಲ್ಲಿ ನಾನು ಹಳಬಳಾಗುತ್ತಾ ನಮ್ಮ ಭೂಪರು ನನ್ನ ವರ್ಗ ಯಾವಾಗ ಎಂದು ಗಣಿತ ಪ್ರಾರಂಭಿಸಿದರು. ಈ ಕಾರ್ಯಕ್ರಮ ನಡೆಯುತ್ತಿರುವಾಗ ಪ್ರಣಯ ಕೋಗಿಲೆ ಕೂಗಿತು. ನಮ್ಮ ಸಿಮ್ರನ್ ಮತ್ತು ಅರಾವಮುದಂ ನಡುವೆ ಪ್ರಣಯ ಗೀತೆ ಪ್ರಾರಂಭವಾಗಿತ್ತು. ಯಾವುದೇ ಆಫೀಸಿನಲ್ಲಿ ಅದರಲ್ಲೂ ಸರ್ಕಾರಿ ಆಫೀಸಿನಲ್ಲಿ ಪ್ರಣಯ ಮಾಡುತ್ತಲೇ ಸಹೋದ್ಯೋಗಿಗಳಿಗೆ ಸುಳುವು ಸಿಕ್ಕಿಬಿಡುತ್ತದೆ. ನನ್ನ ದಂತದ ಗೋಪುರದಲ್ಲಿ ಯಾವುದೇ ಸುದ್ದಿ ತಿಳಿಯುವುದು ನಿಧಾನ. ಒಂದು ಮಧ್ಯಾಹ್ನ ನನ್ನ P.A. ಕೃಷ್ಣವಲ್ಲಿ ಧ್ವನಿ ಕೆಳಗೆ ಮಾಡುತ್ತ ''ಉತ್ತರ ಭಾರತೀಯರಿಗೆ ದಕ್ಷಿಣ ಭಾರತೀಯರೊಂದಿಗೆ ಪ್ರಣಯ ಅಪರೂಪ. ಆದರೆ ನಮ್ಮ ಆಫೀಸಿನಲ್ಲಿ ಎರಡೂ ದಿಕ್ಕುಗಳು ಸೇರುತ್ತಿವೆ ಎಂದು ಒಗಟು ಮಾತಾಡಿದಳು. ಏನಮ್ಮಾ ವಿಷಯ ಎಂದು ವಿಚಾರಿಸಿದಾಗ ಸಿಮ್ರನ್ ಮತ್ತು ಆರಾವಮುದಂ ಇಬ್ಬರೂ ಒಟ್ಟಿಗೆ ಮಧ್ಯಾಹ್ನ ಊಟ ಮಾಡಲು ಶರವಣ ಭವನ್‌ಗೆ ಅರವಮುದಂ ನ ಮೋಟಾರ್ ಸೈಕಲ್‌ನಲ್ಲಿ ಹೋಗುತ್ತಾರೆ. ಆಫೀಸ್ ಬಿಟ್ಟ ನಂತರ ಇಬ್ಬರೂ ಒಟ್ಟಿಗೆ ಹೊರಗೆ ಹೋಗುತ್ತಾರೆ ಇತ್ಯಾದಿ ಇತ್ಯಾದಿ. ಪಾಪ ಹೋಗಲಿ ಬಿಡು ಎಂದೆ. ನೋಡಿ ಮೇಡಂ ನೀವೆಲ್ಲ ಸಿವಿಲ್ ಸರ್ವಿಸ್ ಅಧಿಕಾರಿಗಳು. ಏನು ಮಾಡಿದರೂ ಪರವಾಗಿಲ್ಲ. ಆದರೆ ನಮ್ಮ ಕಡೆ ತುಂಬಾ ಕಟ್ಟು ನಿಟ್ಟು ಇದೆಲ್ಲ ನಡೆಯುವುದಿಲ್ಲ ಎಂದು ಹೊರಗೆ ಹೋದಳು.

ಇದಾದ ಒಂದು ತಿಂಗಳಿನ ನಂತರ ಟ್ರಿಪಲ್X ಮತ್ತು ಅರವಮುದಂ ಆಫೀಸಿನ ನಂತರ ಯಾವುದೋ ಗೋಪ್ಯ ವಿಷಯದ ಬಗ್ಗೆ ಚರ್ಚಿಸುತ್ತಾರೆ ಎಂದು ನನ್ನ ಗೂಢಚಾರ ಅರ್ಥಾತ್ ನನ್ನ ಸಹೋದ್ಯೋಗಿ ಅಪ್ಪಣ್ಣಿ ಹೇಳಿದ. ಎರಡು ದಿನಗಳ ನಂತರ ಟ್ರಿಪಲ್X ನನ್ನ ಹತ್ತಿರ ಆಫೀಸಿನ ಕೆಲಸ ಚರ್ಚಿಸಿ ಮತ್ತೆ ಕುರ್ಚಿಯಲ್ಲಿ ಕುಳಿತರು. ಸರಿ ಆಸಾಮಿ ಏನೋ ಗೂಢ ಮಾತು ಹೇಳುತ್ತಾರೆ ಎಂದು ಗೊತ್ತಾಗಿ ಚಹಾ ತರಿಸಿದೆ. ಚಹಾ ಹೀರುತ್ತಾ ''ನೋಡಿ ಮೇಡಂ, ನಮ್ಮ ಅರವಮುದಂ ಸಾಹೇಬರು IIT ಓದಿರುವುದು ನಿಜ. ಸಿವಿಲ್ ಸರ್ವಿಸ್ ಪರೀಕ್ಷೆ ಪಾಸಾಗಿರುವುದೂ ನಿಜ. ಆದರೆ ಜ್ಯೋತಿಷ ಶಾಸ್ತ್ರ ಅಷ್ಟು ಸುಲಭವಲ್ಲ. ತಾವು ಖಂಡಿತವಾಗಿ ಜ್ಯೋತಿಷಶಾಸ್ತ್ರ ಕಲಿಯುವರೆನ್ನುತ್ತಾರೆ. ಇದೇನು ಹುಡುಗ ಮಾತು ಎಂದರು. ''ಅಲ್ಲಾರೀ ನಮ್ಮ ನಾಸ್ತಿಕನಿಗೆ ಜ್ಯೋತಿಷ ಯಾಕೆ ಬೇಕು?''

''ಅದೇ ತಮಾಷೆ ಮೇಡಂ. ನಮ್ಮ ಸಿಮ್ರಾನ್ ಮೇಡಂ ಅವರ ತಂದೆ ಜ್ಯೋತಿಷ ಶಾಸ್ತ್ರದಲ್ಲಿ ತುಂಬಾ ನಂಬಿಕೆಯುಳ್ಳವರಂತೆ. ಮದುವೆಯ ಮುನ್ನ ಕುಂಡಲಿ ಕೂಡಲೇಬೇಕಂತೆ.

ಶಿವಸಮುದ್ರಂ ಶಿವತಾಂಡವಂ ಹತ್ತಿರ ಹೇಳಿ ಅರವಮುದಂ ತಮ್ಮ ಜಾತಕ ಮಾಡಿಸಿ ಸಿಮ್ರನ್‌ನ ಜಾತಕದೊಂದಿಗೆ ಕೂಡುವುದೇ ಎಂದು ನೋಡಿಸಿದರಂತೆ. ಜಾತಕಗಳು ಹೊಂದುವುದಿಲ್ಲ ಎಂದು ಖಡಾ ಖಂಡಿತವಾಗಿ ಶಿವತಾಂಡವಂ ಹೇಳಿದಂತೆ. ಆ ನಂತರ ನಮ್ಮ ಟ್ರಿಪಲ್X ಅವರ ಹತ್ತಿರ ಬಂದು ಹೇಗೋ ಮಾಡಿ ಕೂಡಿಸಿ ಎಂದರಂತೆ ನಮ್ಮ ಅರವಮುದಂ. ಟ್ರಿಪಲ್ X ಕೂಡ ಅದೇ ಹೇಳಿದಾಗ ನಮ್ಮ ಜಾತಿಯ ಹುಡುಗ ತಾವೇ ಜ್ಯೋತಿಷ ಶಾಸ್ತ್ರ ಕಲಿಯಬೇಕೆಂದು ತಮ್ಮ ಗೆಳೆಯರ ಸಹಾಯ ಕೇಳಿದರಂತೆ. ಅಮೆರಿಕಾದಲ್ಲಿ ನೆಲೆಸಿದ್ದ ನಮ್ಮ ಜ್ಯೋತಿಷಿಗಳು ಆಗಿನ್ನೂ ಪ್ರಾರಂಭವಾಗಿದ್ದ ಗಣಕ ಯಂತ್ರದ ಸಹಾಯದಿಂದ ಜ್ಯೋತಿಷ ಶಾಸ್ತ್ರದ ಪ್ರೋಗ್ರಾಮ್ ಮಾಡಿದ್ದರಂತೆ. ಯಾವುದೇ ಪಂಚಾಂಗದ ಸಹಾಯವಿಲ್ಲದೆ

ಕಂಪ್ಯೂಟರ್ ಎರಡು ಜಾತಕಗಳನ್ನು ನೋಡಿ ಹೊಂದುವುದೇ ಇಲ್ಲವೇ ಹೇಳಿಬಿಡುವುದಂತೆ. ಆಗಿನ್ನೂ ಗೂಗಲ್ ಗುರುಗಳು ಹುಟ್ಟಿದ್ದರೂ ಅವರ ಬಗ್ಗೆ ಯಾರಿಗೂ ಗೊತ್ತಿರಲಿಲ್ಲ. ಇಂಟರ್ನೆಟ್ ಕೂಡ ಇನ್ನೂ ಶೈಶಾವಸ್ಥೆಯಲ್ಲಿತ್ತು. ನಮ್ಮ ನಾಯಕನ ಜಾತಕ ಸಿಮ್ರನ್‌ಳ ಜಾತಕಕ್ಕೆ ಕೂಡಿ ಬರುವುದಿಲ್ಲ ಎಂದು ಕಂಪ್ಯೂಟರ್ ಕೂಡ ಹೇಳಿ ಬಿಟ್ಟು ಕೈ ತೊಳೆದುಕೊಂಡಿತಂತೆ.

ನಮ್ಮ ನಾಯಕ ನಾಯಕಿಯರು ಭಾರೀ ಕಿಲಾಡಿಗಳು. ಅರವಮುದಂ ಸ್ನೇಹಿತ ಸುರೇಶ್ ತಮ್ಮ ಚಿಕ್ಕಪ್ಪನ ಹತ್ತಿರ ಎರಡೂ ಜಾತಕಗಳನ್ನು ತೋರಿಸಿ ಅರವಮುದಂನ ಜಾತಕವನ್ನು ಸರಿಯಾಗಿ ತಿದ್ದಿ ಬಣ್ಣ ಹಚ್ಚಿ ಸಿಮ್ರನ್‌ಳ ಜಾತಕಕ್ಕೆ ಪ್ರಶಸ್ತವಾಗಿ ಸೇರಿಸಿ ತನ್ನ ಸ್ನೇಹಿತನ ಮದುವೆಗೆ ಅನುವು ಮಾಡಿಕೊಟ್ಟ. ಸಿಮ್ರನ್‌ಳ ತಾಯಿಗೆ ಸಿಟ್ಟು, ಮದ್ರಾಸಿ ಅಳಿಯ ಬರುವನೆಂದು. ಹಾಗೆಯೇ ಅರವಮುದಂನ ತಾಯಿಗೂ ಪಂಜಾಬಿ ಹುಡುಗಿ ಸೊಸೆಯಾಗುವುದು ಇಷ್ಟವಿರಲಿಲ್ಲ. ಆದರೆ ಸಿಮ್ರನ್ ತಂದೆಯವರು ಮಾತ್ರ ತುಂಬಾ ಸಂತೋಷದಿಂದ ಮದುವೆಗೆ ಒಪ್ಪಿಗೆ ಕೊಟ್ಟರು. ತಿದ್ದಿಸಿ ಬಣ್ಣ ಹಚ್ಚಿಸಿ ಬದಲಾಯಿಸಿದ ಕುಂಡಲಿಯಿದ್ದರೂ ಅರವಮುದಂ ಮತ್ತು ಸಿಮ್ರನ್ ಮದುವೆಯಾಗಿ ಎರಡು ಮಕ್ಕಳೊಂದಿಗೆ ಸಂತೋಷವಾಗಿದ್ದಾರೆ. ಉತ್ತರ ದಕ್ಷಿಣಗಳು ಸರಿಯಾಗಿ ಹೊಂದಿಕೊಂಡಿವೆ.

ನನ್ನ ಪತಿ ದೇವರಿಗೆ ಅಮೆರಿಕಾಗೆ ವರ್ಗವಾಗಿದ್ದರಿಂದ ನಾನು ಮಕ್ಕಳೊಂದಿಗೆ ಹೋಗಲು ನಿಶ್ಚಯಿಸಿದೆ. ನಂಗೆ ವರ್ಗವಾಗಲಿಲ್ಲ ಆದರೆ ಸಂಬಳವಿಲ್ಲದ ರಜೆ ಸಿಕ್ಕಿತು. ಚೆನ್ನೈ ಬಿಡುವಾಗ ಮನ ತುಂಬಿ ಬಂದಿತು. ತುಂಬಾ ಪ್ರೀತಿಯಿಂದ ನನ್ನೊಂದಿಗೆ ನಡೆದುಕೊಂಡಿದ್ದ ಸಹೋದ್ಯೋಗಿಗಳನ್ನು ಬಿಟ್ಟು ಬರುವಾಗ ಸಂಕಟವಾಯಿತು. ಇನ್ನೂ ಒಂದು ವರುಷ ನಂಗೆ ವರ್ಗಾವಣೆಯಿಲ್ಲ ಎಂದು ಭವಿಷ್ಯ ಹೇಳಿದ್ದ ಟ್ರಿಪಲ್X ಮತ್ತು ನನ್ನ ಆಫೀಸ್ ಟೇಬಲ್ ಮೇಲೆ ಗಂಧ ಕುಂಕುಮ ಹಚ್ಚಿ ಬೈಸಿಕೊಳ್ಳುತ್ತಿದ್ದ ಅಪ್ಪುಣ್ಣಿ, ಆಫೀಸಿನ ಡಾಕ್ಯೂಮೆಂಟ್ ಮೇಲೆ ಯಾವಾಗಲೋ ಹೆಬ್ಬೆರಳು ಒತ್ತಿದ್ದನ್ನು ನೋಡಿ ಅದರ ಜೆರಾಕ್ಸ್ ತೆಗೆದುಕೊಂಡು ನಾಡಿ ಶಾಸ್ತ್ರದವನಿಗೆ ತೋರಿಸಿದ್ದ ಶಿವತಾಂಡವಂ ಎಲ್ಲರೂ ಏರ್ಪೋರ್ಟಿಗೆ ಬಂದು ಬೀಳ್ಕೊಟ್ಟರು.

ಅಮೆರಿಕಾದಲ್ಲಿ ನಮ್ಮ ಭಾರತೀಯರು ಜ್ಯೋತಿಷ ಶಾಸ್ತ್ರದ ಪಾರಂಗತರು. ಮಹಾ ವಲ್ಲಭ ಗಣಪತಿ ದೇವಸ್ಥಾನದಲ್ಲಿ ಅರ್ಚನೆಯ ನಂತರ ಲ್ಯಾಪ್ಟಾಪ್ ಹಿಡಿದುಕೊಂಡು ಜಾತಕ ಹೊಂದಿಸುವ ಎಷ್ಟೋ ಜನರು! ನಂಗೆ ಇನ್ನೂ ಅರ್ಧ ನಂಬಿಕೆಯೇ!

4 ವರ್ಷಗಳ ನಂತರ ಮತ್ತೆ ಮುಂಬೈ ಸಹವಾಸ. ನನ್ನ ಈಗಿನ ಪರ್ಸನಲ್ ಸೆಕ್ರೆಟರಿ ಧೊಪೇಶ್ವರ್ಕರ್ ದೊಡ್ಡ ಜ್ಯೋತಿಷಿಗಳು. ಮೊದಲನೇ ದಿನವೇ ಇಂತಹ ರಾಶಿಯವರಿಗೆ ಈಗ ಶನಿ ಭಾದೆಯಿದೆ. ನೀವೇನಾದರೂ ಆ ರಾಶಿಯವರಾಗಿದ್ದರೆ ಹನುಮಾನ್ ಚಾಲೀಸಾ ಸ್ತೋತ್ರ ಪಾಠ ಮಾಡುವುದು ಎಂದು ಸಲಹೆಯನ್ನೂ ಕೊಟ್ಟರು. ನಾನು ಅದೇ ರಾಶಿಯಲ್ಲಿ ಹುಟ್ಟಿದ್ದರಿಂದ ಆಶ್ಚರ್ಯವಾಯಿತು. ಗ್ರಹಗಳ ಪರಿಣಾಮ ಇರಬೇಕು. ನಮ್ಮ ಆಫೀಸಿನಲ್ಲಿ 5 ವರ್ಷಗಳ ಕೆಳಗೆ ನಡೆದ ಒಂದು ಪ್ರಕರಣದಲ್ಲಿ ಸಿಬಿಐ ತನಿಖೆ ಪ್ರಾರಂಭವಾಗಿ ಒಂದು ವರ್ಷ ಸಾಕಷ್ಟು ತೊಂದರೆಯಾಯಿತು. ಆರೋಗ್ಯದಲ್ಲೂ ಏರುಪೇರಾಯಿತು. ಧೊಪೇಶ್ವರ್ಕರ್ ಭವಿಷ್ಯ ನಿಜವಾಯಿತು. ಚೆನ್ನೈನಿಂದ ಕೆಲಸದ ಮೇಲೆ ಬಂದಿದ್ದ ವೈದ್ಯನಾಥನ್

ಅವರು ನನ್ನನ್ನು ಕಂಡು ಊರಿಗೆ ಹೋದ ನಂತರ ಅರ್ಚನೆ ಮಾಡಿಸಿ ಅಲ್ಲಿಂದ ಪ್ರಸಾದದ ವಿಭೂತಿ ಕುಂಕುಮ ಕಳಿಸುವೆನೆಂದರು.

ವರ್ಷಗಳು ಕಳೆದು ಹೋದವು. ನಮ್ಮ ಸಹೋದ್ಯೋಗಿಗಳ ಭವಿಷ್ಯ ಸುಳ್ಳಾಗಿಸಿ ನಾನು 5 ವರ್ಷ ಇರುವಾಗಲೇ ವಾಲಂಟರಿ ರಿಟೈರ್ಮೆಂಟ್ ತೆಗೆದುಕೊಂಡೆ. ಈಗ ಗೂಗಲ್ ಗುರುಗಳು ನನಗೂ ಒಲಿದಿದ್ದರು. ಮನೆಯಲ್ಲೇ ಕುಳಿತು ನಾನೂ ಜಾತಕ ಹೇಗೆ ತಯಾರಿಸುವುದು ಎಂದು ಕಲಿತೆ. ಹಿರಿಯ ಸಹೋದ್ಯೋಗಿಗಳಾಗಿದ್ದ ಬಾಲಸುಂದರಂ ಅವರಿಗೆ ಫೋನ್ ಮಾಡಿ ಹೇಳಿದಾಗ ''ಮೇಡಂ ಇಂತಹ ಕೆಲಸ ಮಾಡಬೇಡಿ. ಜ್ಯೋತಿಷ ಶಾಸ್ತ್ರ ಕಂಪ್ಯೂಟರ್ ಆಟವಲ್ಲ, ಅದಕ್ಕೆ ನಿಷ್ಠೆ ಬೇಕು. ಗುರುಗಳ ಅನುಗ್ರಹವಿರಬೇಕು. ಸಂಸ್ಕೃತ ಬರಬೇಕು. ಪಂಚಾಂಗಗಳ ಅಭ್ಯಾಸ ಮಾಡಬೇಕು. ಗಣಿತದ ಪಾರಂಗತೆ ಇರಬೇಕು. ಮತ್ತು ದೇವರ ಅನುಗ್ರಹವಿರಬೇಕು. ಸುಮ್ಮ ಸುಮ್ಮನೆ ನಿಮ್ಮ ಕಂಪ್ಯೂಟರ್ ಅದೆಲ್ಲ ಸರಿಯಿಲ್ಲ ಎಂದು ಖಂಡಿತವಾಗಿ ಹೇಳಿದರು. ಸ್ವಾಮಿ ಕಂಪ್ಯೂಟರ್‌ನಲ್ಲಿ ನಿಮ್ಮಂತಹ ಘಟಾನುಘಟಿಗಳೇ ಇದೆಲ್ಲವನ್ನೂ ಸೇರಿಸಿ ಪ್ರೋಗ್ರಾಮ್ ತಯಾರಿಸಿದ್ದಾರೆ ಎಂದು ಹೇಳಿದಾಗ ಕೋಪಗೊಂಡು ಫೋನ್ ಇಟ್ಟುಬಿಟ್ಟರು.

ಇಬ್ಬರೂ ಮಕ್ಕಳು ತಾವೇ ಆರಿಸಿಕೊಂಡ ವರಗಳ ಜನ್ಮ ತಾರೀಖು ಮತ್ತು ವೇಳೆ ತರಿಸಿ ನಮ್ಮ ಹಿರಿಯ ಮಿತ್ರ ಕುಲಕರ್ಣಿಯವರ ಹತ್ತಿರ ಮದುವೆ ಮುಹೂರ್ತ ನಿಶ್ಚಯ ಮಾಡಿಸಿಕೊಂಡೆವು. ಜಾತಕಗಳು ಎಷ್ಟು ಗುಣದಿಂದ ಕೂಡುತ್ತವೆ ಎಂಬುದರ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ.

ಎರಡು ವರ್ಷದ ಕೆಳಗೆ ಮೊಮ್ಮಗಳು ಸಿಂಗಪುರದಲ್ಲಿ ಹುಟ್ಟಿದಾಗ ನಾನೇ ನಾಮಕರಣ ಶಾಸ್ತ್ರ ಮೊದಲು ''ಮೇಕ್ ಯುವರ್ ಓನ್ ಹೋರೋಸ್ಕೋಪ್'' ಎಂಬ ಅಂತರ್ಜಾಲದ ಸೈಟು ಹುಡುಕಿ, ಮಗು ಹುಟ್ಟಿದ ದಿವಸ, ತಾರೀಖು ಸಮಯ ಮತ್ತು ಜಾಗ ಸರಿಯಾಗಿ ಕೀ ಇನ್ ಮಾಡಿ ಕ್ಷಣದಲ್ಲಿ ಜಾತಕ ತಯಾರಿಸಿ ಪ್ರಿಂಟ್ ಮಾಡಿ ಅದನ್ನು ದೇವರ ಮುಂದೆ ಇಟ್ಟು ನಾಮಕರಣ ಶಾಸ್ತ್ರ ಮಾಡಿ ಮುಗಿಸಿದೆ. ನಾಸ್ತಿಕ ಅಳಿಯ ಮತ್ತು ಅರ್ಧ ನಾಸ್ತಿಕ ಮಗಳು ತಮ್ಮ ಮಿತ್ರರ ಮುಂದೆ ಅದನ್ನು ತೋರಿಸಿ ಹಾಸ್ಯ ಮಾಡಿ ನಕ್ಕಿದ್ದೂ ಆಯಿತು!

ಇರಲಿ ಬಿಡಿ. ನಾವು ನೋಡಿ ಭಾರತೀಯರು. ನಾವು ಇರುವುದೇ ಹೀಗೆ. ನಮ್ಮ ಇಸ್ರೋ ಸಂಸ್ಥೆ ಗಗನ ಯಾನಕ್ಕೆ ವ್ಯೋಮಮಿತ್ರ ಎಂಬ ಹೆಸರಿನ ಹೆಣ್ಣು ಮುಖದ ರೋಬೋಟ್ ಅನ್ನು ಕಳಿಸುವುದು. ಅದರ ನಕ್ಷತ್ರ ಯಾವುದಿರಬಹುದು? ಚಂದ್ರ ಯಾನ 2ರ ಕಡೆಯ ಸ್ತರದ ಪರಾಜಯಕ್ಕೆ ಕಾರಣವೇನು? ಕುಜ ದೋಷವೇ? ಅದು ಯಾರ ಕುಂಡಲಿಯಲ್ಲಿ? ರಾಹು ಬಾಧೆಯಿತ್ತೇ? ಯಾರಿಗೆ? ನಿರ್ದೇಶಕರ ಕುಂಡಲಿಯಲ್ಲಿ ಯಾವ ಗ್ರಹ ಸಂಚಾರವಿತ್ತು? ಚಂದ್ರ ಗ್ರಹದ ಕೋಪ ಕಾರಣವೇ ಅಥವಾ ಮಂಗಳ ಗ್ರಹದ ಬಾಧೆಯೇ? ಹೀಗೆ ನನ್ನ ಹುಚ್ಚು ಮನಸ್ಸು ಪ್ರಶ್ನೆ ಕೇಳುತ್ತ ನಗುತ್ತಿರುತ್ತದೆ. ಹೋಗಲಿ ಬಿಡಿ. ಈಗ ತಾನೇ ಪೇಪರ್ ಬಂತು. ನನ್ನ ದಿನಭವಿಷ್ಯ ನೋಡಲು ಹೋಗಬೇಕು. ಬರ್ತೀನಿ..... ■

**ಈಗೀಗ ಬದುಕು ಕಷ್ಟ.**

**ಹೊರಗೆ ಹೋದರೆ 'ವೈರಸ್ ಕರೋನ' ಭೀತಿ**

**ಆಫೀಸಿನಲ್ಲಿದ್ದರೆ 'ಟಾರ್ಗೆಟ್ ಪೂರ ಕರೋನ' ಎಂಬ ಭೀತಿ.**

**ಮನೆಯಲ್ಲಿದ್ದರೆ 'ಎ ಕರೋನ ಒ ಕರೋನ' ಎಂಬ ಭೀತಿ**

# ನೀವು ಹಿರಿಯ ನಾಗರೀಕರೆ?

● ಸಿ.ಆರ್. ಸತ್ಯ

ನೀವು ಹಿರಿಯ ನಾಗರೀಕರಾಗಿದ್ದಲ್ಲಿ, ಅದರಲ್ಲೂ, 70 ವರುಷಗಳು ದಾಟಿದ್ದಲ್ಲಿ, ನನ್ನ ಅನಿಸಿಕೆಗಳನ್ನು ನೀವು ಚೆನ್ನಾಗಿಯೇ ಅರ್ಥಮಾಡಿಕೊಳ್ಳುತ್ತೀರಿ. ಏಕೆಂದರೆ ನಾನೂ ಸವೆಂಟಿ ಪ್ಲಸ್!

ಮೊನ್ನೆ ಚಾಲುಕ್ಯ ವೃತ್ತದಲ್ಲಿ ಟ್ರಾಫಿಕ್ ದೀಪ ಹಸಿರು ಬಣ್ಣಕ್ಕೆ ತಿರುಗುವುದಕ್ಕೆ ನನ್ನ ಕಾರಿನಲ್ಲಿ ಕಾಯ್ತಾ ಇದ್ದೆ. ತಕ್ಷಣ ಹಿಂದಿನಿಂದ ಒಬ್ಬ ಆಟೋ ಡ್ರೈವರ್ 'ಲೋ ಮುದುಕ, ನಿದ್ದೆ ಮಾಡ್ತಿದ್ಯಾ...? ಹೋಗೋ!!'' ಅಂತ ಬೈದ. ನಾನೂ ಇನ್ನೂ ಮಿಣುಕುತ್ತಿದ್ದ ಕೆಂಪು ದೀಪವನ್ನು ಅವನಿಗೆ ತೋರಿಸಿದೆ. ಅದಕ್ಕೆ ಅವನಿಗೆ ಇನ್ನೂ ಕೋಪ ಉಕ್ಕಿ ಬಂದು ''ಆ ಲೈಟ್ ನೋಡ್ಕೊಂಡು ಇವತ್ತೆಲ್ಲಾ ನಿಂತಿರುತ್ತೀಯಾ? ಹೋಗಯ್ಯಾ ಮುಂದೆ'' ಅಂತ ಇನ್ನಷ್ಟು ಬೈದ. ಇನ್ನೊಂದು ದಿವಸ ಬ್ಯಾಂಕ್‌ನಲ್ಲಿ ಚೆಕ್ ಕೊಟ್ಟು ದುಡ್ಡಿಗಾಗಿ ಕ್ಯಾಷ್ ಕೌಂಟರ್ ಮುಂದೆ ನಿಂತಿದ್ದೆ. ಬೇಕಾಗಿದ್ದ ಸಾವಿರ ರೂಪಾಯಿಗಳನ್ನ ಕ್ಯಾಷಿಯರ್ ಐದು ರೂಪಾಯಿ ನೋಟುಗಳಲ್ಲಿ ಕೊಟ್ಟ. ನಾನು ಅಲ್ಲೇ ಎಣಿಸೋಕ್ಕೆ ಶುರು ಮಾಡಿದೆ. ಆಗ ಹಿಂದಿನಿಂದ ಒಬ್ಬ ''ಈ ಮುದುಕ ಚಿಲ್ಲರೆ ಎಣಿಸ್ಕೊಳ್ಳೋದು ಮುಗಿಸೋ ಹೊತ್ತಿಗೆ ಬ್ಯಾಂಕ್‌ಗೆ ಕ್ಲೋಸಿಂಗ್ ಟೈಮ್ ಬರುತ್ತೆ'' ಅಂತ ಎಲ್ಲರಿಗೂ ಕೇಳೋ ಹಾಗೆ ಗೊಣಗಿಕೊಂಡ. ಇನ್ನೊಂದು ಸಲ ನಾನೂ ನನ್ನ ಹೆಂಡತಿ ಎಲ್ಲೋ ಹೋಗೋಕ್ಕೆ ಒಂದು ಆಟೋನ ಕರೆದ್ವಿ. ಅವನು ಬಂದು ನಮ್ಮ ಹತ್ತಿರ ನಿಲ್ಲಿಸಿದ. ನಾನು ಮೊದಲು ಹತ್ತಿದೆ. ಪಾಪ, ನನ್ನ ಹೆಂಡತಿಗೆ ತಗ್ಗಿನಲ್ಲಿ ನಿಂತಿದ್ದರಿಂದ ಒಳಗೆ ಹತ್ತೋದಕ್ಕೆ ಕಷ್ಟವಾಯಿತು. ಅಷ್ಟರಲ್ಲಿಯೇ ಆಟೋ ಡ್ರೈವರ್ ''ಅಜ್ಜೀ, ಈ ಟ್ರಾಫಿಕ್‌ನಲ್ಲಿ ಇಲ್ಲಿ ನಿಲ್ಲಿಸೋ ಹಾಗಿಲ್ಲ. ಬೇಗ ಹತ್ತಿ, ಇಲ್ಲವೇ ಇನ್ನೊಂದು ಆಟೋನಲ್ಲಿ ಆಮೇಲೆ ಬನ್ನಿ'' ಅನ್ನೋದೇ!

ಬೆಳಿಗ್ಗೆ ನಾನೂ ನನ್ನ ಹೆಂಡತಿ ನಮ್ಮ ಮನೆಯ ಹತ್ತಿರ ಇರೋ ಪಾರ್ಕ್‌ನಲ್ಲಿ ವಾಕಿಂಗ್ ಮಾಡ್ತೀವಿ. ಇತ್ತೀಚೆಗೆ ನಮ್ಮ ಪಾಡಿಗೆ ನಾವು ರಾಮಾ ಕೃಷ್ಣಾ ಅಂತ ಹೆಜ್ಜೆ ಹಾಕ್ತಾ ಇದ್ದರೆ, ನಮ್ಮನ್ನು ನಮ್ಮ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕಾರಿ ಸಮಿತಿಯ ಕೆಲವರು ಅಡ್ಡ ಕಟ್ಟಿ ನಿಲ್ಲಿಸಿದರು. ''ಯಜಮಾನ್ರೆ, ನಿಮ್ಮ ಮೇಲೆ ಎಲ್ಲರಿಂದಲೂ ಕಂಪ್ಲೈಂಟ್ ಬರ್ತಾ ಇವೆ. ನೀವು ಹೀಗೆ ನಿಧಾನವಾಗಿ ತ್ಯಾಪೆಗಾಲು ಹಾಕ್ಕೊಂಡು, ನಡೆಯೋ ಜಾಗಕ್ಕೆ ಅಡ್ಡ ಕಟ್ಕೊಂಡು ನಡೀತಿದ್ದರೆ, ನಾವೆಲ್ಲಾ ನಿಮ್ಮ ಹಿಂದೇನೆ ಬರ್ತಿರಬೇಕಾಗುತ್ತೆ. ಅದೂ ಅಲ್ಲದೆ ಇಲ್ಲಿ ಜಾಗ್ಗಿಂಗ್ ಮಾಡುವವರಿಗೆ ತುಂಬಾ ಕಷ್ಟ ಆಗ್ತಿದೆ. ನಿಮ್ಮನ್ನ ಅವಾಯಿಡ್ ಮಾಡೋಕ್ಕೆ ಅಂತ ಹೋಗಿ ನಿಮಗೇನಾದರೂ ಡಿಕ್ಕಿ ಹೊಡೆದರೆ, ನಿಮ್ಮ ಮೈ, ಕೈ ಮೂಳೆಗಳೆಲ್ಲಾ ಮುರಿಯಲ್ವೇ?'' ಅಂತ ಕೇಳಿದರು. ''ಹೌದು, ಮುರಿಯುತ್ವೆ'' ಅಂತ ಅಂದೆ. ಆದಕ್ಕೆ ''ಗಂಭೀರವಾಗಿ ಮನೇನಲ್ಲೋ ಎಲ್ಲೋ ಬೇರೆ ಕಡೆ ವಾಕ್ ಮಾಡಿ, ಇಲ್ಲಿ ನೀವು ಹೀಗೆ ನಡೀತಿದ್ರೆ, ನಿಮಗೆ ಡಿಕ್ಕಿ ಹೊಡೆದು ನಮ್ಮ ಮೂಳೆಗಳೂ ಮುರಿಯುತ್ವೆ!'' ಅಂತ ವಾರ್ನಿಂಗ್ ಕೊಟ್ರು. ಈಗ ನಮ್ಮ ವರಾಂಡದಲ್ಲೇ ನಮ್ಮ ವಾಕಿಂಗ್ ಆಗ್ತಿದೆ!

ವಾಕಿಂಗ್ ಅಂದಾಗ ಜ್ಞಾಪಕ ಬಂತು. ನಾವು ಮನೆಯಿಂದ ಹೊರಗೆ ಹೊರಟಾಗಲೆಲ್ಲಾ, ನಮ್ಮ ರೋಡಿನಲ್ಲಿರೋ ಮನೆಯ ಎರಡು ನಾಯಿಗಳು ನಮ್ಮನ್ನ ನೋಡಿ ''ಗುರ್, ಗುರ್'' ಅನ್ನುತ್ವೆ. ಅವುಗಳ ಮನೆ ಯಜಮಾನರನ್ನು ನಾನು ಭೇಟಿ ಮಾಡಿ, ನಿಮ್ಮ ನಾಯಿಗಳನ್ನ ಸರಿಯಾಗಿ ಕಟ್ಟಿ ಹಾಕಿ. ಯಾವಾಗಲೂ ನಮ್ಮನ್ನ ನೋಡಿ ಗುರ್! ಅನ್ನುತ್ವೆ, ಅಂತ ಹೇಳಿದೆ. ಅದಕ್ಕೆ ಅವರು ''ನಾನು ಏನು ಮಾಡಲಿ? ಅವಕ್ಕೆ ವಯಸ್ಸಾದವರನ್ನು, ಪೇಪರ್ ಹಾಕೋವರನ್ನು, ಚಿಂದಿ ಎತ್ತೋವರನ್ನು ಕಂಡರೆ ಬಲೆ ಕೋಪ. ನೀವು ನಮ್ಮ ಮನೆ ಕಡೆ ತಲೆ ಹಾಕದೇ ಇದ್ದರೆ ಉತ್ತಮ'' ಅಂತ ಬುದ್ಧಿವಾದ ಹೇಳಿದರು. ಅನೇಕ ತಿಂಗಳುಗಳ ಕಾಲದಿಂದ ವಾಸಿ ಆಗದೇ ಇದ್ದ ನನ್ನ ಹಲ್ಲು ನೋವಿಗೆ ನನ್ನ ಡೆಂಟಿಸ್ಟ್ ಹತ್ತಿರ ಮೊನ್ನೆ ಹೋದೆ. ಅವರು ನೋಡಿ, ನಿಮಗೆ ಈ ನೋವಿನಿಂದ ಪರಿಹಾರ ಬೇಕು ಅಂತ ಇಷ್ಟ ಇದ್ದರೆ ಈ ಎರಡು ಹಲ್ಲುಗಳನ್ನ ಪೂರ್ತಿ ಕಿತ್ತು ಹಾಕಿಸಿಕೊಳ್ಳಿ. ನಿಮ್ಮ ವಯಸ್ಸಿಗೆ ಈಗ ನಿಮ್ಮಲ್ಲಿ ಉಳಿದುಕೊಂಡಿರೋ ಹಲ್ಲುಗಳೇ ಸಾಕು. ವಯಸ್ಸಾಗಿದೆ, ಇಷ್ಟು ವರುಷಗಳ ಕಾಲ ಸಾಕಷ್ಟು ತಿಂದಿದೀರ. ಇನ್ನೂ ಎಷ್ಟು ನಿಮಗೆ ತಿನ್ನೋಕ್ಕೆ ಇಷ್ಟ ಹೇಳಿ? ಏನೂ ತಿನ್ನದಿದ್ದರೂ ಆಗುತ್ತೆ ಅಂತ ಬುದ್ಧಿ ಹೇಳೋದೇ! ಹಾಗೇನೇ ಇತ್ತೀಚೆಗೆ ಕಿವಿ ಸರಿಯಾಗಿ ಕೇಳೊಲ್ಲ ಅಂತ ಕಿವಿ ಡಾಕ್ಟರ್ ಹತ್ತಿರ ಹೋದೆ. ವಯಸ್ಸಾಗಿದೆ ಅಂತ ನಿಮಗೆ ಇನ್ನೂ ಗೊತ್ತಾಗಿಲ್ವೆ? ಬೇಕಾದ್ರೆ 30,000 ರೂಪಾಯಿಗೆ ಹಿಯರಿಂಗ್ ಏಡ್ ತೊಗೊಳ್ಳಿ. ನಿಮಗೆ ಆಮೇಲೆ ಕಿವಿ ಕೇಳಿಸಿದರೂ ನಿಮ್ಮನ್ನ ಮಾತನಾಡಿಸೋಕ್ಕೆ ತಾನೆ ಯಾರಿಗೆ ಸಹನೆ ಇದೆ? ನಿಮಗೆ ಕೇಳೋದೆಲ್ಲಾ ನಿಮ್ಮ ಮೇಲಿನ ಬೈಗಳುಗಳೇ! ಅಂತ ಒಂದು ರೀತಿ ಬೈದೇ ಕಳಿಸಿದ (ಕನ್ಸಲ್ಟೇಷನ್ ದುಡ್ಡೂ ತೊಗೊಂಡ).

ಮದುವೆ ಮನೆಗೆ ಊಟಕ್ಕೆ ಹೋದರೆ ಏನಾಗುತ್ತೆ ಗೊತ್ತೆ? ನಾವು ಜಾಸ್ತಿ ತಿನ್ನೋದಿಲ್ಲ ಅಂತ ಅಂದು ಕೊಂಡು ನನ್ನ ಎಲೆಗೆ ಅರ್ಧ ಚಮಚ ಅನ್ನ ಮಾತ್ರ ಬಡಿಸ್ತಾರೆ. ನನಗೆ ಡೈಯಾಬಿಟೀಸ್ ಗ್ಯಾರಂಟಿ ಇದೆ ಅಂತ ಅವರೇ ಊಹಿಸಿಕೊಂಡು ಸ್ವೀಟ್ ಬೇಕಾ ಅಂತಾನೂ ಕೇಳದೆ ಪಕ್ಕದವರಿಗೆ ಬಡಿಸ್ತಾರೆ. ನಾನು ಇನ್ನೂ ಮೊಸರನ್ನದ ಘಟ್ಟಕ್ಕೇ ಬಂದಿಲ್ಲದಿದ್ದರೂ, ''ಪಾಪ, ನೀವು ಏಳಿ, ಕೈ ತೊಳ್ಕೊಳ್ಳಿ, ಇವರಿಗೆಲ್ಲಾ ಯಾಕೆ ಕಾಯ್ತೀರಾ'' ಅಂತ ಉಪಚಾರ ಮಾಡ್ತಾರೆ! ನಮ್ಮಂತಹವರಿಗೆ ಇನ್ನೊಂದು ''ಟಾರ್ಚರ್'' ಘಳಿಗೆ ಏನೂ ಅಂದರೆ, ಮದುವೆ ಮನೆಗಳಲ್ಲಿ ಸಂಜೆ ರಿಸೆಪ್ಷನ್ ಟೈಮ್‌ನಲ್ಲಿ ವಧು ವರರ ಹತ್ತಿರ ಹೋಗಿ, ಕೈ ಕುಲುಕಿ, ಫೋಟೋಗೆ ನಿಂತ್ಕೊಳ್ಳೋದು. ಮುಕ್ಕಾಲು ಘಂಟೆ ಒಂದು ಘಂಟೆ ಕಾಲ ಕ್ಯೂನಲ್ಲಿ ನಿಂತ್ಕೊಂಡು ಕೊನೇಗೂ ಸ್ಟೇಜ್ ಮೇಲೆ ಹತ್ತಿದ್ರೆ, ಅಲ್ಲಿ ಹಲ್ಲು ಗಿಂಜುಕೊಂಡು ಫೋಟೊಗೆ ನಿತ್ಕೊಂಡು, ಊಟದ ಮನೆ ಕಡೆ ಹೋಗೋದೆಲ್ಲಾ ಎರಡೇ ನಿಮಿಷಗಳಲ್ಲಿ ಮುಗಿದುಹೋಗುತ್ತೆ! ನೆಕ್ಸ್ಟ್ ಟಾರ್ಚರ್ ಚೇಂಬರ್ ಅಂದರೆ ಡೈನಿಂಗ್ ಹಾಲ್!. ಅದರಲ್ಲೂ ಬುಫೆ ಡಿನ್ನರ್ ಇದ್ರೆ ನಮ್ಮ ಪ್ರಾಬ್ಲಮ್ ಏನು ಗೊತ್ತೆ? ನಾವು ನಮ್ಮನ್ನ ಬ್ಯಾಲೆನ್ಸ್ ಮಾಡ್ಕೋತಿರಬೇಕು ಅಥವಾ ನಮ್ಮ ಊಟದ ತಟ್ಟೇನ ಬ್ಯಾಲೆನ್ಸ್ ಮಾಡಬೇಕು. ಎರಡೂ ಒಂದೇ ಏಟಿಗೆ ಆಗೋದೇ ಇಲ್ಲ!

ವಯಸ್ಸಾದರೂ ನಮಗೆ ಹೊರ ಊರುಗಳಿಗೆ ಹೋಗಿ ಪ್ರವಾಸ ಮಾಡೋಕ್ಕೆ ಇಷ್ಟ ಇರಲ್ವೆ? ಅದಕ್ಕೆ ಅಂತ ಟೂರಿಸ್ಟ್ ಬಸ್‌ಗಳಲ್ಲಿ ಪ್ರವಾಸ ಹೋದರೆ, ದಿನಕ್ಕೆ ಹತ್ತು

ಸಲ ಆದರೂ ಅಲ್ಲಿ ಬಸ್‌ನಿಂದ ಇಳೀಬೇಕು ಮತ್ತೆ ಬಸ್‌ಗೆ ಹತ್ಕೋಬೇಕು. ಮಂಡಿ ನೋವಿನಿಂದ ನಮ್ಮಂತಹವರು ಇಳಿಯೋದು ನಿಧಾನ, ಹತ್ತೋದೂ ನಿಧಾನ. ನಾವು ಇಳಿದು ನಮ್ಮ ಗೈಡ್ ಏನು ಹೇಳ್ತಾ ಇದಾನೆ ಅಂತ ಅವನ ಹತ್ತಿರ ಹೋಗೋ ಹೊತ್ತಿಗೆ, ಅವನು ಅಲ್ಲಿಯ ಸ್ಥಳ ಮಹಿಮೆಗಳನ್ನೆಲ್ಲಾ ಹೇಳಿ ಮುಗಿಸಿ, ಎಲ್ಲರೂ ಬಸ್ ಹತ್ತಿ ಅಂತಾನೆ. ಮತ್ತೆ ಬಸ್ ಹತ್ತೋದರಲ್ಲಿ ಕೊನೆಯವರು ನಾವೇ! ಆಗ ಮಿಕ್ಕಿದವರೆಲ್ಲಾ ಅವರವರ ಆಸನಗಳಲ್ಲಿ ಅಚ್ಚುಕಟ್ಟಾಗಿ ಕೂತ್ಕೊಂಡು ನಾವು ಲೇಟ್ ಆಗಿ ಬಂದ್ವಿ ಅಂತ ನಮ್ಮನ್ನ ದುರುಗುಟ್ಟಿಕೊಂಡು ನೋಡ್ತಾರೆ. ಲಂಚ್ ಬ್ರೇಕ್ ಟೈಮ್‌ನಲ್ಲೂ ಇದೇ ಪ್ರಾಬ್ಲಮ್ಮು. ಬಸ್‌ನಿಂದ ಇಳಿದು ನಮಗೆ ಕೂತ್ಕೊಳ್ಳೋಕ್ಕೆ ಟೇಬಲ್ ಸಿಕ್ಕಿ, ಇನ್ನೇನು ಊಟದ ಮೊದಲನೇ ಐಟಮ್‌ನ ಮುಗಿಸ್ತೀವಿ ನೋಡಿ–ಅಷ್ಟರಲ್ಲೇ ಎಲ್ಲರೂ ಊಟ ಮುಗಿಸಿಕೊಂಡು ಬಸ್ ಕಡೆ ಹೋಗ್ತಿರ್ತಾರೆ.

ಯಾತಕ್ಕೆ ಈ ಪ್ರವರವನ್ನು ನಿಮ್ಮ ಮುಂದೆ ಇಡ್ತಾ ಇದೀನಿ ಅಂದರೆ, ಮೊನ್ನೆ ಯಾರೋ ನನ್ನ ಸ್ನೇಹಿತರೊಬ್ಬರು ವಾಟ್ಸಾಪ್ಪ್ ನಲ್ಲೋ ಫೇಸ್‌ಬುಕ್‌ನಲ್ಲೋ ಇದನ್ನ ನೋಡಿದರಂತೆ. ಯಾರೋ ಒಬ್ಬರಿಗೆ 5,000 ರೂಪಾಯಿ ಆನ್‌ಲೈನ್ ಟ್ರಾನ್ಸ್ಪರ್ ಮಾಡಿದ್ರೆ ಮನೇಗೆ "ಯೂತ್‌ಪಿಲ್ಸ್" ಅಂತ 30 ಮಾತ್ರೆಗಳಿರೋ ಒಂದು ಪಾರ್ಸಲ್ ಕಳಿಸ್ತಾರಂತೆ. ದಿನಕ್ಕೆ ಒಂದೊಂದು ಮಾತ್ರೆ ತಗೊಂಡರೆ ನಾವು ಮತ್ತೆ ಒಂದೇ ತಿಂಗಳಲ್ಲಿ ಸವೆಂಟೀಸ್‌ನಿಂದ ಸಿಕ್ಸ್ಟೀಸ್‌ಗೆ ಬದಲಾವಣೆ ಆಗ್ತೀವಿ ಅಂತ ಗ್ಯಾರಂಟಿ ಕೊಡ್ತಾರಂತೆ. ನಮ್ಮ ಓದುಗರಲ್ಲಿ ಯಾರಾದರೂ ಈ ಪಿಲ್ಸ್ ತೊಗೊಂಡವರು ಇದ್ದು, ಒಂದು ತಿಂಗಳಾದ ಮೇಲೆ ಹತ್ತು ವರುಷ ಕಡಿಮೆ ಚಿಕ್ಕವರಾಗಿದ್ರೆ, ದಯವಿಟ್ಟು ನನಗೆ ಅದರ ವಿವರಗಳನ್ನು (ಎರಡು ಫೋಟೋಗಳ ಸಮೇತ–ಮಾತ್ರೆ ತೊಗೊಳ್ಳೋಕ್ಕೆ ಮುಂಚೆ ಮತ್ತು ಮಾತ್ರೆ ತೊಗೊಂಡಾದ ನಂತರ) ಕೊಡಿ. ಹಾಗೂ, ಏನಾದರೂ ಸೈಡ್ ಎಫೆಕ್ಟ್ಸ್ ಆಗಿದ್ರೆ (ಉದಾಹರಣೆಗೆ: ವಯಸ್ಸು ಕಮ್ಮಿ ಆಗೋ ಬದಲು ಜಾಸ್ತಿ ಆದರೆ) ಅದರ ಬಗ್ಗೇನೂ ತಿಳಿಸೋಕ್ಕೆ ಮರೆಯಬೇಡಿ. ಥ್ಯಾಂಕ್ಸ್. ■

---

# ಲಿಮಿರಿಕ್ಸ್

ಸಿ.ಪಿ.ರವಿಕುಮಾರ್

## ಛೋಟೀ ಸೀ ಆಶಾ

ಮತ್ತೊಮ್ಮೆ ಶಿಮ್ಲಾಗೆ ಹೋಗುವ ಆಸೆಯಾಯ್ತು
ನೀವು ಶಿಮ್ಲಾಗೆ ಹೋಗಿದ್ದೀರಾ?
(ಆಶ್ಚರ್ಯವಿತ್ತು)
ಇಲ್ಲವೆಂದಾಗ ಲಕ್ಷ್ಮಿ ಸುಮ್ಮನಿರಲಾರದೆ
ಮತ್ತೆ? ಎಂದು ಕೇಳಿದರು ಶಾರದೆ
ಏನಿಲ್ಲ ಶಿಮ್ಲಾಗೆ ಹೋಗುವ ಆಸೆ
ಮತ್ತೊಮ್ಮೆ ಆಯ್ತು

# ಪ್ರೇತ ಡಾಟ್ ಕಾಮ್

● ಶಿವು

*(ಜನವರಿ 1999ರಲ್ಲಿ ಬರೆದ ಈ ಲೇಖನ ಇಂದಿಗೂ ಪ್ರಸ್ತುತ ಅನ್ನಿಸಿದ್ದರಿಂದ ಈ ಲಘುನಗೆಬರಹವನ್ನು ಯುಗಾದಿ ಉಡುಗೊರೆಯಾಗಿ ನೀಡುತ್ತಿದ್ದೇವೆ.)*

**ಒಂದು ಸೆಮಿನಾರ್**

''ನಾನೂ ಮತ್ತು ನನ್ನ ಸಂಗಡಿಗರೂ ಕಳೆದ ಆರು ತಿಂಗಳುಗಳಿಂದ ಶ್ರಮಿಸಿ ರೂಪಿಸಿದ ಸಾಫ್ಟ್‌ವೇರ್ ಈ ಪಾರೀ–ಮಾರ್ಕ್–1. ಇದರಿಂದ ಉಪಗ್ರಹಗಳ ಸಹಾಯವಿಲ್ಲದೇ ಇಂಟರ್ನೆಟ್ ಸಂಪರ್ಕ ಪಡೆಯಬಹುದು. ಇದರ ಬಳಕೆಯಿಂದ ಮಾಹಿತಿ ಸಾಗಣೆಯ ವೇಗ ಸಹಾ ಇಂದಿಗಿಂತ ಇಪ್ಪತ್ತುಪಟ್ಟು ಹೆಚ್ಚುತ್ತದೆ...''

''ಒಂದ್ನಿಮಿಷ ಮೇಡಂ, ಉಪಗ್ರಹಗಳ ಸಹಾಯವಿಲ್ಲದೇ ಇಂಟರ್ನೆಟ್ ಸಂಪರ್ಕ ಅಸಾಧ್ಯ ಅಂತ ನನ್ನ ಭಾವನೆ. ನಿಮ್ಮ ಈ ಹೊಸ ಸಾಫ್ಟ್‌ವೇರ್ ಯಾವ ಸಿದ್ಧಾಂತದ ಮೇಲೆ ನಿಂತಿದೆ ಎಂಬುದರ ಬಗ್ಗೆ ಸ್ವಲ್ಪ ಬೆಳಕು ಚೆಲ್ತೀರಾ?''

ಸೆಮಿನಾರ್ ಸ್ಪೀಕರ್ ಪಾರೀಗೆ (ಉರುಪ್ ಪಾರ್ವತಿ. ಎಸ್. ದೇಶ್ಪಾಂಡೆ) ಈ ಬೆಳಕು ಚೆಲ್ಲೋ ದಂಧೆ ಹೊಸದೇನೂ ಆಗಿರಲಿಲ್ಲ. ಮೌಂಟ್ ಕಾರ್ಮೆಲ್ ಕಾಲೇಜಿನ ಫೆಸ್ಟ್ ಒಂದರಲ್ಲಿ ಅವಳು ಮಿಸ್ ಮೌಂಟ್ಸ್ ಆದಾಗಿನಿಂದ ಎಂ.ಜಿ. ರಸ್ತೆಯ ಬಡಪಾಯಿ ರೋಮಿಯೋಗಳ ಮೇಲೆ ಬೆಳಕು ಚೆಲ್ಲೀ, ಚೆಲ್ಲೀ, ಅವರಿಗೆಲ್ಲಾ ಸನ್ ಬರ್ನ್ ಆಗಿತ್ತೆಂಬ ಪ್ರತೀತಿ ಆ ದಿನಗಳಲ್ಲಿ ಪ್ರಚಲಿತವಾಗಿತ್ತು. ಈಗ ಪಾರೀ ಬ್ರಿಲಿಯಂಟ್ ಸಾಫ್ಟ್‌ವೇರ್ ಇಂಜಿನಿಯರ್. ಹೆಸರಾಂತ ಸಾಫ್ಟ್‌ವೇರ್ ಸಂಸ್ಥೆ ಇನ್ಫೋಬ್ರದರ್ಸ್‌ನ ಕಣ್ಮಣಿ ಅಥವಾ ಬ್ಲೂ ಐಡ್ ಗರ್ಲ್. ಅವಳ ಸಂಶೋಧನೆಗಳಿಂದ ಸಂಸ್ಥೆಗೆ ಕೋಟ್ಯಾಂತರ ಡಾಲರ್ ಲಾಭ ಅಂದ ಮೇಲೆ ಕೇಳಬೇಕೇ. ಸಂಸ್ಥೆಯ ಚರ್ಚಾಗೃಹದಲ್ಲಿ ಇಂದಿನ ಸೆಮಿನಾರ್ ಅವಳ ಟೀಮ್‌ನ ಹೊಸ ಸಂಶೋಧನೆ ಕುರಿತದ್ದು.

''ಓಹೋ, ಅಗತ್ಯವಾಗಿ. ಇತ್ತೀಚಿನ ಸಂಶೋಧನೆಗಳ ಪ್ರಕಾರ ವಾಯುಮಂಡಲದ ಅತಿ ಎತ್ತರದಲ್ಲಿ ಇಥೀರಿಯಲ್ ಶಕ್ತಿಗಳು ಬೆಳಕಿನ ವೇಗವನ್ನು ಮೀರಿ ಹಾರಾಡುತ್ತಿರುವುದು ಕಂಡುಬಂದಿದೆ. ನಾವು ರೂಪಿಸಿರುವ ಸಾಫ್ಟ್‌ವೇರ್ ಇಂತಹ ಶಕ್ತಿಗಳನ್ನು ಸೆರೆಹಿಡಿದು ಅವುಗಳ ನೆರವಿನಿಂದ ಇಂಟರ್ನೆಟ್ ಸಂಪರ್ಕ ಏರ್ಪಡಿಸುವುದರಿಂದ ಉಪಗ್ರಹದ ಅಗತ್ಯದ ಪ್ರಶ್ನೆಯೇ ಉದ್ಭವಿಸದು'' ಹಾರಾಡುತ್ತಿದ್ದ ಮುಂಗುರುಳನ್ನು ಬದಿಗೆ ಸರಿಸುತ್ತಾ ಆತ್ಮ ವಿಶ್ವಾಸದ ಮೆಲುನಗೆಯೊಂದಿಗೆ ಪಾರೀ ಉತ್ತರಿಸುತ್ತಿದ್ದಾಗ, ಅವಳ ಬಾಸ್ ಸುಧನ್ವನ ಎದೆ ತುಂಬಿಬಂತು. ಈಚೀಚೆಗೆ ಸುಧನ್ವನಿಗೆ irritating frequencyಯಲ್ಲಿ ಎದೆ ತುಂಬಿಬರಲು ಪ್ರಾರಂಭವಾಗಿತ್ತು. ಪಾರೀ ಮೆಲುನಗೆ ನಗುವ ಶೈಲಿ, ಜೋರಾಗಿ ನಗುವಾಗ ತನ್ನ ಅಂಗೈಯನ್ನು ತುಟಿಗಳ ಮುಂದೆ ತರುತ್ತಿದ್ದ ಮನಮೋಹಕ ರೀತಿ, ಒಟ್ಟಿನಲ್ಲಿ ಪಾರಿಯ ಸನ್ನಿಧಿಯೇ ಅವನ ಎದೆಗೆ ಟ್ರಿಗರಿಂಗ್ ಎಲಿಮೆಂಟಾಗಿತ್ತು.

ಪಾಪ, ಮುಗ್ಧ ಪಾರಿಗೆ ಸುಧನ್ವನ ಈ ಕಾರ್ಡಿಯಾಕ್ ಇನ್ವಾಲ್ವ್‌ಮೆಂಟಿನ ಪರಿವೆಯೇ ಇರಲಿಲ್ಲ.

**ಒಂದು ಸಂಭಾಷಣೆ**



ಆಷಾಢ ಬಹುಳ ಅಮಾವಾಸ್ಯೆಯ ನಿಶಿರಾತ್ರಿ. ಊರಾಚೆಯ ಹುಣಸೇ ತೋಪಿನಲ್ಲಿ ಒಂದು ಎಮರ್ಜೆನ್ಸಿ ಸಭೆ ನಡೆದಿತ್ತು. ಶಾಕಿನಿ, ಡಾಕಿನಿ, ಜಡೆಮುನಿಯೇ ಮುಂತಾಗಿ ಪ್ರೇತಲೋಕದ ಅನೇಕ ನಾಯಕರು ಚಿಂತಾಕ್ರಾಂತರಾಗಿ ಚರ್ಚೆ ನಡೆಸಿದ್ದರು. ''ಹೊಟ್ಟೇನೇ ಇಲ್ದಿದ್ರೆ ಹೊಟ್ಟೆ ನೋವು ಬರಲ್ಲ ಅಂದ್ಕೊಂಡಿದ್ದೆ, ಆದ್ರೂ ನೋಡಿ ಒಂದು ವಾರದಿಂದ ಕಾಡ್ತಾ ಇದೆ ಈ ಸುಡುಗಾಡು ನೋವು, ಕಾರಣಾನೇ ತಿಳೀತಿಲ್ಲ ಜಡೆಮುನಿ ಅವರೇ''

''ಸುಡುಗಾಡಿನಲ್ಲೇ ಕೂತಿರುವಾಗ ಬೇರೇ ಯಾವ ರೀತಿ ನೋವು ಸಾಧ್ಯಾ ಹೇಳಿ ಶಾಕಿನಿ. ತಮಾಷೆ ಹಾಗಿರ್ಲಿ. ನಿಮ್ಮ ಮನಸ್ಸಿನ ಆಕ್ರೋಶ, ಆತಂಕ ನನಗೆ ತಿಳಿದಿದೆ. ನಮ್ಮ ಈ ಪ್ರೇತ ಸಂಕುಲಕ್ಕೆ ಈಗ ಸನ್ನಿಹಿತವಾಗಿರುವ ಅಪಾಯಾನ ನೆನೆಸಿಕೊಂಡರೆ ಯಾರಿಗಾದರೂ ನಡುಕಹುಟ್ಟುವುದು ಸಹಜ. ಇದಕ್ಕೇನು ಪರಿಹಾರಾ?'' ಜಡೆಮುನಿಯ ಈ ಪ್ರಶ್ನೆ ನಿರ್ದಿಷ್ಟವಾಗಿ ಯಾರೊಬ್ಬರನ್ನು ಕುರಿತದ್ದಾಗಿರಲಿಲ್ಲ. ಆದರೂ ಡಾಕಿನಿ ಎದ್ದು ನಿಂತು,

''ನಮ್ಮನ್ನೆಲ್ಲಾ ಸಾರಾಸಗಟಾಗಿ ಎಥೀರಿಯಲ್ ಶಕ್ತಿಗಳು ಅಂತ ನಾಮಕರಣ ಮಾಡಿ, ದಿಗ್ಬಂದನ ಹಾಕಿ, ಯಾರ್ಯಾರದ್ದೋ ಈ ಮೇಯ್ಲ್ ಸಾಗಣೇಗೆ ನಮ್ಮನ್ನ ಬಳಸಿಕೊಳ್ಳೋ ಸನ್ನಾಹಾನ ನಾವು ಮೊಳಕೆಯಲ್ಲೇ ಚಿವುಟದಿದ್ದರೆ ನಮಗೆ ಉಳಿಗಾಲವಿಲ್ಲ, ಸ್ನೇಹಿತರೇ, ಇಂಟರ್ನೆಟ್ ಅಂದ್ರೆ ಅದೊಂದು ಥರಾ ಬಲೆ. ನೀವು ಈಥರ್‌ನಲ್ಲಿ ಆರಾಮವಾಗಿ ಹಾರಾಡ್ತಾ ಇದ್ರೆ ಅದು ನಿಮ್ಮನ್ನ ಫಕ್ಕಂತ ಹಿಡಿದ್ಬಿಟ್ಟು ಯಾವ್ಯಾವ್ದೋ ಕಂಪ್ಯೂಟರ್ ಪರದೇ ಮೇಲೆ ಪ್ರದರ್ಶಿಸಿಬಿಡುತ್ತಂತೆ ಇದಕ್ಕೆಲ್ಲಾ ಆ ರಾಕ್ಷಸ ಬಿಲ್ ಗೇಟ್ಸೇ ಕಾರಣ ಅಂತ ಅನ್ಸುತ್ತೆ ನನಗೆ'' ಅಂದಳು.

''ಡಾಕಿನಿ ಹೇಳಿದ್ದು ಜನರಲ್ ಆಗಿ ನಿಜಾ ಆದ್ರೂ, ನಮ್ಮ ಈಗಿನ ಸಮಸ್ಯೆಗೆ ನಿರ್ದಿಷ್ಟ ಕಾರಣ ಭೂಲೋಕದ ಪಾರೀ ಅನ್ನೋ ತರುಣಿ. ಅವಳು ನಿರ್ಮಿಸಿರೋ ಸಾಫ್ಟ್‌ವೇರೇ ನಮಗೆಲ್ಲಾ ದಿಗ್ಬಂಧನ ಹಾಕ್ತಿರೋದು. ನನ್ನ ಕೇಳಿದ್ರೆ ಈಗಲೇ ನಮ್ಮ



ಡ್ರಾಕ್ಯುಲಾನ ಅವಳ ಬಳಿ ಕಳಿಸಿ, ಅವಳ ರಕ್ತಾ ಹೀರಿಸಿ, ಅವಳ್ನ ಇಲ್ಲೀಗೆ ಕರೆಸಿಕೊಂಡುಬಿಟ್ರೆ ನಮ್ಮ ಸಮಸ್ಯೆ ಪರಿಹಾರ ಆದಹಾಗೇನೇ''.

ಮೋಹಿನಿಯ ಈ ಸೂಚನೆ ಜಡೆಮುನಿಗೆ ಹಿಡಿಸಿದ ಹಾಗೆ ಕಾಣಲಿಲ್ಲ.

''ಪಾರೀನ ಇಲ್ಲಿಗೆ ತಂದ್ರೆ ಸಾಫ್ಟ್‌ವೇರ್ ಬಳಕೆ ತಪ್ಪುತ್ಯೇ? ನಾವು ಹುಡುಕೋ ಪರಿಹಾರ ಇನ್ನೂ ಸಟಲ್ ಆಗಿರಬೇಕು. ಅವಳ ರಕ್ತಾ ಹೀರಿಸೋಬದಲು, ಅವಳನ್ನೇ ಇಲ್ಲಿಗೆ ಹೈಜಾಕ್ ಮಾಡಿ ತಂದರೆ, ಅವಳ ಬಿಡುಗಡೆಯನ್ನು ನೆಗೋಷಿಯೇಟ್ ಮಾಡಿ ನಮ್ಮ ಗುರಿ ಸಾಧಿಸ್ಕೋಬಹುದು ಅನ್ಸುತ್ತೆ'' ಜಡೆಮುನಿಯ ಈ ಸಲಹೆ ಎಲ್ಲರ ಅನುಮೋದನೆ ಪಡೆಯಿತು.

**ಒಂದು ಹೈಜಾಕ್**

ದಿನವೆಲ್ಲಾ ಹೈ ಸ್ಟ್ರೆಸ್ ಪರಿಸರದಲ್ಲಿ ದುಡಿಯುತ್ತಿದ್ದ ಪಾರೀಗೆ ಸಂಜೆಯಾಯಿತೆಂದರೆ ಚರ್ಚ್ ರಸ್ತೆಯ ನಾಸಾ ಪಬ್ ಸೇರಿ ಡ್ರಾಫ್ಟ್ ಬೀರು ಹೀರುವುದು ದಿನನಿತ್ಯದ ಪರಿಪಾಠವಾಗಿತ್ತು. ಬೆಳಗ್ಗೆ ಆರುಘಂಟೆಗೆ ಒಂದು ತಾಸು ಏರೋಬಿಕ್ಸ್ ಅನ್ನೂ ಸಹಾ ಇದೇ ನಿಷ್ಠೆಯಿಂದ ಪಾಲಿಸುತ್ತಿದ್ದುದರಿಂದ ಪಾರಿಯ ಟೀನ್ ಏಜ್ ಲುಕ್ ಒಂದು ರೀತಿಯ ಕ್ರಿಯಾತ್ಮಕ ಸಮತೋಲನ (Dynamic Equilibrium) ನಲ್ಲಿತ್ತೆಂದು ಹೇಳಬಹುದು. ಸೆಮಿನಾರ್ ಮುಗಿದ ಸಂಜೆ ಪಾರೀ ಸಹಜವಾಗಿಯೇ ತನ್ನ ಯಶಸ್ಸನ್ನು ಮೆಲಕು ಹಾಕುತ್ತಾ ತನ್ನ ಎಂದಿನ ವಾಟರಿಂಗ್ ಹೋಲ್‌ನಲ್ಲಿ ಕುಳಿತು ದರ್ಬಾರ್ ನಡೆಸಿದ್ದಳು. ಸುತ್ತಲಿನ ಗೆಳೆಯ ಗೆಳತಿಯರ ಕಲರವ ಕಿವಿಗೆ ಇಂಪಾಗಿದ್ದರೂ ಪಾರಿಯ ಮನಸ್ಸು ಯಾವುದೋ ಸೈಬರ್ ಪ್ರಪಂಚದಲ್ಲಿ ವಿಹರಿಸುತ್ತಿತ್ತು. ಅವರು ಕುಳಿತಿದ್ದ ಮೇಜಿನ ಮೇಲೆ ಒಂದು ಪಿಚ್ಚರ್, ಆರೇಳು ಗ್ಲಾಸುಗಳು, ಪೀನಟ್ ಮಸಾಲಾ ತಟ್ಟೆ ಇವುಗಳು ಹರಡಿದ್ದ ಕಲಾತ್ಮಕ ರೀತಿ ಖ್ಯಾತ ಯೂರೋಪಿಯನ್ ಚಿತ್ರಕಾರರ ಸ್ಟಿಲ್ ಲೈಫ್ ಅನ್ನು ನೆನಪಿಗೆ ತರುವಂತಿದ್ದವು. ರಾತ್ರಿ ಹನ್ನೊಂದು ಘಂಟೆಗೆ ಸಂತೋಷ ಕೂಟ ಮುಗಿದು ಪಾರಿ ತನ್ನ ಜೆನ್ ಹತ್ತಿರ ಹೋಗಿ ಅದರ ಬಾಗಿಲು ತೆರೆಯಲು ಯತ್ನಿಸಿದಾಗ ಅವಳಿಗೆ ತಾನು ಹೀರಿದ ಬೀರಿನ ಪರಿಣಾಮದ ಅರಿವಾಯಿತು. ಎಲ್ಲೆಲ್ಲೋ ಓಡುತ್ತಿದ್ದ ಕಾರಿನ ಕೀಲಿಯನ್ನು ಮಹತ್ಪ್ರಯಾಸದಿಂದ ಬಾಗಿಲಿಗೆ ಅಳವಡಿಸಿ, ಒಳಗೆ ಕುಳಿತು, ಕಾರನ್ನು ಸ್ಟಾರ್ಟ್ ಮಾಡಿದಳು, ಕೆನೆಯುವ ಕುದುರೆಯಂತೆ ಕಾರು ಒಮ್ಮೆ ನೆಗೆದು ಅನಂತರ ಶರವೇಗದಲ್ಲಿ ಓಡಲು ಪ್ರಾರಂಭಿಸಿದಾಗ ಪಾರಿಯ ಸಂತಸದ ಬಟ್ಟಲು ಉಕ್ಕಿ

ಹರಿದಿತ್ತೆಂದು ಧಾರಾಳವಾಗಿ ಹೇಳಬಹುದಾಗಿತ್ತು.

ಎಂಡ್ಸರ್ ಮ್ಯಾನರ್ ಸೇತುವೆಯ ಕೆಳಗೆ ಬರುವಾಗ ಪಾರಿ ಅರುವತ್ತು ಕಿಲೋಮೀಟರ್ ವೇಗದಲ್ಲಿ ಓಡುತ್ತಿದ್ದ ಕಾರನ್ನು ಹಠಾತ್ತನೆ ಬ್ರೇಕ್ ಒತ್ತಿ ನಿಲ್ಲಿಸಬೇಕಾದ ಪ್ರಮೇಯ ಒದಗಿ ಬಂತು. ರಸ್ತೆಯ ಮಧ್ಯೆ ''ರಸ್ತೆ ರಿಪೇರಿಯಲ್ಲಿದೆ. ಡಿಟೂರ್ ದಾರಿ ಹಿಡಿಯಿರಿ'' ಎಂಬ ಕೆಂಪು ಅಕ್ಷರಗಳ ಫಲಕ ರಾರಾಜಿಸುತ್ತಿತ್ತು. ಸೇತುವೆ ಕೆಳಗಿನ ರಸ್ತೆ ಬಂದ್ ಮಾಡಿ ಎರಡು ಪಕ್ಕಗಳಲ್ಲೂ ದೈತ್ಯಾಕಾರದ ಕಲ್ಲು ಗೋಡೆಗಳಿರುವಾಗ ಡಿಟೂರ್ ಬಳಸಿ ಅಂತಾರಲ್ಲಾ ಅಂತ ಪಾರೀಗೆ ನಗು. ಮಧ್ಯರಾತ್ರಿ, ನಿರ್ಜನ ಪ್ರದೇಶ, ನಿಂತ ಕಾರು, ದಾರಿ ಬಂದ್, ಇವೆಲ್ಲಾ ಸಾಮಾನ್ಯವಾಗಿ ಭಯ, ಆತಂಕ ತರುವ ವಿಷಯಗಳಾಗಿದ್ದರೂ, ಕಿಂಗ್ ಫಿಷರ್ ಮನಃಸ್ಥಿತಿಯಲ್ಲಿದ್ದ ಪಾರಿಗೆ ಇವೆಲ್ಲಾ ಬಹು ಮೋಜಿನ ಸಂಗತಿ ಅನ್ನಿಸಿತ್ತು. ಒಮ್ಮೆಲೇ ಪಾರಿಯ ಕಾರು ನೆಲದಿಂದ ಮೇಲೆದ್ದು ಹೆಲಿಕಾಪ್ಟರಿನಂತೆ ಆಕಾಶದಲ್ಲಿ ಹಾರಲು ಪ್ರಾರಂಭಿಸಿದ್ದ ಪಾರಿಯ ಗಮನಕ್ಕೆ ಬರುವ ವೇಳೆಗೆ ಕಾರು ಹುಣಸೇ ತೋಪು ಸೇರಿತ್ತು. ಪಾರಿ ಕಾರಿನಿಂದ ಇಳಿಯುತ್ತಿದ್ದಂತೆ ಸುತ್ತ ನೆರೆದಿದ್ದ ಪ್ರೇತಸಂಕುಲದ ''ಪ್ರೇತ ಮುಕ್ತಿ ಮೋರ್ಚಕ್ಕೆ ಜಯವಾಗಲಿ'' ''ಡೌನ್ ಡೌನ್ ಪಾರೀ'' ''ತೋರುವೆವು ನಾವು, ನಮ್ಮ ಎಥೀರಿಯಲ್ ಶಕ್ತಿ'' ಎಂಬ ಘೋಷಣೆಗಳು ಗಾಢಾಂಧಕಾರವನ್ನು ತುಂಬಿತ್ತು.

ಕಾರಿನಿಂದಿಳಿದ ಪಾರಿಯನ್ನು ಮೊದಲು ಎದುರುಗೊಂಡಿದ್ದು ಸಂಕುಲದ ನಾಯಕ ಜಡೆಮುನಿ. ಯಾವುದೋ ಖಳನಾಯಕಿ ಎಂದುಕೊಂಡಿದ್ದ ಜಡೆಮುನಿಗೆ ಪಾರಿಯ ಮುಗ್ಧ ಸೌಂದರ್ಯವನ್ನು ಕಂಡು ಇಲ್ಲದ ಉಸಿರು ಸಿಕ್ಕಿಕೊಂಡಂತಾಯಿತು. ಆದರೂ ಸಾವರಿಸಿಕೊಂಡು ''ಹೀಗೆ ಬಾಮ್ಮ, ಈಗ ನೀನು ನಮ್ಮ ಸೆರೆಯಾಳು. ನಿನ್ನ ಬಿಡುಗಡೆ ನಿಮ್ಮ ಸಂಸ್ಥೆಯ ಕೈಯಲ್ಲಿದೆ'' ಎನ್ನುತ್ತಾ ಪಾರಿಯನ್ನು ಹತ್ತಿರದಲ್ಲಿದ್ದ ಪಾಳುಬಿದ್ದ ಮನೆಯೊಂದಕ್ಕೆ ಕರೆದೊಯ್ದ. ಅಲ್ಲೊಂದು ಪ್ರೇತಸಂಸಾರ ನೆಲೆಸಿತ್ತು. ಅಲ್ಲಿನ ಪುಟ್ಟ ಪ್ರೇತವೊಂದು ಪಾರಿಯ ಪಾದಗಳನ್ನೇ ದೃಷ್ಟಿಸಿ ನೋಡುತ್ತಾ'' ಮುಂದು ಮುಂದು ಪಾದ'' ಅನ್ನುತ್ತಾ ಕಿಸಕ್ಕನೆ ನಕ್ಕಾಗ ಅದರಮ್ಮ ''ಹಾಗೆಲ್ಲಾ ನಗಬಾರದು'' ಅಂತ ಅದನ್ನ ಗದರಿಕೊಂಡಳು.

**ಒಂದು ಸಂದೇಶ**

ಹತ್ತುಘಂಟೆಗೆ ಸರಿಯಾಗಿ ಆಫೀಸಿಗೆ ಹಾಜರಾಗುತ್ತಿದ್ದ ಶಿಸ್ತಿನ ಸಿಪಾಯಿ ಸುಧನ್ವನಿಗೆ, ಪ್ರತಿದಿನ ಹತ್ತುಘಂಟೆ ಏಳು ನಿಮಿಷಕ್ಕೆ, ಎದೆ ಢವಢವ ಗುಟ್ಟಲು ಪ್ರಾರಂಭಿಸುತ್ತಿತ್ತು. ಅದು ಪಾರಿ ಆಫೀಸನ್ನು ಪ್ರವೇಶಿಸುವ ಸಮಯ. ಪಾರಿ ಒಳಗೆ ಬಂದು ಸಹೋದ್ಯೋಗಿಗಳಿಗೆಲ್ಲಾ ಹಾಯ್ ಹೇಳಿ ತನ್ನ ಟರ್ಮಿನಲ್‌ನಲ್ಲಿ ಸೆಟಲ್ ಡೌನ್ ಆಗುವವರೆಗೂ ಸುಧನ್ವನ ಮನ ಭೃಂಗದಂತೆ ಪಾರಿಯ ಸುತ್ತ ಹಾರಾಡುತ್ತಾ ಅವಳ ಹಾವಭಾವಗಳನ್ನು ವೀಕ್ಷಿಸುತ್ತಾ ಆನಂದಿಸುತ್ತಿತ್ತು. ಆ ಬೆಳಗ್ಗೆ ಹತ್ತೂಕಾಲಾದರೂ ಪಾರಿ ಕಾಣದಾದಾಗ ಸುಧನ್ವ ಗಾಬರಿಯಾದ. ಅವಳ ಮನೆಗೆ ಫೋನ್ ಮಾಡಿದರೆ ಹೇಗೆ ಎಂಬ ಯೋಚನೆ ಒಮ್ಮೆ ಸುಳಿದು ಹೋಯಿತು. ಒಂದು ಘಂಟೆಯಾದರೂ ಕಾದು ಅನಂತರ ವಿಚಾರಿಸಿದರೆ ಒಳಿತು

ಎಂದುಕೊಂಡು ಕಂಪ್ಯೂಟರ್ ಟರ್ಮಿನಲ್ ಕಡೆ ಗಮನ ಹರಿಸಿದ. ಸ್ಕ್ರೀನಿನ ಕೆಳಬಲತುದಿಯಲ್ಲಿ ''ನ್ಯೂ ಈ ಮೇಯ್ಲ್'' ಎಂಬ ಸಂದೇಶ ನಕ್ಷತ್ರದಂತೆ ಮಿನುಗುತ್ತಿತ್ತು.

ಸುಧನ್ವ ಇಂಟರ್ನೆಟ್ ತೆರೆದು ತನ್ನ ಅಂಚೆ ನೋಡಿದಾಗ, ಅದರಲ್ಲಿ ''ತ್ವರೆ ಮಾಡಿ, ತ್ವರೆಮಾಡಿ, ಪ್ರೇತ ಡಾಟ್‌ಕಾಮ್ ವೆಬ್ ಸೈಟ್ ಅನ್ನು ಸಂದರ್ಶಿಸಿ. ಒಂದು ಅತಿ ಮುಖ್ಯ ವಿಷಯ ನಿಮಗೆ ಕಾದಿದೆ'' ಎಂಬ ಪತ್ರವಿದೆ. ತಡಮಾಡದೇ ಸುಧನ್ವ ಆ ಸೈಟ್ ಪ್ರವೇಶಿಸಿದ. ಒಮ್ಮಲೇ ತೆರೆಯ ಮೇಲೆ ಅತಿ ವಿಕಾರವಾದ ಮುಖವೊಂದು ಮೂಡಿಬಂತು. ಕೆಂಗಣ್ಣುಗಳು, ಕಪ್ಪು ಗಡ್ಡ ಕೋರೇ ಹಲ್ಲುಗಳು, ಎಣ್ಣೆ ಕಾಣದ ಕೂದಲನ್ನು ಹೆಣೆದು ಕಟ್ಟಿದ್ದ ಹತ್ತು ಹನ್ನೆರಡು ಜಡೆಗಳು, ಒಟ್ಟಿನಲ್ಲಿ ಖಳನಾಯಕನ ಪಾತ್ರಕ್ಕೆ ಹೇಳಿ ಮಾಡಿಸಿದ ಮುಖ. ಸುಧನ್ವ ನೋಡುತ್ತಿದ್ದಂತೆ ಆ ಮುಖ ಮಾತನಾಡಲು ಪ್ರಾರಂಭಿಸಿತು. ''ಸುಧನ್ವ, ಈ ಸಂದೇಶ ನಿನಗಾಗಿಯೇ ವಿಶೇಷವಾಗಿ ರೂಪಿಸಿದ್ದು. ನಿನ್ನ ಪಾರಿ ಈಗ ನಮ್ಮ ಸೆರೆಯಾಳು. ನೀನು ನಮ್ಮ ಕಣ್ಣ ಮುಂದೆ ನಿಮ್ಮ ಸಂಸ್ಥೆ ನಿರ್ಮಿಸಿರುವ ಪಾರೀ ಮಾರ್ಕ್-1 ಸಾಫ್ಟ್‌ವೇರನ್ನು ಸಂಪೂರ್ಣವಾಗಿ ನಾಶಪಡಿಸಿದರೆ ಮಾತ್ರ ನಾವು ಪಾರಿಯ ಬಿಡುಗಡೆ ಬಗ್ಗೆ ಯೋಚಿಸಬಹುದು. ''ರಿಪ್ಲೈ'' ಗುಂಡಿಯನ್ನು ಒತ್ತಿ ನಿನ್ನ ಉತ್ತರ ತಿಳಿಸಬಹುದು. ಸುಧನ್ವ, ಈ ಸಂದೇಶ ನಿನಗಾಗಿಯೇ ವಿಶೇಷವಾಗಿ ರೂಪಿಸಿದ್ದು. ನಿನ್ನ ಪಾರಿ ಈಗ ನಮ್ಮ ಸೆರೆಯಾಳು. ನೀನು...'' ಸುಧನ್ವ ಕಂಪ್ಯೂಟರ್‌ನ ಆಫ್ ಮಾಡಿದ. ಆ ಜಡೆಮುನಿಯ ಗಿಣಿಪಾಠ ಅವನಿಗೆ ಬೇಕಿರಲಿಲ್ಲ, ಅವನು ಯೋಚಿಸಿ ನಿರ್ಧರಿಸಬೇಕಾದ ಸಂಗತಿಗಳು ನೂರಾರಿದ್ದವು.

**ಒಂದು ಕಠಿಣ ಸತ್ಯ**

ಪಾಳು ಬಿದ್ದ ಭವನದ ಕೈಸಾಲೆಯಲ್ಲಿದ್ದ ಮೇಜಿನ ಈಕಡೆ ಸುಧನ್ವ ಕುಳಿತಿದ್ದ. ಆಚೆಬದಿಯಲ್ಲಿ ಜಡೆಮುನಿ ಗಡ್ಡ ನೀವಿಕೊಳ್ಳುತ್ತಾ ಆಸೀನನಾಗಿದ್ದ. ಮಾತುಕತೆ ಭರದಿಂದ ಸಾಗಿತ್ತು.

''ಕೋಟ್ಯಾಂತರ ಡಾಲರ್ ಲಾಭ ಗಳಿಸಬಹುದಾದ ಸಾಫ್ಟ್‌ವೇರ್ ಇದು. ಸಾರಾಸಗಟಾಗಿ ಇದನ್ನು ನಾಶಮಾಡಲು ಹೇಳ್ತೀರಲ್ಲಾ, ನಾವೇನು ಎಲ್ಲಾ ಪ್ರೇತಗಳನ್ನೂ ಒಂದೇ ಬಾರಿಗೆ ಬಳಸಿಕೊಳ್ಳೋಲ್ವಲ್ಲಾ. ಪಾರಿಯ ಬಿಡುಗಡೆಗೆ ಪ್ರತಿಯಾಗಿ ನಾವು ಇನ್ನೇನಾದ್ರೂ ಕೊಟ್ಟು ಸಮಸ್ಯೆ ಪರಿಹಾರ ಮಾಡುಕ್ಕಾಗುಲ್ವೇ'' ಸುಧನ್ವನ ಪ್ರಶ್ನೆಗೆ ಉತ್ತರವಾಗಿ ಜಡೆಮುನಿಯಿಂದ ಒಂದು ತಿರಸ್ಕಾರದ ನಗೆ ಹೊರಹೊಮ್ಮಿತು.

''ಸಾಧ್ಯವಿಲ್ಲ. ಪ್ರಕೃತಿ ನಿಯಮಗಳನ್ನ ಉಲ್ಲಂಘಿಸೋಕ್ಕೆ ಹೊರಟಿದ್ದೀಯ ನೀನು. ಆ ಸಾಫ್ಟ್‌ವೇರ್ ಸೀಡೀನ ಮೊದಲು ನಾಶಮಾಡಿ, ಅಂತಹ ಸಾಫ್ಟ್‌ವೇರ್‌ನ ಮುಂದೆ ಸೃಷ್ಟಿಸೋದಿಲ್ಲ ಅಂತ ನೀನು ಭಾಷೆ ಕೊಟ್ರೆ, ನಾನು ಪಾರೀನ ಬಿಡುಗಡೆ ಮಾಡ್ತೋದು. ಇಲ್ದಿದ್ರೆ ನಿಮ್ಮಿಬ್ಬರನ್ನೂ ನಮ್ಮ ಪ್ರಜೆಗಳನ್ನಾಗಿಸೊ ಒತ್ತಡಕ್ಕೆ ನಾನು ಮಣೀಬೇಕಾಗುತ್ತೆ. ಬೇಗ ನಿರ್ಧರಿಸು'' ಜಡೆಮುನಿ ತನ್ನ ಅಲ್ಟಿಮೇಟಂ ಕೊಟ್ಟು ಹಿಂದಕ್ಕೆ ಒರಗಿದ.

ಈ ಮಾತುಗಳನ್ನ ನಿರೀಕ್ಷಿಸಿಯೇ ಇದ್ದ ಸುಧನ್ವನ ಹಂಚಿಕೆಯೇ ಬೇರೆಯದಾಗಿತ್ತು.

ಪಾರಿಯ ಹೈಜಾಕ್ ಆದಾಗಲೇ ಸಾಫ್ಟ್‌ವೇರ್‌ಗೆ ಆತ ತಿಲಾಂಜಲಿನ್ನಿತ್ತಿದ್ದ. ಈಗ ಸಾಫ್ಟ್‌ವೇರ್‌ಗೆ ಬದಲಾಗಿ ಪಾರಿಯ ಹೃದಯವನ್ನು ಗೆಲ್ಲಲು ಜಡೆಮುನಿಯ ಸಹಕಾರ ಕೋರುವುದು ಅವನ ಅಜೆಂಡಾದಲ್ಲಿತ್ತು. ಅವನ ಮಾತಿನ ವರಸೆ ಅದಕ್ಕೆ ತಕ್ಕಂತಿತ್ತು.

''ಜಡೆಮುನಿ ಸಾರ್, ಪಾಪ ಅರೀದ ಹುಡುಗಿ ಪಾರಿ ನನ್ನ ಅನ್ವೇಷಣೆಯ ಭರದಲ್ಲಿ ನಿಮ್ಮ ಸ್ವಾತಂತ್ರಕ್ಕೆ ಧಕ್ಕೆ ಬರುವಂತಹ ಕೆಲಸ ಮಾಡಿರಬಹುದು. ಅದರಿಂದ ಲಾಭ ಪಡೆಯುವುದು ತಪ್ಪು ಎಂದು ಈಗ ನನಗೆ ಮನವರಿಕೆಯಾಗಿದೆ. ಖಂಡಿತ ನಾನು ಈಗಲೇ ನಿಮ್ಮ ಕೋರಿಕೇನ ನಡೆಸಿಕೊಡುತ್ತೇನೆ. ಅದಕ್ಕೆ ಪ್ರತಿಯಾಗಿ ನಿಮ್ಮಿಂದ ನನಗೊಂದು ಸಣ್ಣ ಸಹಾಯ ಆಗಬೇಕಾಗಿದೆ. ನೀವು ಅಪ್ಪಣೆಕೊಟ್ಟರೆ ಅದನ್ನ ತಿಳಿಸುವೆ'' ಸುಧನ್ವನ ದನಿ ಅತಿ ವಿನಯದಿಂದ ಕೂಡಿತ್ತು.

''ಅದೇನದು ನಿನ್ನ ಕೋರಿಕೆ?''

''ಪಾರಿ ಅರೀದ ಹುಡುಗಿ ಎಂದು ಈಗಾಗಲೇ ಹೇಳಿದ್ದೆ. ಜೀವನ ಪರ್ಯಂತ ಅವಳಿಗೆ ಮಾರ್ಗದರ್ಶನ ಮಾಡುವ ಸುಯೋಗ ನನಗೆ ದೊರಕಿಸಿಕೊಡಬೇಕು. ಅವಳನ್ನು ನಾನು ನನ್ನ ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿಸುತ್ತಿದ್ದೇನೆ. ಆದರೆ ಅವಳಿಗೆ ಅದರ ಪರಿವೆಯೇ ಇಲ್ಲ, ನನ್ನ ಮಾತನ್ನು ಅವಳು ಬಹಳ ಲಘುವಾಗಿ ಕಾಣುತ್ತಿದ್ದಾಳೆ. ಈ ನಿಟ್ಟಿನಲ್ಲಿ ನಿಮ್ಮ ಸಹಾಯ ಬೇಕು'' ಸುಧನ್ವ ತನ್ನ ಕೋರಿಕೆಯನ್ನ ಚಿಕ್ಕದಾಗಿ ಚೊಕ್ಕವಾಗಿ ತಿಳಿಸಿದ.

ಜಡೆಮುನಿ ಸುಧನ್ವನ ಕೋರಿಕೆಯನ್ನ ಮನಸ್ಸಿನಲ್ಲೇ ಪರಿಶೀಲಿಸಿ, ''ಪಾರಿಯನ್ನ ನಮ್ಮ ಸೆರೆಯಿಂದ ನಿನ್ನ ಸೆರೆಗೆ ಒಪ್ಪಿಸಬೇಕೆಂದು ನಿನ್ನ ಅಪೇಕ್ಷೆ, ನೀನು ಅವಳನ್ನು ಪ್ರೀತಿಸುವುದು ನಿಜವಾದರೆ, ಆ ಸಂಗತಿಯನ್ನು ಅವಳಿಗೆ ಸಾಬೀತುಪಡಿಸುವ ಮಾರ್ಗ ಒಂದಿದೆ....''

''ಅದೇನದು ಆ ಮಾರ್ಗ?''

''ಬಾ, ನೀನು ತಂದಿರುವ ಸೀಡಿಯನ್ನು ಮೊದಲು ನಾಶಮಾಡಿ ಅನಂತರ ಪಾರಿಯ ಬಳಿ ಹೋಗೋಣ. ದಾರಿಯಲ್ಲಿ ಆ ಮಾರ್ಗದ ಬಗ್ಗೆ ತಿಳಿಸುವೆ''

**ಒಂದು ಮೈಕ್ರೋಸ್ಕೋಪ್**

ಸುಧನ್ವ ಮತ್ತು ಪಾರಿ ಮೇಜಿನ ಒಂದು ಬದಿ ಕುಳಿತಿದ್ದರು. ಜಡೆಮುನಿ ಮಾತನಾಡುತ್ತಿದ್ದ.

''ಕೋಟ್ಯಾಂತರ ಡಾಲರ್ ಲಾಭದ ಆಶೆ ತೊರೆದು ಸಾಫ್ಟ್‌ವೇರ್‌ನ ನಾಶಮಾಡಿ ಸುಧನ್ವ ನಿನ್ನ ಬಿಡುಗಡೆಗಾಗಿ ಇಲ್ಲಿಗೆ ಬಂದಿದ್ದಾನೆ. ಅವನು ನಿನ್ನನ್ನು ಬಹುವಾಗಿ ಪ್ರೀತಿಸುತ್ತಿರುವುದು ನಿನಗೆ ತಿಳಿದಿದೆಯೇ?''

''ಪ್ರೀತಿ! ಹ್ಹ ಹ್ಹ... we are just good friends ಅಷ್ಟೆ''

''ನಮ್ಮ ಪ್ರೇತಸಂಕುಲದಲ್ಲಿ ಇಂತಹ ವಿಷಯಗಳನ್ನು ಖಚಿತವಾಗಿ ತಿಳಿಯಲು ಒಂದು ಉಪಕರಣ ಬಳಕೆಯಲ್ಲಿದೆ....''

''ಏನದು ಉಪಕರಣ?'' ಪಾರಿಯ ವೈಜ್ಞಾನಿಕ ಮನೋಭಾವ ಜಾಗೃತವಾಯಿತು.

''ಅದನ್ನ ನಾವು ಟ್ರೂತ್ ಮೈಕ್ರೋಸ್ಕೋಪ್ ಅಂತ ಕರೀತೇವೆ. ಒಂದು ರಕ್ತದ ಬಿಂದುವನ್ನ ಅದರ ಕೆಳಗಿಟ್ಟು ನೋಡಿದರೆ, ಪ್ರತಿಯೊಂದು ಕಣದ ಮೇಲೂ ಅದರ ಮಾಲಿಕ ನಿಜವಾಗಿ ಪ್ರೀತಿಸುತ್ತಿರುವವರ ಹೆಸರಿರುತ್ತದೆ...''

''ಅಂದರೇ, ಸುಧನ್ವನ ರಕ್ತದ ಕಣದ ಮೇಲೆ ನನ್ನ ಹೆಸರಿರುತ್ತೇ?''

''ಅವ ನಿನ್ನನ್ನು ಪ್ರೀತಿಸುವುದು ನಿಜವಾದರೆ ಖಂಡಿತವಾಗಿ ನೀನು ಅವನ ರಕ್ತದ ಕಣಗಳಲ್ಲಿ ನಿನ್ನ ಹೆಸರನ್ನು ನೋಡಬಹುದು...''

''ಓಹ್, ಹೌ ಕ್ಯೂಟ್! ಸುಧನ್ವ ಈ ಮಾತು ನಿಜಾ ಆದ್ರೆ ನಾನು ನಿನ್ನ ಬಾಳಸಂಗಾತಿಯಾಗಲು ನನ್ನ ಒಪ್ಪಿಗೆ ಇದೆ. ಜಡೆಮುನಿಯವರೇ, ನನಗೆ ನಿಮ್ಮ ಮೈಕ್ರೋಸ್ಕೋಪ್ ತೋರಿಸ್ತೀರಾ?''

ಸುಧನ್ವ ಬಹು ಉತ್ಸಾಹದಿಂದ, ಬೆರಳಿಗೆ ಸೂಜಿ ಚುಚ್ಚಿ ಒಂದು ಬಿಂದು ರಕ್ತ ತೆಗೆದು ಒಂದು ಸ್ಲೈಡಿಗೆ ಹಚ್ಚಿದ. ಜಡೆಮುನಿ ತಂದಿಟ್ಟಿದ್ದ ಸೂಕ್ಷ್ಮ ದರ್ಶಕದ ಕೆಳಗೆ ಆ ಸ್ಲೈಡನ್ನಿಟ್ಟು ಪಾರಿ ಬಹು ಕುತೂಹಲದಿಂದ ಅದರಲ್ಲಿ ಕಣ್ಣಿಟ್ಟು ನೋಡಿದಳು. ಮರುಕ್ಷಣ ಅವಳ ಕೆನ್ನೆ ಕೆಂಪಾಯಿತು. ಕೋಪದಿಂದ ಅವಳ ತುಟಿ ಅದುರಲು ಪ್ರಾರಂಭವಾಯಿತು. ಐ ಪೀಸ್ ನಿಂದ ಕಣ್ಣು ತೆಗೆದು ನೇರವಾಗಿ ಸುಧನ್ವನ ಬಳಿಗೆ ಬಂದು ''ಸುಳ್ಳು ಹೇಳುಕ್ಕೆ ನಾಚಿಕೆಯಾಗುಲ್ಲವೇ'' ಅಂತ ಛೀಮಾರಿ ಹಾಕಿ ಒಳಗೆ ಹೋದಳು. ಏನೂ ಅರ್ಥವಾಗದ ಸುಧನ್ವ ತಾನೂ ದರ್ಶಕದಲ್ಲಿ ಕಣ್ಣಿಟ್ಟು ನೋಡಿದ. ಅವನಿಗೆ ತನ್ನ ಕಣ್ಣುಗಳನ್ನು ತಾನೇ ನಂಬಲಾಗಲಿಲ್ಲ. ದರ್ಶಕದಲ್ಲಿನ ಪ್ರತಿಯೊಂದು ಕಣದ ಮೇಲೆ ''ಜುಬೇದಾ'' ಎಂದು ಬರೆದಿತ್ತು.

''ಯಾರಿದು ಜುಬೇದಾ?'' ಜಡೆಮುನಿಯ ಪ್ರಶ್ನೆ ಸಹಾನುಭೂತಿಯಿಂದ ಕೂಡಿತ್ತು.

''ಅವಳು ನನ್ನ ಪರ್ಸನಲ್ ಸೆಕ್ರೆಟರಿ ಆಗಿದ್ದಳು. ಒಮ್ಮೆ ಅವಳನ್ನು ನಾನು ಪ್ರೀತಿಸುತ್ತಿದ್ದದ್ದು ನಿಜ. ಆದರೆ ಈಗ ಅದೆಲ್ಲಾ ಹಳೆಯ ಕಥೆ. ಪಾರಿ ನನ್ನ ಹೃದಯವನ್ನು ಪ್ರವೇಶಿಸಿದ ಮೇಲೆ ನಾನು ಬೇರೆ ಯಾರಿಗೂ ಅಲ್ಲಿ ಜಾಗ ನೀಡಿಲ್ಲ. ನಿಮ್ಮ ದರ್ಶಕದ್ದೇ ಏನೋ ತಪ್ಪಿರಬೇಕು...'' ಸುಧನ್ವನ ಹಲುಬುವಿಕೆ ಹೃದಯಸ್ಪರ್ಶಿಯಾಗಿತ್ತು.

''ನಿನಗೆ ಹೇಳುವುದು ಮರೆತಿದ್ದೆ. ಒಮ್ಮೆ ಲಿಖಿತವಾದ ಬರಹ ಬದಲಾಗಲು ಒಂದು ವರ್ಷ ಬೇಕಾಗುತ್ತೆ.'' ಜಡೆಮುನಿಯ ಈ ವಿವರಣೆ ಸುಧನ್ವನಿಗೆ ಸಾಂತ್ವನ ನೀಡುವುದರಲ್ಲಿ ವಿಫಲವಾಯಿತು.

**ಉಪಸಂಹಾರ**

ಹೇಳಲಿನ್ನೇನಿದೆ? ಪಾರಿಗೆ ಎಚ್ ಒನ್ ವೀಸಾ ಸಿಕ್ಕಿ ಅವಳು ಎಲ್ಲರಂತೆ ಅಮೆರಿಕಾಕ್ಕೆ ತೆರಳಿದಳು. ತನಗೇ ಗೊತ್ತಿಲ್ಲದೇ ಒಂದು ಅನಾಹುತಕ್ಕೆ ಕಾರಣಳಾದ ಜುಬೇದಾ, ನಿಸಾರ್ ಎಂಬ ಕವಿಯೊಬ್ಬನನ್ನು ಮದುವೆಯಾಗಿ ಅವನ ಪ್ರಾಣ ತಿನ್ನಲು ಪ್ರಾರಂಭಿಸಿದಳು. ಸುಧನ್ವ ತನ್ನ ಸಂಸ್ಥೆಯನ್ನು ದಕ್ಷತೆಯಿಂದ ನಡೆಸಿಕೊಂಡು ಹೋಗುತ್ತಿದ್ದರೂ, ಬಿಡುವಿನ ಸಮಯವನ್ನೆಲ್ಲಾ ಸೂಕ್ಷ್ಮದರ್ಶಕದಲ್ಲಿ ದೃಷ್ಟಿಸಿ ನೋಡುತ್ತಾ ಕಾಲ ಕಳೆಯುತ್ತಾನೆ ಎಂದು ಅವನ ಸ್ನೇಹಿತರ ದೂರು. ಎಷ್ಟು ನಿಜವೋ ಯಾರು ಬಲ್ಲರು! ■

# ಮತ್ತೊಂದು ರಾಮಾಯಣ

**● ಕುಮುದಾ ಪುರುಷೋತ್ತಮ**

ನಮ್ಮಣ್ಣನ ಮಗಳು ಸರಸಿ ಹೆಸರಿಗೆ ತಕ್ಕಂತೆ ಸರಸಿಯೇ. ಅವಳಿಗೆ ನಮ್ಮ ಭಾರತೀಯ ಪರಂಪರೆ, ಆಚಾರವಿಚಾರಗಳು, ಆಚರಣೆಗಳು, ಅಡುಗೆಯವೈವಿಧ್ಯ, ಉಡುಗೆತೊಡುಗೆಗಳು ಎಲ್ಲಾ ಆಪ್ಯಾಯಮಾನ. ಅದನ್ನೆಲ್ಲಾ ಉಳಿಸಿ ಮುಂದಿನ ಪೀಳಿಗೆಗೆ ದಾಟಿಸುವ ಬಗೆಗೂ ಅಪಾರ ವಿಶ್ವಾಸ. ಚೊಚ್ಚಲ ಹೆರಿಗೆಯಲ್ಲಿ ಅವಳಿಮಕ್ಕಳಾದಾಗ ಡಬಲ್ ಹೆರಿಗೆ ನೋವಿನಿಂದ ಮುಕ್ತಳಾದೊಡನೆ "ಬೈ ವನ್ ಗೆಟ್ ಒನ್ ಫ್ರೀ ಸ್ಕೀಮಿನಲ್ಲಿ ಈ ಮಕ್ಕಳನ್ನು ದೇವರಿಂದ ಪಡೆದೆ" ಎಂದು ತಾನೂ ನಕ್ಕು ಸುತ್ತಲಿದ್ದವರನ್ನೂ ನಗಿಸಿದ್ದಳು ಶುದ್ಧ ಮಂಕುತಿಮ್ಮನ ಧಾಟಿಯಲ್ಲಿ!

ಈಚೆಗೆ ನಮ್ಮ ಮನೆಗೆ ಬಂದು ತನ್ನ ಮಕ್ಕಳು ಅಭಿನಯಿಸುತ್ತಿರುವ ನಾಟಕ ನೋಡಲು ತನ್ನ ಮನೆಗೆ ಆಹ್ವಾನಿಸಿದಳು.

"ಏನು? ಮಕ್ಕಳು ಮಾಡ್ತಿದಾರಾ? ನೀನೇ ನಾಟಕ ಬರೆದು ನಿರ್ದೇಶಿಸುತ್ತಿದ್ದೀಯಾ?"

"ಇಲ್ಲ ಅತ್ತೆ. ಎಲ್ಲಾ ಅವ್ರೇ ಮಾಡ್ಕೊಂಡಿದ್ದಾರೆ. ನಾಟಕ ನಿರ್ದೇಶನ, ಸಂಭಾಷಣೆ, ಅಭಿನಯ ಎಲ್ಲಾ ಅವರ್ದೇ."

"ಅಷ್ಟೊಂದು ಜ್ಞಾನ ಆರು ವರ್ಷದ ಮಕ್ಕಳಿಗೆಲ್ಲಿ ಬರ್ಬೇಕು? ನೀನೇ ಎಲ್ಲೋ ಹೇಳಿಕೊಟ್ಟಿರ್ಬೇಕು" ಸಂದೇಹ ವ್ಯಕ್ತ ಪಡಿಸಿದೆ.

"ಮಕ್ಕಳು ರಾಮಾಯಣ, ಮಹಾಭಾರತ, ಭಾಗವತದ ಕಥೆಗಳ್ನ ಓದ್ಕೊಂಡಿವೆ. ಜೊತೆಗೆ ಟಿ.ವಿ ಯಲ್ಲಿ ಬರೋ ಸೀರಿಯಲ್ಗಳ್ನ ಕಣ್ಣು ಮಿಟುಕಿಸದೆ ನೋಡತ್ವೆ. ಸಂಭಾಷಣೆ ಬಾಯಿಪಾಠವಾಗಿದೆ. ಬರೋ ಭಾನುವಾರ ಮಧ್ಯಾಹ್ನ ಎರಡು ಗಂಟೆಗೆ ಅಶೋಕ ವನದ ಪ್ರಸಂಗ ನೋಡಲು ಬಾ." ಎಂದು ಆಹ್ವಾನಿಸಿದಳು. ನನಗೂ ಕುತೂಹಲವೇ. ಹೊರಟು ನಿಂತೆ.

ಅವರ ಬಂಗ್ಲೆಯ ಪೋರ್ಟಿಕೋವಿನಲ್ಲಿ ಅಕ್ಕಪಕ್ಕದ ಮನೆಯವರೆಲ್ಲಾ ನೆರೆದಿದ್ದರು. ನಾನೂ ಅವರಲ್ಲೊಬ್ಬಳಾದೆ. ಅವರ ಮನೆಯ ವಿಶಾಲವಾದ ತೋಟವೇ ಅಶೋಕವನ ಎಂದು ಸರಸಿ ವಿವರಿಸಿದಳು. ಎದುರುಗಿದ್ದ ಜಾಜಿ ಚಪ್ಪರವೇ ಸೀತೆ ಕೂರುವ ಅಶೋಕವೃಕ್ಷವಂತೆ. ಅಲ್ಲಲ್ಲಿ ಇಟ್ಟಿದ್ದ ಇಟ್ಟಿಗೆಗಳು ಸೀತೆಯನ್ನು ಕಾಯುವ ರಾಕ್ಷಸಿಯರಂತೆ! ಇಷ್ಟು ಪೀಠಿಕೆಯನ್ನು ಸರಸಿ ನೀಡಿದಳು.

ಅವಳಿ ಹನುಮಂತನಾದರೆ ಜವಳಿಯದು ಸೀತೆಯ ಪಾತ್ರ. ಅವಳಿ ತನ್ನಪ್ಪನ ಟೈಯ್ಯನ್ನು ಹಿಂದೆ ಚಡ್ಡಿಯ ಬೆಲ್ಟಿಗೆ ಸಿಕ್ಕಿಸಿಕೊಂದು ಬಾಲವಾಗಿಸಿದ್ದ. ಅಮ್ಮನ ಲಿಪ್ ಸ್ಟಿಕ್ಕನ್ನು ಬಾಯಿಯ ಸುತ್ತ ಬಳಿದುಕೊಂಡು ಬಾಯಿ ಉಬ್ಬಿಸಿಕೊಂಡಿದ್ದ. ಕೈಯೊಳಗಿತ್ತು ಪ್ಲಾಸ್ಟಿಕ್ಕಿನ ಗಧೆ. ಜವಳಿ ತನ್ನಮ್ಮನ ದುಪ್ಪಟಾವನ್ನು ಸೀರೆಯಂತೆ ಸುತ್ತಿಕೊಂಡು ಕೂದಲು ಹರವಿಕೊಂಡು ಜಾಜಿ ಚಪ್ಪರದಡಿ ಸೀತೆಯಾಗಿ ಹ್ಯಾಪ್ ಮೋರೆ ಮಾಡಿಕೊಂಡು ಕುಳಿತಳು.

ಸರಸಿ ಹುರುಪಿನಿಂದ ವಿಷಲ್ ಹಾಕುತ್ತಲೂ ಹನುಮ ಗಧೆ ಹಿಡಿದು ಅಶೋಕವನ ಪ್ರವೇಶಿಸಿದ. ಪ್ರೇಕ್ಷಕರ ಚಪ್ಪಾಳೆ ಅವನನ್ನು ಹುರಿದುಂಬಿಸಿರಬೇಕು.

ಸೀದಾ ಸೀತೆಯಬಳಿ ಹೋಗುವ ಬದಲು ತನ್ನ ಪರಾಕ್ರಮ ತೋರಿಸಲು ಅನುವಾದ. ಒಮ್ಮೆಗೇ ಸಾಕ್ಷಾತ್ ಕಪಿಯ ಆವಾಹನೆ ಯಾಯಿತು. "ಜೈ ಶ್ರೀ ರಾಮ್" ಎಂದು ಕಿರುಚ್ಚುತ್ತಾ ಓಡುತ್ತಾ ತೋಟವನ್ನು ನಾಲ್ಕಾರು ಬಾರಿ ಸುತ್ತಿದ. ನಡುನಡುವೆ ನೆಗೆತ ಕುಪ್ಪಳಿಸುವಿಕೆ ಬೇರೆ! ಸೀಬೇ ಮರವನ್ನು ಏರಿ ನಾಲ್ಕೈದು ಕಾಯಿ ಕಿತ್ತು ಥೇಟ್ ಕಪಿಯಂತೆಯೇ ನಾಲ್ಕು ದಿಕ್ಕಿಗೆ ಎಸೆದ. ಪಾಪ, ಕಾಯುತ್ತಾ ಕುಳಿತಿದ್ದ ಜವಳಿಗೆ ಹಲ್ಕಚ್ಚುವಂತಾದರೂ ಸಂಯಮ ತೋರಿ ಹಲ್ಕಿರಿದಳು. ಉರಿಬಿಸಿಲಿಗೆ ಜಾಜೀಚಪ್ಪರದ ನೆರಳು ಏನೇನೂ ಸಾಲದಾಯಿತು. ವಾರೆಗಣ್ಣಿನಲ್ಲಿ ಅವಳಿಯ ಅಂಗ ಚೇಷ್ಟೆಗಳನ್ನು ನೋಡುತ್ತಾ ಅಸಹಾಯಕಳಾಗಿ ಕುಳಿತೇ ಇದ್ದಳು.

ಅಂತೂ ಎಷ್ಟೋ ವೇಳೆಯ ಬಳಿಕ ಆಂಜನೇಯ ಕೊನೆಗೂ ಬಂದು ಅವಳ ಮುಂದೆ ನಿಂತ. " ನಮೋ ಮಾತಾ ನಮೋ ನಮಃ. ನಾನು ಆಂಜನೇಯ. ಶ್ರೀ ರಾಮನ ಬಂಟ. ನಿನ್ನನ್ನು ಹುಡುಕಿಕೊಂಡು ಬರಲು ರಾಮಚಂದ್ರ ಪ್ರಭು ನನ್ನನ್ನು ಕಳುಹಿಸಿದ್ದಾನೆ."

"ನಾನು ನಿನ್ನನ್ನು ನಂಬುವುದಿಲ್ಲ. ನೀನು ಕಪಿಯ ವೇಶ ಧರಿಸಿ ಬಂದ ರಾಕ್ಷಸನಿರಬಹುದು" ಎಂದಳು ಸೀತೆ.

"ಇಲ್ಲ ಮಾತೇ, ನಾನು ವಾನರ ಕುಲದ ಆಂಜನೇಯ. ನನ್ನನ್ನು ರಾಮನೇ ಕಳುಹಿಸಿದ್ದಾನೆ. ಇಕೋ ರಾಮ ನಿನಗೆ ಕೊಡಲು ಹೇಳಿದ ಮುದ್ರೆಯುಂಗುರ. ತೆಗೆದು ನೋಡು. ಆಗ ನೀನೇ ನಂಬುತ್ತಿಯೆ." ಎಂದು ತಾನು ಕಚ್ಚಿ ಉಳಿದಿದ್ದ ಸೀಬೇ ಹೀಚನ್ನು ನೀಡಿದ. ತುದಿ ಬೆರಳಿನಿಂದ ಅದನ್ನು ಸ್ವೀಕರಿಸಿದ ಸೀತೆ ನೋಡಿದಂತೆ ಮಾಡಿ ನೆಲಕ್ಕೆ ಹಾಕಿದಳು."

"ಹೌದು. ಇದು ರಾಮನದೇ ಉಂಗುರ. ನಾನು ಈಗ ನಿನ್ನನ್ನು ನಂಬುತ್ತೇನೆ. ರಾಮನಿಗೆ ಶೀಘ್ರವೇ ಬಂದು ನನ್ನನ್ನು ಬಿಡುಗಡೆ ಮಾಡಿ ಕರೆದೊಯ್ಯುವಂತೆ ಹೇಳು"

"ಅವನೇಕೆ ಬರಬೇಕು ದೇವಿ? ಸಾಗರವನ್ನೇ ಹಾರಿಬಂದ ನಾನಿಲ್ಲವೇ ನಿಮ್ಮನ್ನು ಕರೆದೊಯ್ಯಲು? ನೀವು ಹೂಂ ಎನ್ನಿ. ಈಗಲೇ ಹೆಗಲಮೇಲೆ ಕುಳ್ಳಿರಿಸಿ ರಾಮನ ಬಳಿ ಕರೆದೊಯ್ಯುವೆ."

"ಬೇಡಪ್ಪಾ. ಶೂರ ರಾಮನ ಪತ್ನಿಯಾಗಿ ಕಳ್ಳಿಯಂತೆ ಇಲ್ಲಿಂದ ತಪ್ಪಿಸಿಕೊಂಡು ಹೋಗಲಾರೆ. ನನ್ನ ಗಂಡನೇ ಬಂದು ರಾವಣನ ಸಂಹಾರವಮಾಡಿ ಕರೆದೊಯ್ಯುವಂತೆ ಹೇಳು." ಇದು ಜವಳಿ ಹೇಳಬೇಕಿದ್ದ ಮಾತುಗಳು. ಆದರೆ ನಡೆದದ್ದೇ ಬೇರೆ. ತನ್ನನ್ನು ಇಷ್ಟು ಹೊತ್ತು ಬಿಡುಬಿಸಿಲಿನಲ್ಲಿ ಕಾಯಿಸಿ ಬೇಯಿಸಿದ್ದ ಅವಳಿಯಮೇಲೆ ಅಪಾರ ಸಿಟ್ಟಾಗಿದ್ದಳು. ಇನ್ನೂ ಲಂಕಾದಹನವೂ ಬಾಕಿ ಇತ್ತು. ಆಗ ಇನ್ನೇನು ಚೇಷ್ಟೆ ಮಾಡುವನೋ. ಜಾಗ ಬಿಟ್ಟೆದ್ದರೆ ಸಾಕಾಗಿತ್ತು. ಎದ್ದು ನಿಂತಳು.

"ಆಂಜನೇಯ. ನಿನ್ನ ಮಾತಿನಂತೆಯೇ ಆಗಲಿ. ನಾನು ನಿನ್ನ ಸಂಗಡ ಬಂದುಬಿಡುತ್ತೇನೆ. ರಾಮನ ಬಳಿ ಸೇರಿಸಿಬಿಡು" ಎಂದವಳು ಅವಳಿಯ ಕೈ ಹಿಡಿದೆಳೆಯುತ್ತಾ ಬೆಪ್ಪನಂತೆ ನೋಡುತ್ತಿದ್ದ ಅವಳಿಯ ಕೈ ಹಿಡಿದು ನಡೆದು ಮತ್ತೊಂದು ರಾಮಾಯಣವನ್ನೇ ಬರೆದುಬಿಟ್ಟಳು!

ರಾಮರಾವಣ ಯುದ್ಧದ ರಕ್ತಪಾತ, ಹಿಂಸೆ, ಸಾವು ನೋವುಗಳನ್ನು ತಡೆದ ಜವಳಿಗೆ ಕನಿಷ್ಟ ನೋಬೆಲ್ ಶಾಂತಿ ಪ್ರಶಸ್ತಿಯನ್ನಾದರೂ ನೀಡಬೇಕಲ್ಲವೇ? ■

● ದಂಸಳ

- **ಗಾದೆ ಸುಳ್ಳಾದರೂ ಗೂಗಲ್ ಸುಳ್ಳಾಗದು.**
- ಊರಿಗೆ ಬಂದವಳು ವಾಟ್ಸಪ್‌ಗೆ ಬರದೆ ಇರುತ್ತಾಳೆಯೆ?
- **ಬೆಳ್ಳಗೆ ಇರೋದೆಲ್ಲ ಸೇಂದಿ ಅಲ್ಲ.**
- ಅಜ್ಜಿ ಉವಾಚ: ನನಗೆ ಕೆಮ್ಮು ಕಲಿಸೋದೂ ಒಂದೇ ಕೊಹ್ಲಿಗೆ ಬ್ಯಾಟಿಂಗ್ ಹೇಳಿಕೊಡೋದೂ ಒಂದೇ.
- **ರಬ್ಬರ್ ಬ್ಯಾಂಡ್ ಕಳ್ಳಿ ಅಂದರೆ ಪೋನಿಟೈಲ್ ಮುಟ್ಟಿ ನೋಡಿಕೊಂಡಳಂತೆ.**
- ಬಿ ಪಿ ಏರಿದ್ದರೆ ಮಾನಿಟರ್ ತಪ್ಪೇ?
- **ಅತ್ತೆಗೊಂದು ಕಾಲರ್ ಸೊಸೆಗೊಂದು ಕಾಲರ್.**
- ಅತೃಪ್ತರಿಗೆ ಚೆಲ್ಲಾಟ, ನಾಯಕರಿಗೆ ಪ್ರಾಣ ಸಂಕಟ.
- **ಮಾತು ಬಂಗಾರ, ಮೌನ ಪ್ಲಾಟಿನಂ –ಈಗ.**
- ಹೊಸದರಲ್ಲಿ ಶಾಸಕ ಎತ್ತಿತ್ತಿ ಆಶ್ವಾಸನೆ ನೀಡಿದ.
- **ಮೌಸ್ ಇರೋರೆಲ್ಲಾ ಟೆಕಿಗಳು ಆಗುವುದಿಲ್ಲ, ಫಾರ್ ಎಕ್ಸಾಂಪಲ್, ಗಣೇಶ.**
- ಇದ್ದದ್ದು ಇದ್ದ ಹಾಗೇ ಹೇಳಿದರೆ ಸೀಡಿಗೇ ಒದ್ದರಂತೆ.
- **ಕಂಪ್ಯೂಟರ್ ಒರೆಸೋ ಗುಂಡಾ ಅಂದ್ರೆ ಪಾಸ್‌ವರ್ಡ್ ಏನು ಎಂದು ಕೇಳೋದೆ?**
- ಭಾಷಣ ಸುಳ್ಳಾದರೂ ಸೀಡಿ ಸುಳ್ಳಾಗದು.
- **ಜಿಎಸ್‌ಟಿ ಮುಂದೆ ಗೋಳು ಹೇಳಿಕೊಂಡರೆ ಏನು ಲಾಭ?**
- ಸೂಟ್ ಕೇಸ್ ಇದ್ದಷ್ಟು ಕೆಲಸ ಮಾಡಿಕೊಡು..
- **ಪೈಸಾಗೆ ತಕ್ಕ ಪಿಜ್ಜಾ.**
- ಬಂದದ್ದೆಲ್ಲ ಬರಲಿ 'ಗೋ'ನ ದಯೆ ಇರಲಿ.
- **ಸೀಡಿ ಮಾಡುವ ಮೊದಲೇ ಲಾಭಗಳನ್ನು ಎಣಿಸಬೇಡ.**
- ಧರ್ಮಕ್ಕೆ ರಿಚಾರ್ಜ್ ಮಾಡಿದರೆ ಎಷ್ಟು ಜಿಬಿ ಎಂದು ಕೇಳಿದನಂತೆ

# ಡುಂಡಿ ಅಪಾರ್ಥ ಕೋಶ

● ಎಚ್. ಡುಂಡಿರಾಜ್

**ಅಪಾರ್ಥ:** ಪಾರ್ಥನ ವಿರೋಧಿ ಅರ್ಜುನ

**ಪಾಂಚಾಳಿ:** ಪಾನ್ ಸೇವಿಸುವ ಅಭ್ಯಾಸ

**ಧನಂಜಯ:** ಲಾಟರಿಯಲ್ಲಿ ದುಡ್ಡು ಗೆದ್ದವ

**ದಸ್ಕತ್ತು:** ದಶಕಂಠ ರಾವಣ

**ನಡುಗನ್ನಡ ಸಾಹಿತ್ಯ:** ಪೋಲಿ ಪದಗಳನ್ನು ಹೆಚ್ಚಾಗಿ ಬಳಸುವ ಸಾಹಿತ್ಯ

**ಬಿಡುಗನ್ನಡ ಸಾಹಿತ್ಯ:** ಯಾರೂ ಗಮನಿಸದೆ ಬಿಟ್ಟುಹೋದ ಸಾಹಿತ್ಯ

**ಇಳಿಗನ್ನಡ ಸಾಹಿತ್ಯ:** ಓದುವವರ ಸಂಖ್ಯೆ ಇಳಿಮುಖವಾಗುತ್ತಿರುವ ಸಾಹಿತ್ಯ

**ಪಬ್ಲೀಶ್ವರ:** ಉದಯೋನ್ಮುಖರ ಕೃತಿಗಳನ್ನು ಪ್ರಕಟಿಸಿ ಪ್ರೋತ್ಸಾಹಿಸುವ ಪ್ರಕಾಶಕ

**ವಾಚಾಮಗೋಚರ:** ವಾಚಿದ್ದರೂ ನೋಡದೆ ಗಂಟೆಗಟ್ಟಲೆ ಮಾತಾಡುವವ

**ಕೊರಕಾಸುರ:** ವಿಷಯವೇ ಇಲ್ಲದೆ ಕೊರೆಯುವವ

**ಕುದೀರ್ಘ ಭಾಷಣ:** ತುಂಬಾ ಉದ್ದವಾದ ಕೆಟ್ಟ ಭಾಷಣ

**ಭಾಷಣಕೋರ:** ಭಾಷಣದಿಂದ ಬೇರೆಯವರ ಸಮಯ ಕದಿಯುವವ

**ಕಾರ್ಯಕರ್ಮ:** ತುಂಬಾ ಕೆಟ್ಟ ಕಾರ್ಯಕ್ರಮ

**ಶಬ್ದಭೇದಿ:** ನಿರಂತರವಾಗಿ ಮಾತಾಡುವುದು

**ವಾಚಾಳಿ:** ಆಗಾಗ ವಾಚು ನೋಡುವ ಚಾಳಿ

**ವರಿಜನರು:** ಸದಾ ಚಿಂತಿಸುವವರು

**ಗುರಿಜನರು:** ಗುರಿ ಇಟ್ಟುಕೊಂಡು ಕೆಲಸಮಾಡುವವರು

**ಉಗುಳುಭಟ:** ಅಭಿನಂದನಾ ಭಾಷಣಮಾಡುವಾಗ ಎಂಜಲು ಸಿಡಿಸುವವ

**ಲಂಚಕಜ್ಜಾಯ:** ದೇವರಿಗೆ ಅರ್ಪಿಸುವ ನೈವೇದ್ಯ

**ಋಣಾನುಬಂಧ:** ಹೆಣ್ಣು ಮತ್ತು ಗಂಡು ಇಬ್ಬರ ಮನೆಯಲ್ಲೂ ಇರುವ ಸಾಲದಿಂದ ಕುದುರಿದ ಸಂಬಂಧ

**ಹಣಾನುಬಂಧ:** ಹೆಣ್ಣು ಮತ್ತು ಗಂಡು ಇಬ್ಬರ ಮನೆಯಲ್ಲೂ ಇರುವ ಹಣದಿಂದ ಕುದುರಿದ ಸಂಬಂಧ

**ನೊಣಾನುಬಂಧ:** ಹೆಣ್ಣು ಮತ್ತು ಗಂಡು ಇಬ್ಬರ ಮನೆಯಲ್ಲೂ ಇರುವ ನೊಣದಿಂದ ಕುದುರಿದ ಸಂಬಂಧ

**ಶ್ರಾವಣ ಮೋಸ:** ಮಳೆಯೇ ಬಾರದ ಶ್ರಾವಣ, ಶ್ರಾ–ಒಣ ಮಾಸ.

**ಕ್ರೀಡಾಚಟು:** ಟೀವಿಯಲ್ಲಿ ಬರುವ ಎಲ್ಲಾ ಆಟಗಳನ್ನೂ ನೋಡುವವ

**ಉಪದ್ರವ:** ಹೆಚ್ಚು ಕುಡಿದರೆ ತೊಂದರೆ ಕೊಡುವ ಪಾನೀಯ

**ಮದ್ಯಮಾವತಿ:** ಕುಡಿದವರು ಹಾಡುವ ಗೋಳಿನ ರಾಗ

**ನಸ್ಯಾಹಾರಿ:** ತುಂಬಾ ನಸ್ಯ ಸೇದುವವ

**ಶಾಖಾಹಾರಿ:** ಬ್ಯಾಂಕ್ ಶಾಖೆಯನ್ನು ಮುಳುಗಿಸುವ ಮೆನೇಜರ್

**ಮೆಜಾರಿಟಿ:** ಚಾಯ್ ಪೇ ಚರ್ಚಾ ಮಾಡಿ ಗಳಿಸಿದ ಬಹುಮತ

**ಜಿಎಸ್‌ಟಿ:** ಗೆದ್ದ ಬಳಿಕ ಮೋದಿ ಎಲ್ಲರಿಗೂ ಕುಡಿಸುತ್ತಿರುವ ಟಿ.

**ಚಾತುರ್ಯ, ಚಾಕಚಕ್ಯತೆ :** ಚಾ ಕುಡಿಸಿ ಕೆಲಸ ಮಾಡಿಸಿಕೊಳ್ಳುವ ಕಲೆ. ಅಂಥವರಿಗೆ ಚಾಲಾಕಿ, ಚಾಣಾಕ್ಷ ಅಂತಲೂ ಹೇಳುತ್ತಾರೆ.

**ಟೀಸರ್:** ಸಕ್ಕರೆ ಇಲ್ಲದ ಟೀ ಕೊಟ್ಟು ಕುಡಿಯಿರಿ ಎಂದು ಕೆಣಕುವ ಮಡದಿ.

**ಪೊಲಿಟೀಶಿಯನ್:** ಟೀ ಕುಡಿವ ರಾಜಕಾರಣಿ.

**ಕರೆವೀರ:** ಭಾಷಣದಲ್ಲಿ ಕರೆ ಕೊಡುವ ವೀರ.

**ಬಾಸುಮತಿ :** ಬಾಸ್‌ಗೆ ಇಷ್ಟವಾದ ಅಕ್ಕಿ

**ಬಾಸುಂಡೆ:** ಬಾಸ್‌ಗೆ ಇಷ್ಟವಾಗುವ ಉಂಡೆ.

**ಸಾರು:** ಇದೂ ಬಾಸ್‌ಗೆ ತುಂಬಾ ಇಷ್ಟ.

**ಹಿರಿಯ ಸಾಹಿತಿ:** ವಯಸ್ಸಾದ ಮೇಲೆ ಎಲ್ಲ ಸಾಹಿತಿಗಳಿಗೂ ಬರುವ ಪ್ರಶಸ್ತಿ.

**ದಿವಂಗತ:** ತುಂಬಾ ತಡವಾಗಿ ಅಂದರೆ ಲೇಟ್ ಆದಮೇಲೆ ಬರುವ ಪ್ರಶಸ್ತಿ.

**ಭಾರದ ರತ್ನ:** ಅತ್ಯಂತ ಹೆಚ್ಚು ತೂಕದವರಿಗೆ ಕೊಡಬಹುದಾದ ಪ್ರಶಸ್ತಿ.

**ಸುರತ ರತ್ನ:** ರತಿ ಕ್ರೀಡೆಯಲ್ಲಿ ಗೆಲ್ಲುವರಿಗೆ ಕೊಡಬಹುದಾದ ಪ್ರಶಸ್ತಿ.

**ಮಾಲ್ ರತ್ನ:** ಮಾಲುಗಳಲ್ಲಿ ಹೆಚ್ಚು ಸಮಯ ಕಳೆಯುವ ಮಹಿಳೆಯರಿಗೆ ಕೊಡಬಹುದಾದ ಪ್ರಶಸ್ತಿ.

**ಆಸ್ಕರ್ ಪ್ರಶಸ್ತಿ:** ಅರ್ಜಿಹಾಕಿ ಕೇಳಿದರೆ ಮಾತ್ರ ಸಿಗುವ ಪ್ರಶಸ್ತಿ

**ಪ್ರೀತಿಸಿರಿ:** ಸಂಪತ್ತನ್ನು ಪ್ರೀತಿಸಿ.

**ಚಕ್ಕಂದ:** ಹಣವಿಲ್ಲದೆ ಚೆಕ್ ಕೊಡುವ ಕಳ್ಳಾಟ

**ಮೂಡ್ ನಂಬಿಕೆ:** ಬರೆಯಲು ಮೂಡ್ ಬೇಕೆಂಬ ನಂಬಿಕೆ.

**ಕೈಕೋಚು:** ಕಾಂಗ್ರೆಸ್ ಪಕ್ಷದ ಸಲಹೆಗಾರ

**ಕರವಸ್ತ್ರ:** ಮೈತ್ರಿ ಸರ್ಕಾರದಲ್ಲಿ ಕಮಾರಣ್ಣ ಅಳುತ್ತಿದ್ದಾಗ ಕಾಂಗ್ರೆಸ್‌ನವರು ಕೊಟ್ಟ ಟವೆಲ್

**ಕರನಿರಾಕರಣೆ:** ಪ್ರೀತಿಸಿ ನಂತರ ಪಾಣಿಗ್ರಹಣಕ್ಕೆ ಒಪ್ಪದೆ ಕೈಕೊಡುವುದು.

**ಲವಂಗ:** ನೋಡಿದಾಕ್ಷಣ ಲವ್ ಹುಟ್ಟುವ ಅಂಗ, ಕಣ್ಣು.

**ಏಕಲವ್ಯ:** ಗುರುವಿಲ್ಲದೆ ಲವ್ ಮಾಡುವ ಕಲೆ ಕಲಿವ ಯುವಕರು.

**ಕ್ರೈಂ ಮಿನಿಸ್ಟರ್:** ಕ್ರಿಮಿನಲ್ ಹಿನ್ನೆಲೆಯುಳ್ಳ ಮಂತ್ರಿ

**ಕ್ರಿಮಿನಲ್ಲ:** ವರದಕ್ಷಿಣೆಗಾಗಿ ಹೆಂಡತಿಯನ್ನು ಹಿಂಸಿಸುವವ

**ಇಂಚುಕ:** ಕೆಲವೇ ಇಂಚುಗಳಷ್ಟಿರುವ ಅತೀ ಚಿಕ್ಕ ಕಂಚುಕ.

**ಚಾರ್ವಾಕ:** ದಿನಕ್ಕೆ ನಾಲ್ಕು ಸಲ ವಾಕ್ ಮಾಡುವವ

**ಪಶ್ಚಾತ್ತಾಪ:** ಬಿಸಿ ಚಾ ಕುಡಿದು ನಾಲಿಗೆ ಸುಟ್ಟುಕೊಂಡಾಗಿನ ಅನಿಸಿಕೆ–ಟೀ ಚುರ್!

**ಮದ್ಯಮ ಮಾರ್ಗ :** ಮಿತವಾಗಿ ಕುಡಿಯುವುದು

**ಕಾಲ್ಮರಿ:** ಫೋನ್ ಮಾಡಲು ಮರೆಯುವುದು

**ಹಲೋಪತಿ:** ಫೋನಲ್ಲಿ ಮಾತಾಡುವ ಗಂಡ

**ಟೆಲಿಪತಿ:** ಟಿವಿ ನೋಡುವ ಗಂಡ

**ರಕ್ಕಸ:** ಪ್ಲಾಸ್ಟಿಕ್ ಎಂಬ ನಾಶವಾಗದ ಕಸ

**ತಾಳ್ಮೆ:** ಮೇ ತಿಂಗಳಲ್ಲಿ ಬಳ್ಳಾರಿಯ ಸೆಕೆ ಸಹಿಸಿಕೊಳ್ಳುವುದು

**ನಿವೃತ್ತ ಪತ್ರಿಕೆ:** ರಿಟೈರ್ ಆದವರು ಓದುವ ಪತ್ರಿಕೆ

**ಹನಿಕೇತನ:** ಹನಿಗವಿಯ ಮನೆ

■

# ವರ್ಕ್ ಫ್ರಂ ಹೋಂ ಕಲ್ಚರು

● ಎಸ್. ರಾಮನಾಥ್

‘ವರ್ಕ್ ಫ್ರಂ ಹೋಂ ಮಾಡ್ತೀನಿ’ ಎಂದ ಮಗರಾಯ.

‘ಓಹ್ ನೋ...’ ಸೀರಿಯಲ್‌ನಲ್ಲಿ ‘ಪಾಯ್ಸನ್ ಅತ್ತೆ’ಯ ಕೈಗೆ ಸಿಲುಕಿದ ‘ಗಲಿಬಲ್ ಸೊಸೆ’ ಯ ಆಕ್ರಂದನದ ಝೆರಾಕ್ಸ್ ಕಾಪಿ ಆಗಿತ್ತು ಪತ್ನಿಯ ಕೂಗು.

‘ಏನಾಯಿತು ಡಿಯರ್?’ ಎಂದೆ.

‘ಲೈಫೆಲ್ಲಾ ಇಷ್ಟೇ ಆಗ್ಹೋಯ್ತಲ್ರೀ... ಅವನು ಸ್ಕೂಲಲ್ಲಿದ್ದಾಗ ಅವನು ಆಟ ಆಡೋವ್ನು, ನಾನು ಹೋಂ ವರ್ಕ್ ಮಾಡಕ್ಕೆ ಹೆಣಗಿದೆ. ಈಗ ‘ವರ್ಕ್ ಫ್ರಂ ಹೋಂ’ ಅಂತ ಲ್ಯಾಪ್‌ಟಾಪ್ ಸ್ಕ್ರೀನ್‌ಗೆ ಕರ್ಸರ್ ತರಹ ಅಂಟ್ಕೊಂಡಿರ್ತಾನೆ, ನಾನು ಹೋಂ ವರ್ಕ್ ಮಾಡ್ತಾ ಇರ್ತೀನಿ. ಹಿಸ್ ವರ್ಕ್ ಫ್ರಂ ಹೋಂ ಈಸ್ ಇಂಜ್ಯೂರಿಯಸ್ ಟು ಮೈ ಹೆಲ್ತ್’

‘ಬ್ರೇಕಿಂಗ್ ನ್ಯೂಸ್ ಅನೌನ್ಸರ್ ಅರಚಾಟಕ್ಕೆ ರೇಡಿಯೋ ಜಾಕಿ ಸ್ಪೀಡ್ ಸೇರಿಸ್ಕೊಂಡು ವಟಗುಟ್ತೀಯಲ್ಲಾ, ಇಗೋ ನಿನಗೆ ‘ಒಟಪುತ್ರಶಾಯಿ’ ಎಂಬ ಬಿರುದನ್ನಿತ್ತಿದ್ದೇನೆ...’

‘ವಟಪತ್ರಶಾಯಿ ಅನ್ನೋದು ಕೇಳಿದ್ದೀನಪ್ಪ, ‘ಒಟಪುತ್ರಶಾಯಿ’ ಅಂದ್ರೇನು?’

‘ಪುತ್ರ ಏನ್ಮಾಡಿದರೂ ಒಟಗುಟ್ಟೋ ತಾಯೀನೇ ಒಟಪುತ್ರತಾಯಿ. ಅವನ್ಪಾಡಿಗೆ ವರ್ಕ್ ಫ್ರಂ ಹೋಂ ಮಾಡಲಿ ಬಿಡು’

‘ದೇರ್ ಲೈಸ್ ದ ಪ್ರಾಬ್ಲಮ್ಮು ಮೈ ಡಿಯರ್ ವರ್ಸ್ಟ್ ಹಾಫೂ....’

‘ವರ್ಸ್ಟ್ ಹಾಫೂ...? ಏನೇ ಇದು ಹೊಸ ಟೈಟಲ್ಲೂ?’

‘ಮೇಲ್ ಷುವಾನಿಸ್ಟ್ ಪಿಗ್‌ಗಳಲ್ಲದವರು ಹೆಂಡತಿಯನ್ನ ಬೆಟರ್ ಹಾಫ್ ಅಂತ ಕರೀತಾರೆ. ಇಟ್ ಆಟೋಮ್ಯಾಟಿಕಲಿ ಇಂಪ್ಲೈಸೂ ದಟ್ ಹಸ್ಬೆಂಡೂ ಈಸ್ ದ ವರ್ಸ್ಟ್ ಹಾಫೂ... ನೀವ್ಹೇಳಿದ್ದಾಗೆ ಮಗ ‘ಅವನ್ಪಾಡಿಗೆ’ ಮಾಡ್ಕೊಂಡಿದ್ರೆ ನನಗೂ ತೊಂದರೆ ಇರ್ತಿರ್ಲಿಲ್ಲ. ಅವನ ಫಿಂಗರ್ರುಸ್ ಮೊಬೈಲ್ ಸ್ಕ್ರೀನ್ ಮೇಲೆ ಆಡೋದಕ್ಕಿಂತ ಫಾಸ್ಟಾಗಿ ಅವನ ಮೌತು ಕ್ರಂಚಿ ಐಟಂಗಳನ್ನ ಮಂಚ್ ಮಾಡ್ತಿರತ್ತೆ. ಚಿಪ್ಸು, ಪೀಟ್ಝಾ, ಪಾಪ್‌ಕಾರ್ನ್, ಪಕೋಡ, ಎಟ್ಸೆಟ್ರಾ ಎಟ್ಸೆಟ್ರಾಗಳ ಅಸೆಂಬ್ಲಿ ಲೈನೇ ಅವನ ಮುಂದೆ ಬರ್ತಿರ್ಬೇಕು. ಐ ಹೇಟ್ ವರ್ಕ್ ಫ್ರಂ ಹೋಂ’ ಘೋಷಿಸಿದಳು ಮಡದಿ.

‘ಆದರೆ ವರ್ಕ್ ಫ್ರಂ ಹೋಂ ಒಂದು ಥರಾ ಕಾಟೇಜ್ ಇಂಡಸ್ಟ್ರೀನೇ ಡಿಯರ್’

‘ನಿಜ. ಏಜ್ ಆಗಿರೋವ್ರ ತರಹ ಕಾಟ್ ಮೇಲೆ ಮಲಗಿಕೊಂಡೇ ಬೆರಳು ಕುಟ್ಟೋದನ್ನ ಕಾಟ್–ಏಜ್ ಇಂಡಸ್ಟ್ರಿ ಅನ್ನಬಹುದು. ಮನೇಲಿರೋ ನನ್ನಂತಹ ಏಜ್ ಆದವರಿಗೆ ಕಾಟ ಕೊಡೋದ್ರಿಂದಾನೂ ಕಾಟೇಜ್ ಇಂಡಸ್ಟ್ರಿ ಅನ್ನಬಹುದು’

‘ಥ್ಯಾಂಕ್ಸ್’

‘ಯಾವುದಕ್ಕೆ?’

‘ನೀನು ಏಜ್ ಆಗಿದೆ ಅಂತ ಒಪ್ಕೊಂಡಿದ್ದಕ್ಕೆ’

‘ನಿಮ್ಮಂತಹವರ ಜೊತೆಗಿರುವಾಗ ಏಜ್ ಆಗುವುದು ಸಹಜವೇ’

‘ವಾಟ್ ಡೂ ಯೂ ಮೀನ್?’

‘ಕಂಪನಿಯ ಮ್ಯಾನೇಜರ್ ಅಲ್ಲವೇ ನೀವು! ನಿಮ್ಮ ಕಂಪನಿ, ಅರ್ಥಾತ್ ಸಹವಾಸದಲ್ಲಿರುವ ಎಲ್ಲ ಮ್ಯಾನ್‌ಗಳ ಮತ್ತು ವುಮನ್‌ಗಳ ಏಜರ್ ನೀವು. ನಿಮ್ಮೊಂದಿಗೆ ಏಗೋವ್ರಿಗೆ ಬೇಗ ವಯಸ್ಸಾದಹಾಗೆ ಅನ್ನಿಸಿಬಿಡತ್ತೆ. ಎಬೌಟ್ ಮೈಸೆಲ್ಫ್ ಏಜಿಂಗೂ... ನನ್ನ ಮನಸ್ಸು ಮೆಚ್ಯೂರ್ ಆಗಿದೇಂತ ಅರ್ಥವಷ್ಟೇ ವಿನಹ ಫಿಸಿಕಲಿ ನಾನು ಮೆಟರ್ನಲ್ ಬ್ಯೂಟಿ’

‘ಮೆಟರ್ನಲ್ ಬ್ಯೂಟಿ?’

‘ಹೆಣ್ಣು ಮದರ್ ಆದ್ಮೇಲೂ ಎಟರ್ನಲ್ ಬ್ಯೂಟಿ ಆಗಿ ಕಂಟಿನ್ಯೂ ಮಾಡೋದೇ ಮೆಟರ್ನಲ್ ಬ್ಯೂಟಿ. ಆ ಬ್ಯೂಟಿಗೆ ಎ ಷ್ಯಾಡೋ ಆಫ್ ಸನ್ ಬರ್ನೇ ನಮ್ಮ ಸನ್‌ನ ವರ್ಕ್ ಫ್ರಂ ಹೋಂ ಕಲ್ಚರ‍್ರು. ಬರ್ತಾ ಬರ್ತಾ ಎಲ್ಲವನ್ನೂ ಕಲ್ಚರ್ ಅನ್ನಕ್ಕೆ ಆರಂಭಿಸಿವೆ ಈಗಿನ ಜನರೇಷನ್ನು. ಪಬ್ ಕಲ್ಚರ್ ಅಂತ ಕರೀತಾರೆ. ಪಬ್ಬೇ ಬೇರೆ, ಕಲ್ಚರ‍್ರೇ ಬೇರೆ ಅಂತಾನೂ ಗೊತ್ತಿಲ್ಲದ ಗುಗ್ಗೂಗಳು’ ಯೆಲ್ಲೋಯಿಂದ ರೆಡ್‌ಗೆ ಸಿಗ್ನಲ್ ಚೇಂಜ್ ಆಗುವಾಗ ಅಡ್ಡಾದಿಡ್ಡಿ ಓಡುವ ಓಲಾ ಕಾರಿನಂತೆ ನಾಲಿಗೆಯನ್ನು ಹರಿಬಿಟ್ಟಳು ಮಡದಿ.

‘ಹೋಲ್ಡಾನ್ ಎ ಮಿನಿಟ್ ಮದರ್; ವರ್ಕ್ ಫ್ರಂ ಹೋಂ ಈಸ್ ಎ ಕಲ್ಚರ್. ಇದಕ್ಕೆ ನಾನು ಪುರಾವೆಗಳನ್ನು ಒದಗಿಸಬಲ್ಲೆ’ ಮೂಗು ತೂರಿಸಿದ ಮಗರಾಯ.

‘ಗೋ ಅಹೆಡ್’ ಎಂದೆ. ರಾಜಾ ರೋರರ್ ರಾಕೆಟ್‌ಗಳಂತೆ ಧುಮ್ಮಿಕ್ಕುತ್ತಿದ್ದ ಮಡದಿಯ ರಭಸದ ನುಡಿಪಾತಕ್ಕೆ ಅಡ್ಡ ಬರುವುದು ನನ್ನ ದೃಷ್ಟಿಯಲ್ಲಂತೂ ಹಿಮಾಲಯನ್ ಅಚೀವ್‌ಮೆಂಟ್!

‘ಗಜೇಂದ್ರನ ಕಾಲನ್ನ ಮೊಸಳೆ ಹಿಡ್ಕೊಂಡಿತ್ತು. ಗಜೇಂದ್ರ ಗಾಬರಿಯಿಂದ ವಿಷ್ಣುವನ್ನ ಕೂಗಿದ. ವಿಷ್ಣು ಚಕ್ರ ಕಳಿಸಿದ. ಚಕ್ರ ಅದಕ್ಕೆ ಒಪ್ಪಿಸಿದ್ದ ‘ಕಟ್ ತ್ರೋಟ್’ ಕೆಲಸ ಮಾಡಿ ವಾಪಸ್ ಹೋಯ್ತು. ಅಮೆರಿಕ ಆರ್ಡರ್ ಕೊಟ್ಟು, ನಾವು ಸಾಫ್ಟ್‌ವೇರಿಂದ ಕೆಲಸ ಮಾಡೋಹಾಗೇ ಅದೂ ಸಹ. ಗಜೇಂದ್ರ ಈಸ್ ದ ಸರ್ವೀಸ್ ಸೀಕರ್; ವಿಷ್ಣು ಸರ್ವೀಸ್

ಪ್ರೊವೈಡರ್; ಚಕ್ರ ಸಾಫ್ಟ್‌ವೇರ್; ವಿಷ್ಣು ವರ್ಕ್ಡ್ ಫ್ರಂ ಹೋಂ' ವಿವರಿಸಿದ ಮಗರಾಯ.

'ಅದೊಂದು ವಿಷಯ ಇರಬಹುದು ಬಿಡು. ಆದರೆ....'

'ವೇಯ್ಟ್ ಮಾಮ್, ದ್ರೌಪದಿಯ ವಿಷಯವನ್ನೇ ತೊಗೊ. ದುಶ್ಯಾಸನ ಸೀರೆ ಸೆಳೆಯಕ್ಕೆ ಶುರು ಮಾಡಿದ. ದ್ರೌಪದಿ 'ಕೃಷ್ಣಾ....' ಅಂತ ಕೂಗಿದಳು. ಕೃಷ್ಣ ವಾಸ್ ಬಿಝಿ ಪ್ಲೇಯಿಂಗ್ ಕವಡೆ; ಕೂತ ಕಡೆಯಿಂದಾನೇ ಥಾನುಗಟ್ಟಲೆ ಸೀರೆ ಕಳಿಸಿದ. ದ್ರೌಪದಿ ಸರ್ವೀಸ್ ಸೀಕರ್; ಕೃಷ್ಣ ಸರ್ವೀಸ್ ಪ್ರೊವೈಡರ್; ಸೀರೆ ಸಾಫ್ಟ್‌ವೇರ್. ವರ್ಕ್ ಫ್ರಂ ಹೋಂ ಮಾಡೋವಾಗ ಪಗಡೆ ತರಹದ ಆಟಾನೂ ಆಡ್ಕೊಂಡಿರಕ್ಕೆ ಮೇಲ್ಪಂಕ್ತಿ ಹಾಕ್ಕೊಟ್ಟಿದ್ದೇ ಶ್ರೀಕೃಷ್ಣ'

'ಅದೂ ಒಂದು ವಿಷಯ ಇರಬಹುದು....'

'ತಕ್ಷಕ ಸಾಯ್ಸೇ ಸಾಯಿಸ್ತಾನೇಂತ ಸಿಂಗಲ್ ಪಿಲ್ಲರ್ ಮೇಲೆ ಬಿಲ್ಡಿಂಗ್ ಕಟ್ಕೊಂಡು ಅಲ್ಲಿಂದಲೇ ರಾಜ್ಯಭಾರ ಮಾಡಿದ ಪರೀಕ್ಷಿತನದೂ ವರ್ಕ್ ಫ್ರಂ ಹೋಮೇ...'

'ಹೂಂ. ಅದೂ ಒಂದು ವಿಷಯ....'

'ಹೀಗೇ ಹೇಳ್ಕೊಂಡ್ಹೋಗ್ಬೋದು ಮಮ್ಮ. ದ ಬಾಟಮ್ ಲೈನ್ ಈಸ್, ವರ್ಕ್ ಫ್ರಂ ಹೋಮು ಕಲ್ಚರ್‌ಭ್ರಷ್ಟೇ ಅಲ್ಲ, ನಮ್ಮದೇ ಗುಡ್ ಓಲ್ಡ್ ಕಲ್ಚರ್‌ರು' ಎಂದ ಮಗರಾಯ.

ಮಡದಿಯ ಫೋನ್ ಟ್ರಿಣ್‌ಗುಟ್ಟಿತು. ಫೋನ್ ಕಿವಿಗೆ ಹಿಡಿದ ಅವಳ ಕಣ್ಣುಗಳು ಗೋಲಿಯ ಅಗಲವಾಗಿ, ಕ್ರಿಕೆಟ್ ಚೆಂಡಿನ ಅಗಲಕ್ಕೆ ತಲುಪಿ, ತಟ್ಟೆಯ ಅಗಲದವರೆಗೆ ಹಿಗ್ಗಿತು. ಕಣ್ಣಲ್ಲೇ ಪ್ರಶ್ನೆ ಎಸೆದೆ.

'ಮನೆಕೆಲಸದ ಪಾರೂದು ಫೋನ್' ಸುಸ್ತಾದ ದನಿಯಲ್ಲಿ ನುಡಿದಳು.

'ಇವತ್ತು ಬರಲ್ವಂತಾ?' ಷರ್ಟಿನ ಮುಂದೋಳನ್ನು ಮಡಚಿಕೊಳ್ಳುತ್ತಾ ಪಾತ್ರೆ ತೊಳೆಯಲು ಅಣಿಯಾದೆ.

'ಅದಕ್ಕಿಂತ ಘೋರವಾದದ್ದು! ವರ್ಕ್ ಫ್ರಂ ಹೋಂ ಮಾಡ್ತಾಳಂತೆ'

'ಅಂದರೆ?' ಮಗ ಮತ್ತು ನನ್ನ ಮುಖಗಳಲ್ಲಿ ಮೊದ್ದು ಹುಡುಗನಿಗೆ ಸಿ.ಎ. ಎಕ್ಸಾಮಿನ ಪ್ರಶ್ನೆಪತ್ರಿಕೆ ತೋರಿಸಿದಾಗಿನ ಕಳೆ!

'ಪಾತ್ರೆಗಳನ್ನ ಮನೆಗೇ ಕಳಿಸಿ. ಇಲ್ಲೇ ತೊಳೆದು ಕಳಿಸ್ತೀನಿ. ಅದಕ್ಕೆ ಬೇಕಾದಷ್ಟು ನೀರನ್ನ ಸ್ವಿಗ್ಗೀಲಿ ಕಳಿಸಿ ಅಂದಳು'

'ಹೌ... ವಾಟ್... ವೈ...' ಹೇರ್ ಡ್ರೈಯರ್‌ಗೆ ಸಿಲುಕಿದ ಕೂದಲಿನಂತೆ ಅಸ್ತವ್ಯಸ್ತವಾಗಿತ್ತು ನಮ್ಮ ಮನ.

'ಬಟ್ಟೇನೂ ಕಳಿಸಿ. ಜೊತೆಗೆ ನಿಮ್ಮ ಮನೆಯ ವಾಷಿಂಗ್ ಮೆಷೀನ್ ಕಳಿಸಿ ಅಂದಳು'

‘ಆದರೆ... ಹೇಗಂತೆ?’

‘ಅವಳ ನೆಟ್‌ವರ್ಕ್ ಇದೆಯಂತೆ’

‘ಇಂಟರ್‌ನೆಟ್ಟಲ್ಲಿ ನಮ್ಮ ಮನೆಯ ವಾಷಿಂಗ್ ಮೆಷಿನ್ ಕಳಿಸೋದು ಹೇಗಂತೆ?’ ದಿಗ್ಭ್ರಮೆಯ ಹೊಸ ಮೆಟ್ಟಿಲುಗಳನ್ನು ಏರಿದ್ದೆ.

‘ಇಂಟರ್ನೆಟ್ ಅಲ್ಲ. ಆಟೋ ನೆಟ್ ಅಂತೆ. ಅವಳವರದೇ ಆಟೋ ಕಳಿಸ್ತಾಳಂತೆ. ನಮ್ಮ ಬಟ್ಟೆ, ವಾಷಿಂಗ್ ಮೆಷಿನ್, ಪಾತ್ರೆ ಕಳಿಸಿದರೆ ತೊಳೆದು, ಒಗೆದು ಅದೇ ನೆಟ್‌ವರ್ಕಲ್ಲಿ ಕಳಿಸ್ತಾಳಂತೆ’

‘ಮನೆ ಗುಡಿಸೋದು? ಸಾರ್‍ಸೋದು?’

‘ಔಟ್‌ಸೋರ್ಸಿಂಗ್ ಟ್ರೈ ಮಾಡ್ತಿದಾಳಂತೆ. ಸಿಕ್ಕರೆ ಯಾರನ್ನಾದರೂ ಕಳಿಸ್ತಾಳಂತೆ’

‘ಪಾತ್ರೆ, ಬಟ್ಟೆ, ಮೆಷಿನ್ನು ಲೋಡಿಂಗ್, ಅನ್‌ಲೋಡಿಂಗು?’

‘ಕೇಳಿದೆ. ನಿಮ್ಮೆಜಮಾನರ ಕಂಪನಿ ರೂಲ್ಸ್ ತರಹಾನೇ ನನ್ನದೂ. ವರ್ಕ್ ಮಾಡಕ್ಕೆ ಬೇಕಾದ್ದನ್ನ ಅವರು ಸರ್ವೀಸ್ ಸೀಕರ್ ಪ್ರೊವೈಡ್ ಮಾಡ್ಬೇಕು. ನಾನು ಸರ್ವೀಸ್ ಪ್ರೊವೈಡ್ ಮಾಡ್ತೀನಿ ಅಂದಳು’

ಈ ವಿಚಿತ್ರ ಆಘಾತದಿಂದ ಚೇತರಿಸಿಕೊಳ್ಳುವ ಮುಂಚೆಯೇ ನನ್ನ ಫೋನ್ ಟ್ರಿಣ್‌ಗುಟ್ಟಿತು.

‘ನಾನ್ ಚಾಮಿ ಡೋರ್ ಕೀಸ್’ ಎಂದ ನಮ್ಮ ಅಪಾರ್ಟ್‌ಮೆಂಟಿನ ವಾಚ್‌ಮನ್ ದ್ವಾರಕೀಶ.

‘ಏನಪ್ಪ?’ ಎಂದೆ.

‘ನಿಂಬ ಗೇಟ್‌ನ ನಂಬ ಮನೆಕು ಕಳಿಸಿಕೊಡಿ ಚಾರ್’ ಎಂದನವ.

‘ಏಕಪ್ಪಾ?’

‘ಇನ್ನಿಕಿ ಅಲ್ಲಿಕೆ ಪರಲ್ಲ ಚಾರ್. ಇಲ್ಲಿಂದಲೇ ವರ್ಕ್ ಫ್ರಂ ಹೋಂ ಡೂಟಿ ಪಣ್ರೆ’ ಎಂದ. ನಾನು ‘ಹಾ?’ಹಾರಿದೆ. ಮಡದಿಯ ಕಣ್ಣು ಪರಾಯಿತದಷ್ಟು ಅಗಲವಾಯಿತು.

‘ವರ್ಕ್ ಫ್ರಂ ಹೋಂ ಈಸ್ ಇಂಜ್ಯೂರಿಯಸ್ ಟು ಹೆಲ್ತ್’ ಎಂದ ಮಗರಾಯ.

■



# ತಲೆದಂಡ!

● ಶರತ್ ಕಲ್ಕೋಡ್

"ಫಸ್ಟ್ ನಂಗೆ ತಾತಾ..." ಹೇರ್‌ಕಟಿಂಗಿಗೆ ಹೊರಟಿದ್ದ ನಾಲ್ಕರ ಪುಟಾಣಿ ಆರುಷ್ ಗೋಗರೆತ.

"ಅವನಿಗಲ್ಲ ತಾತ, ನಂಗೆ ಫಸ್ಟ್..." ಅಬ್ಜೆಕ್ಷನ್ ತೆಗೆದ ಆರರ ಆರ್ಯ.

"ನಂಗೆ ಫಸ್ಟ್...," "ಇಲ್ಲ ನಂಗೆ ಫಸ್ಟ್..." ರಸ್ತೆಯಲ್ಲೇ ಕೈಕೈ ಮಿಲಾಯಿಸ ತೊಡಗಿದವು ಶುದ್ಧ ತರ್ಲೆಗಳು! ಇಬ್ಬರನ್ನೂ ಆಚೆಈಚೆ ಎಳೆದು ಮಧ್ಯೆ ನಿಂತು, "ಸುಮ್ಮಸುಮ್ನೆ ಯಾಕೋ ಜಗಳ ತೆಗಿತೀಯಾ ಆರ್ಯ? ಆರುಷ್ ಸಣ್ಣನಲ್ವಾ? ಅವ್ನಿಗೆ ಮೊದಲು, ಆ ಮೇಲೆ ನಿಂಗೆ.."

"ಇಲ್ಲ...ಇಲ್ಲಾ... ಅವ್ನಿಗಿಂತ ನಾನು ದೊಡ್ಡವ, ಫಸ್ಟ್ ಸ್ಟ್ಯಾಂಡರ್ಡ್ ಬೇರೆ, ಅವನಿನ್ನೂ ಯುಕೆಜಿಯಲ್ವಾ!?" ಹಕ್ಕೊತ್ತಾಯ ಮಂಡಿಸಿದ. ಮಕ್ಕಳೂ ಕೆಲವೊಮ್ಮೆ ವಯಸ್ಸಿಗೆ ಮೀರಿ ಲಾ ಪಾಯಿಂಟ್ ಮಾತು ಉಡಾಯಿಸಿಬಿಡುತ್ತವೆ. ಚಿಕ್ಕವರಾಗಿದ್ದಾಗ ನಾವು ಇಂತ ಮಾತಾಡಿದ್ದ್ರೆ, ಹಿರಿಯರು ಕೂಡ್ಲೆ ಕಪಾಳಕ್ಕೆ ಬಿಗಿದು "ಬಾಯಿ ಮುಚ್ಚಿಕೊಂಡು ಕುಕ್ಕರಿಸೋ" ಎಂದು ಬಗ್ಗು ಬಡಿಯುತ್ತಿದ್ದರು! ಮಲೆನಾಡಿನ ಮೂಲೆಯಲ್ಲಿ ಹುಟ್ಟಿದ ನನ್ನ, ಬೆಂಗಳೂರು ಸಿಟಿಯಲ್ಲಿ ಬೆಳೆಯುತ್ತಿರುವ ಮೊಮ್ಮಕ್ಕಳ ಬಾಲ್ಯಕ್ಕೂ ಎಷ್ಟೊಂದು ಫರಕು!

ಮಲೆನಾಡ ಹಾಡಿ ಮನೆ. ಉಣಗೋಲು ಸರಿಸಿ, ಬಲಗೈಯಲ್ಲಿ ಬೀಡಿ ಎಳೆದು, ಹೊಗೆ ಕಾರುತ್ತಾ, ಎಡಗೈಯಲ್ಲಿ ಹಿತ್ತಾಳೆ ಪೆಟ್ಟಿಗೆ ಹಿಡಿದ ಚೌರದ ತಮ್ಮು, ಅಂಗಳಕ್ಕೆ ಕಾಲಿಟ್ಟಿದ್ದ ಕಂಡರೆ ಸಾಕು, ಆಟವಾಡುತ್ತಿದ್ದ ನಮ್ಮ ಪುಂಡರ ಪಡೆ ಬೆಚ್ಚಿ "ಶನಿ ಬಂತು" ಬೊಬ್ಬಿರಿಯುತ್ತಾ ದಿಕ್ಕಾಪಾಲು! ಓಡೋಡಿ ಬದಿಕೋಣೆ ಕತ್ತಲಲ್ಲೋ, ಉಪ್ಪರಿಗೆ ಮಂಚದಡಿ, ನಡುಮನೆ ದೇವರ ಮಂಟಪದ ಸಂದಿ– ಒಬ್ಬಬ್ಬರೂ ಒಂದೊಂದು ಮೂಲೆಯಲ್ಲಿ ಬಚ್ಚಿಟ್ಟು ಕೊಳ್ಳುತ್ತಿದ್ದೆವು.

ಭಾನುವಾರದ ಬೆಂಗಳೂರು, "ದಿಲ್‌ಖುಷ್ ಹೇರಕಟ್ಟಿಂಗ್ ಸಲೂನ್" ಎಸಿಹಾಲ್ ರಷೋರಷು. ಕಾಯುವುದು ಅನಿವಾರ್ಯ. ಎತ್ತರದ ಆರೇಳು ತಿರುಗು ಕುರ್ಚಿ. ಎದುರು ಮುಖ, ಹಿಂಬದಿ ತಲೆ ಒಂದರ ಹಿಂದೊಂದು, ಬಿಂಬಿತವಾಗುವ ಬೆಲ್ಜಿಯಂ ಕನ್ನಡಿ. ನಡುವೆ ಎದ್ದು ಕಾಣುವ ನಾನಾ ಸೇವಾ  ವಿವರದ ರೇಟ್‌ಲೀಸ್ಟ್. ಮೊತ್ತಾ ಮೂರೂವರೆ ಸಾವಿರ! ಮೂಲೆಸ್ಟಾಂಡ್ ಮೇಲೆ ಟಿವಿ, ಬೊಬ್ಬಿರಿಯುವ ಇಂಗ್ಲಿಷ್ ಸಿನಿಮಾ ಹಾಡು. ಕಾಯುತ್ತಿರುವ ಗಿರಾಕಿಗಳು.ಎತ್ತರಕುರ್ಚಿಯಲ್ಲಿಕತ್ತಿನತನಕ ಮುಸುಕುಧಾರಿಗಳಾಗಿ ಕಟ್ಟಿಂಗ್, ಶೇವ್, ಡ್ರೈ, ಫೇಸ್ ಬ್ಲೀಚ್, ಕಲರಿಂಗ್, ಗಡ್ಡಟ್ರಿಂ ಮಾಡಿಸಿಕೊಳ್ಳುತ್ತಿರುವವರ ವಿವಿಧ ತಪೋಭಾವಭಂಗಿಗಳು. ವಾಟರ್ ಸ್ಪ್ರೇ, ಕತ್ತರಿ, ಹಣಿಗೆ, ರೇಜರ್, ಕ್ಲಿಪರ್, ಹಿಡಿದು ಕೈಚಳಕದಲ್ಲಿ ಪ್ರವೃತ್ತರಾಗಿರುವ ಕೇಶಕುಶಲಿಗಳು...

ಅಕ್ಕಪಕ್ಕ ಕುಳಿತಿದ್ದ ಆರ್ಯ, ಆರುಷ್‌ರನ್ನು ನೋಡಿದೆ. ಕೇಶಕೌಶಲಿಗರ ಕೈಚಳಕಗಳನ್ನು ಪರಸ್ಪರ ಮೂಕಾಭಿನಯ ಮಾಡಿ, ಮುಸುಮುಸು ನಗುತ್ತಿದ್ದರು. ಬಾಲ್ಯದಲ್ಲಿ ಕ್ಷೌರ ಮಾಡಿಸಿಕೊಳ್ಳುವಾಗ ಒಮ್ಮೆಯಾದರೂ ಹೀಗೆ ನಕ್ಕದ್ದುಂಟೇ?

ದೇವರಾಣೆ ಇಲ್ಲ! ಮೂಲೆಯಲ್ಲಿಅವಿತ ನಮ್ಮನ್ನು ಹಿರಿಯರು ಹುಡುಕಿ ದರದರನೆಳೆದು ತಂದು ಕಟುಕನ ಕೈಗೊಪ್ಪಿಸುವ ಕುರಿಯಂತೆ, ತುದಿಗಾಲಲ್ಲಿ ಕುಳಿತ ಹಜಾಮ ತಮ್ಮುನ ಪದ ತಳಕ್ಕೆ ತಳ್ಳುತ್ತಿದ್ದರು. ಆ ಶನಿಯೋಗ ಬಕ್‌ನೇ ಅಬಗಚ್ಚಿ ಹಿಡಿದು ಮೊಣಕಾಲು, ತೊಡೆ ಸಂದಿ ನಮ್ಮ ತಲೆಗಿಡುಕಿ, ಹಣಿಗೆ, ಬಡ್ಡುಕತ್ತರಿ, ರೇಜರ್ (ಕೂಪು) ಆಡಿಸುತ್ತಾ, ಹಿರಿಯರ ಆಜ್ಞೆ ಮೇರೆಗೆ ಹಜಾಮತ್ ಮಾಡುತ್ತಿದ್ದ ಹಜಾಮ! ಬಡ್ಡುಗತ್ತಿ ಉರಿಜೊತೆಗೆ ಜಡ್ಡುಗಟ್ಟಿದ ಪಂಚೆ, ಅಂಗಿ ಮುಗ್ಗಲ ವಾಸನೆ. ಬೀಡಿ, ಸರಾಯಿಗಬ್ಬು ನಾತ ಬೇರೆ. ನರಕ... ನರಕ..!

ಕ್ರಾಪ್ ಬಿಡುವ ಫ್ಯಾಶನ್ ಆಗಿನ್ನೂ ಚಾಲ್ತಿಗೆ ಬಂದಿರಲಿಲ್ಲ. ಬ್ರಾಂಬ್ರೆಲ್ಲಾ ತಲೆ ಬೋಡು ಹೊಡೆಸಿ, ನೆತ್ತಿ ಮೇಲೆ ಗೋಪಾದ ಇಲ್ಲಾ ಪಿಳ್ಳು ಜುಟ್ಟೇ ಆ ಕಾಲದ ಫ್ಯಾಶನ್. ಶೂದ್ರರು ಮುಂದಲೆ ಅರ್ಧಚಂದ್ರಾಕಾರ ನುಣ್ಣಗೆ ಬೋಳಿಸಿ ಹಿಂಬಂದಿ ಕೂದಲು ಬಿಟ್ಟು ಕಟ್ಟುತ್ತಿದ್ದ ಜಡೆ.

ಹಜಾಮತ್ತಿನ ಸ್ಥಿತ್ಯಂತರ ವಿಶ್ಲೇಷಿಸುವುದರಲ್ಲಿ ಮಗ್ನನಾಗಿದ್ದ ನನ್ನ ಮೈಮುಟ್ಟೆಚ್ಚರಿಸಿ ಕೇಶಕೌಶಲಿ ಕನ್ನಡ ಬೆರೆತ ಹಿಂದಿಯಲ್ಲಿ ಕೇಳಿದ:

"ಸೀಸರೋ, ಮಿಶಿನ್ನೋ?"

ನೋಡಿದರೆ ಆರುಷ್ ಪಟ್ಟಾಭಿಷೇಕಕ್ಕಾಗಿ ಪೀಠಾರೋಹಣಗೈದಿದ್ದ. ಟಿವಿ ಹಾಡಿನ ಜೋಶ್‌ನಲ್ಲಿ ಮುಳುಗಿದ್ದ ಆರ್ಯನಿಗೆ, ಮೊದಲ ಪೀಠಾರೋಹಣದ ಸವಾಲಿಗಾದ ನಷ್ಟದ ಅನಾಹುತ ಅರಿವಾಗಿರಲಿಲ್ಲ.

"ರೇಜರ್ ಬೇಡ, ಮಿಶನ್ ಆದೀತು. ಶಾರ್ಟ್ ಆಗಿರಲಿ" ಎಂದೆ.

ಕಳೆದ ವಾರವಷ್ಟೇ ಊರಿಂದ ಹಜಾಮ ತಮ್ಮು ಇನ್ನಿಲ್ಲವಾದ ಸುದ್ದಿ ಬಂದಿತ್ತು. ಊರಿನವರ ಪ್ರಕಾರ ಅವ ನೂರರ ಗಡಿದಾಟಿದ್ದ. ತೊಂಬತ್ತರ ಮೇಲೆ ಎಂಬುದಂತೂ ನಿಸ್ಸಂಶಯ. ಬ್ರಿಟಿಷರ ಭಾರತ, ಮೈಸೂರು ಅರಸರ ಮಲೆನಾಡ ಆಳ್ವಿಕೆ ಕಾಲದಲ್ಲಿ ಜನಿಸಿದ ತಮ್ಮು, ಮಲೆನಾಡಿನ ಪ್ಯೂಡಲಿಸಂನ ಹಿಡಿತಕ್ಕೆ ಸಿಲುಕಿ ನಲುಗಿದವ. ಸಮಾಜದಜಾತಿ ವ್ಯವಸ್ಥೆ ಕಪಿ ಮುಷ್ಟಿ ಹಿಡಿತಕ್ಕೆ ಸಿಲುಕಿ ಬೆಂದವ.

ತಮ್ಮು ಎದುರಿಸಿದ ಸಮಸ್ಯೆ ಒಂದೇ, ಎರಡೇ? ಕ್ಷೌರಕ್ಕೇ ಮೀಸಲಾದ ಕಟ್ಟಿಂಗ್ ಶಾಪ್‌ಗಳೇ (ಸಲೂನ್) ಆಗ ಇರಲಿಲ್ಲ! ಹಜಾಮತ್ತಿನ ರೇಟೇ ಫಿಕ್ಸ್ ಆಗಿರಲಿಲ್ಲ! ಕ್ಷೌರಿಕನಿಗೆ ದೊರೆಯುತ್ತಿದ್ದದ್ದು ದುಡ್ಡಲ್ಲ. ಪ್ರತಿ ಮನೆಯವರೂ, ಬೆಳೆದ ಬೆಳೆಯಲ್ಲಿ ವರ್ಷಕ್ಕೆ ಇಂತಿಷ್ಟು ಖಂಡಗ ಅಂತ ನೀಡುವ ಚಾಲ್ತಿ ಭತ್ತ. ಹೀಗೆ ಭತ್ತ ಪಡೆದ ಕ್ಷೌರಿಕ ವರ್ಷವಿಡೀ ಕುಟುಂಬ ನಿಭಾಯಿಸಬೇಕಾಗುತ್ತಿತ್ತು! ಕರೆದವರ ಮನೆಗೆ ಹೋಗಿ ಇಲ್ಲಾ ದಾರಿಯಲ್ಲಿ ಎದುರಾದವರ ಅಪ್ಪಣೆ ಮೇರೆಗೆ, ಮರದಡಿ ನೆರಳಲ್ಲಿ ಕುಳಿತು ಹಜಾಮತ್ ಮಾಡುತ್ತಿದ್ದ. ಚರ್ಮದ ಹಡಪದಲ್ಲಿ ಹಣಿಗೆ, ಕತ್ತರಿ. ಕೂಪು (ರೇಜರ್) ಮಸೆಕಲ್ಲು. ಒಡಕಲ ಕನ್ನಡಿ, ಸೋಪು, ನಗ್ಗುನಗ್ಗಾದ ಸಿಲಾವರ ಬಟ್ಲು ಇಟ್ಟುಕೊಂಡು ಹಳ್ಳಿ ಅಲೆಯುತ್ತಿದ್ದ ತಮ್ಮು, ವೃತ್ತಿಯಲ್ಲಿ ಪಡೆದ ಬಡ್ತಿಯೆಂದರೆ ಹಿತ್ತಾಳೆ ಪೆಟ್ಟಿಗೆ!

ಯಾರಾದರೂ ಸತ್ತರೆ ಮನೆಯವರಿಗೆ ಮಾತ್ರವಲ್ಲ; ಸಂಸ್ಕಾರಕ್ಕೆ ಬರುವ

ಬಂಧು ಬಳಗದರಿಗೆಲ್ಲಾ ತಮ್ಮ ಪುಕ್ಕಟೆಯಾಗಿ ಹಜಾಮತ್ ಮಾಡಬೇಕಿತ್ತು. ಅಷ್ಟೇ ಅಲ್ಲ, ಸತ್ತ ಒಡೆಯನಿಗೆ ಒಕ್ಕಲು ಮಕ್ಕಳೆಲ್ಲಾ "ಮುಡಿಕೊಡುವ" ಗೌರವ ಸಂಪ್ರದಾಯ. ಅದನ್ನೂ ಚಿಕ್ಕಕಾಸು ಪಡೆಯದೇ ನೆರವೇರಿಸಿಕೊಡುವುದು ತಮ್ಮ (ನಾಪಿತನ) ಆದ್ಯ ಕರ್ತವ್ಯ!

ಕ್ಷೌರವೆಂದರೆ ಬರೀ ಹಜಾಮತ್ತೇ? ಖಂಡಿತಾ ಅಲ್ಲ. ತಲೆಕ್ಷೌರದ ಬಳಿಕ ಗಡ್ಡಮೀಸೆ ಹೆರೀಬೇಕು. ಆ ಮೇಲೆ ಹುಬ್ಬು, ಕಿವಿ ಕೂದಲು ಟ್ರಿಂ ಮಾಡಬೇಕು. ಅಷ್ಟೇ ಸಾಲದು, ಬಗಲ ಕೂದಲು ತೆಗೀಬೇಕು. ಕೆಲವು ಸಾಹುಕಾರರ ಕೈಕಾಲು ಬೆರಳ ಉಗುರನ್ನೂ ನೀಟಾಗಿ ಕತ್ತರಿಸಬೇಕು! ಎಲ್ಲಾ ಮುಗಿದ ಮೇಲೆ ಕೆಲವರು ಹೆಗಲ ಮೇಲಿನ ಟವಲ್ ಬಾಯಿಗೆ ಅಡ್ಡ ಹಿಡಿದು, "ಮಡಿಕೂಪ್ ಮಡಗಿಯಾ?" ಪಿಸುಗುಟ್ಟಿ ತೆಗೆದುಕೊಂಡು ಕಾಡ ಬದಿ ಮಟ್ಟು ಪೊದೆ ಹಿಂದೆ ಮರೆಯಾಗಿ ಸ್ವಲ್ಪ ಹೊತ್ತಿನ ಬಳಿಕ ಮರಳಿ ತಂದುಕೊಡುತ್ತಿದ್ದರು. ಮಡಿಕೂಪಿನ ಹಿಂದಿನ ರಹಸ್ಯದ ಕುತೂಹಲ ತಡೆಯಲಾರದೇ ತಮ್ಮನ ಕೇಳಿದೆ:

"ಅದನ್ನ ತಗಂಡವರು ಕಾಡಿಗೆ ಯಾಕೆ ಹೋಗ್ತಾರೆ?"

"ಮರ ಸವರಲು...."

"ಆ ಸಣ್ಣಕತ್ತಿಲ್ಲೀ ದೊಡ್ಡದೊಡ್ಡ ಮರಾ ಸವರಕಾಗುತ್ತಾ?"

"ದೊಡ್ಡಮರಾನ್ನಲ್ಲ, ಸಣ್ಣಸಣ್ಣ ಪೊದೆ ಸವರಕ್ಕೆ..."

"ದೊಡ್ಡಕಾಡಿನಲ್ಲಿ ಸಣ್ಣಸಣ್ಣ ಪೊದೆಗಳಿರ್ತಾವಾ?"

"ಏಯ್ ಸುಮ್ಮನಿರಿ ಅಯ್ಯಾ.. ನೀವೀನ್ನೂ ಬಾಳಾ ಸಣ್ಣವರು, ದೊಡ್ಡವರಾದ ಮೇಲೆ ಅದೆಲ್ಲಾ ನಿಮ್ಗೆ ಗೊತ್ತಾಗುತ್ತೆ." ರೇಗಿ ತಮ್ಮ ಬಾಯಿ ಮುಚ್ಚಿಸಿದ್ದ!

ಹುಡುಗರು, ಹಿರಿಯರ ಕ್ಷೌರವಾದ ಮೇಲೆ ವಿಧವೆಯರ ಸರದಿ. ಆಗ ಬ್ರಾಹ್ಮಣರ ಮನೆಯಲ್ಲಿ ಗಂಡ ಸತ್ತವರು ಮಂಡೆಬೋಳಿಸಿ, ಕೆಂಪುಸೀರೆ ಉಡುತ್ತಿದ್ದ ವಿಧವೆಯರು ಕ್ಷೌರ ಮಾಡಿಸಿಕೊಳ್ಳುವುದು ವಾಡಿಕೆ. ಆದರೆ ವಿಧವೆಯರು, ಕ್ಷೌರಿಕನೆಂದಾಗಲಿ, ಅವನ ಹೆಸರು ಹಿಡಿದಾಗಲೀ ಕರೆಯುವ ರಿವಾಜಿರಲಿಲ್ಲ. "ತಲೆ ಮುಟ್ಟುವವ" ಪರ್ಯಾಯ ಪದ ಚಾಲ್ತಿಯಲ್ಲಿತ್ತು. ಹಜಾಮತ್ ಮಾಡಿಸಿಕೊಂಡವರು ಸೀದಾ ಮನೆಯೊಳಗೆ ಹೋಗುವ ಹಾಗಿರಲಿಲ್ಲ! ತಾಮ್ರದ ಚೊಂಬ ನೀರಲ್ಲಿ ತುಳಸಿ ಬುಡದಮಣ್ಣು, ಗೋಮೂತ್ರ, ದನದಸಗಣಿ ಕದಡಿದ "ಮೃತ್ತಿಕೆ" ತಲೆಗೆರೆದು, ಸ್ನಾನವಾದ ಮೇಲೆ ಮನೆಯೊಳಗೆ ಪ್ರವೇಶ.

ಆರುಷ್‌ನಿಗೆ ಆಗುತ್ತಿದ್ದಂತೆ, ಆರ್ಯ ಪೀಠವನ್ನೇರಿದ. "ಶಾರ್ಟೋ, ಸೈಡ್ ಕಟ್ಟಿಂಗೋ?" ಯಥಾಪ್ರಕಾರ ಕೇಶಕೌಶಲಿ ಪ್ರಶ್ನಿಸಿದ. ಆದರೆ ನಾನು ಉತ್ತರಿಸುವ ಮುನ್ನ ಆರ್ಯನೇ ಖಡಕ್ಕಾಗಿ ಹೇಳಿದ: "ಕೊಹ್ಲಿ ಸ್ಟೈಲ್!" ಊಹೆಗೂ ನಿಲುಕದ ಬಗೆಬಗೆಯ ಸಿನಿಮಾ, ಕ್ರಿಕೆಟ್ ಹಿರೋಗಳ ಹೇರ್ ಸ್ಟೈಲ್‌ಗಳು...!

ತಮ್ಮ, ಮಗ ಗುಂಡನನ್ನು ಉತ್ತರಾಧಿಕಾರಿಯಾಗಿ ಪಟ್ಟಕಟ್ಟಿದ. ಗುಂಡ ನಮ್ಮೂರ ಸಮೀಪದ ಪೇಟೆ ಮೇಗರವಳ್ಳಿಯಲ್ಲಿ ಚೌರದ ಷಾಪ್ ತೆಗೆದು ಇತಿಹಾಸ ದಾಖಲಿಸಿದ. ಷಾಪ್‌ನಲ್ಲಿ ಎತ್ತರದ ಕುರ್ಚಿ, ತಲೆ ಹಿಂದೆಮುಂದೆ

ಕಾಣುವ ಕನ್ನಡಿ, ಬಗೆಬಗೆ ಹೇರ್‌ಸ್ಟೈಲ್ ಚಿತ್ರಗಳಿರುವ ಫೋಟೋ ಜೊತೆಗೆ ಸಿನಿಮಾ ನಟನಟಿಯರ ವಿವಿಧ ಭಂಗಿ ಭಾವಚಿತ್ರ ವಿಶೇಷವಾಗಿ ಗಿರಾಕಿಗಳನ್ನು ಆಕರ್ಷಿಸುತ್ತಿದ್ದವು. ಹುಡುಗರ ಚೌರಕ್ಕೆ ಒಂದಾಣೆ, ಗಂಡಸರಿಗೆ ಎರಡಾಣೆ ದರ ನಿಗದಿ ಪಡಿಸಿದ್ದ. ಹಳ್ಳಿಯವರು ವಾರ್ಷಿಕ ನೀಡುತ್ತಿದ್ದ ಖಂಡುಗಭತ್ತದ ಪದ್ಧತಿ ಹೇಗೆ ಮರೆಯಾಯಿತೋ ದೇವರೇ ಬಲ್ಲ!

ಕ್ಷೌರ ಮಾಡುವುದಕ್ಕಿಂತ ಹೆಚ್ಚಾಗಿ ಗುಂಡನಿಗೆ ಯಕ್ಷಗಾನ, ನಾಟಕದ ಹುಚ್ಚು. ಅದರ ಜೊತೆಗೆ ಕುಡಿತದ ಚಟ ಬೇರೆ! ಊರಿನಲ್ಲೇ ಯಕ್ಷಗಾನ ಮೇಳ, ನಾಟಕ ತಂಡ ಕಟ್ಟಿದ್ದ. ಸಾಲದೆಂಬಂತೆ ಬೇರೆ ಊರುಗಳಲ್ಲಿ ನಡೆಯುತ್ತಿದ್ದ ಯಕ್ಷಗಾನ, ನಾಟಕಗಳಲ್ಲಿ ಪಾರ್ಟ್ ಮಾಡಲು ಹೋಗುತ್ತಿದ್ದ. ಹಾಗಾಗಿ ಅವನು ಚೌರದ ಷಾಪ್ ತೆಗೆಯುತ್ತಿದ್ದದ್ದಕ್ಕಿಂತ ಮುಚ್ಚಿರುತ್ತಿದ್ದದ್ದೇ ಹೆಚ್ಚು! ತೀರ್ಥ ಸೇವಿಸದೇ ರಂಗ ಪ್ರವೇಶ ಅವನ ಪಾಲಿಗೆ ಅಸಾಧ್ಯವಾದ ಮಾತು. ಯಕ್ಷಗಾನ ಪ್ರಸಂಗಗಳಲ್ಲಿ ದೇವಾನುದೇವತೆಗಳಿಗೂ, ನಾಟಕಗಳಲ್ಲಿ ಇತಿಹಾಸದ ಅನೇಕ ರಾಜ ಮಹಾರಾಜರಿಗೂ, ಸಾರ್ವಭೌಮರಿಗೂ, ಚಕ್ರವರ್ತಿಗಳಿಗೂ ಹಜಾಮತ್ ಮಾಡಿದವರೆಂದೂ, ದೇವರೇ ಆಗಲಿ, ರಾಜಮಹಾರಾಜ, ಚಕ್ರವರ್ತಿ, ಸಾರ್ವಭೌಮರೇ ಆಗಲಿ, ತಮ್ಮ ಮುಂದೆ ತಲೆಬಾಗಲೇಬೇಕು ಎಂದು ತನ್ನ ವೃತ್ತಿ, ಕುಲದ ಹಿರಿಮೆ ಬಗ್ಗೆ ಪೌರುಷ ಕೊಚ್ಚುತ್ತಿದ್ದ. ಅಷ್ಟೇ ಅಲ್ಲ; ದೇವಾನಂದ್, ದಿಲೀಪ್‌ಕುಮಾರ್ ಮುಂತಾದ ಪ್ರಖ್ಯಾತ ಹಿಂದಿ ಸಿನಿಮಾ ನಟರಿಗೂ ಕಟ್ಟಿಂಗ್ ಮಾಡಿದ ಹಿರಿಮೆ ತನ್ನದೆಂದು ಬೊಗಳೆ ಬಿಡುತ್ತಿದ್ದ. ಏನೇ ಇರಲಿ ನಮ್ಮೂರ ಯುವಕರಿಗೆ ಜುಟ್ಟಿನ ಬದಲಾಗಿ ಕ್ರಾಪ್ ಫ್ಯಾಶನ್‌ನ ಹುಚ್ಚು ಹಿಡಿಸಿದ ಗುಂಡ, ನಿಜಕ್ಕೂ ಒಂದು ಬಗೆಯ ಕ್ರಾಂತಿಕಾರ!

ತಮ್ಮ, ಗುಂಡನ ನಂತರ ಅವರ ವಂಶಸ್ಥರು ಯಾರೂ ನಮ್ಮೂರಿನಲ್ಲಿ ಕುಲಕಸಬನ್ನು ಮುಂದುವರೆಸಲಿಲ್ಲ. ಗುಂಡನ ಮಕ್ಕಳಿಬ್ಬರೂ ಬೆಂಗಳೂರಿನಲ್ಲಿ ಬಾರ್ ಕೆಲಸಕ್ಕೆ ಸೇರಿ, ಕ್ರಮೇಣ ಬಾರ್ ಓನರ್ ಆಗಿ ಮನೆ, ಸೈಟ್ ಮಾಡಿಕೊಂಡು ಶ್ರೀಮಂತರಾಗಿ ರಿಯಲ್ ಎಸ್ಟೇಟ್ ಬಿಸನೆಸ್ ಮಾಡುತ್ತಿದ್ದಾರೆಂದು ಕೇಳಿದ್ದೇನೆ.

ಊರಿನಲ್ಲೀಗ ಬೇರೆ ಊರಿಂದ ಬಂದವನೊಬ್ಬ ಸಲೂನ್ ತೆಗೆದಿದ್ದಾನೆ. ಮನೆಮನೆಗೂ ಹೋಗುವ ಪ್ರವೃತ್ತಿಗೆ ವಿದಾಯ ಹೇಳಿದ್ದಾನೆ. ಹಾಗಾಗಿ ನಮ್ಮೂರಿನವರಿಗೆ ಕಟ್ಟಿಂಗ್ ಮಾಡಿಸಿಕೊಳ್ಳಲು ಶಾಪಿಗೆ ಹೋಗಲೇ ಬೇಕಾದದ್ದು ಅನಿವಾರ್ಯ. ಅಲ್ಲದೇ ಕಟ್ಟಿಂಗ್ ಮಾಡಿಸಲು ಮುಂಚಿತ ಸಮಯ ನಿಗದಿಪಡಿಸಿ ಕೊಳ್ಳಬೇಕು. ಆದ್ಯತೆ ಮೇಲೆ ಕಟ್ಟಿಂಗ್ ಮಾಡುವುದು. ಇದಕ್ಕಿಂತ ಹೆಚ್ಚಾಗಿ ಕಟ್ಟಿಂಗ್ ಮಾಡಿಸಿಕೊಳ್ಳುವವರು ಅಡ್ವಾನ್ಸ್ ಪಾವತಿಸಲೇಬೇಕು. ಇದರಿಂದ ಕಟ್ಟಿಂಗ್ ಮಾಡಿಸಿ ನಾಳೇ ಕೊಡುತ್ತೇವೆಂದು ಕಡ ಹೇಳಿ ಮರೆಯಾಗುವ ಗಿರಾಕಿಗಳಿಗಂತೂ ತುಂಬಾ ಎಡವಟ್ಟು!

ಹೆಚ್ಚಿನ ವಿದ್ಯಾಭ್ಯಾಸ ಹಾಗೂ ಉದರ ನಿಮಿತ್ತಕ್ಕಾಗಿ ಊರು ತೊರೆದು ಉಡುಪಿ, ಮೈಸೂರು, ಬೆಂಗಳೂರಿನತ್ತ ವಲಸೆ ಹೋದ ನಾನು, ಅಲ್ಲಲ್ಲಿನ ಕಟ್ಟಿಂಗ್ ಶಾಪ್‌ಗಳಲ್ಲಿ "ಕರ್ನಾಟಕ ಸವಿತಾ ಸಮಾಜ" ತಲೆಬರಹದ ಪ್ರಿಟೆಂಡ್ ರಟ್ಟಿನ ಬೋರ್ಡ್ ಸಾಮಾನ್ಯ ನೇತಾಡುತ್ತಿದ್ದದ್ದನ್ನು ಕಂಡಿದ್ದೇನೆ. ನೀವೂ

ಗಮನಿಸಿರಬಹುದು. ಸರ್ಕಾರಿ ಸೌಲಭ್ಯ ಪಡೆಯಲು, ಸಾರ್ವಜನಿಕರ ಗಮನ ಸೆಳೆಯಲು ಸವಿತಾ ಸಮಾಜದವರು ರಾಜ್ಯ ಮಟ್ಟದಲ್ಲಿ ಸಂಘಟಿತರಾಗಿ ನಿರ್ಮಿಸಿಕೊಂಡ ಒಕ್ಕೂಟವದು. ಅದರಲ್ಲಿ ಕಟ್ಟಿಂಗ್, ಶೇವಿಂಗ್ ಬಗ್ಗೆ ನಿಖರವಾದದರ ಪಟ್ಟಿ ನಮೂದಿತವಾಗಿರುತಿತ್ತು. ಕಾಲಕಾಲಕ್ಕೆ ಪಟ್ಟಿ ಪರಿಷ್ಕರಣೆಗೊಂಡು ಪ್ರದರ್ಶಿತವಾಗುತ್ತಿತ್ತು. ಆದರೆ ಎಲ್ಲಾ ಪ್ರಿಂಟೆಡ್ ಬೋರ್ಡ್‌ಗಳಲ್ಲೂ ಬದಲಾಗದೇ, ಕಡ್ಡಾಯವಾಗಿ ಇರುತ್ತಿದ್ದದ್ದೆಂದರೆ ಕೊನೆಯಲ್ಲಿರುತ್ತಿದ್ದ ವಿಶೇಷ ಸೂಚನೆ: "ದಯವಿಟ್ಟು ಗಮನಿಸಿ: ಇಲ್ಲಿ ಬಗಲ ಕೂದಲನ್ನು ತೆಗೆಯಲಾಗುವುದಿಲ್ಲ!"

ಈಗೀಗ ಯಾವ ಕಟ್ಟಿಂಗ್ ಶಾಪ್‌ನಲ್ಲೂ ಸವಿತಾ ಸಮಾಜದ ಬೋರ್ಡ್ ಪ್ರದರ್ಶಿತವಾಗುತ್ತಿಲ್ಲ, ಅಷ್ಟೇ ಅಲ್ಲ ಶಾಪ್‌ಗಳೂ ತಮ್ಮದೇ ಆದದರ ಪಟ್ಟಿ ನಿಗದಿ ಪಡಿಸಿಕೊಳ್ಳುತ್ತಿವೆ. ಸಾಲದೆಂಬಂತೆ ಮಹಿಳೆಯರೂ "ಲೇಡಿಸ್ ಬ್ಯೂಟಿ ಪಾರ್ಲರ್" ತೆರೆದು ಹಲವು ಬಗೆ ಕೇಶಶೃಂಗಾರ ವಿನ್ಯಾಸದಲ್ಲಿ ತೊಡಗಿದ್ದಾರೆ. ಕೆಲವೆಡೆ ಮಹಿಳೆಯರೇ ಗಂಡಸರ ಹಾಗೂ ಹೆಂಗಸರ ಕೇಶಶೃಂಗಾರ ಸಲೂನ್ ನಡೆಸುತ್ತಿದ್ದಾರೆ.

ಆರ್ಯನ ಕಟ್ಟಿಂಗ್ ಮುಗಿದ ಮೇಲೆ ನಾನೂ ಕಟ್ಟಿಂಗ್ ಮಾಡಿಸಿಕೊಂಡು, "ಮೂವರ ಕಟ್ಟಿಂಗ್, ಎಷ್ಟು?" ಕೇಳಿದೆ.

"ಪೋರ್ ಫಿಫ್ಟಿ.." ಎಂದ ಮೇಲ್ವಿಚಾರಕ.

"ಮಕ್ಕಳಿಗೆ, ದೊಡ್ಡವರಿಗೆ ಒಂದೇ ರೇಟಾ?"

"ಹೌದು, ಎಲ್ಲರಿಗೂ ಒಂದೇ. ಫಿಕ್ಸೆಡ್ ರೇಟ್"

ಬಾಲ್ಯದಲ್ಲಿ ಒಂದಾಣೆ ತೆತ್ತು ಕ್ಷೌರ ಮಾಡಿಸಿಕೊಂಡಿದ್ದ ನನಗೆ, ಆರುಷ್, ಆರ್ಯರ ರೇಟು ದುಬಾರಿ ಎನಿಸಿ."ಸ್ವಲ್ಪ ಕಮ್ಮಿ ಮಾಡಿಕೊಳ್ಳಿ," ಎಂದು ಚರ್ಚಿಸಿದೆ.

"ಬಿಲ್‌ಕುಲ್ ನಹೀ ಸಾಬ್... ಷಾಪ್ ತೆಗೆದ ನಮ್ಗೆ ಗೀಟೋದಿಲ್ಲ..." ನನಗೆ ಸ್ಪಷ್ಟವಾಗಿ ಅರ್ಥವಾಗದ ಹಿಂದಿಯಲ್ಲಿ ಕಷ್ಟದುಃಖ ಹೇಳುತ್ತಿದ್ದ. ಎಲ್ಲಿಂದ ಬಂದವರೆಂದು ವಿಚಾರಿಸಿದೆ. ಎಲ್ಲಾ ಬಿಹಾರಿಗಳು. ಹೆಸರು ಕೇಳಿದೆ. ಶರ್ಮಾ, ಹುಸೇನ್ ಇತ್ಯಾದಿ... ವಿಶೇಷವೆಂದರೆ ಸವಿತಾ ಸಮಾಜಕ್ಕೆ ಸೇರಿದವರು ಒಬ್ಬರೂ ಇರಲಿಲ್ಲ. ಸಲೂನಗಳಿಂದ ಸವಿತಾ ಸಮಾಜದ ಬೋರ್ಡ್‌ಗಳು ಯಾಕೆ ಮರೆಯಾದವೆಂಬ "ಕ್ಲೂ" ಸ್ಪಷ್ಟವಾಯಿತು. ಇದು ಸಮಾಜವಾದದ ಫಲವೋ? ಜಾತ್ಯಾತೀತ ರಾಷ್ಟ್ರನಿರ್ಮಾಣದ ಸಾಕಾರವೋ? ವಿಶ್ವಮಾನವ ಪ್ರಜ್ಞೆ ಜಾಗೃತಾವಸ್ಥೆಯೋ? ಜಾಗತೀಕರಣ ಪ್ರಭಾವವೋ? ■

---

# ಲಿಮರಿಕ್ಸ್

ಸಿ.ಪಿ.ರವಿಕುಮಾರ್

## ಗುಂಡ

ಪ್ಲೇಸ್ಕೂಲಿನಿಂದ ಕರೆತಂದು ಮಗುವನ್ನು ಗಂಡ
ಅಬ್ಬಾ ಯಾಕೇ ಅಳ್ತಾನೆ ಒಂದೇ ಸಮನೆ ಪ್ರಚಂಡ!
ಟೆಂಪರೇಚರ್ ನೋಡು ಜ್ವರವಿದೆಯೋ ಹೇಗೆ
ಎಂದಾಗ ತಾಳ್ಮೆಯಿಂದಲೇ ಉತ್ತರಿಸಿದಳಾಕೆ
ಚೆನ್ನಾಗೇ ಇದೆ ಮಗು, ಆದರೆ ಇವನಲ್ಲ ನಮ್ ಗುಂಡ

# ‘ಮೀಸೆಯರ ಗಂಡ’

● ಚಿತ್ರಾ ರಾಮಚಂದ್ರನ್

ದೂರದ ಪಯಣದಿಂದ ದಣಿದು ಮನೆಗೆ ಆವಾಗಷ್ಟೇ ಹಿಂದಿರುಗಿದ್ದನು ಹೊನ್ನಮಾರಯ ನಾಯಕ. ಕುದುರೆಯನ್ನು ಲಾಯದಲ್ಲಿ ಕಟ್ಟಿ ಅವನು ಹೊಸಿಲು ಮೆಟ್ಟಿದಾಗ ಅಮ್ಮನ ಧ್ವನಿ ಗಟ್ಟಿಯಾಗಿ ಕೇಳಿಸಿತು.

“ಊಟಕ್ಕೆ ಬರುವಿರೋ? ಇಲ್ಲ ದರ್ಪಣಸುಂದರಿಯಂತೆ ಕಾಲ ಕಾಲಕ್ಕೂ ಹಾಗೇ ನಿಂತಿರುವಿರೋ? "

“ಬಂದೆ! ಬಂದೆ! ತಾಳು! ಈ ಮೀಸೆ ಯಾಕೋ ಮೊಂಡಾಟ ಮಾಡುತ್ತಿದೆ ..” ಅಪ್ಪಯ್ಯ ಒರಟು ಧ್ವನಿಯಲ್ಲಿ ಉತ್ತರಿಸಿದ್ದೂ ಕೇಳಿಸಿತು.

ದರ್ಪಣಸುಂದರಿ ಒಯ್ಯಾರ ಮತ್ತು ಸೌಂದರ್ಯದ ಪರಮಾವಧಿ ಎಂಬ ವಿಷಯ ಹೊನ್ನಮಾರಯನಿಗೆ ತಿಳಿದೇ ಇತ್ತು! ಅಪ್ಪಯ್ಯನೋ ಒರಟುತನದ ಪರಮಾವಧಿ! ಇವರಿಬ್ಬರಿಗೂ ಎಲ್ಲಿಂದ ಎಲ್ಲಿಯ ಹೋಲಿಕೆ? ಯೋಚಿಸುತ್ತಲೇ ಒಳಗೆ ಬಂದ ಹೊನ್ನನಿಗೆ ಅಪ್ಪಯ್ಯ ನಿಂತಿದ್ದ ಬಂಗಿ ಕಂಡು ನಗು ಉಕ್ಕಿ ಬಂದಿತು. ಒಂದು ಕೈಯಲ್ಲಿ ಕನ್ನಡಿ ಹಿಡಿದು ಮುಖ ನೋಡಿಕೊಳ್ಳುತ್ತ, ಮತ್ತೊಂದು ಕೈಯಿಂದ ಮೊದಲೇ ಚೂಪಾಗಿದ್ದ ತನ್ನ ಮೀಸೆಯನ್ನ ಇನ್ನಷ್ಟು ತಿರುವುತ್ತಿದ್ದ ಅಪ್ಪಯ್ಯ ದರ್ಪಣ ಸುಂದರನೇ ಹೌದಲ್ಲವೇ?

ಅಪ್ಪಯ್ಯನ ಬೆನ್ನ ಹಿಂದೆ ನಿಂತು ನೋಡಿದಾಗ ತಿದ್ದಿ ತೀಡಿ ತಿರುವಿದ್ದ ಅವರ ಜೊಂಡು ಮೀಸೆಯ ಚೂಪಾದ ತುದಿಗಳು ಅವರ ಮುಖವನ್ನೂ ಮೀರಿಕೊಂಡು ಎರಡು ಕಡೆಯೂ ಇಣುಕಿ ನೋಡುತ್ತಿದ್ದವು. ಅದನ್ನು ಕಂಡು ಅವನಿಗೆ ಹೆಮ್ಮೆಯೋ ಹೆಮ್ಮೆ! 'ಮೀಸೆಯರ ಗಂಡ' ಎಂಬ ಬಿರುದು ಅಪ್ಪಯ್ಯನಿಗಾಗಿಯೇ ಸೃಷ್ಟಿಸಲ್ಪಟ್ಟಿತೋ ಎನ್ನಿಸಿತು!

---

**ಇದು ಗಾಣಿಗರಹಳ್ಳಿ ಶಾಸನ ಮತ್ತು *ಜಕ್ಕೂರ ಶಾಸನಗಳ ಆಧಾರದ ಮೇಲೆ ರಚಿಸಲ್ಪಟ್ಟ ಕಾಲ್ಪನಿಕ ಕಥೆ .**

ಕಥೆಯಲ್ಲಿ ಕಾಣುವ ಕೆಲವು ಪದಗಳ ಅರ್ಥಗಳು –

***ದ್ವಾರಸಮುದ್ರ*** – ಇಂದಿನ ಹಳೇಬೀಡು

***ವೇಲಾಪುರಿ*** – ಇಂದಿನ ಬೇಲೂರು

***ಉಣ್ಣಾಮಲೆ ಪಟ್ಟಣ*** – ಇಂದಿನ ತಿರುವಣ್ಣಾಮಲೈ

***ಮಹಾ ಪಸಾಯಿತ*** – ಅರಮನೆಯ ವ್ಯವಸ್ಥೆಗಳು, ರಾಜತಾಂತ್ರಿಕ ಮರ್ಯಾದೆ, ಕೊಡಿಗೆಗಳು ಮುಂತಾದ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡುವ ಅಧಿಕಾರಿ .

***ಸೇನಬೋವ*** – ಗ್ರಾಮಗಳ ಲೆಕ್ಕಪತ್ರಗಳನ್ನು ನೋಡಿಕೊಳ್ಳುವವನು

***ಮಹಾಸಾಮಂತಾಧಿಪತಿ*** – ಸಾಮಂತರಿಗೆ ಅಧಿಪತಿಯಾಗಿದ್ದು ಆಧಿಪತ್ಯದ ಬಾಕಿಗಳನ್ನು ವಸೂಲಿ ಮಾಡಲು ಮಹಾರಾಜರಿಂದ ನೇಮಿಸಲ್ಪಟ್ಟ ಅಧಿಕಾರಿ

“ಯಾಕಮ್ಮ ಅಪ್ಪಯ್ಯನನ್ನು ಛೇಡಿಸುತ್ತಿರುವೆ?” ನಗುತ್ತಲೇ ಅಮ್ಮನನ್ನು ಖಂಡಿಸಿದ ಹೊನ್ನ.

ದಿನ ನಿತ್ಯ ಒಂದು ಬಾರಿಯಾದರೂ ಅಪ್ಪಯ್ಯನ ಮೀಸೆ ಆರೈಕೆಯ ಬಗ್ಗೆ ರಗಳೆ ತೆಗೆಯದಿದ್ದರೆ ಅಮ್ಮನಿಗೆ ತಿಂದ ಊಟ ಅರಗುವುದಿಲ್ಲ!

“ಬಂದೆಯಾ? ಬಾರಪ್ಪ! ಬಾ! ಅಪ್ಪನಿಗೆ ವಕಾಲತ್ತು ವಹಿಸಲು ನೀನು ಬರಬೇಕಿತ್ತು ನೋಡು! ಅದೇನು ಮೀಸೆಯೋ ಏನೋ? ಅದೇ ಒಂದು ಗೀಳಾಗಿಬಿಟ್ಟಿದೆ ಅವರಿಗೆ!" ಅಮ್ಮ ಬೇಸರಿಸಿಕೊಂಡಳು.

“ಅಮ್ಮ! ಅಪ್ಪಯ್ಯನ  ಮೀಸೆಯ ಬಗ್ಗೆ ಹಾಗೆಲ್ಲ ಅನ್ನ ಬೇಡ! ದಕ್ಷಿಣ ದೇಶದಲ್ಲೇ ಅತ್ಯಂತ ಬಲಿಷ್ಠ ಸಾಮ್ರಾಜ್ಯಾಧಿಪತಿಯಾದ ವೀರ ಬಲ್ಲಾಳರ ಆಸ್ಥಾನದಲ್ಲಿ 'ಮೀಸೆಯರ ಗಂಡ' ಬಿರುದನ್ನು ಅಪ್ಪಯ್ಯ ಪಡೆದಿರುವುದು ಸಾಮಾನ್ಯವಾದ ವಿಷಯವೇನು? ಅದರ ಮೌಲ್ಯ ತಿಳಿಯದೆ ಅಂತಹ ಮೀಸೆಯ ಆರೈಕೆಯನ್ನ ಗೀಳು ಅನ್ನಬಹುದೆ ನೀನು?” ನಾಟಕೀಯವಾಗಿ ನುಡಿದ ಹೊನ್ನ.

“ಅದರ ಮೌಲ್ಯ ತಿಳಿಯದೆಯೇ ನಾನು ವರ್ಷಾನುಗಟ್ಟಲೆ ಅದರ ಆರೈಕೆ ಮಾಡಿ ಬಂದಿರುವೆ? ಮದುವೆಯಾಗಿ ನನ್ನನ್ನ ಮನೆತುಂಬಿಸಿಕೊಂಡಾಗ ನನ್ನ ಅತ್ತೆ – ಅದೇಕಣಪ್ಪಾ ನಿಮ್ಮಜ್ಜಿ ನನಗೆ ಹೇಳಿದ ಮೊದಲ ಮಾತು ಏನು ಗೊತ್ತೇ? ' ಲಕುಮಿ! ಇವತ್ತಿನಿಂದ ನನ್ನ ಮಗನ ಮೀಸೆಯನ್ನ ನಿನಗೆ ಒಪ್ಪಿಸಿದ್ದೀನಿ! ಅದನ್ನ ಚೆನ್ನಾಗಿ ನೋಡಿಕೋ!'” ಅಮ್ಮ ಅಜ್ಜಿಯನ್ನು ಅನುಕರಿಸಿ ಆಡಿದ ಮಾತು ಕೇಳಿ ಕಿಸಕ್ಕನೆ ನಕ್ಕ ಹೊನ್ನ.

“ಇದು ತಮಾಷೆಯ ಮಾತಲ್ಲಪ್ಪ! ಸತ್ಯ ಸಂಗತಿ! ಅವತ್ತಿನಿಂದ ಅವರ ಮಾತನ್ನ ವೇದವಾಕ್ಯವಾಗಿ ತಿಳಿದು ನಿನ್ನ ಅಪ್ಪಯ್ಯನ ಮೀಸೆ ಆರೈಕೆಗೆ ಬೇಕಾದದ್ದನ್ನೆಲ್ಲ ಮಾಡಿಕೊಂಡು ಬಂದಿದ್ದೀನಿ. ಇನ್ನೂ ಹೇಳುವುದಾದರೆ  ನನ್ನ ಜೀವಮಾನದಲ್ಲಿ ನಿನ್ನ ಆರೈಕೆ ಮಾಡಿದ್ದಕ್ಕಿಂತ ನಿಮ್ಮಪ್ಪನ ಮೀಸೆ ಆರೈಕೆ ಮಾಡಿದ್ದೇ ಹೆಚ್ಚು!"

“ಸರಿ ಸರಿ! ಮುಗೀತೋ ನಿನ್ನ ಮೀಸೆ ಪುರಾಣ?” ಎನ್ನುತ್ತ ಕನ್ನಡಿಯನ್ನು ಬದಿಗಿಟ್ಟರು ಚಿಕ್ಕ ಬಯಿರೆಯ ನಾಯಕರು.

“ನನ್ನ ಮೀಸೆ ಪುರಾಣ ಅಲ್ಲರೀ! ನಿಮ್ಮ ಮೀಸೆ ಪುರಾಣ!” ಎಂದ ಅಮ್ಮ, ತಂದೆ ಮಗ ಇಬ್ಬರಿಗೂ ಊಟ ಬಡಿಸಲು ಅಣಿಯಾದಳು.

“ಅಮ್ಮ! ದರ್ಪಣ ಸುಂದರಿ, ಶುಕಭಾಷಿಣಿ, ವೀರಾಯೋಚಿತೆ, ಕಪಿಕುಪಿತೆ ಎಂದು ಅನೇಕ ಶಿಲಾಬಾಲಿಕೆಯರ ಬಗ್ಗೆ ಯಾವಾಗಲೂ ಹೇಳುತ್ತಿರುತ್ತಿ! ನನಗೆ ಅಂತಹ ಸುಂದರವಾದ ಕೆತ್ತನೆಗಳನ್ನೆಲ್ಲ ನೋಡಬೇಕು ಅನ್ನಿಸುತ್ತದೆ!” ಕೈಕಾಲು ತೊಳೆದುಕೊಂಡು ಬಂದ ಹೊನ್ನ ಆಸೆಯಿಂದ ನುಡಿದನು.

“ದ್ವಾರಸಮುದ್ರ – ನಮ್ಮ ರಾಜಧಾನಿ – ಅದೆಷ್ಟು ಸುಂದರವಾದ ಐಶ್ವರ್ಯವಂತ ಪಟ್ಟಣ! ಅಂತಹ ಊರನ್ನ ಲೂಟಿ ಮಾಡಿ ಐಶ್ವರ್ಯವನ್ನೆಲ್ಲ ದೋಚಿಕೊಂಡದ್ದಲ್ಲದೇ  ಊರನ್ನೇ ನುಚ್ಚು ನೂರು ಮಾಡಿ ಹೋದ ಆ ಸುಲ್ತಾನನ ಸೇನಾಪತಿ ಮಲ್ಲಿಕ್ ಕಾಫುರ್! ಸಧ್ಯ! ವೇಲಾಪುರಿಯು ಆತನ ವಕ್ರ ದೃಷ್ಟಿಗೆ ಸಂಪೂರ್ಣ ಬಲಿಯಾಗಲಿಲ್ಲ! ಅದೇ ನಮ್ಮ ಪುಣ್ಯ! ಹೋಗೋಣ! ಎಂದಾದರೊಮ್ಮೆ ನಮ್ಮ ಊರಿಗೆ ಹೋಗೋಣ! ಹೊಯ್ಸಳೇಶ್ವರನ ಗುಡಿಗೆ

ಹೋಗೋಣ! ಹಾಗೆಯೇ ನಮ್ಮ ಹಿಂದಿನ ರಾಜಧಾನಿ ವೇಲಾಪುರಿಯಲ್ಲಿರೋ ಚೆನ್ನಕೇಶವನ ಗುಡಿಯನ್ನೂ ಅಲ್ಲಿಯ ಶಿಲಾಬಾಲಿಕೆಯರನ್ನೂ ಕಂಡು ಬರೋಣ!" ಊಟ ಬಡಿಸುತ್ತಲೇ ನುಡಿದಳು ಅಮ್ಮ.

"ದ್ವಾರಸಮುದ್ರವನ್ನು ಪುನರ್ನಿರ್ಮಾಣ ಮಾಡುವ ಯೋಚನೆ ಮಹಾರಾಜರಿಗೆ ಇದೆ. ಅಂತಹ ಕಾಲ ಬಂದರೆ ನಾವೆಲ್ಲಾ ನಮ್ಮ ಹಳೇ ಬೀಡಿಗೇ ಮರಳಿ ಹೋಗಬಹುದು. ಆದರೆ ಆ ಕಾಲ ಬರುವುದು ಯಾವಾಗ ಅನ್ನೋದು ಮಾತ್ರ ನಿಶ್ಚಯವಿಲ್ಲ! ಅತ್ತ ದಿಲ್ಲಿ ಸುಲ್ತಾನ! ಇತ್ತ ಮಧುರೈ ಸುಲ್ತಾನ! ಇವರುಗಳ ನಡುವೆ ನಾಡಿನ ದಕ್ಷಿಣ ಭಾಗವನ್ನು ಅಖಂಡವಾಗಿ ಆವರಿಸಿಕೊಂಡಿರುವ, ಮಹಾರಾಜರು ಏಕೀಕರಿಸಿರುವ ಹೊಯ್ಸಳ ಸಾಮ್ರಾಜ್ಯ! ದಿಲ್ಲಿ ಸುಲ್ತಾನನ ಚಲನೆವಲನೆಗಳ ಮೇಲೆ ಕಣ್ಣಿಡಲು ಈ ಉಣ್ಣಾಮಲೆ ಪಟ್ಟಣ ತಕ್ಕ ವೀಕ್ಷಣಾಸ್ಥಳವಾಗಿದೆ! ರಾಜ್ಯದ ರಕ್ಷಣೆಗಾಗಿ ಮಹಾರಾಜರು ಈ ಹೊಸ ರಾಜಧಾನಿಯಲ್ಲಿ ಕೇಂದ್ರೀಕರಿಸಿರುವುದು ಅಗತ್ಯ! ಹಾಗಾಗಿ ಮಹಾ ಪಸಾಯಿತನಾದ ನಾನೂ ಇಲ್ಲೇ ನೆಲಸಬೇಕಾದದ್ದು ಅನಿವಾರ್ಯವಾಯಿತು! ಏನು ಮಾಡುವುದು?" ಗಂಭೀರವಾಗಿ ನುಡಿದು ನಿಟ್ಟುಸಿರೆಳೆದರು ಅಪ್ಪಯ್ಯ.

"ಅಪ್ಪಯ್ಯ! ಮಾತು ಎಲ್ಲಿಂದೆಲ್ಲಿಗೋ ಹೋಯಿತು! ಸಮಯ ಕೂಡಿಬಂದಾಗ ನಮ್ಮೂರಿಗೆ ಹೋದರಾಯಿತು! ಅದೆಲ್ಲ ಹಾಗಿರಲಿ! ನಾನು ಊರಿಗೆ ಹೋಗಿ ಬಂದ ವಿಷಯದ ಬಗ್ಗೆ ನೀನು ಕೇಳಲೇ ಇಲ್ಲವಲ್ಲ?" ಉತ್ಸಾಹದಿಂದ ವಿವರಿಸಲು ಹೊರಟ ಹೊನ್ನ.

"ನಿನ್ನ ಮೇಲೆ ನನಗೆ ಸಂಪೂರ್ಣ ವಿಶ್ವಾಸವಿದೆ ಮಗನೆ! ನೀನು ಹೇಳಬೇಕಾದದ್ದೆಲ್ಲವನ್ನೂ ನಾಳೆ ಮಹಾರಾಜರ ಮುಂದೆ ನೀನೇ ಹೇಳುವೆಯಂತೆ!" ಎಂದು ಮುಸಿನಕ್ಕರು ಅಪ್ಪಯ್ಯ.

"ನಾನೇ? ಮಹಾರಾಜರ ಮುಂದೆಯೇ? ನಾಳೆಯೇ?" ಬೆರಗಿನಿಂದ ಉಸಿರು ಕಟ್ಟಿದಂತಾಯಿತು ಹೊನ್ನನಿಗೆ.

"ಹೂಂ ಮತ್ತೆ! ಮರಿ ಮೀಸೆ ಮೊಳೆತಾಗಿದೆ! ಅರಮನೆಯಲ್ಲಿ ಉದ್ಯೋಗ ಮಾಡುವ ಯೋಚನೆ ಇದೆಯೋ ಇಲ್ಲವೋ? "

ಹೊನ್ನನ ಮನಸ್ಸಲ್ಲಿ ಉತ್ಸಾಹ, ಕಾತರ, ಕುತೂಹಲ ಎಲ್ಲ ಒಟ್ಟಿಗೆ ಉದ್ಭವಿಸಿದವು.

"ನೋಡು! ಪಯಣ ಮಾಡಿ ಬಂದಿದ್ದರಿಂದ ಮೀಸೆ ಎಲ್ಲ ಕೆದರಿ ಹೋಗಿದೆ! ಅಮ್ಮನಿಗೆ ಹೇಳು!

ನಾಳೆ ಜೇನು ಮೇಣ ಕರಗಿಸಿ ಕೊಡುತ್ತಾಳೆ! ಮೀಸೆಗೆ ಪೂಸಿ ಅಚ್ಚುಕಟ್ಟಾಗಿ ತಿದ್ದಿಕೊಂಡು ಹೊರಡಕ್ಕೆ ತಯಾರಾಗು! ಎಲ್ಲಿಗೆ ಹೋದರೂ ಏನು ಮಾಡಿದರೂ ನಿನ್ನ ಮೀಸೆಯ ಮೇಲೆ ಸದಾ ಒಂದು ಕಣ್ಣು – ಅಲ್ಲ – ಕೈ ಇದ್ದೇ ಇರಬೇಕು! ತಿಳಿಯಿತೇ?" ಎಂದು ನುಡಿದು ಕೈ ತೊಳೆಯಲು ಎದ್ದರು ಅಪ್ಪಯ್ಯ .

ಅಮ್ಮ ಮತ್ತು ಹೊನ್ನ ಒಬ್ಬರ ಮುಖ ಒಬ್ಬರು ನೋಡಿಕೊಂಡು ಕಿರುನಗೆಯನ್ನು ಬೀರಿಕೊಂಡರು.

ಉದ್ಯೋಗದ ಸಲುವಾಗಿ ಮಹಾರಾಜರನ್ನು ಭೇಟಿಯಾಗಲು ಹೊರಟಿರುವುದರಿಂದ ಮೊದಲು ಗುಡಿಗೆ ಹೋಗಿ ಈಶ್ವರನನ್ನು ದರುಶನ ಮಾಡಿಕೊಂಡು ಹೋಗುವಂತೆ ಹೇಳಿದ್ದಳು ಅಮ್ಮ.

ಆದ್ದರಿಂದ ಅರುಣಾಚಲೇಶ್ವರನನ್ನು ದರುಶನ ಮಾಡಲು ತಂದೆ ಮಗ ಇಬ್ಬರೂ ತೆರಳಿದರು. ಶಿವ ಭಕ್ತರಾದ ವೀರ ಬಲ್ಲಾಳ ಮಹಾರಾಜರು ನಿರ್ಮಾಣ ಮಾಡಿದ್ದ ಗೋಪುರವನ್ನು ಕಂಡಾಗ ಚಿಕ್ಕ ಬಯಿರೆಯ ನಾಯಕರಿಗೆ ಮೈ ನವಿರೇಳಿತು! ಊರವರೆಲ್ಲ 'ವೀರ ವೈಭೋಗ ವಲ್ಲಾಳ ಮಹಾರಾಜಾ ಗೋಪುರಮ್ ' ಎಂದೇ ಹೆಸರಿಸಿದ್ದ ಆ ಭವ್ಯವಾದ ಗೋಪುರದ್ವಾರದ ಮೂಲಕ ಗುಡಿಯನ್ನು ಪ್ರವೇಶಿಸಿದಾಗ ಅವರ ಮನಸ್ಸಲ್ಲಿ ಉಕ್ಕಿದ ಭಯಭಕ್ತಿ ದೇವರನ್ನು ಕುರಿತೋ ಇಲ್ಲ ಮಹಾರಾಜರನ್ನು ಕುರಿತೋ ಎಂಬುದು ಗೊಂದಲವಾಗಿಯೇ ಇದ್ದಿತು!

" ನಮ್ಮೂರ ಹೊಯ್ಸಳೇಶ್ವರ ದೇವಾಲಯವೂ ಹೀಗೆಯೇ ಇರುತ್ತದೆಯೇ ಅಪ್ಪಯ್ಯ?" ಆ ಭವ್ಯವಾದ ಗೋಪುರವನ್ನು ತಲೆ ಎತ್ತಿ ನೋಡುತ್ತ ಕುತೂಹಲದಿಂದ ಪ್ರಶ್ನಿಸಿದನು ಹೊನ್ನ.

"ಅದು ಬೇರೆಯೇ ಶೈಲಿ, ಇದು ಬೇರೆ ಶೈಲಿ! ಆದರೆ ಭಕ್ತರಿಗೆ ಎಲ್ಲ ದೇವರೂ ಒಂದೇ! ಒಂದು ವಿಷಯ ಮಾತ್ರ ಬಹಳ ವಿಸ್ಮಯಕಾರಿಯಾಗಿದೆ ನೋಡು!" ಎಂದ ಅಪ್ಪಯ್ಯ ಹೊನ್ನನ ಕುತೂಹಲವನ್ನು ಕೆಣಕುವಂತೆ ಅಲ್ಲಿಗೇ ಮಾತು ನಿಲ್ಲಿಸಿದರು.

"ಅದೇನು ವಿಷಯ ಹೇಳು ಅಪ್ಪಯ್ಯ! "

"ಆ ರಾಜಧಾನಿಗೂ ಇಂದಿನ ಈ ರಾಜಧಾನಿಗೂ ನಡುವೆ ಇರುವ ಸಾಮ್ಯಗಳು ಬೆರಗುಗೊಳಿಸುತ್ತವೆ!" ಎಂದರು ಅಪ್ಪಯ್ಯ.

'ಏನು ಸಾಮ್ಯಗಳು? ' ಎಂಬಂತೆ ಹುಬ್ಬೇರಿಸಿದ ಹೊನ್ನ.

"ಅಂದಿನ ರಾಜಧಾನಿ ದ್ವಾರಸಮುದ್ರ , ಇಂದಿನ ರಾಜಧಾನಿ 'ಅರುಣ ಸಮುದ್ರ'! ಉಣ್ಣಾಮಲೆ ಪಟ್ಟಣಕ್ಕೆ ಇದೂ ಒಂದು ಹೆಸರಾಗಿದೆ. ಅಲ್ಲಿ ಹೊಯ್ಸಳೇಶ್ವರ! ಇಲ್ಲಿ ಅರುಣಾಚಲೇಶ್ವರ! ಪಶ್ಚಿಮ ಘಟ್ಟದ ಬೆಣ್ಣೆಗುಡ್ಡದ ತಪ್ಪಲಲ್ಲಿ ದ್ವಾರಸಮುದ್ರ ಇದ್ದರೆ , ಪೂರ್ವ ಘಟ್ಟದ ಅರುಣಗಿರಿಯ ತಪ್ಪಲಲ್ಲಿ ಅರುಣ ಸಮುದ್ರ! "

"ಓಹ್! ಈ ಪಟ್ಟಣವನ್ನು ರಾಜಧಾನಿಯಾಗಿ ಮಾಡಿಕೊಳ್ಳಲು ಮಹಾರಾಜರಿಗೆ ಈ ವಿಷಯವೂ ಒಂದು ಬಲವಾದ ಕಾರಣವಾಗಿತ್ತೋ ಏನೋ!" ಎಂದ ಹೊನ್ನ.

" ಇರಬಹುದು! ಅನುವಂಶಿಕವಾಗಿ ಎಷ್ಟೋ ಕಾಲದಿಂದ ಅಲ್ಲೇ ಬದುಕಿ ಬಾಳಿ ಆಳಿದ ರಾಜವಂಶದ ಕುಡಿ ವೀರ ಬಲ್ಲಾಳರು. ಮಹಾರಾಜರಿಗೆ ಹುಟ್ಟೂರಿನ ಮೇಲೆ ಭಾವನಾತ್ಮಕವಾದ ನಂಟು ಇರುವುದು ಸಹಜವೇ ಅಲ್ಲವೇ! "

ದೇವರ ಸನ್ನಿಧಿ ತಲುಪಿದಾಗ ಇಬ್ಬರೂ ಮೌನವಾಗಿ ದರುಶನವನ್ನು ಮಾಡಿಕೊಂಡರು. ಅರುಣಾಚಲೇಶ್ವರನ ದಿವ್ಯ ಸ್ವರೂಪ ಕಂಡು ಪರವಶರಾದರು. ಪ್ರಾರ್ಥನೆಯನ್ನು ಸಲ್ಲಿಸಿ ಹೊರಟರು.

"ಓ! 'ಮೀಸೆಯರಗಂಡ' ಚಿಕ್ಕ ಬಯಿರೆಯ ನಾಯಕರು! ದೇವರ ದರುಶನವಾಯಿತೇ? ಎಲ್ಲ ಕ್ಷೇಮವೇ? ನಿಮ್ಮ ಮಗನೇ? ಉಷತ್ಕಾಲದ ಪೂಜೆಗೇ ಬಂದಿರಲ್ಲ? ಏನು ವಿಶೇಷ? "

ಗುಡಿಯಲ್ಲಿ ಎದುರಾದ ಮಂದಿಯೆಲ್ಲ ಬಗೆ ಬಗೆಯಾಗಿ ಪ್ರಶ್ನಿಸಿ ವಿಚಾರಿಸಿ

ಹೋದರು.

' ಮೀಸೆಯರಗಂಡ ' ಎಂದು ಅವರುಗಳು ಸಂಬೋಧಿಸಿದಾಗಲೆಲ್ಲ ಅಪ್ಪಯ್ಯನ ಎದೆಯುಬ್ಬಿತು. ಅವರ ಕೈ ಅನೈಚ್ಛಿಕವಾಗಿ ಮೀಸೆಯನ್ನು ತಿರುವಿತು! ಅರುಣಾಚಲೇಶ್ವರನ ದರುಶನ ಮಾಡಿಕೊಂಡಾಗಲೂ ಅಪ್ಪಯ್ಯನ ಒಂದು ಕೈ ಮೀಸೆಯಮೇಲೆ ಇದ್ದಿತೋ ಎಂಬ ಸಂಶಯ ಈಗ ಹೊನ್ನನ ತಲೆಯನ್ನು ಕೊರೆಯಿತು.

' ಛೆ! ಅಮ್ಮ ಹೇಳಿದಹಾಗೆ ಅಪ್ಪಯ್ಯನಿಗೆ ಇದು ಒಂದು ಗೀಳಾಗಿಹೋಗಿದೆ. ಈ ಗೀಳು ಹೇಗಾದರೂ ಬಿಡಿಸಬೇಕು! ' ಮನದಲ್ಲೇ ನಿರ್ಧರಿಸಿಕೊಂಡ ಹೊನ್ನ.

ತಂದೆ ಮಗ ಇಬ್ಬರೂ ಅರಮನೆಯನ್ನು ಕುರಿತು ತಮ್ಮ ಕುದುರೆಗಳನ್ನು ಚಲಿಸುತ್ತಿದ್ದರು. ಮೀಸೆಯ ಬಗ್ಗೆ ಅಪ್ಪಯ್ಯನ ಜೊತೆ ಮಾತನಾಡಲು ಇದೇ ಸದವಕಾಶ ಎಂದುಕೊಂಡ ಹೊನ್ನ ಅಳುಕುತ್ತಲೇ "ಅಪ್ಪಯ್ಯ!" ಎಂದನು.

"ಏನೋ ಹೊನ್ನ? ಮಹಾರಾಜರನ್ನು ಭೇಟಿಯಾಗಲು ಭಯವಾಗುತ್ತಿದೆಯೇ? ಅವರು ಎಷ್ಟೇ ಪರಾಕ್ರಮಶಾಲಿ ಇರಬಹುದು! ಆದರೂ ಸರಳ ಸ್ವಭಾವದವರು! ದಯಾವಂತರು! ಪ್ರಾಮಾಣಿಕರು! ಪ್ರಜೆಗಳ ಮತ್ತು ಕಲಾಚಾರದ ಹಿತರಕ್ಷಕರು! ನನ್ನೊಂದಿಗೆ ಆಡುವಂತೆಯೇ ನೀನು ಅವರೊಂದಿಗೆ ಧೈರ್ಯವಾಗಿ ಮಾತನಾಡಬಹುದು!" ಹೊನ್ನನನ್ನು ತನ್ನ ಮಾತಿನಿಂದ ಉತ್ಸಾಹಪಡಿಸಿದರು ಚಿಕ್ಕ ಬಯಿರೆಯ ನಾಯಕರು.

ತಲೆದೂಗಿ ಕೇಳಿಸಿಕೊಂಡ ಹೊನ್ನ ಮತ್ತೆ ' ಅಪ್ಪಯ್ಯ! ' ಎಂದು ಪ್ರಾರಂಭಿಸಿದನು.

"ಹೇಳು ಹೊನ್ನ! ಇನ್ನೇನು ಚಿಂತೆ ನಿನಗೆ? "

"ಏನಿಲ್ಲ! ಮೀಸೆಯ ಮೇಲಿನ ನಿನ್ನ ಅಕ್ಕರೆ....! ಅದು ಸ್ವಲ್ಪ ಅತಿಯಾಯಿತೋ ಅನ್ನಿಸುತ್ತದೆ ...." ಅಳುಕುತ್ತ ಅಂಜುತ್ತ ಹೇಗೋ ಮಾತನ್ನು ತೆಗೆದುಬಿಟ್ಟ ಹೊನ್ನ

ಚಿಕ್ಕ ಬಯಿರೆಯ ನಾಯಕರು ಗಂಭೀರವಾಗಿಬಿಟ್ಟರು. ಸ್ವಲ್ಪ ಹೊತ್ತು ಮೌನ ಸಾಧಿಸಿದರು.

" ಹೊನ್ನ! ನಿನ್ನ ಹಾಗೆಯೇ ನಾನೂ ಒಮ್ಮೆ ಮಹಾರಾಜರನ್ನು ಭೇಟಿಯಾಗಲೆಂದು ನನ್ನ ಅಪ್ಪನೊಂದಿಗೆ ಹೋಗಿದ್ದೆ .... " ಹಳೆಯ ನೆನಪುಗಳು ಮರುಕಳಿಸಿದಂತೆ ಅವರ ನೋಟ ಬಹಳ ದೂರದಲ್ಲಿ ನೆಟ್ಟು ನಿಂತಿತು.

ಹದಿನೈದರ ಹರೆಯದ ಹುಡುಗ ಚಿಕ್ಕ ಬಯಿರ ಚೂಟಿಯಾದ ಹುಡುಗ. ಮುಂಜಾವಿನಲ್ಲೆದ್ದು ಓದು ಬರಹ ಮುಗಿಸಿ, ಹಸು ಕರುಗಳ ಆರೈಕೆ ಮಾಡುವುದು, ಮನೆತನಕ್ಕೆ ಸ್ವಂತವಾದ ಗದ್ದೆ ತೋಟಗಳ ಮೇಲ್ವಿಚಾರ ಮಾಡುವುದು, ಅವಕ್ಕೆ ಸಂಬಂಧಪಟ್ಟ ಲೆಕ್ಕಾಚಾರಗಳನ್ನು ಅಚ್ಚುಕಟ್ಟಾಗಿ ದಾಖಲೆ ಮಾಡುವುದು, ಮುಂತಾದ ಅನೇಕ ಕೆಲಸ ಕಾರ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸುತ್ತಿದ್ದನು. ತನ್ನ ಓರಗೆಯ ಗೆಳೆಯರೊಂದಿಗೆ ಗರಡಿಮನೆಗೆ ಹೋಗಿ ಮಲ್ಲಕಂಬ ಹತ್ತಿ ಕಸರತ್ತು ಮಾಡುವುದು, ಕಬಡಿ ಆಟವಾಡುವುದು, ಕೆರೆಯಲ್ಲಿ ಈಜಾಡುವುದು ಎಂದು ಉಲ್ಲಾಸದಿಂದ ಕಾಲ

ಕಳೆಯುತ್ತಿದ್ದನು ಚಿಕ್ಕ ಬಯಿರೆಯ ನಾಯಕ! ಈ ಉಲ್ಲಾಸ, ಸಂತೋಷವೆಲ್ಲ ಮಹಾರಾಜರನ್ನು ಕಂಡು ಬರುವವರೆಗೆ ಮಾತ್ರ ಉಳಿದಿತ್ತು!

ಆನೆಯನ್ನು ಕೊಲ್ಲ ಬಲ್ಲ ಮೈಕಟ್ಟನ್ನು ಹೊಂದಿದ್ದು, ಹುರಿ ಮೀಸೆ ತಿರುಗಿಸುತ್ತ ವೀರ ಭೈರವನಂತೆ ಧೃಡಗಾತ್ರವಾಗಿ ಕುಳಿತಿದ್ದ ವೀರ ಬಲ್ಲಾಳ ಮಹಾರಾಜರನ್ನು ಕಂಡಾಗ ಚಿಕ್ಕ ಬಯಿರೆಯ ನಾಯಕನ ಒಡಲು ಕೇಶಾದಿ ಪಾದ ಕಂಪಿಸತೊಡಗಿತು.

"ನನ್ನ ಮಗ ಚಿಕ್ಕ ಬಯಿರೆಯ ನಾಯಕ! ಮಹಾರಾಜರು ಅಪ್ಪಣೆ ಮಾಡಿದರೆ ಅರಮನೆಯಲ್ಲಿ ಉದ್ಯೋಗ ಮಾಡಲು ತಯಾರಾಗಿರುವನು! "

ಅಪ್ಪ ಹೀಗೆ ಅವನನ್ನು ಪರಿಚಯಿಸಿದಾಗ ಮಹಾರಾಜರನ್ನು ವಂದಿಸುವುದನ್ನೂ ಮರೆತು ತೆರೆದ ಬಾಯನ್ನು ಮುಚ್ಚದೆ ನಿಂತುಬಿಟ್ಟಿದ್ದನು ಚಿಕ್ಕ. ಅಪ್ಪ ಆತನ ತೋಳು ತಿವಿದು ಎಚ್ಚರಿಸಿದನಂತರವೇ ಕಳವಳದಿಂದ ಮಹಾರಾಜರನ್ನು ನಮಸ್ಕರಿಸಿದನು.

"ಇನ್ನೂ ಮೀಸೆ ಚಿಗುರಿಲ್ಲ! ಆಗಲೇ ಉದ್ಯೋಗದ ಚಿಂತೆಯೇ?" ಎಂದು ಅಟ್ಟಹಾಸದಿಂದ ನಕ್ಕರು  ಮಹಾರಾಜರು.

ಅಂದು ಸಂಜೆ –

"ಮಹಾರಾಜರು ಚಿಕ್ಕನಿಗೆ ಉದ್ಯೋಗವನ್ನ ದಯಪಾಲಿಸಿದ್ದಾರೆ. ಸಂತೋಷದಿಂದಿರುವುದು ಬಿಟ್ಟು ಇವನೇಕೆ ಸಪ್ಪೆ ಮುಖ ಹೊತ್ತು ಮಲಗಿರುವನು?" ಆಶ್ಚರ್ಯದಿಂದ  ಪ್ರಶ್ನಿಸಿದರು ಅಪ್ಪ.

"ಮಹಾರಾಜರು ಇವನಿಗೆ ಇನ್ನೂ ಮೀಸೆ ಚಿಗುರಿಲ್ಲವಲ್ಲ ಅಂದರಂತೆ! ಅದಕ್ಕೇ ಇವನಿಗೆ ತುಂಬ ದುಃಖವಾಗಿಬಿಟ್ಟಿದೆ." ಎನ್ನುತ್ತ ತನ್ನ ತೊಡೆಯ ಮೇಲಿದ್ದ ಚಿಕ್ಕನ ತಲೆ ನೇವರಿಸಿದಳು ಅಮ್ಮ.

"ಇದಕ್ಕೆಲ್ಲ ಬೇಸರವೇ? ಅವರು ತಮಾಷೆಗೆ ಹೇಳಿದ ಮಾತು! ಉದ್ಯೋಗವಂತೂ ಸಿಕ್ಕಿತಲ್ಲವೇ? ಅಮ್ಮನ ಮಡಿಲಲ್ಲಿ ಮಲಗಿರೋದು ಬಿಟ್ಟು ಎದ್ದು ಬೇರೆ ಕೆಲಸವಿದ್ದರೆ  ನೋಡು ಹೋಗು!"

'ಅಪ್ಪನಿಗೆ ನನ್ನ ನೋವು ಅರ್ಥವಾಗುವುದಿಲ್ಲ. ಕುಡಿ ಮೀಸೆ, ಚಿಗುರು ಮೀಸೆ , ಕಿರು ಮೀಸೆ , ಜಿರಳೆ ಮೀಸೆ ಎಂದು ನನ್ನ ಗೆಳೆಯರ ಮೊಗಗಳಲ್ಲೆಲ್ಲ ಯಾವುದೊ ಒಂದು ರೀತಿಯ ಮೀಸೆ ಇರುವುದು ಇದೀಗ ಗಮನಕ್ಕೆ ಬರುತ್ತಿದೆ. ನನಗೆ ಮೀಸೆ ಇಲ್ಲವೆಂಬುದು ಇಲ್ಲಿಯತನಕ ಯಾಕೆ ಅರಿವಾಗಲೇ ಇಲ್ಲ? '

"ಒಳ್ಳೆ ಪೌಷ್ಟಿಕ ಆಹಾರ ಕೊಡು ನಿನ್ನ ಮಗನಿಗೆ. ಬೇಡ ಬೇಡವೆಂದರೂ ಮೀಸೆ ಬೆಳೆಯುವ ವಂಶ ನಮ್ಮದ್ದು. ಅದು ಹೇಗೆ  ಬರೋದಿಲ್ಲವೆಂದು ನೋಡೋಣ !" ಎಂದು ಅಬ್ಬರಿಸಿದರು ಅಪ್ಪ.

ಪ್ರತಿದಿನ ಕಡೆದ ಬೆಣ್ಣೆಯಲ್ಲಿ ಒಂದು ಉಂಡೆಯನ್ನು ಅಪ್ಪನ ಮೀಸೆಯ ಮಾಲೀಷಿಗಾಗಿ ತೆಗೆದಿಡುತ್ತಿದ್ದ ಅಮ್ಮ , ಮರುದಿನದಿಂದ ಚಿಕ್ಕನ ಸೇವನೆಗಾಗಿ ಮತ್ತೊಂದು ದೊಡ್ಡ ಉಂಡೆಯನ್ನು ತೆಗೆದಿಟ್ಟಳು.  ಜೊತೆಗೆ ಅವನಿಗಾಗಿ ತರಕಾರಿ ಮತ್ತು ಮೊಟ್ಟೆ ಸೇರಿಸಿದ ವಿಶಿಷ್ಟವಾದ  ಆಹಾರವನ್ನೂ ತಯಾರಿಸಿ ಕೊಡತೊಡಗಿದಳು.

ದಿನ ರಾತ್ರಿ ಮಲಗುವ ಮುನ್ನ ಒಂದು ಚಿಕ್ಕ ಉಂಡೆ ಬೆಣ್ಣೆಯನ್ನು ಅವನ ಕೈಗಿಟ್ಟು "ಇಡೀ ಮುಖಕ್ಕೆ ಲೇಪಿಸಿಕೋ! ಮೀಸೆ ಯಾಕೆ ಗಡ್ಡವೂ ಬೆಳೆಯುತ್ತದೆ ನೋಡುತ್ತಿರು!" ಎಂದಿದ್ದಳು.

ಮುಂಜಾನೆ ಹಾಸಿಗೆಯಿಂದ ಏಳುತ್ತಲೇ ಮೀಸೆ ಮೊಳೆತಿರುವುದೇ ಎಂದು ಮೀಸೆ ಪ್ರದೇಶದಲ್ಲಿ ಕೈಯಾಡಿಸಿ ನೋಡಿಕೊಳ್ಳುವುದು ಚಿಕ್ಕನಿಗೆ ವಾಡಿಕೆಯಾಯಿತು. ಬೆಣ್ಣೆಯ ಸೇವನೆಯಿಂದಲೂ ಲೇಪನದಿಂದಲೂ ಅವನ ತ್ವಚೆ ಮೃದುವಾಗಿ ಕಾಂತಿಯಿಂದ ಹೊಳೆಯುತ್ತಿತ್ತು. ವಿಶೇಷವಾದ ಆಹಾರದಿಂದ ಮೈತುಂಬಿಕೊಂಡು ಮೈಕಟ್ಟು ದಷ್ಟಪುಷ್ಟವಾಗ ತೊಡಗಿತು. ಆದರೆ ಮೀಸೆಯ ಸುಳಿವು ಮಾತ್ರ ಇಲ್ಲವೇ ಇಲ್ಲ!

ತನ್ನ ಸಮಸ್ಯೆಯನ್ನು ಗೆಳೆಯರೊಂದಿಗೆ ಹಂಚಿಕೊಳ್ಳಲು ನಾಚಿಕೊಂಡ ಚಿಕ್ಕನಿಗೆ ಅವರುಗಳಿಂದ ಮೀಸೆ ಬೆಳೆಸುವ ರಹಸ್ಯವನ್ನು ಕೇಳಿ ಅರಿತುಕೊಳ್ಳುವುದು ಸಾಧ್ಯವಾಗಲಿಲ್ಲ.

ಆದರೆ ಅಮ್ಮ ಹಾಗೆ ಸುಮ್ಮನೆ ಇರಲಿಲ್ಲ. ಸಮಯ ಸಿಕ್ಕಾಗಲೆಲ್ಲ ಅವರಿವರನ್ನು ಕೇಳಿ ಏನಾದರೊಂದು ಮದ್ದನ್ನು ಮಾಡಿಕೊಡುತ್ತಿದ್ದಳು. ಎಲ್ಲವೂ ವಿಫಲ!

ಒಮ್ಮೆ ಚಿಕ್ಕ ಗೆಳೆಯರೊಂದಿಗೆ ಆಡಿ ಹಿಂದಿರುಗಿದಾಗ ಇಡೀ ಮನೆಯನ್ನು ಯಾವುದೋ ತಿಂಡಿಯ ಘಮ ಆವರಿಸಿತ್ತು.

"ಅಮ್ಮ! ಇಂದು ಏನಾದರೂ ವಿಶೇಷ ತಿಂಡಿ ಮಾಡಿರುವಿಯೇನು?" ಎನ್ನುತ್ತ ಅಡುಗೆ ಮನೆ ಪ್ರವೇಶಿಸಿದ ಚಿಕ್ಕ.

"ಇಲ್ಲ ಕಣೋ ಚಿಕ್ಕ! ನಮ್ಮ ಕಾತ್ಯಾಯನಿ ಎರಡು ತಿಂಗಳು ಊರಲ್ಲೇ ಇರಲಿಲ್ಲ ನೋಡು. ಇವತ್ತು ಗುಡಿಯಲ್ಲಿ ಸಿಕ್ಕಿದಳು. ಇಲಿ ಬಾಲದಂತಿದ್ದ ಅವಳ ತಲೆಗೂದಲು ಅದೆಷ್ಟು ಸೊಂಪಾಗಿ ಬೆಳೆದಿದೆ ಗೊತ್ತೇ? ಏನಮ್ಮ ಅದರ ಗುಟ್ಟು ಅಂತ ಕೇಳಿದೆ. ತಾನು ಉಪಯೋಗಿಸುವ ತೈಲದ ಬಗ್ಗೆ ಹೇಳಿದಳು. ಅದನ್ನೇ ನಾನು ಈವಾಗ ಕಾಯಿಸಿದೆ." ಎನ್ನುತ್ತ ಕಾದು ಕಂದು ಬಣ್ಣಕ್ಕೆ ತಿರುಗಿದ್ದ ತೈಲವನ್ನು ಸೋಸಿದಳು ಅಮ್ಮ.

"ನಿನ್ನ ತಲೆಗೂದಲು ಸೊಂಪಾಗಿಯೇ ಇದೆ! ನಿನಗೆ ಯಾಕಮ್ಮಾ ಈ ತೈಲ? " ತೈಲವನ್ನು ಬಾಗಿ ಮೂಸಿ ನೋಡುತ್ತ ಕೇಳಿದ ಚಿಕ್ಕ.

"ಅಯ್ಯೋ ಇದು ನನಗಲ್ಲ ಮರಿ! ನಿನಗೆ! ದಿನ ನಿತ್ಯ ಸಂಜೆ ಹೊತ್ತಲ್ಲೇ ಮುಖಕ್ಕೆ ಹಚ್ಚಿಕೋ! ಹೆಚ್ಚಾಗಿ ತೊಯಿದಷ್ಟು ಶೀಘ್ರದಲ್ಲಿಯೇ ಫಲಿತಾಂಶ! ಬೆಳಿಗ್ಗೆದ್ದು ತಣ್ಣೀರಿನಲ್ಲಿ ಮುಖ ತೊಳೆ! ಎರಡೇ ವಾರಗಳಲ್ಲಿ ನೋಡು ಪವಾಡವನ್ನ!" ಎಂದು ಸವಾಲು ಒಡ್ಡುವ ದನಿಯಲ್ಲಿ ನುಡಿದಳು ಅಮ್ಮ.

"ಏನೇನು ಹಾಕಿ ಕಾಯಿಸಿರುವೆ? ತಿಂಡಿಯ ವಾಸನೆ ಬರುತ್ತಿದೆ!" ಚಿಕ್ಕ ಮೊರೆ ಸೊಟ್ಟ ಮಾಡಿಕೊಂಡ.

"ಎಲ್ಲ ನಮ್ಮ ಮನೆಯಲ್ಲಿರುವ ಸಾಮಗ್ರಿಗಳೇ! ನೆಲ್ಲಿಕಾಯಿ, ಇಷ್ಟು ಮೆಂತ್ಯ , ಕರಿಬೇವು , ಈರುಳ್ಳಿ ..."

"ಅಯ್ಯೋ ಅಮ್ಮ! ಈರುಳ್ಳಿಯೇ? ಈರುಳ್ಳಿ ವಾಸನೆಯೊಂದಿಗೆ ಹೋಗಿ ನಾನು ಗೆಳೆಯರೊಂದಿಗೆ ಹೇಗೆ ಆಡುವುದು?" ಗಾಬರಿಯಿಂದ ಹಿಂಜರಿದ ಚಿಕ್ಕ.

“ನಿನಗೆ ಶೀಘ್ರದಲ್ಲೇ ಮೀಸೆ ಬರಬೇಕೋ ಬೇಡವೋ? "

ಚಿಕ್ಕ ಅಮ್ಮನ ಮಾತಿಗೆ ಮಣಿದನು.

“ಏನೋ ಚಿಕ್ಕ! ನೀನು ಮಾತ್ರ ಈರುಳ್ಳಿ ಬಜ್ಜಿ ತಿಂದು ಬಂದೆಯಾ? "

“ ದಿನ ನಿತ್ಯ ನಿಮ್ಮ ಮನೆಯಲ್ಲಿ ಈರುಳ್ಳಿ ಬಜ್ಜಿಯೇನೋ? "

ಬಗೆಬಗೆಯಾಗಿ ಪ್ರಶ್ನಿಸಿ ಗೆಳೆಯರೆಲ್ಲ ಅವನನ್ನು ಪೀಡಿಸ ತೊಡಗಿದರು.

ಅವನು ಬರುವುದನ್ನು ಕಂಡ ಕೂಡಲೇ “ಈರುಳ್ಳಿ ಬಜ್ಜಿ ಬಂತು ಕಂಡ್ರೋ!” ಎಂದು ಚುಡಾಯಿಸ ತೊಡಗಿದರು.

ಚಿಕ್ಕ ತನ್ನ ಈರುಳ್ಳಿ ವಾಸನೆಯ ಗುಟ್ಟನ್ನು ಮಾತ್ರ ಯಾರಿಗೂ ಬಿಟ್ಟುಕೊಡಲೇ ಇಲ್ಲ! ಗೆಳೆಯರ ಕಾಟ ತಡೆಯಲಾರದೆ ಅಮ್ಮನ ಕೈಯಲ್ಲಿ ಆಗಿಂದಾಗ್ಗೆ ಈರುಳ್ಳಿ ಬಜ್ಜಿ ಮಾಡಿಸಿ ಅವರಿಗೆ ಹಂಚ ತೊಡಗಿದ.

ಒಂದು ಮುಂಜಾವಿನಲ್ಲಿ ಎಂದಿನಂತೆ ಮೀಸೆ ಪ್ರದೇಶದಲ್ಲಿ ಕೈಯಾಡಿಸಿದ ಚಿಕ್ಕ ಆಶ್ಚರ್ಯಚಕಿತನಾದನು. ಇದೇನು ಮೃದುವಾದ ಮೀಸೆ ಪ್ರದೇಶದಲ್ಲಿ ತರಿ ತರಿಯಾಗಿ ಏನೋ ಕೈಗೆ ಸಿಕ್ಕುತ್ತಿದೆ! ಚಿಕ್ಕ ಚಕ್ಕೆಂದು ಎದ್ದು ಓಡಿಹೋಗಿ ಕನ್ನಡಿಯನ್ನು ಕೈಗೆತ್ತಿಕೊಂಡನು. ಡವಗುಟ್ಟುವ ಹೃದಯದೊಂದಿಗೆ ಅದರಲ್ಲಿ ತನ್ನ ಮುಖ ನೋಡಿಕೊಂಡಾಗ ಅವನು ಕಂಡದ್ದು? ಸಣ್ಣ ಸಣ್ಣ ಮೀಸೆ ಚಿಗುರುಗಳು! ಚಿಕ್ಕನಿಗೆ ವಿವರಿಸಲಾರದ ಸಂತೋಷ! ಅಮ್ಮ ಹೇಳಿದ ಪವಾಡ ನಡೆದೇ ಬಿಟ್ಟಿದೆಯೇ?

ಅಮ್ಮ ಅಂದು ಪಾಯಸದ ಅಡುಗೆ ಮಾಡಿ ಬಡಿಸಿದಳು!

ಆ ವರೆಗೆ ಆಟ ತೋರಿಸುತ್ತಿದ್ದ ಮೀಸೆ ಚಿಕ್ಕನ ಮೊಗದ ತುಂಬ ಸೊಂಪಾಗಿ ಬೆಳೆಯ ತೊಡಗಿತು. ಅಮ್ಮ ಮಾಡಿದ ಎಲ್ಲ ಪೋಷಣೆಯೂ ಒಮ್ಮೆಗೆ ಸಫಲಗೊಂಡಂತೆ ಅನುದಿನವೂ ಬೆಳೆದು ಬೆಳೆದು ಚಿಕ್ಕನ ಮೊಗದ ತುಂಬ ಮೀಸೆಯೇ ಆವರಿಸಿತು. ಊಟ ಮಾಡುವಾಗ ಬಾಯಿಗೆ ಸಿಕ್ಕಿಕೊಂಡಿತು. ಸುಮ್ಮಸುಮ್ಮನೆಯೂ ಬಾಯೊಳಗೆ ತೂರಿತು. ಆದರೂ ಚಿಕ್ಕ ಎಲ್ಲವನ್ನೂ ಸಂತೋಷದಿಂದ ನಿಭಾಯಿಸಿದನು.

“ಚಿಕ್ಕ! ಮೀಸೆಯನ್ನ ಹೀಗೆ ಜೊಂಡು ಜೊಂಡಾಗಿ ಬೆಳೆಯಲು ಬಿಡಬಾರದು. ಕತ್ತರಿಸಿ ಅಚ್ಚುಕಟ್ಟಾಗಿ ತಿದ್ದಿಕೋ ಹೋಗು!” ಅಪ್ಪ ಗಡುಸಾಗಿ ಅಪ್ಪಣೆ ಮಾಡಿದರು.

ಕಷ್ಟಪಟ್ಟು ತಪಸ್ಸು ಮಾಡಿ ಪಡೆದಿರುವ ತನ್ನ ಮೀಸೆಯ ಮೇಲೆ ಯಾರು ಕೈ ಇಡುವುದನ್ನೂ ಅವನು ಅನುಮತಿಸಲಾರ! ತನ್ನ ಪೊಕ್ಕಿಷವಾದ ಮೀಸೆಯ ಒಂದು ಕೂದಲನ್ನೂ ಸಹ ಕಳೆದುಕೊಳ್ಳಲಾರ!ಕತ್ತರಿಸುವ ಮಾತು ಬಂದಾಗಲೆಲ್ಲ ಚಿಕ್ಕ ಕುಣಿದು ಕುಪ್ಪಳಿಸಿ ಪ್ರತಿಭಟಿಸಿದನು!

ಕೊನೆಗೆ ಅಮ್ಮ ಅವರಿವರ ಬಳಿ ವಿಚಾರಿಸಿ ಜೇನು ಮೇಣ ಕರಗಿಸಿ ಕೊಟ್ಟಳು.

“ಇದನ್ನ ಪೂಸಿ ಮೀಸೆಯನ್ನ ಓರಣವಾಗಿ ತಿರುಗಿಸಿ ಚೊಕ್ಕಟವಾಗಿ ಇಟ್ಟುಕೋ."

ಚಿಕ್ಕ ಬಯಿರೆಯ ನಾಯಕರ ಮೀಸೆಯ ಕಥೆಯನ್ನು ಕೇಳಿ ಹೊನ್ನನ ಮನಸ್ಸು ಕರಗಿತು. ಮೀಸೆಗಾಗಿ ಅಪ್ಪಯ್ಯ ಎಷ್ಟೆಲ್ಲಾ ಕಷ್ಟಗಳನ್ನೂ ಅವಮಾನಗಳನ್ನೂ ಸಹಿಸಬೇಕಾಯಿತು!

“ಅಪ್ಪಯ್ಯ! ಮೀಸೆಗಾಗಿ ಇಷ್ಟೆಲ್ಲಾ ಪರಿಶ್ರಮಪಡಬೇಕೆಂದು ನನಗೆ ತಿಳಿದೇ

ಇರಲಿಲ್ಲ!" ಎಂದು ಕಳಕಳಿಯಿಂದ ನುಡಿದನು ಹೊನ್ನ.

“ಹೊನ್ನ! ಯಾವ ವಸ್ತುವನ್ನೂ ಅದು ಸುಲಭವಾಗಿ ಸಿಕ್ಕಿತೆಂಬ ಕಾರಣ ಹಗುರವಾಗಿ ಕಾಣ ಬಾರದು! ಅಲಕ್ಷ್ಯ ಮಾಡಬಾರದು!” ಅಪ್ಪಯ್ಯ ಗಂಭೀರವಾಗಿ ನುಡಿದಾಗ ಅರಮನೆ ತಲುಪಿದ್ದರು.

’ ಅಪ್ಪಯ್ಯನಿಗೆ ಮೀಸೆ ಚಿಗುರಿಲ್ಲವೆಂದು ಅಟ್ಟಹಾಸದಿಂದ ನಕ್ಕ ಮಹಾರಾಜರು, ಇಂದು ತನ್ನ ಮೀಸೆ ನೋಡಿದರೆ ಏನನ್ನಬಹುದು? ಪಾಪ! ವಯಸ್ಸಾದ ಕಾರಣ ದುರ್ಬಲಗೊಂಡಿರಬಹುದು! ಅವರು ಹೋಗಿ ಏನಂದಾರು? ’ ನಾನಾ ವಿಧವಾಗಿ ಚಿಂತಿಸುತ್ತ ಅಪ್ಪಯ್ಯನನ್ನು ಹಿಂಬಾಲಿಸಿ ಮಹಾರಾಜರು ಆಸೀನರಾಗಿದ್ದ ಮಂಟಪವನ್ನು ಕುರಿತು ಹೆಜ್ಜೆಹಾಕಿದನು ಹೊನ್ನಮಾರಯ ನಾಯಕ.

ತಲೆಯ ತುಂಬ ಬೆಳ್ಳಿ ಕೂದಲು ಪ್ರಭಾವಳಿಯಂತೆ ಹೊಳೆಯುತ್ತಿರಲು, ಬೆಳ್ಳಿ ಎಳೆಗಳಿಂದ ಕೂಡಿದ್ದ ಬಾಗದ ಹುರಿ ಮೀಸೆಯನ್ನು ತಿರುಗಿಸುತ್ತ, ಶೌರ್ಯದ ಕಲೆಗಳನ್ನು ಹೊತ್ತ ಮೈಯನ್ನು ಮುಚ್ಚಿದ್ದ ಅಂಗವಸ್ತ್ರವನ್ನು ಸೆಕೆಯ ಕಾರಣ ಬದಿಗೆ ತೆಗೆದಿಟ್ಟು ಸಿಂಹಾಸನದಲ್ಲಿ ಸೆಟೆದು ಕುಳಿತಿದ್ದರು ವೀರ ಬಲ್ಲಾಳ ಮಹಾರಾಜರು.

ಈ ಇಳಿ ವಯಸ್ಸಲ್ಲೂ ಆನೆಯನ್ನು ಕೊಲ್ಲಬಲ್ಲ ಮೈಕಟ್ಟನ್ನು ಹೊಂದಿದ್ದ ವೃದ್ಧ ಸಿಂಹದಂತಹ ಮಹಾರಾಜರನ್ನು ಕಂಡಾಗ ಹೊನ್ನಮಾರಯ ನಾಯಕ ತಬ್ಬಿಬ್ಬಾದನು.

“ಇವನು ನನ್ನ ಮಗ ಹೊನ್ನಮಾರಯ ನಾಯಕ. ಮಹಾರಾಜರು ಮಾಡಲಿರುವ ದಾನವನ್ನು ಪಡೆಯುವವರ ಅರ್ಹತೆಯ ಬಗ್ಗೆ ವಿಚಾರ ಮಾಡಿ ಪರಿಗಣಿಸಿ ಬರಲೆಂದು ಈತನನ್ನು ಕಳುಹಿಸಿದ್ದೆ. ರಾಜಕಾರ್ಯಕ್ಕೆ ಇದೂ ಒಂದು ತರಬೇತಿಯಾಗಿರಲಿ ಎಂದು . ...” ವಿನಯದಿಂದ ನುಡಿದರು ಅಪ್ಪಯ್ಯ.

ಮಹಾರಾಜರು ಹೊನ್ನಮಾರಯನನ್ನು ದಿಟ್ಟಿಸಿ ನೋಡಿದರು.

“ಹೂಂ! ಹೊನ್ನಮಾರಯ ನಾಯಕ! ವಿಚಾರಿಸಿಕೊಂಡು ಬಂದ್ದದ್ದನ್ನು ಹೇಳೋಣವಾಗಲಿ!" ವೃದ್ಧ ಸಿಂಹ ಗರ್ಜಿಸಿತು!

ಭಯದಿಂದ ತೊದಲುತ್ತ ತಡವರಿಸುತ್ತ ತಾನು ಕಂಡು ಬಂದದ್ದನ್ನು ವಿವರಿಸ ತೊಡಗಿದ ಹೊನ್ನ.

“ಮಹಾ ಸಾವಂತಾಧಿಪತಿ ಪೆಮ್ಮ ದೇವರಸರ ಮಗ ಅಲ್ಲಯ. ತಂದೆಯವರ ಉದ್ಯೋಗದ ಹಂಗಿಲ್ಲದೆ ತಾನಾಗಿಯೇ ಸಾಧಿಸಬೇಕೆಂಬ ಸಂಕಲ್ಪ ಹೊತ್ತಿರುವನು. ಗ್ರಾಮದಲ್ಲಿ ಶಿಥಿಲವಾಗಿರುವ ಒಂದು ಸಣ್ಣ ಶಿವನ ಗುಡಿಯ ಸಮೀಪ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಿಸುತ್ತಿರುವನು. ಮನೆಯಿಂದ ತನ್ನ ಕೈಯಾರೆ ತಯಾರಿಸಿದ ಅಂಬಲಿಯನ್ನು ಮಕ್ಕಳಿಗೆ ಕೊಡುತ್ತಿರುವನು. ಅಕ್ಕ ಪಕ್ಕದ ಗ್ರಾಮಗಳಿಂದಲೂ ಕೆಲವು ಮಕ್ಕಳು ಅಂಬಲಿಗಾಗಿಯೂ ಓದು ಬರಹ ಕಲಿಯಲೆಂದೂ ಬರುತ್ತಿರುವರು. ಇದನ್ನೆಲ್ಲಾ ನಾನು ಕಣ್ಣಾರೆ ಕಂಡೂ ಅಕ್ಕಪಕ್ಕದಲ್ಲಿ ವಿಚಾರಿಸಿಯೂ ಅರಿತು ಬಂದೆ ಮಹಾಸ್ವಾಮಿ! "

“ಭೇಷ್! ಚಿಕ್ಕ ಬಯಿರೆಯ ನಾಯಕರೇ! ಶಿಥಿಲವಾಗಿರುವ ಗುಡಿಯ ಜೀರ್ಣೋದ್ಧಾರಣವಾಗಲಿ. ದೇವರ ಪೂಜೆಗೆ ಮತ್ತು ನೈವೇದ್ಯಕ್ಕೆ ಬೇಕಾದ

ಅನುಕೂಲಗಳಾಗಲಿ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಗುಡಿಯ ಆವರಣದಲ್ಲಿ ಒಂದು ಕಟ್ಟಡವನ್ನು ಕಟ್ಟಿಸಲಾಗಲಿ. ದೇವರ ಪ್ರಸಾದವನ್ನು ಅಲ್ಲಯ ಕೊಡುವ ಅಂಬಲಿಯೊಂದಿಗೆ ಮಕ್ಕಳಿಗೆ ಬಡಿಸಲಾಗಲಿ. ಈ ಎಲ್ಲ ಕೆಲಸಗಳನ್ನೂ ನಿಭಾಯಿಸಲು ಅಲ್ಲಯನಿಗೆ ಸೋಮಿದೇವನಹಳ್ಳಿ, ಕಲಿತಮ್ಮನಹಳ್ಳಿ, ಪೆಟೆದ್ರಿ, ಮಾವಿನಕೆರೆ ಮತ್ತು ಹುರವಮರ್ದಿಯಕೆರೆ ಹಳ್ಳಿಗಳನ್ನು ಮಾನ್ಯವಾಗಿ ನೀಡಲಾಗಲಿ!" ಅಪ್ಪಣೆಗಳನ್ನು ಮಾಡಿ ಮುಂದಿನ ಅಭ್ಯರ್ಥಿಯ ಬಗ್ಗೆ ಕೇಳಲು ಸಿದ್ಧವಾದರು ಮಹಾರಾಜರು.

ಹೊನ್ನಮಾರಯ ನಾಯಕ ಈಗ ಸ್ವಲ್ಪ ಧೈರ್ಯ ತಂದುಕೊಂಡಿದ್ದ.

"ನಾಡ ಸೇನಬೋವ ಅಲ್ಲಾಳ ವಯಸ್ಸಲ್ಲಿ ನನ್ನ ಓರಿಗೆಯವನೇ ಇರಬಹುದು. ಹಿಂದಿನ ಸೇನಬೋವರಾಗಿದ್ದ ಅವನ ತಂದೆಗೆ ಬಹಳ ಕಾಯಿಲೆಯಾಗಿ ಹಾಸಿಗೆ ಹಿಡಿದಿರುವರು. ಅಲ್ಲಾಳನಿಗೆ ಆರು ಜನ ಒಡಹುಟ್ಟಿದವರು. ಎಲ್ಲರೂ ಅವನಿಗಿಂತ ಕಿರಿಯರು. ಅವನ ತಾಯಿ ಮತ್ತು ಬೇರೆ ದಿಕ್ಕಿಲ್ಲದ ಓರ್ವ ಸೋದರತ್ತೆ ಎಲ್ಲರಿಗೂ ಅವನೇ ಆಶ್ರಯ. ಇರುವ ಒಂದು ಚಿಕ್ಕ ತೋಟದಲ್ಲಿ ದುಡಿದು ಅದರಲ್ಲಿ ಸಿಕ್ಕುವ ವರಮಾನದಲ್ಲಿ ಎಲ್ಲರನ್ನೂ ಸಾಕಬೇಕು. ತಂದೆಯವರಿಗೆ ಔಷದೋಪಚಾರವಾಗಬೇಕು. ಇಷ್ಟೆಲ್ಲಾ ಮಾಡಿಕೊಂಡು ಗ್ರಾಮದ ಲೆಕ್ಕಪತ್ರಗಳನ್ನೂ ಶ್ರದ್ಧೆಯಿಂದ ನೋಡಿಕೊಳ್ಳುತ್ತಿರುವನು."

"ಭಲೇ! 'ಮನುಮಹಾಸಾವಂತಾಧಿಪತಿ 'ಮೀಸೆಯರ ಗಂಡ' ಚಿಕ್ಕಬಯಿರೆಯ ನಾಯಕರ ಮಗ ಹೊನ್ನಮಾರಯ ನಾಯಕನು ನಾಡ ಸೇನಬೋವ ಅಲ್ಲಾಳನಿಗೆ ಈ ನಾಡ ಒಳಗಣ ಜಕ್ಕೂರ ಒಳಗಿನ ಚತುಸ್ ಸೀಮೆ ಎಂದುಳ್ಳದನು ಸರ್ವಮಾನ್ಯ ಕೊಡಿಗೆಯಾಗಿ ಚಂದ್ರಸೂರ್ಯರ ಉಳ್ಳಂಬರ ಸಲ್ಲುವಂತಾಗಿ ಶಿಲಾ ಶಾಸನವ ಮಾಡಿ ಕೊಟ್ಟರು' ಎಂದು ಶಾಸನದಲ್ಲಿ ಕೆತ್ತಿಸಲಾಗಲಿ."

ವೀರ ಬಲ್ಲಾಳ ಮಹಾರಾಜಾರು ಬೆಳ್ಳಿ ಹುರಿ ಮೀಸೆಯನ್ನು ತಿರುಗಿಸುತ್ತ ಹೀಗೆ ನುಡಿದಾಗ ಹೊನ್ನಮಾರಯ ನಾಯಕ ಮಾತ್ರವಲ್ಲ, ಚಿಕ್ಕ ಬಯಿರೆಯ ನಾಯಕರೂ ಚಕಿತರಾದರು.

"ಮಗನಿಗೆ ಪದವಿ ದೊರಕಿದಮೇಲೆ ತಂದೆಗೂ ಪದೋನ್ನತಿ ದೊರಕಲೇ ಬೇಕಲ್ಲವೇ?"

ಮಾತನಾಡಲು ಬಾಯಿ ಬಾರದೆ ತಂದೆ ಮಗ ಇಬ್ಬರೂ ವಿನಯಪೂರ್ವಕವಾದ ವಂದನೆಗಳನ್ನು ಸೂಚಿಸುವಂತೆ ಮಹಾರಾಜರಿಗೆ ಕೈ ಮುಗಿದು ನಿಂದರು.

"ಹೊನ್ನಮಾರಯ ನಾಯಕ! ಜಂಬದಿಂದ ಮೀಸೆಯನ್ನು ಬಿಟ್ಟಿದ್ದರೆ ಮಾತ್ರ ಸಾಲದು! 'ಮೀಸೆಯರ ಗಂಡ' ಎನ್ನಿಸಿಕೊಳ್ಳಬೇಕಾದರೆ ನಿನ್ನ ತಂದೆಯಂತೆ ನೀನೂ ರಾಜ್ಯ ನಿಷ್ಠೆಯಿಂದ ದುಡಿಯಬೇಕು! ಏನು ನಾವು ಹೇಳುವುದು ಅರಿವಾಯಿತೇ?" ವೃದ್ಧ ಸಿಂಹ ಹೊನ್ನನನ್ನು ಕುರಿತು ಹೀಗೆ ನುಡಿದು ಅಟ್ಟಹಾಸದಿಂದ ನಕ್ಕಾಗ ಹೊನ್ನ ಅವಾಕ್ಕಾದನು! ಮೀಸೆ ಬಿಟ್ಟರೆ ಒಂದು ಠೀಕೆ! ಮೀಸೆ ಬಿಡದಿದ್ದರೆ ಮತ್ತೊಂದು ಠೀಕೆ!

ಮಹಾರಾಜರ ಹಾಸ್ಯ ಪ್ರಜ್ಞೆ ಹೊನ್ನನ ತುಟಿಯಲ್ಲಿ ಕಿರುನಗೆ ತಂದಿತು.

'ಮೀಸೆಯರ ಗಂಡ ' ಎನ್ನಿಸಿಕೊಳ್ಳಲು ಎಲ್ಲ ವಿಧದಲ್ಲೂ ಅರ್ಹರಾದ ಮಹಾನ್ ವ್ಯಕ್ತಿ ಈ ನಮ್ಮ ವೀರ ವೈಭೋಗ ಬಲ್ಲಾಳ ಮಹಾರಾಜರೇ ಅಲ್ಲವೇ? ' ■

## ಕಾರ್ಟೂನ್ ಟೈಮ್

# ರಘುಪತಿ ಶೃಂಗೇರಿಯವರ ಜೊತೆ

● ಸಹನಾ ಪ್ರಸಾದ್

**ಸೀನ್ 1:**

‘‘ಏನ್ರೀ ಇದು. ಸ್ನಾನ ಪೂಜೆ ಮುಗಿಸಿ, ತಿಂಡಿ ತಿಂದು ಎಷ್ಟು ಬೇಕಾದ್ರೂ ಬರೀರಿ, ಒಳ್ಳೆ ಮಕ್ಕಳಿಗೆ ಹೇಳೋ ಹಾಗೆ ಹೇಳಬೇಕು!’’ ಹೆಂಡತಿಯ ಮಾತಿಗೆ ತಲೆ ಎತ್ತದೆ ‘‘ಇರೇ, ಮೆದುಳಿಗೆ ಏನೋ ಐಡಿಯಾ ಬಂದಿದೆ. ಮುಗಿಸಿ ಬಿಡ್ತೀನಿ!’’ ಎಂದರು ಪತಿ ದೇವರು.

**ಸೀನ್ 2:**

‘‘ಅದೇನ್ರೀ... ಶರ್ಟಿನ ತುಂಬಾ ಇಂಕಿನ ಕಲೆ. ವಾಷಿಂಗ್ ಮಷೀನ್‌ಲಿ ಹೋಗೋಲ್ಲ, ನೀವೇ ಒಗೆದುಕೊಳ್ಳಿ ಆಯ್ತಾ?’’ ಬಾಯಲ್ಲಿ ಹೇಳುತ್ತಾ ಇದ್ದರೂ ಪತ್ನಿಯ ಮನಸ್ಸು ಶರಾಯಿಯ ಶಾಯಿ ಕಲೆ ಹೋಗಿಸುವುದು ಹೇಗೆ ಎಂಬ ಯೋಚನೆ ಮಾಡುತ್ತಿತ್ತು. ಅವಳ ಮೊರೆಯನ್ನೇ ದಿಟ್ಟಿಸಿ ನೋಡುತ್ತಿದ್ದ ಪತಿಯನ್ನು ನೋಡಿ ಹುಸಿಮುನಿಸು ತಾಳಿದಳು. ‘‘ಏನ್ರೀ ಹಾಗೆ ನೋಡ್ತಾ ಇದೀರಿ!’’ ಹತ್ತಿರ ಬಂದು ಗಲ್ಲವನೆತ್ತಿ ನೋಡಿದರು ಪತಿ. ಈ ಆಂಗಲ್ ಚೆನ್ನಾಗಿದೆ ಕಣೇ... ಒಳ್ಳೆ ಕಾರ್ಟೂನ್ ರಚಿಸಬಹುದು!!

**ಸೀನ್ 3:**

‘‘ಏನ್ ಹಾಗೆ ನೋಡ್ತಾ ಇದೀರ ಟೀವಿನ. ಸಾಕು, ಎಷ್ಟು ದಿಟ್ಟಿಸಿ ನೋಡುತ್ತಾ ಇದೀರಿ? ದೃಷ್ಟಿ ಆಗುತ್ತೆ ಅವಳಿಗೆ!’’ ನಗುತ್ತಾ ನುಡಿದಳು ಮಡದಿ. ಕಣ್ಣು ಕೀಳಿಸದೆ ಗಂಡ ತಕ್ಷಣ ಎದ್ದಾಗಲೇ ಗೊತ್ತಾಯಿತು, ಇನ್ನು ಕೆಲವೇ ನಿಮಿಷಗಳಲ್ಲಿ ಒಂದು ಕಾರ್ಟೂನ್ ರೆಡಿ ಆಗುತ್ತೆ ಎಂದು!


**ಸೀನ್ 4:**

ಕಸಬರಿಕೆ ಹಿಡಿದು ಗುಡಿಸುತ್ತಿದ್ದ ಪತ್ನಿಯ ಪಟ ತೆಗೆಯಲು ಕ್ಯಾಮೆರಾ ಹಿಡಿದು ಬಂದಾಗ ಪತ್ನಿಗೆ ಗಲಿಬಿಲಿ. ಯಾಕೆ ಎಂದು ರೆಫರೆನ್ಸ್‌ಗೆ ಬೇಕು, ಚಿತ್ರ ರಚಿಸುವುದಕ್ಕೆ! ಎನ್ನುವುದೇ ಪತಿ ಮಹಾಶಯ!!

ಇದು ಖ್ಯಾತ ವ್ಯಂಗ್ಯಚಿತ್ರಕಾರಾದ ರಘುಪತಿಯವರ ಮನೆಯಲ್ಲಿ ಕಾಮನ್. ಅವರ ಶ್ರೀಮತಿ, ಅಶ್ವಿನಿಯವರಿಗೆ ಗಂಡನ ಈ ಪರಿ ಹೊಸತೇನಲ್ಲ.

ಇವರ ಇತ್ತೀಚಿನ, ಸಿಕ್ಕಾಪಟ್ಟೆ ವೈರಲ್ ಆಗಿ ಜನರ ಮನ ಸೂರೆಗೊಂಡ ಇಸ್ರೊ ಕಾರ್ಟೂನ್ ಬರೆದಿದ್ದ ದಿನ ನಡೆದ ಘಟನೆ ಇನ್ನೂ ಹಚ್ಚ ಹಸಿರು. ಟೀವಿ ನೋಡುತ್ತಿದ್ದ ರಘುಪತಿಯವರು ಹೆಂಡತಿ ತಿಂಡಿಗೆ ಬನ್ನಿ ಎಂದರೂ ಕೇಳದೆ, ಕಾರ್ಟೂನ್ ರಚಿಸಿದ ಮೇಲೇ ಎದ್ದದ್ದು ಇನ್ನೂ ನೆನಪಿದೆ. ವೈರಲ್ ಆಗಿ ಇಡೀ ಭಾರತ ಮೆಚ್ಚಿದ ಈ ವ್ಯಂಗ್ಯ ಚಿತ್ರದ ಜನಪ್ರಿಯತೆ ಕಂಡು ಹೆಂಡತಿಯನ್ನು ಛೇಡಿಸಿದರಂತೆ ‘‘ನೋಡಿದ್ಯಾ, ನಿನ್ನ ಮಾತು ಕೇಳದಿದ್ದೇ ಒಳ್ಳೆಯದಾಯಿತು! ಎಲ್ಲರಿಗಿಂತ






ಮೊದಲೇ ರಚಿಸಿದ್ದರಿಂದ ಎಷ್ಟು ಒಳ್ಳೆಯದಾಯಿತು!''

ರಘುಪತಿ ಶೃಂಗೇರಿ ನಮ್ಮ ನಾಡಿನ ಸುಪ್ರಸಿದ್ಧ ವ್ಯಂಗ್ಯಚಿತ್ರಕಾರರಲ್ಲೊಬ್ಬರು. ಸುಮಾರು 28 ವರುಷಗಳಿಂದ ಈ ಕ್ಷೇತ್ರದಲ್ಲಿ ಸಕ್ರಿಯವಾಗಿ, ಅನೇಕ ಮಾಧ್ಯಮಗಳಲ್ಲಿ 15000 ಹೆಚ್ಚು ಕಾರ್ಟೂನ್, ಕ್ಯಾರಿಕೇಚರ್ ಮುಂತಾದುವುಗಳನ್ನು ರಚಿಸಿದ ಹೆಗ್ಗಳಿಗೆ ಇವರದ್ದು. ಇತ್ತೀಚಿಗೆ ಜನಪ್ರಿಯತೆ ಗಳಿಸಿದ, ಹಲವಾರು ದಿಗ್ಗಜರು ಹೊಗಳಿ, ಬಳಸಿದ, ಭಾರತದ ನಕ್ಷೆ ಇಸ್ರೊವಿಗೆ ''ಇಡೀ ದೇಶ ನಿಮ್ಮೊಂದಿಗೆ ಇದೆ'' ಎಂಬ ಸಂದೇಶ ನೀಡಿದ ಕೃತಿ ಇವರದ್ದು. ಇದು ಪ್ರಧಾನ ಮಂತ್ರಿಯವರು ಇಸ್ರೊ ಅಧ್ಯಕ್ಷರನ್ನು ತಬ್ಬಿ ಸಂತೈಸುತ್ತಿದ್ದ ಸಂದರ್ಭವನ್ನು ಆಧಾರಿಸಿ ರಚಿಸಿದ ಕಾರ್ಟೂನ್. ಶೃಂಗೇರಿಯಲ್ಲಿ ಶೃಂಗೇಶ್ವರ ರಾವ್, ಯಶೋಧ ದಂಪತಿಗಳಿಗೆ ಜನಿಸಿ, ಫೈನ್ ಆರ್ಟ್ಸ್ ಪದವಿ ಪಡೆದ ಇವರು ಮೊಟ್ಟ ಮೊದಲ ಬಹುಮಾನ ಗೆದ್ದದ್ದು 1996ರಲ್ಲಿ, ಕೊರಿಯಾ ದೇಶ ಆಯೋಜಿಸಿದ ಪ್ರಪಂಚಮಟ್ಟದ ಸ್ಪರ್ಧೆಯಲ್ಲಿ. ಆದಾದ ನಂತರ ಹಲವಾರು ಬಹುಮಾನಗಳು, ಸಮ್ಮಾನಗಳಿಗೆ ಪಾತ್ರರಾಗಿದ್ದಾರೆ. ಅಷ್ಟಲ್ಲದೆ ಕಾರ್ಟೂನ್ ಸ್ಪರ್ಧೆಗಳಿಗೆ ನಿರ್ಣಾಯಕರಾಗಿ, ಕರ್ನಾಟಕ ಕಾರ್ಟೂನಿಸ್ಟ್ ಸಂಘದ ಕಾರ್ಯದರ್ಶಿಗಳಾಗಿ ಈ ಕ್ಷೇತ್ರದಲ್ಲಿ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ.

ಬೆಳೆಯುವ ಕುಡಿ ಮೊಳಕೆಯಲ್ಲೇ ಎಂಬಂತೆ ಅವರ ಕಲೆ ಚಿಕ್ಕ ವಯಸ್ಸಿನಲ್ಲೇ ತಂದೆ ರಚಿಸುತ್ತಿದ್ದ ಮಣ್ಣಿನ ಮೂರ್ತಿಗಳು, ಅಕ್ಕನ ರಂಗೋಲಿ ಚಿತ್ರಗಳು, ಅಣ್ಣ ಸತೀಶ ಶೃಂಗೇರಿಯವರ ಜನಪ್ರಿಯ ವ್ಯಂಗ್ಯ ಚಿತ್ರಗಳನ್ನು ನೋಡಿ, ಜೀವ ತಳೆಯಿತು. ಎಲ್ಲರಂತೆ ವಿಜ್ಞಾನ ಕ್ಷೇತ್ರಕ್ಕೆ ಧಾವಿಸದೆ ಲಲಿತ ಕಲೆಯನ್ನು ಆರಿಸಿಕೊಂಡು ಅಲ್ಲಿನ ಪ್ರವೇಶ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ದಾವಣಗೆರೆಯ ಫೈನ್ ಆರ್ಟ್ಸ್ ಕಾಲೇಜಿನಲ್ಲಿ ದಾಖಲಾತಿ ಪಡೆದರು. ಮೊದಲ ಕಾರ್ಟೂನ್ ''ವಿಕ್ರಮ'' ಮಾಸಪತ್ರಿಕೆಯಲ್ಲಿ 1991 ಅಲ್ಲಿ ಪ್ರಕಟವಾದದ್ದೇ ರಘುಪತಿಯವರ ರಚನೆಗಳು ಅವಿರತವಾಗಿ ಸಾಗಿದವು. ಒಂದು ಕಾರ್ಟೂನ್ ಸ್ಟ್ರಿಪ್ ಸುಮಾರು 2 ವರುಷಗಳ ದೀರ್ಘಕಾಲ ರಚಿಸಿದ ಹೆಗ್ಗಳಿಕೆ ಇವರದ್ದು. ಅಣ್ಣನಿಂದ ಪ್ರೇರಿತರಾಗಿ ಬೆಂಗಳೂರಿಗೆ ಬಂದು ಕಿರ್ಲೋಸ್ಕರ್ ಮಲ್ಟಿಮೀಡಿಯ ಸಂಸ್ಥೆಯಲ್ಲಿ ವ್ಯಂಗ್ಯ ಚಿತ್ರಕಾರರಾದ ಶ್ರೀ ಗುಜ್ಜಾರ್, ಆರ್.ಕೆ. ಲಕ್ಷ್ಮಣ್, ಪ್ರಕಾಶ್ ಶೆಟ್ಟಿ ಮುಂತಾದವರು ಇವರ ಐಕಾನ್‌ಗಳು. ವಿಪ್ರೊ, ಟೀಸಿಎಸ್ ಮುಂತಾದ ಸಂಸ್ಥೆಗಳಲ್ಲಿ ಸೀನಿಯರ್ ಯೂಸರ್ ಎಕ್ಸ್ಪೀರಿಯನ್ಸ್ ಡಿಸೈನರ್ ಆಗಿ ಕೆಲಸ ಮಾಡುತ್ತಿರುವ ಇವರು ಅನೇಕ ಬ್ರಾಂಡಿಂಗ್, ಮೊಬೈಲ್ ಆಪ್‌ಗಳ ಡಿಸೈನ್ ಮಾಡಿದ್ದಾರೆ, ಮಾಡುತ್ತಿದ್ದಾರೆ.

ಖ್ಯಾತ ಐ-ಬೀ-ಎಚ್ (ಇಂಡಿಯ ಬುಕ್ ಹೌಸ್) ಅಲ್ಲಿ ಬಹಳಷ್ಟು ಸೀಡೀ-ರಾಮ್‌ಗಳಿಗೆ ಇವರು ಗ್ರಾಫಿಕ್ಸ್ ಬರೆದಿದ್ದಾರೆ. ದಿವಂಗತ ವಾಜಪೇಯಿ ಅವರ ಮನೆಯಲ್ಲಿ ಇವರ ಟೀಮ್ ಸಿದ್ದಪಡಿಸಿದ ಕೃತಿಯ ಬಿಡುಗಡೆ ನಡೆದಿತ್ತು.





ಇತ್ತೀಚಿಗೆ ಪ್ರಧಾನಿ ಮೋದಿಯವರ ಭಾವಚಿತ್ರ ಚಹದೆಲೆಯಲ್ಲಿ ಮಾಡಿ ಅದನ್ನು ಮೋದಿಜಿಗೆ ಕಳಿಸಿದಾಗ ಅವರದನ್ನು ಸಹಿ ಮಾಡಿ ಕಳಿಸಿದ್ದು ಇವರಿಗೆ ಖುಷಿ. ಇನ್ನು ಭಾವಚಿತ್ರಗಳು – ಪ್ರಪಂಚದ ಎಲ್ಲಾ ಪ್ರಖ್ಯಾತನಾಮರದ್ದೂ ರಚಿಸಿದ್ದಾರೆ. ಅಮಿತಾ ಬಚ್ಚನ್, ಸುಷ್ಮ ಸ್ವರಾಜ್, ಪಿ.ವಿ. ಸಿಂಧು, ಪುಟಿನ್ ಹೀಗೆ ಎಲ್ಲ ವಿಧದ ಕ್ಷೇತ್ರಗಳಲ್ಲಿ ಹೆಸರು ಮಾಡಿದವರ ಭಾವಚಿತ್ರಗಳು ಇವರ ಕುಂಚದಲ್ಲಿ ಮೂಡಿವೆ. ತರಂಗ, ಸುಧಾ, ಹಸಿರುವಾಸಿ, ಉತ್ಥಾನ ಮುಂತಾದ ವಾರಪತ್ರಿಕೆ ಹಾಗೂ ಮಾಸಪತ್ರಿಕೆಗಳಲ್ಲಿ ಇವರ ಕೃತಿಗಳು ಜನಮನ ರಂಜಿಸಿವೆ. ಕಥೆ, ಕಾದಂಬರಿಗೆ ತಕ್ಕುದಾದ ಚಿತ್ರ ರಚಿಸುವುದರಲ್ಲಿ ಇವರದು ಎತ್ತಿದ ಕೈ. ದಿನಪತ್ರಿಕೆ ವಿಜಯ ವಾಣಿಯಲ್ಲಿ ಇವರ ಹಲವಾರು ವ್ಯಂಗ್ಯಚಿತ್ರಗಳು ಪ್ರಕಟವಾಗಿವೆ. ಪಂಚ್ ರಂಗಿ ಎನ್ನುವ ಆ ದಿನದ ಸುದ್ದಿಯೊಂದರ ಮೇಲೆ ಆಧಾರಿತ ಕಾರ್ಟೂನ್‌ಗಳು, ಡುಂಡಿರಾಜ್ ಕಾಲಮ್, ''ಇದು ಎಂಥಾ ಲೋಕವಯ್ಯ!'' ಸುದ್ದಿಗಳಿಗೆ ಇವರ ರಚನೆಗಳು ಓದುಗರಿಗೆ ಮತ್ತಷ್ಟು ಕಚಗುಳಿ ಇಡುತ್ತಿವೆ.

ಅದಲ್ಲದೇ ದೃಷ್ಟಾಂತಗಳು, ವರ್ಣಚಿತ್ರಗಳು, ವೆಬ್ ಗ್ರಾಫಿಕ್ಸ್, ಅನಿಮೇಷನ್, ಸಂಗೀತ ಇತ್ಯಾದಿಯಲ್ಲೂ ಪರಿಣಿತಿ ಹೊಂದಿರುವ ಇವರು ಟೀಸಿಎಸ್ ಸಂಸ್ಥೆಯಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ವ್ಯಂಗ್ಯಚಿತ್ರಗಳು ಬರೀ ಮನರಂಜಿಸಲಷ್ಟೇ ಅಲ್ಲ, ಸಾಮಾಜಿಕ ವಿಷಯಗಳನ್ನು ಎತ್ತಿ ತೋರಿ, ಜನರ ಮನಮುಟ್ಟಿ, ಅವರನ್ನು ಚಿಂತನೆಗೆ ಹಚ್ಚುವಂತಿರಬೇಕು, ನಗುವಿನ ಜೊತೆಗೆ ಮನಸ್ಸನ್ನು ಸಹ ಪ್ರಚೋದಿಸಬೇಕು ಎಂಬುದು ಇವರ ವಿಚಾರ. ಮಡದಿ ಹಾಗೂ ಇಬ್ಬರು ಮುದ್ದು ಮಕ್ಕಳು ಪ್ರಣವ್ ಹಾಗೂ ಪ್ರಣತಿ ಇವರ ಸಂಸಾರ. ಬೆಂಗಳೂರು ಗಿರಿನಗರದಲ್ಲಿ ವಾಸವಾಗಿರುವ ಇವರು ಕಾರ್ಟೂನ್ ಬರೆಯುವುದರ ಬಗ್ಗೆ ಪುಸ್ತಕಗಳು, ಲೇಖನಗಳು ಸಹ ಬರೆದಿದ್ದಾರೆ. ಕಾರ್ಟೂನ್ ಬರೀ ಕಲೆಯಲ್ಲ, ಅದು ಜನರ ಮನಸ್ಸನ್ನು ರಂಜಿಸುವುದರ ಜೊತೆ ಚಿಂತಿಸಲೂ ಪ್ರಚೋದಿಸಬೇಕು ಎನ್ನುವುದಕ್ಕೆ ಇವರ ರಚನೆಗಳೇ ಸಾಕ್ಷಿ.

■

# ಚಾನೆಲ್ ಕಲಾವಿದರಿಗೆ ಕನ್ನಡ ಪಾಠ

*** ಗಣೇಶ್ ಹೆಗ್ಗಡೆ**

ಎಲ್ರೂ ಒಳಗೆ ಬಂದು ಕುಳಿತುಕೊಳ್ರಪ್ಪ. ಹಾಗೆ ಗುಂಪು ಕಟ್ಟಿಕೊಂಡು ಸ್ಟುಡಿಯೊ ಹೊರಗಡೆ ನಿಂತ್ಕೊಬ್ಯಾಡಿ. ನಿಮ್ಮ ಎಂ. ಡಿ. ಕೊಟ್ಟಿರೊ ಒಂದು ಘಂಟೆ ಟೈಮು ಸ್ಲಾಟಿನೊಳಗೆ ನಾನು ನಿಮಗೆ ಕನ್ನಡ ಪಾಠ ಕಲಿಸ್ಬೇಕು. ಹ್ಞಾಂ...ಏನಂದ್ರಿ?...ನಿಮ್ಮ ಪರಿಚಯ ಮಾಡ್ಕೊಳ್ಳಿ ಅಂತಂದ್ರ...ನಾನೊಬ್ಬ ರಿಟೈರ್ಡ್ ಹೈಸ್ಕೂಲು ಹೆಡ್ಮಾಸ್ಟ್ರು...ನನ್ನ ಐಚ್ಛಿಕ ವಿಷಯ ಕನ್ನಡ. ಅಲ್ಪಸ್ವಲ್ಪ ಸಾಹಿತ್ಯದ ಗೀಳಿರುವವನು. ಇನ್ನು ಕಾಲಹರಣ ಮಾಡೋದು ಬ್ಯಾಡ. ಒಂದು ಸುಂದರ ಕನ್ನಡ ಭಾವಗೀತೆಯೊಂದಿಗೆ ಕಾರ್ಯಕ್ರಮ ಆರಂಭಿಸೋಣವೆ? ನಿಮಗೆ ನಿಮ್ಮ ಕಂಠದ ಮೇಲೆ ನಂಬಿಕೆಯಿದ್ದರೆ ದಯವಿಟ್ಟು ಮೈಕ್ ಮುಂದೆ ಬನ್ನೀಪ್ಪಾ...

'ಅಯ್ಯೋ...ಅಯ್ಯೋ..ಮೊದ್ಲು ಹಾಡೋದನ್ನು ನಿಲ್ಸೀಮ್ಮಾ. ಅದು ಅಚ್ಚೇವು ಕನ್ನಡದ ದೀಪಾ ಅಲ್ಲ. ಹಚ್ಚೇವು ಕನ್ನಡದ ದೀಪಾಂತ ಉಚ್ಚರಿಸಬೇಕು. ಅಚ್ಚು...ಅಚ್ಚು ಅಂತ ಉಚ್ಚರಿಸಿದರೆ ಒಂದು ಮುಷ್ಠಿ ಅಚ್ಚು ಖಾರದ ಪುಡಿಯನ್ನು ಈ ಸುಂದರ ಗೀತೆ ರಚಿಸಿದ ಕವಿಯ ಮುಖಕ್ಕೆ ಎರಚಿದ ಹಾಗಾಗುತ್ತೆ. ಸಧ್ಯ ಅವರು ಕೀರ್ತಿಶೇಷರಾಗಿ ಬಚಾವಾಗಿದ್ದಾರೆ. ನೀವೆಲ್ಲಾ ಕನ್ನಡ ಚಾನೆಲ್ಲಿನ ನಾನಾ ವಿಭಾಗದಲ್ಲಿ ಕೆಲಸ ಮಾಡುತ್ತಿರುವವರು. ನಿಮ್ಮಲ್ಲಿ ಪ್ರಸಿದ್ಧ ನಟ, ನಟಿಯರಿದ್ದೀರಿ. ನ್ಯೂಸ್ ರೀಡರ್‌ಗಳು, ನಿರೂಪಕ, ನಿರೂಪಕಿಯರು ಹಾಗೂ ಸ್ಕ್ರಿಪ್ಟ್ ರೈಟರ್ಸುಗಳಿದ್ದೀರಿ. ಗಮನವಿಟ್ಟು ಕೇಳಿ. ಕನ್ನಡ ನಮ್ಮ ಆಡು ಭಾಷೆ. ಅದನ್ನು ಸಂದರ್ಭೋಚಿತ್ತದಿಂದ ಬಳಸುವಾಗ ಹಳಿ ತಪ್ಪಬಾರದು. ಭಾಷೆ ಹಾಗೂ ಬಾಯಿ ಶುದ್ಧವಾಗಿರಬೇಕು. ನಿಮ್ಮ ಕಾರ್ಯಕ್ರಮ ಆಲಿಸುವ, ನೋಡುವ ಪ್ರೇಕ್ಷಕರಿಗೆ ಎಂದೂ ಕಿರಿಕಿರಿಯಾಗಬಾರದು. ಆಭಾಸಕ್ಕೆ ತಡೆಯಿರಬೇಕು. ಈ ಕೆಳಗೆ ಉದಹರಿಸಿರುವ ಕೆಲವು ತುಣುಕುಗಳನ್ನು ನೀವೇ ಗಮನಿಸಬಹುದು. ನಾನು ವಿವರಿಸುತ್ತಾ ಹೋದ ಹಾಗೆ ನೀವು ನಿಮ್ಮ ಮನಸ್ಸಿನಲ್ಲಿ ದೃಶ್ಯವನ್ನು ಕಲ್ಪಿಸಿಕೊಳ್ಳಬಹುದು.

'ಅಮ್ಮಾ....ನಾನು ಈಗ ಹೇನು ಮಾಡಲಿ? ತಾಯಿಯ ಮುಂದೆ ನಾಯಕಿಯ ಪ್ರಲೋಭನೆ? 'ಹೇನು' ಎಂಬ ಶಬ್ಧ ಕಿವಿಗೆ ಬಿದ್ದ ತಕ್ಷಣ ನೀವೆಲ್ಲಾ ಹ್ಯಾಗೆ ತಲೆ ಕೆರೆದು ಕೊಂಡಿರಿ ನೋಡಿ. ಅಂತೆಯೆ ನಿಮ್ಮ ವೀಕ್ಷಕರೂ ಅಲ್ಲವೆ?

ಈ ಉದಾಹರಣೆ ನೋಡಿ.

'ಏನೋ, ರಾಜ,ಈಗ ಬಂದಾ? ತಿಂಡಿ ಮಾಡ್ದಾ? ಕೊಂಚ ರೆಸ್ಟು ಮಾಡು, ಹ್ಯಾಗೆ ಫಿಟ್ಟಿಂಗ್ ಇಟ್ಟೆ ನೋಡು...ಇತ್ಯಾದಿ ಡೈಲಾಗುಗಳನ್ನೇ ಕೊಂಚ ತಿರುಚಿ, ಏನೋ ರಾಜ ಈಗ ಬಂದ್ಯಾ? ತಿಂಡಿ ತಿಂದೆಯಾ? ಕೊಂಚ ವಿಶ್ರಾಂತಿ ಪಡೆ, ಹ್ಯಾಗೆ ಕಿತಾಪತಿ ಮಾಡ್ದೆ ನೋಡು...ಅಂತ ಡೈಲಾಗು ಬರೆಯುವವರು ಬರೆದು, ನಟ, ನಟಿಯರಿಂದ ಸಂಭಾಷಣೆ ಹೇಳಿಸಿದರೆ ಕೇಳೋಕೆ ಅದೆಷ್ಟು ಹಿತವಾಗಿರುತ್ತೆ. ಈ ಕೆಳಗಿನ ತುಣಕನ್ನು ನಿಮಗೆ ವಿವರಿಸಲು ನನಗೇ ಸಿಕ್ಕಾಪಟ್ಟೆ ನಾಚಿಕೆ ಆಗುತ್ತದೆ. ಒಂದು ಪ್ರಸಿದ್ಧ ಸಂಗೀತ ಸ್ಪರ್ಧೆ ಸೀಜನ್ ಇಪ್ಪತ್ತಕ್ಕೆ ಹಳೆಯ ನಿರೂಪಕಿ ಕೈ ಕೊಟ್ಟಾಗ ಆ ಜಾಗಕ್ಕೆ ಹೊಸ ಸೇರ್ಪಡೆಯಾದ ನಿರೂಪಕಿಯೊಬ್ಬಳು ಎಲ್ಲರನ್ನೂ ಸ್ವಾಗತಿಸಿದ ರೀತಿ ನೋಡಿ.

"ಎಲ್ಲಾ ಚೂರಿ ಮೆಂಬರ್ಸಿಗೂ ಹೊಸ ನಿರೂಪಕಿ 'ಬಾನಮ್ಮ'ನ ಹಾದರದ ಸ್ವಾಗತ." ಸಂಗೀತ ದಿಗ್ಗಜರ ಮುಂದೆ ತುಂಬು ಯೌವನೆ ಹೀಗೆ ನುಡಿದರೆ

ಆಗುವ ಅಪಾರ್ಥವೇ ಬ್ಯಾರೆ. 'ಆದರ' ಮತ್ತು 'ಹಾದರ' ಎರಡನ್ನು ಉಚ್ಚರಿಸುವ ಸಂದರ್ಭಗಳೇ ಬ್ಯಾರೆ. ಆರು ತಿಂಗಳ ಹಿಂದೆ ನಮ್ಮ ರಾಜ್ಯದ ಉತ್ತರದಲ್ಲಿ ನೆರೆಹಾವಳಿ ವಿಪರೀತವಾದಾಗ ಸುದ್ದಿ ಓದುವವ ಹೀಗೆ ಹೇಳಿದ್ದ...'ಎಲ್ಲೆಲ್ಲೂ ಆ ಆ ಕಾರ....ಜನತೆಯ ಬವಣೆ ಹೇಳತೀರದು' ಇದೇ ಸುದ್ದಿ ಓದುವವ ಮೊನ್ನೆ ಮೊನ್ನೆ ಒಂದು ಪ್ರಸಿದ್ಧ ಮಠದ ಶ್ರೀಗಳು ಇಹಲೋಕ ತ್ಯಜಿಸಿದಾಗ ಹೀಗೆ ಹೇಳಿದ್ದ.

'ಶ್ರೀ ಶ್ರೀ ಗಳು ಈಚಿನ ದಿನಗಳಲ್ಲಿ ಇಚ್ಛಾರಮಣೀಯಾಗಿದ್ದರು'.

'ನಿಮಗೆ ಇಚ್ಛಾ ರಮಣಿಗೂ ಇಚ್ಛಾ ಮರಣಿಗೂ ವ್ಯತ್ಯಾಸವೇ ಗೊತ್ತಾಗುತ್ತಿಲ್ಲ, ಅಂತಂದ್ರಾ?

ಗೊತ್ತಾಗೋದು ಬ್ಯಾಡಬಿಡಿ. ಇಲ್ಲಿಗೆ ಇವತ್ತಿನ ಕನ್ನಡ ಪಾಠ ಸಾಕು. ನಾನು ಬರ್ಲೆ?

'ಹ್ಞಾಂ, ಬರ್ಲೇ ಬ್ಯಾಡಿ ಅಂತಂದ್ರಾ, ಇದು ನಮ್ಮ ಕನ್ನಡ ಭಾಷೆ. ಇದನ್ನು ಹ್ಯಾಗಾದರೂ ಬಳಸ್ಕೊತೀವಿ.

ಹೇಳೋಕೆ ಕೇಳೋಕ್ಕೆ ನೀವ್ಯಾರು? ಅಂತಂದ್ರಾ?

ಕನ್ನಡವೇ ಸತ್ತ...ಕನ್ನಡವೇ ನಿತ್ಯಾ... ಎಂದು ಯಾರು ಹಾಗೆ ಕಿರುಚಿತ್ತಿರೋರು? ತಾಳಿ, ಈ ಕೂಡಲೇ ನಿಮ್ಮ ಎಂ. ಡಿ. ಚೇಂಬರ್ನಿಗೆ ನೇರವಾಗಿ ಹೋಗಿ ದೂರು ಕೊಡ್ತೇನೆ' ಎಂದು ರೇಗಿಕೊಂಡು ಎಂ.ಡಿ.ಯವರ ಕೋಣೆಗೆ ನುಗ್ಗಿದಾಗ 'ನಾ' ಕಂಡ ದೃಶ್ಯವಾದರೂ ಎಂತು?

ಚಾನೆಲ್ ಎಂಡಿಯವರು ಕುರ್ಚಿಯಲ್ಲಿ ಕಣ್ಮುಚ್ಚಿ ಕುಳಿತು, ಆನಂದ ತುದಿಲರಾಗಿ 'ಅಕ್ಕಿ....ಆರುತಿದೆ...ನೋಡಿದಿರಾ...ಎಂದು ಜೋರಾಗಿ ಗುನುಗಿ ಕೊಳ್ಳುತ್ತಿದ್ದರು. ನಾನೆಂಥಹ ತಪ್ಪು ಮಾಡಿದೆ. ಮೊದಲೇ ಗೊತ್ತಿದ್ದರೆ ಈ ಎಂಡಿಯವರನ್ನೂ ಪಾಠಕ್ಕೆ ಕೂರಿಸಬಹುದಿತ್ತು ಎಂದೆನಿಸಿ,

'ಸರ್.. ಅದು ಅಕ್ಕಿಯಲ್ಲಾ...ಹಕ್ಕಿ...ಹಕ್ಕಿ..' ಎಂದು ನಾನು ಅದೆಷ್ಟು ಹೊತ್ತು ಜೋರಾಗಿ ಕಿರಿಚುತ್ತಿದ್ದೆನೊ ಏನೊ? ಎಂಡಿಯವರಂತೂ ಕಣ್ತೆರೆಯಲೇ ಇಲ್ಲ. ಬದಲಿಗೆ, ನನ್ನ ಮಗ್ಗುಲಿನಲ್ಲಿ ಮಲಗಿದ್ದ ಮಡದಿ ಪದ್ದಿ ದಢಾರನೆ ಎದ್ದು, ಗಾಬರಿಗೊಂಡು 'ರ್ರೀ...ರ್ರೀ.... ಎಚ್ರ ಮಾಡ್ಕೊಳ್ಳಿ...ಏನಾದ್ರು ಕೆಟ್ಟ ಕನಸು ಬಿತ್ತೇನ್ರೀ? ಅದೇನೊ ಹಕ್ಕಿ...ಹಕ್ಕಿ...ಅಂತ ಒಂದೇ ಸಮನೆ ಕಿರುಚಿಕೊಳ್ತಾಯಿದೀರಿ', ಮೈ ಬ್ಯಾರೆ ಸುಡ್ತಾಯಿದೆ...ಏನಾದ್ರು ಹಕ್ಕಿ ಜ್ವರ ಬರಿಸ್ಕೊಂಡ್ರೇನ್ರೀ? ಎಂದು ಭುಜ ಅಲ್ಲಾಡಿಸಿ ಕೇಳಿದಳು. ಬೆಚ್ಚಿ ಕಣ್ತೆರೆದೆ. ಪದ್ದಿ ನನ್ನ ಬೆನ್ನು ನೇವರಿಸುತ್ತಾ,

'ನಿನ್ನೆ ರಾತ್ರಿ ಟಿ.ವೀ.ಲಿ. ಹಾಳು ಕರೋನ ವೈರಸ್ಸಿನ ಹಾವಳಿಯ ಸುದ್ದಿ ನೋಡುತ್ತಾ ಮಲಗಿಕೊಂಡ್ರಿ...ನೋಡಿ ಹ್ಯಾಗೆ ಬೆವತು ಹೋಗಿದ್ದೀರಿ.

'ನಿಜ ಪದ್ದಿ. ಕರೋನ ವೈರಸ್ ರಕ್ಷಣೆಗೆ ಬಾಯಿಗೆ ಮಾಸ್ಕ್ ಹಾಕಿಕೊಂಡು ಓಡಾಡಬಹುದು. ಆದರೆ ಈ ಕನ್ನಡ ಭಾಷಾ ಅಪಭ್ರಂಶದ ವೈರಸ್ಸಿಗೆ ಹೆದರಿ ಕಿವಿ ಹಾಗೂ ಬಾಯಿ ಎರಡೂ ಮುಚ್ಕೊಂಡು ನಾವು ಇನ್ಮುಂದೆ ಟಿವಿ ಮುಂದೆ ಕೂತ್ಕೋ ಬೇಕಾಯ್ತಲ್ಲ?" ಎಂದು ಪೇಚಾಡಿಕೊಂಡು, ಪದ್ದಿಗೆ ನನ್ನ ಕನಸಿನ ವಿವರಣೆಯೆಲ್ಲಾ ಕೊಟ್ಟೆ. ಯಾವುದಕ್ಕೂ ಹೆದರದ ಪದ್ದಿ ಇಂದು ಯಾಕೊ ಸ್ವಲ್ಪ ವಿಚಲಿತಳಾದಂತೆ ತೋರಿತು.

■

# ಖಾಲಿ ಕೈ, ಶಾಲೆಗೆ ಜೈ!

● ಎಂ.ಎಸ್.ನರಸಿಂಹಮೂರ್ತಿ

ಮಕ್ಕಳನ್ನು ಶಾಲೆಗೆ ಸಿದ್ಧ ಮಾಡಿ ಕಳಿಸುವುದೆಂದರೆ ಅದೊಂದು ಹರಸಾಹಸ! ಕಳೆದ ಬಾರಿ ನಾನು ವಿಶ್ವನ ಮನೆಗೆ ಹೋಗಿದ್ದಾಗ ಒಂದು ಹೋರಾಟದ ದೃಶ್ಯ ಅಲ್ಲಿ ಕಂಡಿದ್ದೆ. ಪುಟ್ಟ ಮಗುವನ್ನು ಶಾಲೆಗೆ ಕಳಿಸುವ ಸಮಯಕ್ಕೇ ನಾನು ಅಲ್ಲಿಗೆ ಹೋಗಿದ್ದೆ. ವಿಶ್ವ, ವಿಶಾಲು ಹಾಗೂ ಸೊಸೆ ಇದ್ದರು. ಒಂದನೇ ಕ್ಲಾಸ್ ಓದುತ್ತಿದ್ದ ಪುಟ್ಟನನ್ನು ಕುರ್ಚಿಯ ಮೇಲೆ ಕೂರಿಸಿ ಶಾಲೆಗೆ ರೆಡಿ ಮಾಡುತ್ತಿದ್ದರು. ಒಬ್ಬರು ಕಾಲಿಗೆ ಸಾಕ್ಸ್ ಹಾಕುವುದು, ಮತ್ತೊಬ್ಬರು ಷೂ ಹಾಕುವುದು. ಇನ್ನೊಬ್ಬರು ಟೈ ಕಟ್ಟುವುದು. ಹೀಗೆ ಸಾಮೂಹಿಕ ಸ್ಕೂಲ್ ಸೇವೆ ನಡೆಯುತ್ತಿತ್ತು. ಒಟ್ಟಿಗೆ ದಾಳಿ ಇಟ್ಟು ಅವನನ್ನು ರೆಡಿ ಮಾಡಿದರು.

ಅನಂತರ ಬಹು ಭಾರದ ಪುಸ್ತಕದ ಬ್ಯಾಗನ್ನು ಹೆಗಲಿಗೆ ಹಾಕಿದರು. ಅಷ್ಟರಲ್ಲಿ ಪುಟ್ಟನ ತಾಯಿ ಬಂದು ಅವನಿಗೆ ಒಂದಷ್ಟು ಬಿಸಿ ಬಿಸಿ ಉಪ್ಪಿಟ್ಟನ್ನು 'ಉಫ್' ಮಾಡಿ ತಿನ್ನಿಸಿದಳು. ತಿನ್ನಲು ಅವನು ತಕರಾರು ಮಾಡಿದಾಗ ಮಧ್ಯೆ ಮಧ್ಯೆ ಚಾಕ್ಲೆಟುಗಳನ್ನು ಸೇರಿಸಿ ಉಪ್ಪಿಟ್ಟನ್ನು ಕದ್ದು ತಿನ್ನಿಸಿ ಸಮಾಧಾನ ಮಾಡಿದಳು. ಇನ್ನಷ್ಟು ಉಪ್ಪಿಟ್ಟನ್ನು ಡಬ್ಬಿಗೆ ಹಾಕಿ ನೀರಿನ ಬಾಟಲ್ ಹಾಗೂ ಬ್ಯಾಗಿನ ಸಮೇತ ಪುಟ್ಟನನ್ನು ಸಿದ್ಧ ಮಾಡುವ ಹೊತ್ತಿಗೆ ಮನೆಯ ಮುಂದೆ ಆಟೋ ಬಂದಿತ್ತು. 'ಪೀಪ್ ಪೀಪ್' ಎಂದು ಆ್ಯಂಬುಲೆನ್ಸ್‌ಗಿಂತ ಜೋರಾಗಿ ಶಬ್ದ ಮಾಡುತ್ತಿತ್ತು. ಮಗುವನ್ನು ಎಳೆದುಕೊಂಡು ಹೋಗಿ ಆಟೋದಲ್ಲಿ ಎಸೆದು ಅವನ ಬ್ಯಾಗನ್ನ ಆಟೋದಲ್ಲಿದ್ದ ಹುಕ್‌ಗೆ ತಗುಲಿ ಹಾಕಿ, ಟಾಟಾ ಮಾಡಿದ ಕೂಡಲೇ ಆಟೋ ಮುಂದೋಡಿತು. ಅಬ್ಬಾ ! ಎಲ್ಲರೂ ನಿಟ್ಟುಸಿರಿಟ್ಟರು..! ಒಂದು ಯುದ್ಧ ಗೆದ್ದು ಬಂದ ಸಂಭ್ರಮ..!

ಹತ್ತು ನಿಮಿಷ ವಿಶ್ವ ಸುಧಾರಿಸಿಕೊಂಡ. ವಿಶಾಲುಗೆ ಏಳಲೂ ಸಹ ಶಕ್ತಿ ಇರಲಿಲ್ಲ. ಸೊಸೆ ಅಡುಗೆ ಮಾಡಲು ಒಳಗೆ ಹೋದಳು. ಇದನ್ನೆಲ್ಲಾ ನೋಡುತ್ತಾ ಕುಳಿತಿದ್ದ ನನಗೆ ನಗು ಬಂತು.

"ಮುಂಚಿತವಾಗಿ ರೆಡಿ ಮಾಡೋಕೆ ಆಗೊಲ್ವಾ ?" ಎಂದು ಕೇಳಿದೆ.

"ಎಲ್ಲಪ್ಪಾ ಆಗುತ್ತೆ ? ಅವನು ಬೆಳಿಗ್ಗೆ ಆರೂವರೆಗೆ ಮುಂಚೆ ಏಳೊಲ್ಲ, ಏಳೂವರೆಗೆ ಶಾಲೆ ಇದೆ. ಅವನು ಏಳ್ಬೇಕು, ಅವನಿಗೆ ಸ್ನಾನ ಮಾಡಿಸ್ಬೇಕು, ತಿಂಡಿ ತಿನ್ನಿಸ್ಬೇಕು. ಇಷ್ಟೆಲ್ಲಾ ಆಗೋ ಹೊತ್ತಿಗೆ ಆಟೋ ಬಂದೇ ಬಿಡುತ್ತೆ."

"ಆಟೋನ ತಡವಾಗಿ ಬರೋಕೆ ಹೇಳು."

ಅದಕ್ಕೆ ವಿಶಾಲು ಒಪ್ಪಲಿಲ್ಲ. ವಿಶ್ವ ವಿವರಿಸಿದ :

"ಆದ್ರೆ ಶಾಲೆ ಬೇಗ ಶುರುವಾಗುತ್ತಲ್ಲ..?" ಪ್ರೇಯರ್‌ಗೆ ಪುಟ್ಟ ಇಲ್ಲವಾದರೆ ಅದಕ್ಕೆ ಫೈನ್ ಬೀಳುತ್ತೆ.. ಅಪ್ಪ, ಅಮ್ಮ ಹೆಚ್.ಎಂ. ರೂಮಿಗೆ ಹೋಗಿ ತಾವೇ ಪ್ರೇಯರ್ ಮಾಡಿ ಅಪಾಲಜಿ ಲೆಟರ್ ಬರ್ಕೊಡಬೇಕಾಗುತ್ತೆ. ನಿನಗೆ ಗೊತ್ತಾ ಇಂಥ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುವ ಅಪ್ಪ-ಅಮ್ಮಂದಿರ ಕಷ್ಟ..?" ಎಂದ ವಿಶ್ವ.

ಇದಾದ ಕೆಲವು ದಿನಗಳ ನಂತರ ನಾನು ಆ ಮನೆಗೆ ಹೋದಾಗ ದೃಶ್ಯವೇ ಬೇರೆ ಆಗಿತ್ತು. ಅಂದು ಶನಿವಾರ. ಹುಡುಗ ಖುಷಿಯಿಂದ ಕುಣಿಯುತ್ತಾ ಶಾಲೆಗೆ ಸಿದ್ಧ ಆಗುತ್ತಿದ್ದ. ತಾನೇ ಷೂ ಅನ್ನು ಹಾಕಿಕೊಂಡ. ಅಮ್ಮ ಟೈ ಕಟ್ಟಿ, ತಲೆ ಬಾಚಿದ್ಲು. ತಿಂಡಿಯನ್ನು ತಾನೇ ತಿಂದು,

"ಹೋಗಿ ಬರ್ತೀನಿ, ಟಾಟಾ" ಎಂದು ಬರಿಗೈಲಿ ಹೊರಟು ನಿಂತ. ನನಗೆ ಆಶ್ಚರ್ಯ ಆಯ್ತು.

"ತಿಂಡಿ ಬಾಕ್ಸು ? ನೀರು ? ಬುಕ್ಸು ? ಲಗ್ಗೇಜು ? ಹೋಲ್ಡಾಲು ?" ಎಂದೆ. ಪುಟ್ಟ ನಗಲು ಶುರು ಮಾಡಿದ.

"ಅಂಕಲ್, ನಿಮಗೆ ಇಷ್ಟೂ ಗೊತ್ತಿಲ್ವಾ ? ಸರ್ಕಾರ ಕಾನೂನು ಮಾಡಿದೆ. ಶನಿವಾರದ ದಿನ ಸ್ಟುಡೆಂಟ್ಸ್ ಏನೂ ತಗೊಂಡು ಹೋಗಬಾರ್ದು. ಕೈ ಬೀಸ್ಕೊಂಡು ಶಾಲೆಗೆ ಹೋಗ್ಬೇಕು. "ನೋ ಪ್ರೇಯರ್, ನೋ ಹೋಂ ವರ್ಕ್, ನೋ ಸ್ಟ್ಯಾಂಡ್ ಅಪ್ ಆನ್ ದ ಬೆಂಚ್. ಖಾಲಿ ಕೈ ಶಾಲೆಗೆ ಜೈ..!" ಎಂದ.

ಮನೆ ಮುಂದೆ ಆಟೋ ಬಂತು. ಒಳಗಿದ್ದ ಮಕ್ಕಳೂ 'ಓ' ಎಂದು ಖುಷಿಯಲ್ಲಿ ಕೂಗಿದರು. ಯಾರೂ ಸಹ ಪುಸ್ತಕ, ತಿಂಡಿ ಬ್ಯಾಗನ್ನು ತಂದಿರಲಿಲ್ಲ. ಪುಟ್ಟ ಆಟೋ ಏರಿ ಕುಳಿತ, ಹೊರಟ. ನಾನು ವಿಶ್ವನನ್ನು ಕೇಳಿದೆ.

"ಅಲ್ಲ, ಇದೇನಿದು ಹೊಸ ಕಾನೂನು ? ಶಾಲೆಗೆ ಬರಿಗೈಲಿ ಹೋಗೋದೇನು ?"

"ಹೌದು, ಈ ಸಲದ ಬಜೆಟ್ ನೋಡಲಿಲ್ಲವಾ..? ಕಾನೂನು ಮಾಡಿದೆಯಲ್ಲ..? ವಿದೇಶದಲ್ಲೆಲ್ಲಾ ಇದೇ ಸಿಸ್ಟಮ್ ಇದೆಯಂತೆ. ಅದಕ್ಕೆ ಶನಿವಾರ ಮಾತ್ರ ನಮ್ಮಲ್ಲಿ ಇಂಪ್ಲಿಮೆಂಟ್ ಮಾಡಿದ್ದಾರೆ. ಬರಿಗೈಲಿ ಹೋಗ್ಬೇಕು, ಬಿಸಿ ಊಟ ಅಲ್ಲೇ ಸಿಗುತ್ತೆ.."

"ಅಲ್ಲಿ ಹೋಗಿ ಏನ್ಮಾಡ್ತಾರೆ ಮಕ್ಕಳು..?"

ಎಂದು ಕೇಳಿದಾಗ ವಿಶಾಲು ಉತ್ತರ ಕೊಟ್ಟಳು.

"ಏನ್ಮಾಡ್ತಾರೆ ? ಮರಕೋತಿ ಆಟ, ಗೋಲಿ, ಚೂರ್ ಚೆಂಡು ಆಡ್ಕೊಂಡು ಮಜಾ ಮಾಡ್ತಾರೆ. ಮೇಷ್ಟ್ರುಗಳು ಸ್ಟಾಫ್ ರೂಮಲ್ಲಿ ಹರಟೆ ಹೊಡೀತಾ, ಚೆಸ್ಸ್, ಕೇರಮ್ ಆಡ್ತಾ ಕೂತಿರ್ತಾರೆ. ಮಕ್ಕಳು ಅಲ್ಲಿ ಎದ್ದು ಇಲ್ಲಿ ಬಿದ್ದು ಕಬಡ್ಡಿ ಆಡ್ಕೊಂಡು, ಜೂಟಾಟ ಆಡ್ಕೊಂಡು ಬಟ್ಟೆಯೆಲ್ಲಾ ಕೊಳೆ ಮಾಡ್ಕೊಂಡು ಮನೆಗೆ ಬರ್ತಾರೆ. ಟೀವೀಲಿ ತೋರಿಸೋ ಹತ್ತು ರೂಪಾಯಿ ಸೋಪ್ ಪುಡಿ ಕೆಲಸ ಮಾಡೋಲ್ಲ, ಒಂದಕ್ಕೆ ಎರಡರಷ್ಟು ಸೋಪ್ ಹಾಕಿ ತೊಳೀಬೇಕು. ರಟ್ಟೆ ಬಿದ್ ಹೋಗುತ್ತೆ. ನಮ್ಮ ಕಷ್ಟ ಸರ್ಕಾರಕ್ಕೇನು ಗೊತ್ತು..?"

ಇಂಥ ಸ್ಕೀಂ ನಾವು ಮಕ್ಕಳಾಗಿದ್ದಾಗ ಬರಬಾರದಿತ್ತೇ ಅನ್ನಿಸ್ತು.

"ಇದನ್ನು ಸಮಾಜದ ಹಿರಿಯರಿಗೂ ವಿಸ್ತರಿಸಬೇಕು" ಎಂದೆ. "ಐದು ದಿನಗಳ ಆಫೀಸ್ ಸಿಸ್ಟಮ್ ಎಲ್ಲಾ ಕಡೆ ಇಲ್ಲ. ಆರು ದಿನಗಳು ಕೆಲಸ ಇನ್ನೂ ಇದೆ. ಕೆಲವರಂತೂ ಭಾನುವಾರ ಸಹ ಕೆಲಸ ಮಾಡಲು ಲ್ಯಾಪ್‌ಟಾಪ್ ಎತ್ತಿಕೊಂಡು ಹೋಗುತ್ತಾರೆ. ಪ್ರತಿ ಶನಿವಾರ ಆಫೀಸ್‌ಗೆ ಅಥವಾ ಬ್ಯಾಂಕಿಗೆ

ಹೋಗೋವರು ಬರಿಗೈಲಿ ಹೋಗಬೇಕು ಅಂತ ಕಾನೂನು ತರಬೇಕು" ಎಂದೆ.

"ಬರಿಗೈಲಿ ಬ್ಯಾಂಕ್‌ಗೆ ಹೋಗಿ ಏನ್ಮಾಡ್ತೀರಾ ?" ವಿಶಾಲು ಕೇಳಿದಳು.

"ಬರಿಗೈಲಿ ಹೋಗ್ತೀವಿ, ಕಸ್ಟಮರ್ಸ್ ಬರಿಗೈಲಿ ಬಂದಿರ್ತಾರೆ. ಅವರ ಜೊತೇಲಿ ಹರಟೆ ಹೊಡೀತೀವಿ. ಯೋಗಕ್ಷೇಮ ವಿಚಾರಿಸ್ತೀವಿ. ಹುಲಿ ಘಟ್ಟ ಆಟ ಆಡ್ತೀವಿ".

"ಯಾರಾದ್ರೂ ಹಣ ಡ್ರಾ ಮಾಡೋಕೆ ಬಂದ್ರೆ ?"

"ಅವತ್ತು ನಾವು ಕ್ಯಾಷ್ ರೂಮಿನ ಬೀಗದಕೈ ತಂದಿರೊಲ್ಲ. ಸುಮ್ನೆ ಹರಟೆ ಹೊಡೆಯೋದು, ಇಡ್ಲಿ ವಡೆ ತರಿಸಿಕೊಂಡು ತಿನ್ನೋದು, ಮನೆಗೆ ಹೊರಡೋದು. ಈ ರೀತಿ ಮಾಡಿದರೆ ಕೆಲಸಗಾರರಿಗೆ ಹೊಸ ಉತ್ಸಾಹ ಬರುತ್ತೆ" ಎಂದೆ.


"ಆದ್ರೆ ಒಂದು ದಿನ ವೇಸ್ಟ್ ಆಗುತ್ತಲ್ಲ ?" ವಿಶ್ವ ಕೇಳಿದ.

"ವೇಸ್ಟ್ ಹೆಂಗಾಗುತ್ತೆ ? ಹೆಚ್ಚಿನ ಉತ್ಸಾಹದಲ್ಲಿ ನಾವು ಸೋಮವಾರದ ದಿನ ಜಾಸ್ತಿ ಕೆಲಸ ಮಾಡ್ತೀವಲ್ಲ, ಕಾಂಪೆನ್ಸೇಟ್ ಆಗುತ್ತೆ. ಮಕ್ಕಳಿಗೆ ಕೊಡೋ ಬೆನಫಿಟ್ಟು ದೊಡ್ಡವರಿಗೆ ಯಾಕೆ ವಿಸ್ತರಿಸಬಾರದು..?"

ಎಂದು ನಾನು ಪ್ರಶ್ನೆ ಮಾಡಿದ್ದು ವಿಶಾಲುಗೆ ಖುಷಿಯಾಯ್ತು.

"ಒಳ್ಳೇ ಮಾತು ಹೇಳಿದ್ರಿ" ಎಂದ ವಿಶಾಲು ವಿಶ್ವನಿಗೆ ಹೇಳಿದಳು,

"ಇನ್ಮೇಲೆ ಶನಿವಾರ, ಭಾನುವಾರ ನಾನು ಸೌಟ್ ಮುಟ್ಟೊಲ್ಲರೀ. ಅಡುಗೆ ಮನೆ ಇನ್‌ಚಾರ್ಜ್ ನೀವೇ..! ಏನ್ಬೇಕಾದ್ರೂ ಮಾಡ್ಕೊಂಡು ತಿನ್ನಿ, ಸ್ವಲ್ಪ ಭಾಗ ನನಗೂ ತನ್ನಿ" ಎಂದಳು. ■



# ನೀಲಮೇಘಮ್ ಮತ್ತು ಅವನ ಕನಸುಗಳು

● ಪಾಲಹಳ್ಳಿ ವಿಶ್ವನಾಥ್

ಕೆ.ಜಿ.ಎಫ್ ಗಣಿಗಳಲ್ಲಿ ನಾವು 1980ರ ದಶಕದಲ್ಲಿ ಭೌತವಿಜ್ಞಾನದಲ್ಲಿ ಒಂದು ದೊಡ್ಡ ಪ್ರಯೋಗವನ್ನು ಶುರುಮಾಡಿ ಸುಮಾರು 10 ವರ್ಷಗಳು ನಡೆಸಿದವು. ಉಪಕರಣಗಳು ಬಹಳ ಸಂಕೀರ್ಣವಾಗಿದ್ದರಿಂದ ಪ್ರಾರಂಭವೂ ಸುಮಾರು ಸಮಯ ತೆಗೆದುಕೊಂಡಿತು. ನಾನು ಮುಂಬಯಿಯಿಂದ ಎರಡು ತಿಂಗಳಿಗೊಮ್ಮ ಬಂದುಹೋಗುತ್ತಿದ್ದೆ. ಈಗ ನಾನು ಹೇಳಬಯಸುವುದು ಅದರ ಮೊದಲ ಕೆಲವು ತಿಂಗಳುಗಳಲ್ಲಿ ನಡೆದ ಪ್ರಸಂಗ.

ನಾವು ಅಲ್ಲಿಯ ಕೆಲಸ ಕಾರ್ಯಗಳನ್ನು ಯಾವ ಪೂಜೆ, ಪುನಸ್ಕಾರಗಳಿಲ್ಲದೆ ಶುರು ಮಾಡಿದ್ದೆವು. ಅದು ಅಲ್ಲಿಯ ಸ್ಥಳೀಯ ಕೆಲಸಗಾರರಿಗೆ ಬಹಳ ಅಸಮಾಧಾನವನ್ನು ಉಂಟು ಮಾಡಿತ್ತು. ಕೆಲಸ ಸರಿಯಾಗಿ ಆಗದಿರಬಹುದು ಎಂದು ಬೇರೆಬೇರೆ ರೀತಿಗಳಲ್ಲಿ ಎಚ್ಚರಿಕೆ ಕೊಡುತ್ತಿದ್ದರು. ಅವರುಗಳಲ್ಲಿ ಸ್ವಲ್ಪ ನಾಯಕ ಗುಣಗಳಿದ್ದ ಭಾವವಿದ್ದ ಕೆಂಪಯ್ಯನಿಗೆ ನನ್ನ ಜೊತೆ ಸ್ವಲ್ಪ ಸಲಿಗೆ.

ಸಾರ್, ನೀವು ತಪ್ಪು ಮಾಡ್ತಾ ಇದ್ದೀರಿ! ದೇವರಿಗೆ ಇಷ್ಟ ಆಗೋದಿಲ್ಲಾ ಸಾರ್.

ಏನು ತಪ್ಪು?

ಇಷ್ಟು ದೊಡ್ಡ ಪ್ರಯೋಗ, ದೊಡ್ಡ ಯಂತ್ರಗಳು ಎಲ್ಲಾ ಇವೆ

ಹೌದು, ಅದಕ್ಕೆ?

ಭಾಭಾರವರು ಬಂದು ರಿಬ್ಬನ್ ಕೂಡ ಕತ್ತರಿಸಿದರಲ್ಲ ಸಾರ್

ಅಲ್ಲಪ್ಪ ಭಾಭಾ ಹೋಗಿ ಬಹಳ ವರ್ಷಗಳು ಆಗೋಯ್ತಲ್ಲ

ಸರಿ, ಸಾರ್, ನನಗೆ ಅವರ ಹೆಸರು ಗೊತ್ತಿಲ್ಲ. ಅಂತೂ ಬಂದವರು ದೊಡ್ಡವರು ತಾನೆ?

ಹೌದು

ಇಂತಹ ದೊಡ್ಡ ಕೆಲಸಗಳು ತೊಂದರೆಯಿಲ್ಲದೆ ನಡೀಬೇಕಾದರೆ ಶುರುಮಾಡೋವಾಗ ಏನಾದರೂ ಬಲಿ ಕೊಡಬೇಕು, ಸಾರ್.

ಯಾವ ಯುಗದಲ್ಲಿ ಇದ್ದೀಯಯ್ಯಾ ನೀನು ?

ನಿಮಗೆ ನಂಬಿಕೆ ಇಲ್ಲ ಸಾರ್, ಆದರೆ ನಮಗೆ ನಂಬಿಕೆ ಇದೆ ಒಂದು ಕುರಿ ಬಲಿಕೊಡಬೇಕು ಸಾರ್.

ಕುರೀನಾ?

ಹೌದು ಸಾರ್, ದೊಡ್ಡ ಕೆಲಸಕ್ಕೆ ದೊಡ್ಡ ಪ್ರಾಣಿ. ಚಿಕ್ಕ ಎಕ್ಸ..ಎಕ್ಸ

ಸರಿ, ಎಕ್ಸಪೆರಿಮೆಂಟ್ ,

ಆ ತರಹ ಇದ್ದಿದ್ದರೆ ಒಂದೆರಡು ಕೋಳಿ ಸಾಕಾಗ್ತಾ ಇತ್ತು

ಇದೆಲ್ಲ ತಪ್ಪು ಕಣಯ್ಯ. ಹೋಗಯ್ಯ

ನಿಮಗೆ ಅರ್ಥ ಆಗೋಲ್ಲ ಸಾರ್

ಏನಾದರೂ ಮಾಡ್ಕೊಳ್ಳಿ

ಕುರೀಗೆ ಹಣ?

ಆಫೀಸಿಂದ ಅದೆಲ್ಲಾ ಮಾಡೋಕೆ ಅಗೊಲ್ಲ. ಸಾಕು, ಕೆಂಪಯ್ಯ. ಈ ವಿಷಯ ಮತ್ತೆ ಮಾತು ಬೇಡ.

***

ಮುಂಬಯಿಗೆ ವಾಪಸ್ಸು ಹೋದಾಗ ಆಗಾಗ ಸುದ್ದಿ ಬರ್ತಾ ಇತ್ತು. ಇದ್ದಕ್ಕಿದ್ದ ಹಾಗೆ ಕರೆಂಟು ಹೋಗೋದು, ಜನ ಸರಿಯಗಿ ಕೆಲಸಕ್ಕೆ ಬರದೆ ಹೋಗೋದು ಎಲ್ಲಾ ಆಯಿತು. ಇಲ್ಲೀನವರು ಹೇಳ್ತಾ ಇರೋದು ದೇವರಿಗೆ ಇಷ್ಟ ಆಗ್ತಾ ಇಲ್ಲವಂತೆ ಎಂದು ನಮ್ಮ ಸ್ಥಳೀಯ ಪ್ರಭಾರಿ ಬರೆದಿದ್ದರು

***

ಮುಂಬಯಿಯಿಂದ ಕೆ.ಜಿ.ಎಫ್‌ಗೆ ವಾಪಸ್ಸು ಬಂದಿದ್ದೆ. ಹಾಗೇ ಒಂದು ದಿನ ಬೆಳಿಗ್ಗೆ ಎದ್ದಾಗ ನಮ್ಮ ಪುಟ್ಟ ಕ್ಯಾಂಪಸ್‌ನಲ್ಲಿ ಏನೋ ಗುಸು ಗುಸು, ನಗು. ಕೆಂಪಯ್ಯನ್ನ ಕರೆದು ಕೇಳಿದೆ

ಸಾರ್, ನೀಲಮೇಘಮ್‌ಗೆ ಕನಸು ಬಿತ್ತಂತೆ. ಅದರಲ್ಲಿ ಜಯಲಲಿತ ಮೇಡಮ್ ಬಂದಿದ್ದರಂತೆ.

ಅದರಲ್ಲಿ ಏನು ವಿಶೇಷ? ಎಂದು ಕೇಳಿದೆ.

ನೀಲಮೇಘಮ್ ಹೆಸರಿಗೆ ತಕ್ಕ ಬಣ್ಣ ಹೊಂದಿದ್ದ ತೆಳ್ಳನೆಯ ಮನುಷ್ಯ. ಅವನ ಮೂಲ ತಮಿಳುನಾಡು. ಅಲ್ಲಿಂದ ಬಂದವರಿಗೆ ಈ ಶುದ್ಧ ಸಂಸ್ಕೃತ ಹೆಸರು ಅಪರೂಪವೆ. ನಮ್ಮ ಜಪಾನೀ ಸಹೋದ್ಯೋಗಿ ಅರ್ಥ ಕೇಳಿದಾಗ ಬ್ಲೂ ಕ್ಲೌಡ್ ಎಂದು ಹೇಳಿದ್ದ. ಇರಲಿ, ನಮ್ಮಲ್ಲಿದ್ದ ಮೂರು ವಾಹನ ಚಾಲಕರಲ್ಲಿ ಅವನೂ ಒಬ್ಬ. ತಿಂಗಳಿಗೆ ಎರಡು ವಾರ ರಾತ್ರಿ ಕೆಲಸ. ಉಳಿದ ಸಮಯ ಡೇ ಡ್ಯೂಟಿ : ಆ ದಿನಗಳಲ್ಲಿ ಅವನು ಕೆಲಸ ಮುಗಿಸಿ ಸಂಜೆ 6 ಗಂಟೆಗೆ ಎರಡು ಕಿಮೀ ದೂರದ ರಾಬರ್ಟಸನ್ ಪೇಟೆಗೆ ಹೋಗಿ ರಾತ್ರಿ ವಾಪಸ್ಸು ಬರುತ್ತಿದ್ದ. ಹೋಗುವಾಗ ಬಾಯಿಗೆ ಬೀಗ ಹಾಕಿ ಕೊಂಡಿರುತ್ತಿದ್ದ. ನೀಲಮೇಘಮ್ ವಾಪಸ್ಸು ಬರುವಾಗ ವಾಚಾಳಿಯಾಗಿ ಪರಿವರ್ತನೆಗೊಳ್ಳುತ್ತಿದ್ದ. ನಮ್ಮ ಕೆಲಸಗಾರರುಗಳ ಮೇಲೆಲ್ಲ ರಾಬರ್ಟ ಸನ್ ಪೇಟೆಗೆ ಸಂಜೆ ಹೋದರೆ ಇದೇ ಪ್ರಭಾವ ಇರುತ್ತಿತ್ತು . ಆದರೆ ನೀಲಮೇಘಮ್ ಮೆಲೆ ಈ ಪ್ರಭಾವ ಎಲ್ಲರಿಗಿಂತ ಹೆಚ್ಚು ಇರುತ್ತಿತ್ತು. ಅವನು ತೆಳ್ಳನೆಯ ವ್ಯಕ್ತಿ ಎಂದು ಮೊದಲೆ ಹೇಳಿದೆವಲ್ಲವೇ! ಸಾಮಾನ್ಯ ವ್ಯಕ್ತಿಗಳಿಗೆ ಆ ಪ್ರಭಾವ ಶುರು ಆಗಲು ಅರ್ಧ ಮುಕ್ಕಾಲು ಗಂಟೆ ತೆಗೆದುಕೊಳ್ಳುತ್ತಿತ್ತು . ಆದರೆ ಇವನ ಮೇಲೆ ಪೇಟೆಯ ಪ್ರಭಾವ ಕೆಲವೇ ಕ್ಷಣಗಳಲ್ಲಿ ಶುರುವಾಗುತ್ತಿತ್ತು. ಇದಲ್ಲದೆ ಈತನಲ್ಲಿ ಮತ್ತೊಂದು ವಿಶೇಷವಿದ್ದಿತು. ಪೇಟೆಯ ಪ್ರಭಾವ ಹೆಚ್ಚಾದಾಗ ಅವನ ಭಾಷೆ ಬದಲಾಗುತ್ತಿತ್ತು. ಉತ್ತರದಲ್ಲಿ ಎಲ್ಲೋ ಒಂದು ವರ್ಷ ಇದ್ದನಂತೆ. ಅದರಿಂದಲೋ ಏನೋ ಹಿಂದಿಯಲ್ಲಿ ಮಾತಾಡಲು ಶುರುಮಾಡುತ್ತಿದ್ದ. ಅದರಲ್ಲೂ ಕೆಲವು ಬೈಗಳು ಪದಗಳನ್ನು ಚೆನ್ನಾಗಿ ತಿಳಿದಿದ್ದ.

ಈ ಎಲ್ಲ ಗುಣಗಳುಳ್ಳ ನೀಲಮೇಘಮ್ ತನ್ನ ಬಿಡುವು ವೇಳೆಯಲ್ಲಿ ಅಲ್ಲದೆ

ಬಿಡುವಿಲ್ಲದ ವೇಳೆಯಲ್ಲಿಯೂ ತಮಿಳುನಾಡಿನ ರಾಜಕೀಯದಲ್ಲಿ ಮುಳುಗಿರುತ್ತಿದ್ದ. ಡೈಲಿ ಡೇ ಡ್ಯೂಟಿಯಲ್ಲಿ ಇದ್ದಾಗ ಅವನು ಡಿ.ಎಮ್.ಕೆ ಪಕ್ಷದ ಕಟ್ಟಾ ಅಭಿಮಾನಿ. ಆದರೆ ರಾತ್ರಿಯಾಗುತ್ತ ಪೇಟೆಯ ಪ್ರಭಾವ ಶುರುವಾಗುತ್ತಾ ನಿಧಾನವಾಗಿ ಪಕ್ಷಾಂತರ ಮಾಡುತ್ತಿದ್ದ. ಶುದ್ಧವಲ್ಲದ ಹಿಂದಿಯಲ್ಲಿ ಕರುಣಾನಿಧಿ ಮತ್ತು ಅವರ ಸಂಸಾರದ ಎಲ್ಲ ಸದಸ್ಯರಿಗೂ ತನಗೆ ಬರುವ ಎಲ್ಲ ಬೈಗುಳನ್ನೂ ಬಳಸಿಕೊಳ್ಳುತ್ತಿದ್ದ. ಮತ್ತು ಎಮ್.ಜಿ.ಆರ್. ಗಿಂತ ಸಮರ್ಥ ನಾಯಕ ಇಲ್ಲವೆ ಇಲ್ಲ ಎಂದು ಸಾರುತ್ತಿದ್ದ. ಹೀಗೆ ಸಂಜೆ ಕಳೆದ ನಂತರ ನೀಲಮೇಘಮ್ ನಿಧಾನವಾಗಿ ರಾತ್ರಿಯ ಕನಸುಗಳಿಗೆ ಜಾರುತ್ತಿದ್ದ. ಆ ಕನಸುಗಳಲ್ಲಿ ರಾಜಕೀಯ ಮತ್ತು ಸಿನೆಮಾ ರಂಗಗಳ ವಿವಿಧ ಸಂಗತಿಗಳು ಬಂದು ಹೋಗುವುದು ಸಾಮಾನ್ಯವಾಗಿತ್ತು. ತಮಿಳುನಾಡಿನ ಜೀವನದಲ್ಲಿ ಈ ಎರಡು ಕ್ಷೇತ್ರಗಳಿಗೂ ಗಾಢ ಸಂಬಂಧ ಇದ್ದೇ ಇದ್ದಿತಲ್ಲವೆ? ಹಳೆಯ ತಾರೆಯರಾದ ಸಾವಿತ್ರಿ, ಭಾನುಮತಿಯರಲ್ಲದೆ ಅವನದೆ ವಯಸ್ಸಿನ ಜಯಲಲಿತ, ಸರೋಜಾದೇವಿ ಯರೆಲ್ಲಾ ಅವನ ಕನಸ್ಸುಗಳಿಗೆ ಭೇಟಿ ಕೊಡುತ್ತಿದ್ದರು

ಅದೇನು ಮಹಾ ವಿಶೇಷ ಕೆಂಪಯ್ಯ? ಅವರೂರಲ್ಲೇನಾದರೂ ಚುನಾವಣೆಯಂತಾ?

ಇಲ್ಲ, ಸಾರ್ ! ಇದು ರಾಜಕೀಯದ ವಿಷಯ ಅಲ್ಲ. ಕನಸಿನಲ್ಲಿ ಜಯಲಲಿತ ಮೇಡಮ್ ನಾಗಿನಿ ಡಾನ್ಸ್ ಮಾಡ್ತಾ ಇದ್ದರಂತೆ. ಹಾಗೇ ಹತ್ತಿರ ಬಂದು ನೀಲಮೇಘಮ್ ಕಿವಿಯಲ್ಲಿ ಏನೋ ಹೇಳಿದರಂತೆ !

ಆಯಿತು, ಏನಂತೆ ?

ಸಾಹೇಬರಿಗೆ ಕುರೀನ ಬಲಿ ಕೊಡೋಕೆ ಹೇಳು.

ಅಂತೂ ಚಿತ್ರರಂಗದವರಿಗೂ ವಿಜ್ಞಾನದಲ್ಲಿ ಅಸಕ್ತಿ ಬಂದಿರುವುದು ಸಂತೋಷ! ತಿರುಗ ನೀವೆಲ್ಲಾ ಶುರುಮಾಡಿಕೊಂಡರಾ? ಹೋಗಿ, ಕೆಲಸ ನೋಡಿ.

ಒಂದು ವಾರ ಆಯಿತು. ಮತ್ತ ಕ್ಯಾಂಪಸ್‌ನಲ್ಲಿ ಬೆಳಿಗ್ಗೆ ಗಲಾಟೆ. ಹೊರಗೆ ಹೋದರೆ ಅಲ್ಲೇ ಎಲ್ಲೋ ಇದ್ದ ನೀಲಮೇಘಮ್ ಬಂದು ನನ್ನ ಕಾಲಿಗೆ ಬಿದ್ದ.

ಏಳಿ, ನೀವು ನನಗಿಂತ ದೊಡ್ಡವರು

ಸಾರ್ ನಿನ್ನೆ ರಾತ್ರಿ ಕನಸು.. ಭಯ ಆಗ್ತಾ ಇದೆ !

ಯಾರು ಬಂದಿದ್ದರು? ಮತ್ತೆ ಜಯಲಲಿತ?

ಇಲ್ಲ ಸಾರ್, ನೀವು ನಂಬೋಲ್ಲ!'

ಹೇಳಿ, ಪರವಾಯಿಲ್ಲ

ಹೇಮಮಾಲಿನಿ ಮೇಡಮ್!

ಇದ್ದಕ್ಕಿದ್ದಹಾಗೆ ಹೇಮಮಾಲಿನಿ ಮೇಡಮ್ ಎಲ್ಲಿಂದ ಅವತರಿಸಿದರು ? ಮೂಲ ತಮಿಳುನಾಡಿನವರಾಗಿದ್ದು ಈಗ ಇಡೀ ಭಾರತದಲ್ಲಿ ಖ್ಯಾತಿ ಗಳಿಸಿದ್ದಾರೆಂದು ನೀಲಮೇಘಮ್ಗೆ ಹೆಮ್ಮೆ ಇದ್ದಿರಬಹುದು. ಅದಲ್ಲದೆ ಎರಡು ವಾರಗಳ ಹಿಂದೆ ಊರಲ್ಲಿ ಮತ್ತೆ ಶೋಲೆ ಸಿನೆಮಾ ಬಂದು ಹೋಗಿತ್ತು.

ನಮ್ಮದು ಅಖಿಲ ಭಾರತ ಸಂಸ್ಥೆಯಾಗಿದ್ದರಿಂದ ದೇಶದ ವಿವಿಧ ಭಾಗಗಳಿಂದ ವಿಜ್ಞಾನಿಗಳು ಮತ್ತು ಇಂಜನಿಯರುಗಳಿರುತ್ತಿದ್ದರು. ಉತ್ತರದವರೂ ಕೆಲವರು ಇದ್ದರು. ಅವರ ಮೇಲೆ ಹೆಚ್ಚು ಪ್ರಭಾವ ಬೀರಲು ಈ ತಂತ್ರವೋ? ಹೇಮಮಾಲಿನಿ ಹೇಳಿದರು ಅಂದರೆ ಅವರೂ ಅವನಿಗೆ ಬೆಂಬಲ ಕೊಡಬಹುದಲ್ಲವೆ?

ಮೇಡಮ್ ಟಾಂಗಾನಲ್ಲಿ ಬಂದಿದ್ದರಾ?

ಟಾಂಗಾ ಇತ್ತು ಸಾರ್. ಸಾರ್, ಸಾರ್. ಹೆದರಿಕೆ ಆಗುತ್ತೆ ಸಾರ್.

ಏಕೆ ನೀಲಮೇಘಮ್?

ಅದು ಹೇಮಮಾಲಿನಿ ಮೇಡಮ್ ಅಲ್ಲ.

ಮತ್ತೆ?

ಅವರ ದೆವ್ವ!

ಅವರು ಸತ್ತಿಲ್ಲ ನೀಲಮೇಘಮ್

ಅದೆಲ್ಲಾ ಗೊತ್ತಿಲ್ಲ ಸಾರ್, ಮೊಕ ಎಲ್ಲಾ ರಕ್ತ, ನಮ್ಮ ಮಾರಮ್ಮ ದೇವರ ತರಹ ಇದ್ದರು ಹೇಮಾಜಿ !

ನಿಮ್ಮ ಹತ್ತಿರ ಬಂದು ಏನಾದರೂ ಹೇಳಿ ಹೋದರಾ? ನಿಮ್ಮ ಕಿವೀಲಿ?

ಇಲ್ಲ ಸಾರ್, ಜೋರಾಗಿ ಕುರಿ ಕೋಳಿ ಬಲಿ! ಕುರಿ ಕೋಳಿ ಬಲಿ! ಕುರಿ ಕೋಳಿ ಬಲಿ! ಅಂತ ಕೂಗ್ತಾ ಹೊರಟುಹೋದರು.

ಯಾವ ಭಾಷೇಲಿ ಕೂಗ್ತಾ ಇದ್ದರು?

ಏನು ಸಾರ್ ಕೇಳ್ತೀರ! ಶೋಲೆ ಹಿಂದೀಲಲ್ವಾ? ಸಾರ್, ಹೆದರಿಕೆ ಆಯಿತು. ಟಾಂಗಾ ಜೋರಾಗಿ ಓಡ್ತಾ ಇದೆ. ಆದರೆ ಕುದುರೇನೂ ಇಲ್ಲ, ಡ್ರೈವರ್ರೂ ಇಲ್ಲ! ಎದ್ದು ಬಿಟ್ಟೆ. ಮಧ್ಯರಾತ್ರಿಯಿಂದ ನಿದ್ದೇನೆ ಇಲ್ಲ! ಏನಾದರೂ ಮಾಡಿ ಸಾರ್.

ಸರಿ, ಜಯಲಲಿತಾ ಮೇಡಮ್ ಆಯಿತು, ಈಗ ಹೇಮಮಾಲಿನಿಯವರೂ ವಿಜ್ಞಾನದಲ್ಲಿ ಆಸಕ್ತಿ ತೊಗೋತಾ ಇರೋದು ಸಂತೋಷ ಅಂತ ಹಾಸ್ಯ ಮಾಡಿದೆ. ಅದಕ್ಕೆ ನಮ್ಮಲ್ಲಿ ಕೆಲವರು ನಮಗೆ ನಂಬಿಕೆ ಇಲ್ಲಾಂತ ಬೇರೆಯವರ ನಂಬಿಕೇನ ಹೀನಾಯ ಮಾಡಬಾರದು' ಅಂತ ಹೇಳಿದರು. ಕೆಂಪಯ್ಯ, ನೀಲಮೇಘಮ್ ಎಲ್ಲಾ ಸುಮ್ಮನಾದರು ಅಂತ ಕಾಣಿಸುತ್ತೆ. ನಾನು ಮುಂಬಯಿಗೆ ವಾಪಸ್ಸು ಹೋದೆ. ಕ್ಯಾಂಪಸ್ನಲ್ಲಿ ಎರಡು ಮೂರು ತಿಂಗಳಿಗೊಮ್ಮೆ ಎಲ್ಲ ಒಟ್ಟಿಗೆ ಸೇರಿ ಒಂದು ಭಾನುವಾರ ದೊಡ್ಡ ಭೋಜನ ಇಟ್ಟುಕೊಳ್ಳುವುದು ಅಭ್ಯಾಸ.. ಎಲ್ಲರಿಗೂ ಶಾಖಾಹಾರೀ ಆಹಾರ, ತಿನ್ನೋರಿಗೆ ಮಾಂಸಾಹಾರಿ ಆಹಾರ– ಚಿಕನ್, ಮಟನ್ ಎಲ್ಲಾ! ಚೆನ್ನಾಗಿ ಆಯಿತು ಅಂತ ಯಾರೋ ಫೋನ್ ಮಾಡಿದ್ದರು. ಆ ತಿಂಗಳು ನಮ್ಮ ಸ್ಥಳೀಯ ಪ್ರಭಾರಿ ಕಳಿಸಿದ್ದ ಲೆಕ್ಕ ನೋಡ್ತಾ ಇದ್ದೆ. ಲೈಟ್ ಬಲ್ಬು ಇತ್ಯಾದಿ ಖರ್ಚು ಹೆಚ್ಚೇ ಇತ್ತು!! ಈ 'ಬಡಾ ಖಾನಾ' ಆದ ಮೇಲೆ ನೀಲಮೇಘಮ್ ಕನಸುಗಳಲ್ಲಿ ತಮಿಳುನಾಡಿನ ಅಭಿನೇತ್ರಿಯರು ಪಾತ್ರ ವಹಿಸುತ್ತಿದ್ದರೂ ಹೇಮಮಾಲಿನಿ ಮೇಡಮ್ ಆಗಲಿ ಅವರ ದೆವ್ವವಾಗಲಿ ಮತ್ತೆ ಬರಲಿಲ್ಲ ! ನಮ್ಮ ಎಕ್ಸಪೆರಿಮೆಂಟೂ ವಿಘ್ನವಿಲ್ಲದೆ ಮುಂದೆ ಹೋಯಿತು!

■

# ಕೆ. ಮಾದೇಸನ ಕಾವ್ಯ ಪ್ರಸಂಗ

● ಸತ್ಯೇಶ್ ಎನ್. ಬೆಳ್ಳೂರ್

ನಾನು ಪ್ರಾಧ್ಯಾಪಕನಾಗಿರುವ ಬಟ್ರಳ್ಳಿಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕನ್ನಡದ ಯಾವುದೇ ಕಾರ್ಯಕ್ರಮವಾದರೂ ನಾನಲ್ಲಿರಬೇಕಾದದ್ದು ಲೋಕರೂಢಿ. ಚರ್ಚಾಸ್ಪರ್ಧೆ, ಏಕಪಾತ್ರಾಭಿನಯ ಮುಂತಾದ ಯಾವುದೇ ಕನ್ನಡದ ಸ್ಪರ್ಧೆಗಳಿಗೂ ನಾನೇ ತೀರ್ಪುಗಾರ. ನವೆಂಬರಿನ ರಾಜ್ಯೋತ್ಸವದ ದಿನಗಳಲ್ಲಂತೂ ಮೈಕಾಸುರನ ಮೇಲೆ ನನಗೆ ಮಾತ್ರ ಹಕ್ಕು. ಏಕೆಂದರೆ ನಮ್ಮ ಕಾಲೇಜಿನಲ್ಲಿ ಕನ್ನಡವನ್ನು ಕನ್ನಡದಲ್ಲೇ ಮಾತನಾಡಬಲ್ಲ ಸಾಮರ್ಥ್ಯ ಇರುವುದು ಪ್ರಾಯಶಃ ನನ್ನೊಬ್ಬನಿಗೆ ಮಾತ್ರ!

ಕೆಲವು ತಮಿಳರಿದ್ದಾರೆ. ಅವರದ್ದೆಲ್ಲ ಎಲ್ಲ ಪದದ ಕಡೆಯಲ್ಲೂ "ಡ" ಸೇರಿಸಿಬಿಡುವ ಬೇ"ಡ"ದ ಕನ್ನಡ. ಇನ್ನು ಕೆಲವು ತೆಲುಗರಿದ್ದಾರೆ. ಅವರದ್ದೆಲ್ಲ ಪದದ ಎಲ್ಲೆಡೆ ಬೇಕೆಂದ ಜಾಗದಲ್ಲಿ "ರ" ಸೇರಿಸಿಬಿಡುವ ಒಂದು ತೆ"ರ"ನಾದ ಕನ್ನಡ. ಇನ್ನು ಮಲಯಾಳಿಗದಂತೂ ಅವರದೇ ಆದ ವೈಖರಿ. ಅಲ್ಲಿ "ಮ" ಕೆಲವೊಮ್ಮೆ "ಬ" ಆಗಿ "ಬ" ಕೆಲವೊಮ್ಮೆ "ಮ" ಆಗಿ, ಅವರು "ಬಾಬಾ" ಎಂದು ಕರೆದಾಗ ನಮ್ಮನ್ನು ಯಾಕವರು "ಮಾಮಾ" ಎಂದು ಸಂಬೋಧಿಸುತ್ತಿದ್ದಾರೆಂಬ ಸಂಶಯ ಮೂಡುತ್ತದೆ. ಇರುವ ಕೆಲವೇ ಕೆಲವು ಬಂಗಾಳಿಗರ ಕನ್ನಡ ಅರ್ಥವಾಗದಿದ್ದರೂ ಕಿವಿಗೆ ಇಂಪಾದ ಸಂಗೀತವಂತೂ ಹೌದು. ತಮ್ಮ ತಾಯ್ನುಡಿ ಕನ್ನಡವಲ್ಲದಿದ್ದರೂ ಕನ್ನಡದಲ್ಲೇ ಮಾತನಾಡಲು ಪ್ರಯತ್ನಿಸುವ ಇವರೆಲ್ಲರನ್ನೂ ಮೆಚ್ಚಲೇಬೇಕು. ಆದರೆ ಇವರೆಲ್ಲರಿಗೆ ಮುಕುಟಪ್ರಾಯವಾದ ಕನ್ನಡದ ಆಧುನಿಕ ಗುರುವೇ ಕೆ.ಮಾದೇಸ. ಇವನದು ಶುದ್ಧ ಕಂಗ್ಲೀಷು – ಕನ್ನಡದಲ್ಲಿ ಹೇಗೆ ಬೇಕೋ ಹಾಗೆ ಕಾಡುವ ಇಂಗ್ಲೀಷು. ಅಥವಾ ಇಂಗ್ಲೀಷಿನಲ್ಲಿ ಎಲ್ಲಿ ಬೇಕೋ ಅಲ್ಲಿ ಕಾಣುವ ಕನ್ನಡ ಎಂದರೂ ತಪ್ಪಿಲ್ಲ. ಒಟ್ಟಿನಲ್ಲಿ ಇದೊಂದು ಕಲಸುಮೇಲೋಗರ.

ಕೆ.ಮಾದೇಸ ಈಗ ಕಡೆಯ ವರ್ಷದ ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಓದುತ್ತಿದ್ದಾನೆ. ನನಗೆ ಅವನ ಹೆಸರಿನ ಮೇಲೆ ಜಿಜ್ಞಾಸೆ. ಹಾಗಾಗಿ ಬಹಳ ಹಿಂದೊಮ್ಮೆ ಕ್ಲಾಸಿನಲ್ಲಿ ಅಟೆಂಡೆನ್ಸ್ ತೆಗೆದುಕೊಳ್ಳುವಾಗ ಅವನನ್ನು ರೇಗಿಸುತ್ತ ಸೂಕ್ಷ್ಮವಾಗಿ ವಿಚಾರಿಸಿದ್ದೆ –"ಯಾಕೆ ಮಾದೇಸ ಅಂತ ಹೆಸರಿಟ್ಟುಕೊಂಡೆಯೋ? ಮಾದೇಶ ಅಂತ ಆಗಿದ್ದಿದ್ದರೆ ದೇಶಾನಾದ್ರೂ ಉಳೀತಾ ಇತ್ತಲ್ಲ?". ಭೂಪ ಉತ್ತರಿಸಿದ್ದ " ಅದು ಹಾಗಲ್ಲ ಸಾರ್. ಮೊದಲು ನಾನೂ ದೇಶೀಯನೇ ಆಗಿದ್ದೆ. ಆದ್ರೆ ನನ್ನ ಹ್ಯಾಂಡ್ ನೋಡಿದ ಅಸ್ಟ್ರಾಲಜರು, ನಿನ್ನ ನೇಮ್ನಲ್ಲಿ ಏಳು ಅಕ್ಷರಗಳು ಬೇಡ. ಸಿಕ್ಸ್ ಲೆಟರ್ಸ್ ಮಾತ್ರ ಇದ್ದರೆ ನಿನಗೆ ಒಳ್ಳೇದು ಅಂತ ಅಂದ್ರು. ದೇಫೋರ್, ಹೆಚ್ಚಾಗಿದ್ದ "ಹೆಚ್"ಅನ್ನು ಕಿತ್ತಾಕಿ, ದೇಶ ಹೋದ್ರೂ ಪರ್ವಾಗಿಲ್ಲಾ ಅಂತ ದೇಸೀಯನಾಗಿಬಿಟ್ಟೆ". ಅಲ್ಲಿಗೆ ನಿಲ್ಲಿಸಬೇಕಿತ್ತು. ಮರುಪ್ರಶ್ನೆ ಹಾಕಿದ್ದೆ " ಹಾಗಾದರೆ ಈ "ಕೆ" ಅಕ್ಷರ ಏನು?". "ಸಾರ್. ಬಹಳ ಇಂಟರೆಸ್ಟಿಂಗ್ ಪ್ರಶ್ನೆ ಸಾರ್ ನಿಮ್ದು. ಅದು ನನ್ನ ಫಾದರ್ಸ್ ನೇಮು. ಕೆಂಪೇಗೌಡ್ರು ಅಂತ. ನಮ್ಮ ಊರೂ ಕೂಡ ಕೆಂಪಾಪುರ. ಹಾಗಾಗಿ ಮೊದಲಲ್ಲಿ ನಾನು ಕೆ.ಕೆ ಆಗಿದ್ದೆ. ಆದ್ರೆ ಮತ್ತದೇ ಅಸ್ಟ್ರಾಲಜರು, ಮತ್ತದೇ ನನ್ನ ಹ್ಯಾಂಡನ್ನ ಮತ್ತೊಮ್ಮೆ ನೋಡಿ, ಮಾದೇಸ, ನಿನಗೆ ಒಂದು "ಕೆ" ಸಾಕು. ಎರಡು ಯಾಕೆ ಬೇಕು? ಅಂತ ಕೇಳಿದ್ರು. ದೇಫೋರ್, ಅಪ್ಪನ್ನ ರೀಟೇನ್ ಮಾಡ್ಕೊಂಡು, ಊರಿಂದ

ಸಧ್ಯಕ್ಕೆ ಹೊರಗಾಗಿದೀನಿ ಸಾರ್. ಈಗ ಜನ ನನ್ನ ನೋಡಿ ಕೆಕೆ ಅಂತ ಕೇಕೇ ಹಾಕೊಲ್ಲ. ಬದಲಾಗಿ, ನನ್ನ ಡೂಯಲ್ ಲ್ಯಾಂಗ್ವೇಜ್ ಸ್ಕಿಲ್ ನೋಡಿ ಬಹಳ ಅಪ್ರಿಷಿಏಟ್ ಮಾಡ್ತ ಕೆ.ಮಾದೇಸ ಅಂದ್ರೆ "ಕಂಗ್ಲೀಷು ಮಾದೇಸ" ಅಂತ ಹೊಗಳ್ತಾರೆ. ಇದೂ ಕೂಡ ಒಂದು ವೆರಿ ಬಿಗ್ ಟೈಟ್ಲು ಸಾರ್". ಮುಂದಿನ ಬೆಂಚಿನ ಹುಡುಗಿಯೊಬ್ಬಳು "ಕೆ ಅಂದ್ರೆ ಕಪಿ ಕೂಡ ಆಗತ್ತೆ" ಅಂತ ಗುಸುಗುಸು ಮಾಡಿ ನಕ್ಕಿದ್ದು ನಮ್ಮ ಕಂಗ್ಲೀಷು ಗುರುವಿಗೆ ಕೇಳಿಸದಿದ್ದದ್ದು ಅಂದು ಕ್ಲಾಸಿನಲ್ಲಿ ಆಗುತ್ತಿದ್ದ ಅನಾಹುತವನ್ನು ತಪ್ಪಿಸಿತ್ತು.

ಎಂದಿನಂತೆ ಕಾಲೇಜಿನಲ್ಲಿ ವಾರ್ಷಿಕೋತ್ಸವದ ನಿಮಿತ್ತ ವಿವಿಧ ಸ್ಪರ್ಧೆಗಳಿದ್ದವು. ಕನ್ನಡ ಭಾವಗೀತೆಯ ಸ್ಪರ್ಧೆ ನಡೆಯುತ್ತಿತ್ತು. ಮಾಮೂಲಿಯಂತೆ ನಾನೇ ತೀರ್ಪುಗಾರ. ಹುಡುಗನೊಬ್ಬ ಆಗಿನ್ನೂ ಹೆಂಡಕುಡುಕ ರತ್ನನ ಪದವೊಂದನ್ನು "ಅನುಭವಿಸಿ" ಬಿಕ್ಕಳಿಸುತ್ತ ಬಿಕ್ಕಳಿಸುತ್ತ ಹಾಡಿದ್ದ. ಬಟ್ರಳ್ಳಿಯ ನಮ್ಮ ಕಾಲೇಜಿನಲ್ಲಿ ಈ ಹೊತ್ತೂ ಜಿ.ಪಿ.ರಾಜರತ್ನಂರವರ ನೆನಪನ್ನು ಹೀಗಾದರೂ ಮೂಡಿಸುವವರು ಇನ್ನೂ ಇದ್ದಾರಲ್ಲ ಎಂದು ಆ ಹುಡುಗನ ಬಗ್ಗೆ ವಿಧಿ ಇಲ್ಲದೆ ಹೆಮ್ಮೆ ಪಡುತ್ತಿದ್ದಾಗಲೇ –"ಮುಂದಿನ ವಿದ್ಯಾರ್ಥಿ, ಮಾದೇಸ.... ಕೆ.ಮಾದೇಸ" ಎಂಬ ದೊಡ್ಡ ದನಿಯ ಘೋಷಣೆ ಕೇಳಿಬಂತು. ನಾನು ಗಾಭರಿಗೊಂಡು ಕುಳಿತಿದ್ದ ಕುರ್ಚಿಯಿಂದ ಕೆಳಕ್ಕೆ ಬಿದ್ದೇ ಬಿಟ್ಟಿದ್ದೆ. ಸಾವಳಿಸಿಕೊಳ್ಳುವ ಹೊತ್ತಿಗೆ ಮೈಕ್ ಹಿಡಿದು ಮಾದೇಸ ಸ್ಟೇಜಿನ ಮೇಲೆ ನಿಂತಿದ್ದ. ಅದೇಕೋ ಕಾಣೆ. ನನ್ನೆಡೆಗೆ ಕೆಲ ಕ್ಷಣಗಳ ಹೊತ್ತು ಅವನ ನೇರ ದೃಷ್ಟಿ ಇತ್ತು." ಕನ್ನಡ ಅನ್ನೋದು ಬರೀ ನಿಮ್ಮ ಪ್ರಾಪರ್ಟಿ  ಮಾತ್ರ ಅಲ್ಲ ಸಾರ್. ಅದರಲ್ಲಿ ನಾನೂ ಕೂಡ ಎಕ್ಸಪರ್ಟೇ, ಎಂದೆನ್ನುತ್ತ ನನ್ನನ್ನು ಅಣಕಿಸುವಂತಿತ್ತು.

ಮಾದೇಸ ಹೇಳುತ್ತಿದ್ದ "ನಾನೀಗ ನನ್ನದೇ ಆದ ಒರಿಜಿನಲ್ ಸಾಂಗ್ ಒಂದನ್ನ ಹಾಡ್ತೀನಿ. ಕನ್ನಡ ಅನ್ನೋದು ಟುಡೇ ಕನ್ನಡ ಆಗೇ ಉಳಿದಿಲ್ಲ. ಅದು ಸ್ವಲ್ಪ ಇಂಗ್ಲೀಷ್ ಆಗಿದೆ. ದೇರ್ಫೋರ್, ಹಿಂದಿನ ಕನ್ನಡದ ಒಂದು ಫೇಮಸ್ ಸಾಂಗ್ಗೆ ಅಲ್ಲಲ್ಲಿ ಸ್ಮಾರ್ಟ್ ಆಗಿ ಇಂಗ್ಲೀಷ್ ಸೇರಿಸಿ ಕಂಗ್ಲೀಷಿನಲ್ಲಿ ಒಂದು ನ್ಯೂ ಸಾಂಗನ್ನು ಸೃಷ್ಟಿ ಮಾಡಿದೀನಿ. ಈಗ ಕೇಳಿ, ಕೇಳಿಸಿ, ಎಂಜಾಯ್ ಮಾಡಿ. ನಿಮಗಾಗಿ ಕೆ.ಎಸ್.ನರಸಿಂಹಸ್ವಾಮಿಯವರ ಸಾಂಗಿಗೆ ನನ್ನದೇ ಆದ ಲಿರಿಕ್ಸ್.

ಗಂಟಲು ಸರಿ ಪಡಿಸಿಕೊಳ್ಳುತ್ತಿದ್ದ ಮಾದೇಸ. "ಇನ್ನೊಬ್ಬರ ಹಾಡಿಗೆ ಇವನ ಸಾಲುಗಳು!" – ಅರ್ಥವಾಗಲಿಲ್ಲ. ಯಾಕೋ ಅವನನ್ನು ದಿಟ್ಟಿಸಿ ನೋಡೋ ಧೈರ್ಯವೂ ಇರಲಿಲ್ಲ. ಕಣ್ಣನ್ನು ಅತ್ತಿತ್ತ ಹರಿಬಿಡುತ್ತಿದ್ದಂತೆಯೇ ಅವನ ಕರುಣಾಜನಕವಾದ ದನಿಯಲ್ಲಿ ಮೈಸೂರು ಮಲ್ಲಿಗೆಯ ಕನ್ನಡದ ಒಂದೊಂದೇ ಎಸಳು ಆಂಗ್ಲವಾಗುತ್ತ ಗಾಳಿಗೆ ಸಿಕ್ಕ ತರಗೆಲೆಯಂತೆ ಮೆಲ್ಲನೆ ಸುತ್ತುತ್ತ ಸುತ್ತುತ್ತ ಕೆಳಗಿಳಿದು ನೆಲಸಮವಾಗುತ್ತಿತ್ತು.

ನನ್ನ ತೀರ್ಪಿನಲ್ಲಿ ಮಾದೇಸನ ಹೆಸರು ಬರದಿದ್ದಾಗ ಎಲ್ಲರೆದುರೇ ನನ್ನ ಮುಂದೆ ನಿಂತು "ವಾಟ್ ಸಾರ್... ಯಾವುದೇ ಲ್ಯಾಂಗ್ವೇಜು  ಬೆಳೀಬೇಕಾದ್ರೂ ಅದರಲ್ಲಿ ಎಕ್ಸ್ಪೆರಿಮೆಂಟ್ಸು, ಇನ್ವೆನ್ಶನ್ಸು  ಹಾಗೂ ನ್ಯೂ ನ್ಯೂ ಡೆವೆಲಪ್ಮೆಂಟ್ಸು ಆಗಬೇಕು ಸಾರ್. ಓಲ್ಡ್ ವೈನಿಗೆ ನ್ಯೂ ಬಾಟಲ್ ಬೇಡ್ವಾ ಸಾರ್? ಓಲ್ಡ್ ಸ್ಟೋರೀಗೆ ನ್ಯೂ ಸಾಂಗ್ಸು, ಓಲ್ಡ್ ಸಾಂಗ್ಸಿಗೆ ನ್ಯೂ ಲಿರಿಕ್ಸು – ಹೀಗೆ ಹಳೇದಕ್ಕೆ ಹೊಸಾದು, ಹೊಸದಕ್ಕೆ ಹಳೇದು ಸೇರ್ಕೊಂಡ್ರೇನೆ ತಾನೆ ಪ್ರೋಗ್ರೆಸ್ ಸಾರ್?

ನೀವಾದ್ರು ಇದನ್ನ ಅರ್ಥ ಮಾಡ್ಕೊಂಡು ನನ್ನ ಬೆನ್ ತಟ್ಟೀರಾ ಅಂತಿದ್ದೆ. ಆದ್ರೆ, ಯಾಕ್ ಸಾರ್ ಹೀಗೆ ಮಾಡಿ ನನ್ನ ಹಾರ್ಟನ್ನ ಬ್ರೇಕ್ ಮಾಡಿದ್ರಿ?". ಸ್ವಲ್ಪ ಮಂಕಾಗಿದ್ದ ಮಾದೇಸ. ಆದ್ರೂ ನನಗೆ ಸರಿ ಅನ್ನಿಸಿದ್ದನ್ನ ಅವನಿಗೆ ತಿಳಿಸೋದೆ ಸೂಕ್ತವೆಂದುಕೊಂಡು –" ಅದು ಹಾಗಲ್ಲ ಮಾದೇಸ. ಪ್ರಯೋಗ ಅನ್ನೋದು ನಿಜವಾಗಿಯೂ ಸ್ವಂತದ್ದಾಗಿರಬೇಕು. ಸುಮ್ನೆ ಅಲ್ಲೊಂದು ಇಲ್ಲೊಂದು ಕನ್ನಡದ ಪದಕ್ಕೆ ಆಂಗ್ಲಪದ ಹಾಕಿಬಿಟ್ರೆ ಅದು ಹೊಸ ಸೃಷ್ಟಿ ಆಗುತ್ಯೆ, ನೀನೇ ಹೇಳು. ಅದರಲ್ಲೊಂದು ಭಾವ ಇರಬೇಕು. ಸ್ವಂತ ವಿಚಾರ ಇರಬೇಕು. ಛಂದಸ್ಸಿರಬೇಕು. ಆಗ್ಲೇ ಅದು ಒಂದು ಒಳ್ಳೆಯ ರಚನೆ ಅನ್ನಿಸಿಕೊಳ್ಳೋದು". ನನ್ನ ಉತ್ತರದಿಂದ ನಿರಾಶನಾಗಬಹುದೆಂದು ತಿಳಿದಿದ್ದ ನನಗೆ ಆಶ್ಚರ್ಯ ಅನ್ನಿಸಿದ್ದು ಅವನ ಅಷ್ಟೇ ನೇರ ಉತ್ತರ ಕೇಳಿ. "ಆಯ್ತು ಸಾರ್. ಐ ಟೇಕ್ ದಿಸ್ ಲೈಕ್ ಎ ಚ್ಯಾಲೆಂಜ್. ನೀವ್ ಹೇಳಿದ ಎಲ್ಲಾ ಇನ್ಗ್ರೀಡಿಯನ್ಸೂ ಇರೋ, ನಿಮಗೆ ಫೇವರೇಟ್ ಆದ ಕನ್ನಡದ ಬುಕ್ಕು ಯಾವ್ದು ಸಾರ್?". ಬಯಲುಸೀಮೆಯ ಗಾಳಿಗೋ ಅಥವಾ ತನ್ನಲ್ಲಿ ಭುಗಿಲೆದ್ದಿದ್ದ ಆತ್ಮಸ್ಥೈರ್ಯದ ಪರಿಣಾಮವೋ ಅವನ ತೊಡೆಗಳು ಸಣ್ಣದಾಗಿ ಅಲುಗಾಡುತ್ತಿದ್ದವು. "ನಾನೊಬ್ಬ ಕಂಗ್ಲೀಷು ಜಟ್ಟಿ ನಿಜ. ಕೆಳಗೆ ಬಿದ್ದಿರುವುದೂ ನಿಜ. ಆದರೆ, ಮಣ್ಣಾಗಲಿಕ್ಕೆ ನನಗೆ ಮೀಸೆಯೇ ಇಲ್ಲವಲ್ಲ ಸಾರ್ " ಎಂಬಂತ್ತಿತ್ತು ಅವನ ನೋಟ. ಇವನಿಗೆ ಯಾವುದನ್ನು ಉದಾಹರಿಸುವುದು ಎಂಬ ಪೇಚಿಗೆ ಬಿದ್ದಿದ್ದೆ. ಯಾರಿಗೂ ಅಷ್ಟು ಸುಲಭದಲ್ಲಿ ಎಟುಕದ ಡಿ.ವಿ.ಜಿ ನೆನಪಾಗಿ – "ಮಂಕುತಿಮ್ಮನ ಕಗ್ಗ" ಎಂದಿದ್ದೆ. ತನ್ನ ತಕ್ಷಣದ ನೋಟದಲ್ಲೇ ಇದು ತನ್ನ ಅರಿವಿಗಿರದ ವಿಷಯವೆಂದು ಸ್ಪಷ್ಟ ಪಡಿಸಿದನಾದರೂ, ನನ್ನನ್ನು ಒಮ್ಮೆ ದಿಟ್ಟಿಸಿ ನೋಡಿ, ನಿಮ್ಮನ್ನು ಖಂಡಿತವಾಗಿಯೂ ವಿಚಾರಿಸಿಕೊಳ್ಳುತ್ತೇನೆ ಎನ್ನುವ ಧಾಟಿಯಲ್ಲಿ ನನ್ನನ್ನು ಅಲ್ಲೇ ಬಿಟ್ಟು ಕ್ಯಾಂಟೀನಿನ್ನತ್ತ ದೌಡಾಯಿಸಿದ್ದ.

ಎರಡು ವಾರಗಳವರೆಗೆ ಮಾದೇಸ ಎಲ್ಲೂ ಕಾಣಿಸಿಕೊಳ್ಳಲಿಲ್ಲ. ತರಗತಿಯಲ್ಲೂ ಗೈರುಹಾಜರಿ. ಅವನ ನೆಚ್ಚಿನ ಕ್ಯಾಂಟೀನ್ ಆಗಲೀ, ಕ್ರಿಕೆಟ್ ಮೈದಾನವಾಗಲೀ ಅವನಿಲ್ಲದೆ ಬಿಕೋ ಅನ್ನುತ್ತಿತ್ತು. ಅವನ ಗೆಳೆಯನೊಬ್ಬನನ್ನು ವಿಚಾರಿಸಿದೆ. "ಪಥಾ ನಹೀ ಸರ್. ಯಾವ್ದೋ ಸ್ಮಾಲ್ ಬುಕ್ ಪಕಡ್ಕೆ ಓದ್ತಾ ರೆಹತಾ ಹೈ. ಅದರಲ್ಲೇ ಕುಚ್ ಕುಚ್ ಲಿಖ್ತಾ ಭೀ ಹೈ. ಏಕ್ ದಂ ರವೀಂದ್ರನಾಥ ಟಾಗೋರ್ ತರ ಆಗಿಬಿಟ್ಟಿದಾನೆ ಸರ್". ಅವನು ಹೇಳಿದ ವಿಚಾರ ಸ್ವಲ್ಪ ಗಂಭೀರವಾದಂತ್ತಿತ್ತು. ಬರುವ ಭಾನುವಾರ ಅವನ ಹಾಸ್ಟೆಲ್ಲಿನ ರೂಮಿಗೆ ಹೋಗಿ ನೋಡಿ ಬರೋಣವೆಂದು ತೀರ್ಮಾನಿಸಿದ್ದೆ. ಆದರೆ ಅಲ್ಲಿಯವರೆಗೂ ಕಾಯುವ ಆವಶ್ಯಕತೆಯೇ ಬರಲಿಲ್ಲ. ಮರುದಿನವೇ ಕ್ಲಾಸಿನಲ್ಲಿ ಮಾದೇಸ ಹಾಜರಾಗಿದ್ದ. ಅಪರೂಪಕ್ಕೆ ಅಂದು ಮುಂದಿನ ಬೆಂಚಿನಲ್ಲೇ ಆಸೀನನಾಗಿದ್ದ ಕೂಡ!

ಅವನನ್ನು ನೋಡುತ್ತಿದ್ದಂತೆಯೇ ವಿಚಾರಿಸಬೇಕೆಂದಿದ್ದರೂ ಹಾಗೆಯೇ ಪಾಠ ಮುಂದುವರೆಸಿದ್ದೆ. ಅವನೂ ನಾನವನನ್ನು ವಿಚಾರಿಸಲೆಂದೇ ಕಾದಿರುವಂತಿತ್ತು. ಇಬ್ಬರ ನಡುವೆ ಅದೇನೋ ವಿಚಿತ್ರವಾದ ಮೌನ. ಅದೇನೋ ತವಕ. ಕಡೆಗೆ ತರಗತಿ ಮುಗಿಯಲು ಕೆಲವು ನಿಮಿಷಗಳಿದ್ದವು ಅಷ್ಟೆ. ನನ್ನೊಳಗೆ ಭುಗಿಲೇಳುತ್ತಿದ್ದ ಕುತೂಹಲವನ್ನೆಲ್ಲ ಹತೋಟಿಯಲ್ಲಿ ತಂದುಕೊಂಡು ಬಹಳ ಸ್ವಾಭಾವಿಕವಾಗಿ –" ಮಾದೇಸ, ಯಾಕೆ ಕ್ಲಾಸಿಗೆ ಎರಡು ವಾರ ಬರಲಿಲ್ಲ. ಹುಷಾರಿರಲಿಲ್ವ?" ಎಂದು ಔಪಚಾರಿಕವಾಗಿ ವಿಚಾರಿಸಿದ್ದೆ.

ಮುಂಬೈನಲ್ಲಿ ಲೋಕಲ್ ಟ್ರೇನು ಬರುವದನ್ನೇ ಕಾಯುತ್ತಿದ್ದು, ಅದು

ಬಂದೊಡನೆಯೇ ಅದರ ಒಳಕ್ಕೆ ನೂಕುನುಗ್ಗಲಾಗುವ ಜನರಂತೆಯೇ ಮಾದೇಸ ಕೂಡ ಈ ಪ್ರಶ್ನೆಯನ್ನೇ ಎದುರು ನೋಡುತ್ತಿದ್ದನೋ ಏನೋ, ಪಕ್ಕದ ಕ್ಲಾಸಿಗೂ ಕೇಳುವಂತೆ ಜೋರಾಗಿ ಹೇಳುತ್ತಿದ್ದ. "ಸಾರ್, ನಾನು 'ಕೆ.ಮಾದೇಸನ ಕಗ್ಗ' ಬರೀತಿದ್ದೆ ಸಾರ್. ನೀವು ನೋ ಅಂದ್ರೂ ಪರವಾಗಿಲ್ಲ, ಒಂದೇ ಒಂದು ಸ್ಯಾಂಪಲ್ ಓದ್ತೀನಿ, ಕೇಳಿ ಸಾರ್" ಎಂದೆನ್ನುತ್ತ ನನ್ನ ಉತ್ತರಕ್ಕೂ ಕಾಯದೆ ಪ್ಯಾಂಟಿನ ಜೇಬಿನಿಂದ ಒಂದು ಚೀಟಿ ತೆಗೆದು ತನ್ನ ಕಗ್ಗವನ್ನು ಇಡಿಯ ಕಾಲೇಜಿಗೆ ಕೇಳುವ ದನಿಯಲ್ಲಿ ರಾಗವಾಗಿ ಮಂಡಿಸಿದ್ದ.

ಬಾಯ್ ಫ್ರೆಂಡು ಇಲ್ಲದಿರೆ ಗರ್ಲು ಗರ್ಲೇ ಅಲ್ಲ ।
ಬಾಯಿ ಬಾಯೇ ಅಲ್ಲ, ಗರ್ಲ್ ಒಬ್ಬಳಿರದೆ ॥
ಸಾಯುವಾ ಟೈಮಿನಲು ಹೂ ಈಸ್ ಹೂ ಇಗೆ ಉಂಟು ? ।
ಮಾಯಯಾ ಗೇಮ್ ಇದುವೆ – ಕೆ.ಮಾದೇಸ ॥

ಇಡಿಯ ತರಗತಿ ಸ್ಥಬ್ಧವಾಗಿತ್ತು. ಇವನಿಗೆ ಏನೆಂದು ಹೇಳಬೇಕೆಂದು ಪದಗಳನ್ನು ಹುಡುಕುತ್ತಿದ್ದಾಗಲೇ ಮಾದೇಸ ತನ್ನ ಕಗ್ಗದ ಸಾಲುಗಳನ್ನು ನಿಲ್ಲಿಸಿ, ಅದೇ ಏದುಸಿರಿನಲ್ಲಿ ಮಾತನ್ನು ಮುಂದುವರೆಸಿದ್ದ –"ಸಾರ್, ಇದು ಒರಿಜಿನಲ್ ಕಾಂಪೊಸಿಷನ್ನು. ಡಿ.ವಿ.ಜಿ ಅವರ ಕಗ್ಗದ ಬುಕ್ನಲ್ಲೆಲ್ಲೂ ಬಾಯ್ ಮತ್ತು ಗರ್ಲ್ ಅನ್ನು ಫಿಲಾಸಫೀನೆ ಇಲ್ಲ ಸಾರ್. ಇವತ್ತಿನ ಜನಕ್ಕೆ ಏನ್ ಅರ್ಥ ಆಗುತ್ತೊ ಅದನ್ನೇ ಅರ್ಥ ಮಾಡ್ಕೊಂಡು ಅವರಿಗ್ ಅರ್ಥ ಹಾಗೋ ಹಾಗ್ ನಾನಿಲ್ ಅರ್ಥ ಮಾಡ್ಸಿದೀನಿ ಸಾರ್. ಇನ್ನು ನೀವ್ ಹೇಳಿದ್ ಭಾವ. ಜಸ್ಟ್ ಒಂದು ಸಲ ಅಬ್ಸರ್ವ್ ಮಾಡಿ ಸಾರ್. ಫಸ್ಟ್ ಟೂ ಲೈನ್ಸಿನಲ್ಲಿ ಇರೋ ಬಾಯ್–ಗರ್ಲ್ ಸಂಬಂಧಕ್ಕೂ ಹಾಗೂ ತರ್ಡ್ ಎಂಡ್ ಫೋರ್ತ್ ಲೈನ್ಸಿನಲ್ಲಿರೋ ಡೆತ್ ಎಂಡ್ ಮಾಯೆಯ ರಿಲೇಷನ್ಶಿಪ್ಗೂ ಅದೆಂಥ ಮಜಬೂತಾದ ಕನೆಕ್ಷನ್ ಕೊಟ್ಟಿದೀನಿ ನೋಡಿ ಸಾರ್. ಇದನ್ನೇ ಇಂಗ್ಲೀಷ್ ಲಿಟರೇಚರ್ನಲ್ಲಿ ಸಿಮಿಲಿ ಆರ್ ಮೆಟಫರ್ ಎಂತ ಅದೇನೋ ಕರೀತಾರಂತೆ ಸಾರ್. ಕನ್ನಡ ಹಾಗೂ ಇಂಗ್ಲೀಷು ಎರಡೂ ಸರಿಯಾಗಿ ಬರದೇ ಇರೋ ನನ್ನ ಭಾವನಿಗೆ ಇದನ್ನ ಓದಿದಾಗ ಅವರು ಇದರಲ್ಲಿರೋ ಭಾವ ಕಂಡು ಬಹಳ ಭಾವ ಉಕ್ಕಿ ಬಹಳ ಸೆಂಟಿಮೆಂಟಲ್ ಆಗಿ ಸಕತ್ ಅಳಕ್ಕೇ ಶುರು ಮಾಡ್ಬಿಟ್ರು ಸಾರ್".

ಮಾದೇಸನ ಕಣ್ಣುಗಳೂ ಭಾವಪರವಶವಾಗಿದ್ದವು. ಸ್ವಲ್ಪ ಸುಧಾರಿಸಿಕೊಂಡು ಮಾತನ್ನು ಮುಂದುವರೆಸಿದ್ದ "ಇನ್ನು, ಕಡೆಯದಾಗಿ ನೀವು ಹೇಳಿದ ಆ ಛಂದಸ್ಸು. ಇದು ಬಿಗಿನಿಂಗ್ನಲ್ಲಿ ತೊಂದ್ರೆ ಕೊಟ್ರೂ ಕಡೇನಲ್ಲಿ ಕ್ಯಾಪ್ಚರ್ ಮಾಡ್ಕೊಂಡೆ. ಈಗ ನೋಡಿ ಸಾರ್, ನನ್ನ ಕಗ್ಗದಲ್ಲೂ ಆದಿಪ್ರಾಸ ಇದೆ. ಅಂದರೆ, ಎವರಿ ಲೈನಿನ ಎವರಿ ಸೆಕೆಂಡ್ ಲೆಟರ್ "ಯ" ಅನ್ನೋ ಅಕ್ಷರಾನೇ ಆಗಿದೆ. ಇನ್ನು ಫಸ್ಟ್ ಲೈನು ದೀರ್ಘದಲ್ಲಿ ಸ್ಟಾರ್ಟ್ ಆಗಿರೋದ್ರಿಂದ ಎವರಿ ಅರ್ಧ ಲೈನು ದೀರ್ಘದಿಂದಲೇ ಶುರು ಆಗತ್ತೆ. ಇನ್ನು ಲಾಸ್ಟ್ ಲೈನಿನಲ್ಲಿ ಕರೆಕ್ಟಾಗಿ ಹದಿನಾರು ಮಾತ್ರೆಗಳು ಮಾತ್ರ ಇದೆ". ಮಾತನ್ನು ಸ್ವಲ್ಪ ನಿಲ್ಲಿಸಿದ ಹಾಗೆ ನಟಿಸುತ್ತ, ಈ ವಿಚಾರ ನನಗೆ ಅರ್ಥವಾಯಿತೋ ಇಲ್ಲವೋ ಎಂಬಂತೆ ಮುಗುಳ್ನಗುತ್ತ ಮುಂದುವರಿಸಿದ. "ಮಾತ್ರೆ ಅಂದರೆ, ಪಿಲ್ಸ್ ಅಲ್ಲ ಸಾರ್. ಹುಶಾರಾಗೋದಕ್ಕೆ ತಿನ್ನೋದಲ್ಲ. ಹುಶಾರಾಗಿ ಪೊಯಟ್ರೀನಲ್ಲಿ ಬಳಸೋದಕ್ಕೆ ಇರೋ ರೂಲು. ಹಾಗೇನೆ, ಇನ್ನೊಂದು ಸ್ಪೆಷಾಲಿಟಿ..." ಎಂದೆನ್ನುತ್ತ ಇನ್ನೂ ಏನನ್ನೋ ಹೇಳಲು ಹೊರಟಿದ್ದ ಮಾದೇಸನ ಮಾತುಗಳನ್ನು ತರಗತಿ ಮುಗಿದ ಸೂಚಕವಾದ ಗಂಟೆಯ ಸದ್ದು ನಿಲ್ಲಿಸಿತ್ತು. ತರಗತಿಯ ಹುಡುಗರೆಲ್ಲ ಕ್ಲಾಸಿನಿಂದ

ಹೊರಕ್ಕೆ ಹೋದ ಮೇಲೆ ಅಲ್ಲಿ ಉಳಿದಿದ್ದವರು ನಾವಿಬ್ಬರು ಮಾತ್ರ.

"ಸಾರ್, ಒಂದ್ನಿಮಿಷ ಕೂರಿ. ನಿಮ್ಮ ಹತ್ತಿರ ಬಹಳ ಮುಖ್ಯವಾದ ವಿಚಾರ ಒಂದನ್ನ ಡಿಸ್ಕಸ್ ಮಾಡಬೇಕು. ನಿಮ್ಮ ವೆಲ್ ವಿಷಸ್ಸು, ಸಜ್ಜೆಶನ್ಸೂ ಹಾಗೂ ಮುಖ್ಯವಾಗಿ ಆಶೀರ್ವಾದ ಬೇಕು ಸಾರ್. ವಿಧಿಯಿಲ್ಲದೆ ಅವನ ಮುಂದಿನ ಬೆಂಚಿನ ಮೇಲೆ ಕುಳಿತೆ. ನಾನು ಕುಳಿತದ್ದನ್ನು ಕಂಡು ಮಾದೇಸ ಅದೇನನ್ನೋ ಕೂಲಂಕುಶವಾಗಿ ತುಲನೆ ಮಾಡುತ್ತಿರುವಂತೆ ಕ್ಲಾಸಿನ ಮೂಲೆಯೊಂದರಲ್ಲಿ ಮನೆ ಮಾಡಿದ್ದ ಜೇಡರ ಬಲೆಯನ್ನೇ ವೀಕ್ಷಿಸುತ್ತ ಬಹಳ ನಿಧಾನವಾಗಿ ತನ್ನ ಮಾತನ್ನ ಶುರು ಮಾಡಿದ. "ಸಾರ್, ನೀವು ನನಗೆ ಕಗ್ಗವನ್ನು ಇನ್ಟ್ರಡ್ಯೂಸ್ ಮಾಡಿದ ಮೇಲೆ, ನಾನ್ ಅದನ್ನ ಟೆನ್ ಟೈಮ್ಸ್ ಓದಿದೀನಿ ಸಾರ್. ಅದು ಬಹಳ ಡಿಫಿಕಲ್ಟು. ಅದೂ ಅಲ್ದೆ, ಅದು ಚೌಪದಿ. ಒರಿಜಿನಲಿ ಫ್ರಂ ಇಂಡಿಯಾ. ಆದ್ರೆ ಈ ಮೂರು ಸಾಲಿನ ಪದ್ಯ ಇದೆಯಲ್ಲಾ ಸಾರ್, ಸರ್ವಜ್ಞನ ಪುಸ್ತಕ, ಅದು ಬಹಳ ಸಿಂಪಲ್ಲು. ಅದೂ ಅಲ್ದೆ ಅದು ಒರಿಜಿನಲಿ ಫ್ರಂ ಇಂಗ್ಲೆಂಡು." ನನಗೆ ಇವನ ಈ ಸಿದ್ಧಾಂತ ಎಲ್ಲಿಂದ ಬಂತು ಎಂದು ತಿಳಿಯುವ ಆಸೆ. ಹಾಗಾಗಿ ಪ್ರಶ್ನಿಸಿದ್ದೆ" ಅದು ಹೇಗೆ ಹೇಳ್ತೀಯ ತ್ರಿಪದಿ ಆಂಗ್ಲ ಮೂಲದ್ದು ಅಂತ?". ಮಾದೇಸ ಈ ಪ್ರಶ್ನೆಯನ್ನು ನಿರೀಕ್ಷಿಸುತ್ತಿದ್ದನೇನೋ ಎನ್ನುವ ಹಾಗೆ ತನ್ನದೇ ಆದ ಸ್ಟೈಲಿನಲ್ಲಿ ಮುಂದುವರೆಸಿದ "ಒಳ್ಳೆ ಪ್ರಶ್ನೆ ಸಾರ್. ಈಗ ನೋಡಿ, ತ್ರಿಪದಿ ಅಂದ್ರೆ, ತ್ರೀ+ಪದಿ ಅಂತ. ಪದಿ ಅನ್ನೋ ಪದಾನ ನಿಘಂಟುವಿನಲ್ಲಿ ರಿಸರ್ಚ್ ಮಾಡ್ದಾಗ ತಿಳೀತು. ಪದಿ ಅಂದ್ರೆ ಮೂಲ ಅಥವಾ ವಾಸಸ್ಥಳ ಅಂತ ಅರ್ಥ. "ತ್ರೀ"ಅನ್ನೋ ಪದದ ಮೂಲ ಇಂಗ್ಲೀಷು. ಪದ್ಯದಲ್ಲಿ ಇರೋದೂ ಓನ್ಲಿ ತ್ರೀ ಲೈನ್ಸು ಮಾತ್ರ. ಹೆಸರಲ್ಲೂ "ತ್ರೀ" ಬಂದಿರೋದ್ರಿಂದ ಇದು ಡೆಫಿನೆಟ್ಲಿ ಇಂಗ್ಲಿಷ್ ಮೂಲದ್ದೇ ಅನ್ನೋದ್ರಲ್ಲಿ ಸಾಸಿವೆಯಷ್ಟೂ ನನಗೆ ಡೌಟೇ ಇಲ್ಲ ಸಾರ್. ಅದಕ್ಕೇ ನಾನೀಗ ಒಂದು ಡಿಸೈಡ್ ಮಾಡಿದೀನಿ ಸಾರ್. ಇನ್ನು ಮೇಲೆ ಇಂಗ್ಲೀಷ್ ಮೂಲದ ಬರೀ ತ್ರೀ ಲೈನ್ಸ್ ಪೊಯಿಟ್ರಿ ಮಾತ್ರಾನೇ ಬರೆದು ಒಂದು ದೊಡ್ಡ ತ್ರೀ ಹಂಡ್ರೆಡ್ ಪೇಜಸ್ ಬುಕ್ ಮಾಡ್ಬೇಕು ಅಂತ. ಅದಕ್ಕೆ ತಮ್ಮ ಗೈಡೆನ್ಸು ಬೇಕೇ ಬೇಕು ಸಾರ್. ಪ್ಲೀಸ್, ಇಲ್ಲ ಅಂತ ಹೇಳಿ ನನ್ನ ಈ ರೈಟಿಂಗ್ ಟ್ಯಾಲೆಂಟ್ನ ಬಡ್ಡಿನಲ್ಲೇ ಕಿತ್ತುಬಿಡಬೇಡಿ ಸಾರ್".

ಮಾತನ್ನೆಲ್ಲ ಮುಗಿಸಿ ನನ್ನ ಉತ್ತರಕ್ಕಾಗಿ ಹಾತೊರೆಯುತ್ತಿದ್ದ ಮಾದೇಸ. ವರ್ಷದ ಮಳೆಯೆಲ್ಲ ಒಮ್ಮೆಗೇ ಸುರಿದು ನಿಂತಂತಾಗಿತ್ತು. ಇವನಿಗೆ ಏನು ಹೇಳಿದರೂ ಕಷ್ಟ. ಮುಂದುವರೆಯಲು ಹೇಳಿದರೆ ಕನ್ನಡದ ಕೊಲೆಯ ಜೊತೆಯೇ ಅವನ ಓದೂ ನಿಂತೀತೆಂಬ ಭಯ. ಎಲ್ಲ ಯೋಚಿಸಿ, ಅವನಿಗೆ ಇಷ್ಟವೂ ಆಗುವ, ಕನ್ನಡಕ್ಕೆ ನಷ್ಟವೂ ಆಗದ ಮಾತನಾಡಿದ್ದೆ –"ಮಾದೇಸ. ನಿನ್ನ ಈ ಕಾವ್ಯ ಪ್ರತಿಭೆ ಕಂಡು ಮಾತೇ ಬರ್ತಿಲ್ಲ. ಆದರೆ, ಈ ವರ್ಷ ನಿನ್ನ ಓದಿನ ಬಹು ದೊಡ್ಡ ಹಂತ. ಅದನ್ನು ಮೊದಲು ನೀನು ಪಾರಾಗಬೇಕು. ಕತೆ, ಕಾವ್ಯ ಎಲ್ಲ ಆಮೇಲೆ. ಸಮಯ ಇದ್ದಾಗ. ಏನಂತೀಯ?".

ಮಾದೇಸನಿಗೂ ಈ ಎರಡು ವಾರಗಳ ಕಾವ್ಯ ಸೃಷ್ಟಿ ಸಾಕಷ್ಟು ತಲೆ ಕೆಡಿಸಿರಬೇಕು ಅಂತ ಅನ್ನಿಸುತ್ತೆ. ನಾನು ಹೇಳಿದ ಮಾತು ಈ ಕ್ಷಣಕ್ಕೆ ಸರಿ ಎಂದು ಅನ್ನಿಸಿಯೋ ಅಥವಾ ತನ್ನ ಇನ್ನೂ ಮುಗಿಯದ ಕಡೆಯ ವರ್ಷದ ಪ್ರಾಜೆಕ್ಟ್ ನೆನಪಾಗಿ ಭಯವಾಗಿಯೋ ಅಥವಾ "ತ್ರೀ" ಪದಿಯ ಅದಾವುದೋ ಸಾಲು ಹೊಳೆದೋ, ನನ್ನನು ಕಡೆಗೂ ಬೀಳ್ಕೊಟ್ಟು ತನ್ನ ಹಾಸ್ಟೆಲ್ಲಿನ ಕಡೆ ಹೊರಟುಬಿಟ್ಟ. ಸಧ್ಯಕ್ಕೆ ಸರ್ವಜ್ಞನಾದರೂ ಬಚಾವಾದನಲ್ಲಾ ಎಂಬ ಕ್ಷಣಿಕ ತೃಪ್ತಿಯೊಂದಿಗೆ ನಾನೂ ಮನೆಯತ್ತ ಹೆಜ್ಜೆ ಹಾಕಿದ್ದೆ. ■

# ಸ್ವಭಾವ

● ವಸುಮತಿ ಉಡುಪ

ಒಂದು ಜನಪದ ಕತೆ, ಬಹುಶಃ ತಮಗೆಲ್ಲಾ ಗೊತ್ತಿರುವಂತಾದ್ದು, ನನ್ನ ನೆನಪಿನ ಮೇಲ್ಪದರಕ್ಕೆ ಬರಲು ಒಂದು ಸಕಾರಣ ಇದೆ. ಮನುಷ್ಯರ ಸ್ವಭಾವ ಹೇಗೆಲ್ಲಾ ಇರುತ್ತದೆ ಎನ್ನುವುದಕ್ಕೆ ಈ ಪ್ರಸಂಗ ಒಂದು ಉದಾಹರಣೆ. ಅರಿಷಡ್ವರ್ಗಗಳಲ್ಲಿ ಯಾವುದಕ್ಕೆ ಪ್ರಥಮಸ್ಥಾನ ಅನ್ನುವುದಕ್ಕೂ ಈ ಉದಾಹರಣೆ ಸೂಕ್ತವಾಗಬಹುದೇನೋ. ನನ್ನ ಪರಮಾಪ್ತೆಯೊಬ್ಬಳು ಖಾಸಗಿ ಸಹಭಾಗಿತ್ವದ ಹಣಕಾಸು ಸಂಸ್ಥೆಯೊಂದರಲ್ಲಿ ಹೆಚ್ಚಿನ ಬಡ್ಡಿಯ ಪ್ರಲೋಭನೆಗೆ ಒಂದಿಷ್ಟು ಹಣ ಇಟ್ಟಿದ್ದಳು. ನೀವು ಈಗಾಗಲೇ ಊಹಿಸುತ್ತಿರುವಂತೆ ಒಂದು ದಿನ ಆ ಸಂಸ್ಥೆ ಠೇವಣಿದಾರರಿಗೆ ಹಣ ಕೊಡಲಾಗದೆ ಕೈಯೆತ್ತಿ ಬಿಟ್ಟಿತು. ಕೊಟ್ಟ ಸಾಲ ವಸೂಲಾಗದೆ ಸಂಸ್ಥೆಯ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತು ಎನ್ನುವುದು ಸಂಸ್ಥೆ ನೀಡಿದ ಕಾರಣ. ಏನೇ ಇರಲಿ, ನಾನಾ ಉದ್ದೇಶಗಳಿಂದ ಅಲ್ಲಿ ಸಣ್ಣ, ದೊಡ್ಡ ಮೊತ್ತದ ಹಣ ಇಟ್ಟವರು ಕಂಗಾಲಾಗಿ ಹೋದರು. 'ನ್ಯಾಯ ಕೊಡಿಸಿ' ಎನ್ನುವ ಪ್ರತಿಭಟನೆ ನಡೆಯಿತು. ನೂರಾರು ಜನ ದೂರದರ್ಶನದ ಕ್ಯಾಮೆರಾ ಎದುರು ಕಣ್ಣೀರ್ಗರೆದರು. ಪಾಪದ ಗೆಳತಿ ಅದೆಷ್ಟು ದುಡ್ಡು ಕಳೆದುಕೊಂಡು ಕೊರಗುತ್ತಿದ್ದಾಳೋ, ಮರುಗುತ್ತಿದ್ದಾಳೋ, ಅಕಟಕಟಾ ಎಂದು ಮರುಗಿ ನಾನೂ ನೊಂದೆ. ನಾವೂ ಅಲ್ಲೊಂದಿಷ್ಟು ಹಣವನ್ನು ಠೇವಣಿಯಾಗಿರಿಸಿ ದುಡ್ಡಿನಿಂದ ದುಡ್ಡನ್ನು ಬೆಳೆಯಲಿ ಎನ್ನುವ ಸದಾಶಯದಿಂದ ಹಿಂದೊಮ್ಮೆ ಅವಳು ನನ್ನ ಕಿವಿ ಕಚ್ಚಿದ್ದಿತ್ತು. ಇಂತಾ ಆಪ್ತೆಗೆ ಸಹಾನುಭೂತಿ ತೋರಿಸುವುದು ಗೆಳತಿಯಾಗಿ ನನ್ನ ಕರ್ತವ್ಯ ಅಂದುಕೊಂಡು ಅವಳಿಗೆ ಫೋನಿಸಿದೆ. ಪ್ರತ್ಯುತ್ತರಿಸಿದವಳ ದನಿಯಲ್ಲಿ ನನ್ನ ನಿರೀಕ್ಷೆಯ ಆತಂಕ ಕಾಣದೆ ನನಗೆ ಸೋಜಿಗ.

"ಎಷ್ಟು ದುಡ್ಡು ಇಟ್ಟಿದ್ದೆ?" ನೇರವಾಗಿ ಕೇಳಿದೆ. ವರ್ಷಾನುಗಟ್ಟಲೆಯ ಒಡನಾಟದಿಂದ ಆ ಸಲುಗೆ ನನಗೆ ಇದ್ದೇ ಇತ್ತು.

"ಎರಡು ಲಕ್ಷ" ಅಂದಳು. ಝುಗ್ ಅಂತು ನನ್ನ ಎದೆ. ಎರಡು ಲಕ್ಷ ಅಂದರೆ ಕಡಿಮೆ ಮೊತ್ತವೇನಲ್ಲವಲ್ಲ?

"ಅಯ್ಯೋ, ಅನ್ಯಾಯ ಕಣೇ. ಹೀಗಾಗ್ಬಾರ್ದಿತ್ತು. ಉಂಡ್ಹಾಗಲ್ಲ, ತಿಂದ್ಹಾಗಲ್ಲ..." ಅನುತಾಪ ತೋರಿಸಿದೆ.

"ಹೋಗ್ಲಿ ಬಿಡು, ಏನ್ಮಾಡೋಕಾಗುತ್ತೆ? ಎಲ್ರಿಗೂ ಆಗಿದ್ದು ನಮಗೂ ಆಯ್ತು. ಯೋಗ ಇತ್ತೂಂತಾದ್ರೆ ನಮ್ಮ ದುಡ್ಡು ನಮಗೆ ವಾಪಸ್ ಸಿಗುತ್ತೆ" ಅಂದಳು.

"ಪರ್ವಾಗಿಲ್ಲ ಕಣೇ ನೀನು, ದುಡ್ಡು ಹೋಯ್ತು ಅಂತ ಎದೆ ಒಡ್ಕಂಡಿದ್ದಿ ಅಂದ್ಕೊಂಡಿದ್ರೆ ಆರಾಮಾಗಿದ್ದಿ ಮಾರಾಯ್ತೀ. ಗಟ್ಟಿ ಮನಸ್ಸು ನಿಂದು. ನನ್ನಂತೋಳಾಗಿದ್ರೆ.." ಅರ್ಧೋಕ್ತಿಯಲ್ಲಿ ನಿಲ್ಲಿಸಿ ಉಗುಳು ನುಂಗಿಕೊಂಡೆ. ಗಟ್ಟಿ ಮನಸ್ಸಿನ ಗುಟ್ಟು ಒಡೆಯಿತು. ಅವಳ ನೆರೆಮನೆಯವರು ಇಪ್ಪತ್ತು ಲಕ್ಷದ ದೊಡ್ಡ ಗಂಟು ಕಳೆದುಕೊಂಡರಂತೆ. ತಾನು ಕಡಿಮೆ ಕಳೆದುಕೊಂಡಿದ್ದಕ್ಕೋ, ಅವರು ಜಾಸ್ತಿ ಕಳೆದುಕೊಂಡಿದ್ದಕ್ಕೋ, ಅಂತೂ ಅವಳಿಗೆ ಸಮಾಧಾನ. ಮನಸ್ಸು ಅನ್ನುವುದು ಸಮಾಧಾನ ಕಂಡುಕೊಳ್ಳಲು ಏನೇನೆಲ್ಲಾ

ಕಾರಣ ಕಂಡುಕೊಳ್ಳುತ್ತದೆ ನೋಡಿ.

ಈಗ ಜನಪದ ಕತೆಗೆ ಬರೋಣ. ಹೀಗೇ ಅಕ್ಕಪಕ್ಕದ ಮನೆಯವರು. ಪ್ರತಿಯೊಂದರಲ್ಲೂ ಪೈಪೋಟಿ ಮಾಡುತ್ತಿದ್ದವರು. ಒಬ್ಬಾತ ತಪಸ್ಸು ಮಾಡಿ ದೇವರನ್ನು ಒಲಿಸಿಕೊಂಡು ವರ ಪಡೆಯಲು ಹೊರಟಿದ್ದಾನೆನ್ನುವ ವಿಷಯ ಗೊತ್ತಾಗಿ ಇನ್ನೊಬ್ಬಾತನೂ 'ತಾನೇನು ಕಡಿಮೆ..' ಎಂದು ತಪಸ್ಸಿಗೆ ಹೊರಟ. ಮೊದಲನೆಯವನ ತಪಸ್ಸು ಫಲಿಸಿ ದೇವರು ಪ್ರತ್ಯಕ್ಷನಾದ. 'ವತ್ಸಾ, ಏನು ವರ ಬೇಕೋ ಕೇಳು' ಅಂದ. ಪಕ್ಕದ ಮನೆಯವನ ಮೇಲೆ ಇವನಿಗಿದ್ದ ಮಾತ್ಸರ್ಯ ವರ ಕೇಳಿಸಿತು,

'ಪ್ರಭೋ, ನಮ್ಮ ನೆರೆಮನೆಯಾತನ ಒಂದು ಕಣ್ಣು ಕುರುಡಾಗಲಿ' ಎಂದು ವರ ಕೇಳಿದ.

'ತಥಾಸ್ತು' ಅಂದ ದೇವರು ಮರುನಿಮಿಷದಲ್ಲಿ ಎರಡನೆಯವನ ಎದುರು ಪ್ರತ್ಯಕ್ಷನಾದ.

"ಕಂದಾ, ಏನು ವರ ಬೇಕಪ್ಪಾ? ಕೇಳು.." ಅಂದ. ಇವನು ಕೇಳಿದ್ದೇನು?

"ತಂದೇ, ನಮ್ಮ ನೆರೆಮನೆಯವನು ಏನು ಕೇಳಿದ್ದಾನೋ ಅದರ ಎರಡರಷ್ಟು ನನಗೆ ಕೊಡು" ಅಂದ. ಪರಿಣಾಮ ಬಿಡಿಸಿ ಹೇಳಬೇಕಾಗಿಲ್ಲ ತಾನೇ?

ಓದುಗ ಮಿತ್ರರೇ, ಮೇಲಿನೆರಡು ಪ್ರಸಂಗಗಳೂ ಒಂದಕ್ಕೊಂದು ತಾಳೆಯಾಗುತ್ತವೆಯೇ? ನನ್ನ ನೆನಪಿನಾಳದಿಂದ ತೇಲಿ ಬಂದ ಕತೆಯಲ್ಲಿ ಪರಾಮೋಷಿಯಿಂದ ಏನಾದರೂ ತಪ್ಪು ನುಸುಳಿದೆಯೇ? ಹಾಗೇನಾದರೂ ಆಗಿದ್ದಲ್ಲಿ ಕ್ಷಮಿಸಿ ಎಂದು ಕೇಳಿಕೊಳ್ಳುತ್ತಾ.. ■

---




**ಓನರ್ ಆ ನಾಯಿಯನ್ನು ಮನೆಮುಂದೆ ಕಟ್ಟೋಬದ್ಲು 'ಬ್ಯಾಂಕ್ ಲಾಕರ್'ನಲ್ಲಿ ಇಟ್ಟಿದ್ರೆ ಆಗಿರೋದು!**

# 'ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಬ್ಯಾನ್‌ಕ್ವೆಟ್ಟು'

● ಇ.ಆರ್. ರಾಮಚಂದ್ರನ್

ಮುಂಚೆಯೆಲ್ಲಾ ಒಂದು ಅಜ್ಜಿ ಮನೆಯಲ್ಲಿದ್ದರೆ ಪ್ರತಿ ಭಾನುವಾರ ಸುಮ್ಮನೆ ವೇಸ್ಟ್ ಆಗುವ ಬದಲು ಆಕೆಗೆ ಏನಾದರೂ ಸ್ಪೆಷಲ್ ಮಾಡುವ /ಹಮ್ಮಿಕೊಳ್ಳುವ ಆಸೆ ಇರೋದು. ನಾನು ತಿಂಡಿ ತೀರ್ಥದ ವಿಷಯ ಮಾತಾಡ್ತಿಲ್ಲಾ. ಅಜ್ಜಿಯರಿಗೆ ಪ್ರಿಯವಾದದನ್ನು ಹೇಳ್ತಿದೀನಿ. ಅಜ್ಜಿಯರಿಗೆ ದೂರದೃಷ್ಟಿಯಿಂದ ಮನೆಯಲ್ಲಿರುವರ ಆರೋಗ್ಯದ ವಿಷಯದಲ್ಲಿ ಒಂದು ಕಣ್ಣು ಇದ್ದೇ ಇರುತ್ತೆ. ಮೊಮ್ಮಗ ಒಂದು ತುತ್ತು ಕಡಿಮೆ ಊಟ ಮಾಡಿದ್ರೆ, ಅವನ ಹೊಟ್ಟೇಲಿ ಜಂತು ಹುಳುಗಳು ಒಂದು ಕಾಲೊನಿ ಮಾಡಿವೆ... .. ಬರೋ ಭಾನುವಾರ ಅಜ್ಜಿಯ ಹರಳೆ ಎಣ್ಣೆ ಸತತ ಪ್ರಹಾರದಿಂದ ಆ ಹುಳುಗಳ ಕಥೆ ಮುಗೀತು ಅಂತ ಅರ್ಥ.

ಕೂದ್ಲು ಬಾಚುವಾಗ ಸಿಕ್ಕು ಬಂತಾ? ಅಜ್ಜಿಯ ಮನಸಲ್ಲಿ ಆವಾಗ್ಲೇ ಪ್ಲಾನು. ಬರೋ ಭಾನುವಾರ ಸಿಕ್ಕು, ಹೊಟ್ಟುಗಳಿಗೆ ಮರಣ ಹೋಮ ಮಾಡಿ ಅದನ್ನು ಮನೆಯವರ ತಲೆಯಿಂದ ಓಡಿಸಬೇಕು ಎಂದು ಬಂದೇ ಬರುತ್ತೆ.

ಬೆಳಿಗ್ಗೆ ಹಾರ್ಲಿಕ್ಸ್ ಕೊಟ್ಟು ಮೊಮ್ಮಗನನ್ನು ಹೆದರಿಸಿ ಮಣೆಹಾಕಿ ಕೂಡಿಸಿ ಅವನ ಅಭ್ಯಂಗನ ಶುರು. ಹರಳೆ ಎಣ್ಣೆಯನ್ನು ಒಂದು ಬಟ್ಟಲಿನಲ್ಲಿ ಕಾಸಿ ತಲೆಗೆ ಹುಯ್ಯೋದು.... ತಪತಪನೆ ತಲೆ ಬಡಿಯುತ್ತಾ ಸುರಿಯುತ್ತಾ. ಅದು 'ಹೂಯ್ಯೋ ಹುಯ್ಯೋ ಮಳೆರಾಯ' ಆಗುವ ತನಕ ನಡೆಯುತ್ತೆ. ಅದು ಹಣೆಯಿಂದ ಬಾರ್ಡರ್ ಕ್ರಾಸ್ ಮಾಡಿ ಹುಬ್ಬಲ್ಲಿ ಐದು ನಿಮಿಷ ಜಾಲಾಡಿ ಯಾವಾಗ ಕಣ್ಣಿಗೆ ಜಾರಾಬಂಡೆಯ ಹಾಗಿ ಇಳಿಯುವುದಕ್ಕೇ ಶುರುವಾಯಿತೋ, ಮೊಮ್ಮಗನ ಕಣ್ಣಲ್ಲಿ ಭಯಂಕರ ಉರಿ ತಲೆ ಶೂಲೆ ಒಟ್ಟಿಗೆ ಬಂದು ಥರ್ಡ ಡಿಗ್ರೀ ಅಸಾಲ್ಟ್ ಅಂದ್ರೆ ಏನು ಅಂತ ಅರ್ಥವಾಗುವ ಸಮಯ. ಮುಂಚೆಯೇ ಕೆಂಪಾಗಿದ್ದ ಕಣ್ಣು ನೀಲಿ ಬಣ್ಣಕ್ಕೆ ತಿರುಗಿದಾಗ ಡಾ. ಮೋದಿ ಇದ್ದಿದ್ದರೆ ಅವರ ಶಿಬಿರಕ್ಕೆ ಓಡಿ ಹೋಗಿ ನನ್ನ ಕಣ್ಣನ್ನು ಕಾಪಾಡಿ, ಈ ಮನೆಯವರನ್ನು ನನ್ನ ಹತ್ತಿರ ಬಿಡಬೇಡಿ ಎಂದು ಅವನು ಗೋಗರಿಯಬಹುದಾಗಿತ್ತು.

ಒಂದು ಗಂಟೆ ಕಾದ ಮೇಲೆ ಅದೃಷ್ಟವಶಾತ್ ಅವನು ಕೆಮ್ಮಿದ್ದರಿಂದ ಅವನ ಕಡೆ ದೃಷ್ಟಿ ಬಿದ್ದು ಮುಂದಿನ ವಾರ ಕೆಮ್ಮಿಗೆ ಕಷಾಯ ಮೂರು ಹೊತ್ತು ಮೂರು ದಿನ ಕುಡಿಸಬೇಕು ಎಂದು ಇನ್ಸ್ಟಂಟ್ ಪ್ಲಾನ್ ಹಾಕಿದ ಅಜ್ಜಿ 'ನಿನಗೆ ನೀರು ಹಾಕಬೇಕಲ್ವೇನೋ.. ಮುಂಡೇದು ಬಾಯಿ ಬಿಟ್ಟು ಹೇಳ್ಬಾರ್ದಾ..' ಎಂದು ದರದರ ಎಳೆದುಕೊಂಡು ಅವನ ಅಕ್ಕನ್ನೋ ಅಣ್ಣನ್ನೋ ಜೊತೆಗೆ ಕರೆದುಕೊಂಡು ಹೋಗಿ ಹಂಡೆಯ ನೀರು ಗೇರುಸೊಪ್ಪದಲ್ಲಿ ಮಳೆಗಾಲದಲ್ಲಿ ಝುರೋ ಅಂತ ಬೀಳುತ್ತಲ್ಲಾ ಹಾಗೆ ಎರಚ್ತಾರೆ. ಅದು ತಮಿಳುನಾಡು/ ಕರ್ನಾಟಕದ ಬಾರ್ಡರ್ನಲ್ಲಿರುವ ಹೊಗೇನಕಲ್ಲಲ್ಲಿ ಬಿಸಿನೀರು ತಲೆ ಮೇಲೆ ಬೀಳುತ್ತಲ್ಲಾ ಹಾಗಿರುತ್ತೆ. ಎಕ್ಸಾಟ್ರ ಸ್ಪೀಡಿರುತ್ತೆ.

ಅಜ್ಜಿ ತೆಂಗಿನ ಚಿಪ್ಪಿನಲ್ಲಿಟ್ಟಿರುವ ಸೀಗೇಕಾಯಿ/ಚಿಗುರೇಪುಡಿ ಮಿಕ್ಸ್ಚರ್ ತಲೆಗೆ ಹಾಕಿ ಎರಡೂ ಕೈಯಿಂದ ಕುಟ್ಟಿ ಅಣ್ಣ ಸುರಿದ ಬಿಸಿ ಬಿಸಿ ನೀರು ಅಲ್ಲಿ ಬಿದ್ದಾಗ ಎಣ್ಣೆ/ಸೀಗೇಕಾಯಿ ಸಂಬಂಧ ಎಂದರೆ ಏನು ಅಂತ ಅವನಿಗೆ ಗೊತ್ತಾಗೋದು ಆಗಲೇ....ಎಣ್ಣೆ ಹೋಗಲ್ಲ.. ಸೀಗೇಕಾಯಿ ಬಿಡೊಲ್ಲ..

ಲೊಕೇಷನ್ ಅವನ ತಲೆ.... ಕಮಾಂಡರ್ ಇನ್ ಚೀಫ್, ಅಜ್ಜಿ. ಹೀಗೆ ತಲೆ ಬುರುಡೆಗೆ ಬಾಸುಂಡಿ ಬರೋ ಬಿಸಿ ನೀರು ಹಾಕಿ ಹಾಕಿ ಅಜ್ಜಿಯ ಹುಮ್ಮಸ್ಸು ಇಳಿಯುವ ತನಕ ಡಬಲ್ ಬ್ಯಾರೆಲ್ ಅಟಾಕ್. ಕೊನೆಗೆ ಅವನ ಕಣ್ಣು ಕಿತ್ತಲೆ ಹಣ್ಣಿನ ಬಣ್ಣಕ್ಕೆ ತಿರುಗಿದಾಗ, ಮೈ ಎಲ್ಲಾ ಬೆಂಗಳೂರಿನಲ್ಲಿ ರಾತ್ರಿ ಗೂಂಡಾಗಳು ಒಬ್ಬೇ ಸಿಕ್ಕ ಟೆಕ್ಕಿ ಅವನು ಕ್ರೆಡಿಟ್‌ಕಾರ್ಡು ಕೊಡದಿದ್ದರೆ ಬಾಸುಂಡೆ ಬರುವ ತನಕ ಹೊಡೀತಾರಲ್ಲಾ ಹಾಗೆ ಬಾಸುಂಡೆ ಬಂದ ಮೇಲೆ ಮೊಮ್ಮಗನನ್ನು ಬಿಟ್ಟು ಹೊರಗೆ ಬಾತ್ರೂಮಿನಿಂದ ಹೊರಗೆ ಹೋಗ್ತಾರೆ. ಅವನ ಸೋತು ಸತ್ತ ಕೂದಲು ಮೋರಿ ಉಜ್ಜಲು ಉಪಯೋಸುವ ಬ್ರಷ್ ತರಹ ತಲೆಯಮೇಲೆ ನಿಂತಿರುತ್ತೆ.

ಹೆಂಗಸರ ಕೇಶವೃದ್ಧಿಯ ಸಂಗತಿನೇ ಬೇರೆ. ಕೇಶವರ್ಧಿನಿ ಭೃಂಗಾಮಲಕ 50:50 ಮಿಶ್ರಿತ ಎಣ್ಣೆಯನ್ನು ಎಷ್ಟು ಬೇಕೋ ಅಷ್ಟು ಹಚ್ಚಿ ನೀಳವಾದ ಕೂದಲನ್ನು ದಂತದ ಬಾಚಣಿಗೆಯಿಂದ ಮತ್ತೆ ಮತ್ತೆ ಬಾಚಿ ಬಾಚಣಿಗೆಗೆ ಸಾಕಾದಾಗ, ಉಗುರು ಬೆಚ್ಚನ ನೀರು ಮಿಶ್ರಿತ ಸೀಗೇಕಾಯಿಯಿಂದ ಮತ್ತೆ ಮತ್ತೆ ಜಾಲಾಡಿಸಿ, ಸೊಂಪಾದ ಕೂದಲನ್ನು ಚೆನ್ನಾಗಿ ಒರೆಸಿ, ಸಾಂಬ್ರಾಣಿಯನ್ನು ಬುಟ್ಟಿಯೊಳಗೆ ಇಟ್ಟು ಬೆಂಕಿ ಹಚ್ಚಿ ಬುಟ್ಟಿಯ ಮೇಲೆ ಕೂದಲನ್ನು ಒಣಗಲು ಇಡುವರು. ಒಂದು ಕಡೆ ಕೂದಲು ಒಣಗುತ್ತಿದ್ದರೆ, ಸುರುಳು ಸರುಳಿಯಾಗಿ ಬಂದ ಹೊಗೆ ಮನೆಯೆಲ್ಲೆಲ್ಲಾ ಸುವಾಸನೆ ಹಬ್ಬುವುದು. ಇದು ಆಗಿನ ಕಾಲದ ರಾಯಲ್ ಟ್ರೀಟ್ಮೆಂಟು.

ಈಗೀಗ ಕೇಶಸಂಪತ್ತನ್ನು ಕಾಪಾಡುವ ರೀತಿನೇ ಬೇರೆಯಾಗಿದೆ. ಹಳೇದು ಎಲಿಮೆಂಟರಿ. ಈಗ ಪೂರ್ತಿ ಮಾಡರ್ನ್.

ಒಂದು ಸರ್ತಿ ನನ್ನ ಫ್ರೆಂಡಿನ ಮನೆಗೆ ಏನೋ ಕೆಲಸಕ್ಕೆ ಹೋಗಿದ್ದೆ. ಬೆಳ್ಳಂಬೆಳಿಗ್ಗೆ ಅಡುಗೆ ಮನೆಯಿಂದ ಒಳ್ಳೆ ವಾಸನೆ ಬಂತು. ಭರ್ಜರಿ ಬ್ರೇಕ್ಫಾಸ್ಟ್‌ಗೆ ತಯಾರಿ ನಡೀತಿದೆ... ಒಳ್ಳೆ ಸಮಯಕ್ಕೆ ಬಂದೆ ಎಂದು ಕೂತೆ. ಪಕ್ಕದಲ್ಲೇ ಅವನು ರೋಗ ಬಡಿದವನಂತೆ ಕೂತಿದ್ದ.

ಅವನ ಹೆಂಡತಿ ಅಡುಗೆ ಮನೆಯಿಂದಲೇ ನನ್ನ ಹೆಂಡತಿಯ ಕುಶಲವನ್ನು ವಿಚಾರಿಸಿದಳು. ನಮ್ಮಿಬ್ಬಿಗೂ ಕಾಫಿ ಜೊತೆಗೆ ಒಂದೆರೆಡು ಸುಟ್ಟ ಟೋಸ್ಟ್ ಕೊಟ್ಟು ಸ್ನಾನಕ್ಕೆ ಹೊರಟು ಹೋದಳು. ಆಮೇಲೆ ಗೊತ್ತಾಯ್ತು. ಸ್ನೇಹಿತ ಹೇಳ್ದ.. ಎರಡು ಕೋಳಿ ಮೊಟ್ಟೆ ಒಡೆದು ಅದರ ಬಿಳಿಯನ್ನು ಅಲೋವೆರಾ ಜೊತೆಗೆ, ಹಳದಿ ರಸವನ್ನು ಆರೆಂಜ್ ಜ್ಯೂಸಿನ ಜೊತೆ ಉಜ್ಜಿ ಅದು ಒಣಗಿದ ಮೇಲೆ ಜೇನುತುಪ್ಪ : ನೀರು 2 : 3 ಪ್ರಮಾಣದಲ್ಲಿ ಜಾಲಾಡಿಸಿ ತಲೆಗೆ ಸ್ನಾನ ಮಾಡಿದರೆ, ಮಹಾಭಾರತದ ಯುದ್ಧವಾದ ಮೇಲೆ ದ್ರೌಪದಿಯು ಸ್ನಾನ ಮಾಡಿ ಬಂದಾಗ, ಆ ಕೂದಲಿನ ಹೊಳಪು ಬರುತ್ತೆ ಅಂತ ಅವರ ಚಿಕ್ಕಪ್ಪ ಜೈಮಿನಿ ಭಾರತದಲ್ಲಿ ಉಲ್ಲೇಖಿಸಿದ್ದಾರಂತೆ. ಅದನ್ನೇ ಮಾಡಕ್ಕೆ ಹೊರಟಿದ್ದಳು. ನಾನು ಅಲ್ಲಿ ವಕ್ರಿಸಿದ್ದರಿಂದ 2 : 3 ಮಿಶ್ರಣ ಸರಿಯಾಗಿ ಆಗಿರಲಿಲ್ಲವೋ ಏನೋ ಮುಖ ಗಡಿಗೆ ದೊಪ್ಪ ಮಾಡಿಕೊಂಡಿದ್ದಳು.

ನಮ್ಮ ಮನೆಯಲ್ಲಿಯೇ ಒಂದು ದಿವಸ ಬೆಳಿಗ್ಗೆ 5 ಗಂಟೆಗೆ ಬಾತ್ ರೂಮಿಗೆ ಹೋಗಿ ವಾಪಸ್ಸು ಹೋಗುವಾಗ ಅವಳ ರೂಮಿನಲ್ಲಿ ದೀಪ ಉರಿಯುತ್ತಿತ್ತು. ರಾತ್ರಿ ಮರೆತಿರಬೇಕು ಆರಿಸುವಾ ಅಂತ ಹೋದರೆ ಒಂದು ತಾಂಬಾಳದ ತುಂಬಾ ಅಡುಗೆ ಪದಾರ್ಥವಿತ್ತು. ಓಹೋ! ಇವತ್ತು ಏನೋ ಹಬ್ಬವಿರಬೇಕು.. ಬೇಗೆದ್ದು ತಯಾರಿ ಮಾಡುತ್ತಿದ್ದಾಳೆ ಅಂತ ಖುಶಿಯಾಯ್ತು.. ಓಹ್.. ನೀನು

ಬೇಗ ಎದ್ದೆಯಾ.. ಒಳ್ಳೆದಾಯ್ತು ಹೆಲ್ಪ್ ಮಿ ಡಿಯರ್ ಅಂತ ಕೈಗೆ ಕಾಗದ ಕೊಟ್ಟಳು. ಅದರಲ್ಲಿ..

1. ಒಂದು ಪಚ್ಚ ಬಾಳೆಹಣ್ಣನ್ನು ಚಿಕ್ಕಚಿಕ್ಕಾಗಿ ತುಂಡು ಮಾಡಿಟ್ಟುಕೊಳ್ಳಿ.
2. ಅದರಲ್ಲಿ ಚಿಲ್ಡ್ ಮೊಸರನ್ನು ಹಾಕಿ ಚೆನ್ನಾಗಿ ಕಲೆಸಿ ಪೇಸ್ಟ್ ಮಾಡಿಕೊಳ್ಳಿ.
3. ಆರೆಂಜ್ ಜ್ಯೂಸಿನ ಜೊತೆ 50:50 ಹೋಮ್ ಮೇಡ್ ರೆಡ್ ವೈನ್ ಹಾಕಿ ಬೇರೆ ಕಲೆಸಿಡಿ.
4. ಹೆನ್ನಾ, ಬಿಯರ್ ಮತ್ತು ಪ್ಯೂರ್ ಹಳದಿ ಒಂದು ಮಗ್‌ನಲ್ಲಿ ಕಲೆಸಿಟ್ಟುಕೊಳ್ಳಿ.
5. 2,3,4 ಅನ್ನು 1ಕ್ಕೆ ಸೇರಿಸಿ 5 ನಿಮಿಷ ಫ್ರಿಜ್ಜಿನಲ್ಲಿಡಿ.
6. ಇದೆಲ್ಲವನ್ನೂ ತಲೆಗೆ ಹಚ್ಚಿ. ಮೃದುವಾಗಿ ತಲೆಯನ್ನು 7 ನಿಮಿಷ ನೇವರಿಸಿ.

ಸ್ನಾನ

1. ಸ್ನಾನ ಮಾಡುವಾಗ ಮೊದಲನೇ ಶ್ಯಾಂಪು– ಕೂದಲಿನ ಕೊಳೆಗೆ, ಎರಡನೇ ಶ್ಯಾಂಪು– ಹೊಳಪಿಗೆ, ಮೂರನೇದು– ಬೌಂಸಿಗೆ.. ಹಾಕಬೇಕು. ಇದರ ಆರ್ಡರ್ ನೆನಪಿರಲಿ.

2. ಕೊನೆಯಲ್ಲಿ ಅಲೊವಿರ ಮತ್ತು ಹರ್ಬಲ್ ಶ್ಯಾಂಪು ಜೊತೆಗೆ ರಿನ್ಸ್ ಮಾಡಿ. ಪಚ್ಚಕರ್ಪೂರದ ಜೊತೆಗೆ ಮಧುರವಾಗಿ ಟವಲ್ ಮಾಡಿ. ಒರೆಸಿಕೊಳ್ಳಬೇಡಿ, ಟವಲ್ ಮಾಡಿ ಅಷ್ಟೆ. ಡ್ರೈಯರ್ ಅನ್ನು ಕೂದಲಿನ ಹತ್ತಿರ ಕೂಡ ಬರಲು ಬಿಡಬೇಡಿ. ನ್ಯಾಚುರಲ್ ಆಗಿ ಒಣಗಲು ಬಿಡಿ.

ಇದು 7 ಗಂಟೆಯ ತನಕ ಆಯ್ತು. ನನ್ನ ನಿದ್ರೆ ಎಂದೋ ಹಾರಿ ಹೋಗಿತ್ತು. ನಾನು ಏನು ಸಿಕ್ಕಿದರೂ ಅದನ್ನು ತಿನ್ನುವ ಸ್ಥಿತಿಯಲ್ಲಿದ್ದೆ. ನಾನು ತಿನ್ನುವ / ಕುಡಿಯುವ ಬಾಳೆಹಣ್ಣು, ಮೊಸರು, ಆರೆಂಜ್ ಜ್ಯೂಸ್, ಬಿಯರ್, ವೈನ್ ಹೇರಳವಾಗಿ ಅವಳ ತಲೆಗೆ ಹೋಗಿತ್ತು. ಅವಳು ಸ್ನಾನ ಮಾಡಿ ಬಂದಾಗ ಎಂಟೂವರೆ. ನನಗೆ 'ಧಿಡೀರ್' ಉಪ್ಪಿಟ್ಟು, ಕಾಫಿ ಮಾಡಿ ಕೊಟ್ಟಳು.

ಅವಳ ಕೂದಲಿನ ಥೆರಪಿ ಹೀಗೇ ಸಾಗಿದರೆ ನನಗೆ ನಿಮ್ಹಾನ್ಸಿನಲ್ಲಿ ರಿಯಲ್ ಥೆರಪಿ ಮಾಡಿಸಿಕೊಳ್ಳುವ ದಿನಗಳು ಬಹಳ ದೂರವಿಲ್ಲ ಅನ್ನಿಸ್ತೆ. ನನ್ನನ್ನು ಅಲ್ಲಿಗೆ ಸೇರಿಸಿದ ದಿನ ಮೆಡಿಕಲ್ ಸ್ಟಾಫ್ ಮುಂದೆ ನನ್ನ ಬಾಯಿಂದ ಸತತವಾಗಿ ಇದು ಬರ್ತಿರುತ್ತೆ.

'ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಬ್ಯಾನ್‌ಕ್ವೆಟ್ಟು'

---

## ಲಿಮರಿಕ್ಸ್

ಸಿ.ಪಿ.ರವಿಕುಮಾರ್

### ಮಂದ

ನವವಧುವಿನ ಅಡಿಗೆ ಯಾಕೋ ಬಹಳ ನಿಧಾನ
ಬೆಳಗ್ಗೆ ಶುರುವಾದರೆ ಮುಗಿಯುವುದು ಮಧ್ಯಾಹ್ನ
ಯಾಕೆ ಹೀಗೆಂದು ಕೇಳಿದಾಗ ಅತ್ತೆ
ಸೊಸೆಯು ತಿಳಿಸಿದ ಕಾರಣ ಇಷ್ಟೇ
ದಿನಾ ಫಾಸ್ಟ್ ಫುಡ್ ತಿನ್ನುವುದು ಸರೀನಾ?

# ಏಕಾಕ್ಷರಿಗಳು

● 'ಗೌತಮ'

ನಾನು ಚಿಕ್ಕ ಹುಡುಗನಾಗಿದ್ದಾಗ, ಅಂದರೆ ಸುಮಾರು ಅರವತ್ತು ವರ್ಷದ ಕೆಳಗೆ, 'ಒಂದಕ್ಷರದ ಮರ ಯಾವುದು?'ಅಂತಲೋ ಇಲ್ಲಾ, 'ಒಂದಕ್ಷರದ ಕಾಯಿ ಯಾವುದು?' ಅಂತಲೋ ಪ್ರಶ್ನಿಸಿ ಉತ್ತರಿಸದಿದ್ದಾಗ 'ಕೈ'ಮರ, 'ಜಾ'ಕಾಯಿ ಅಂತ ಹೇಳಿ ನಾನು ತುಂಬಾ ಬುದ್ಧಿವಂತ ಅಂತ ತಿಳಕೋತಿದ್ದೆ. ಈಗಲೂ ಅವೇ ಪ್ರಶ್ನೆಗಳನ್ನು ಈಗಿನ ಹುಡುಗರಿಗೆ ಹಾಕಿ 'ಐ ಡೋನೊ' ಅಂಕಲ್ ಅಂದಾಗ ಉತ್ತರ ಹೇಳಿದರೆ ಅವರುಗಳು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು 'ಇದ್ಯಾವುದೋ ಲೂಸ್‌ತಾತ' ಅನ್ನೋದು 'ಗೊತ್ತಾಯ್ತು' ಅನ್ನೋ ಥರ ಮುಖ ಮಾಡಿಕೊಂಡು ನಗ್ತಾರೆ. ಆ ಪದಗಳನ್ನ ಕೇಳಿದ್ದರೆ ತಾನೇ ಅವಕ್ಕೆ ಅರ್ಥ ಆಗೋದೂ? ಇರಲಿ. ನಾನು ಎಲ್ಲಿಗೋ ಹೋಗಿಬಿಟ್ಟೆ. ಬಾಲ್ಯ ಅಂದರೆ ಹಾಗೇನೇ. ಈ ಕೈಮರ ಜಾಕಾಯಿಗಳಿಗೆ ಒಂದು ಅರ್ಥ ಇದೆ. ಆದ್ರೆ ನಾನೀಗ ಹೇಳ ಹೊರಟಿರೋ ಏಕಾಕ್ಷರಿಗಳಿಗೆ ನಿಗೂಢವಾದ, ರಹಸ್ಯಮಯವಾದ, ಕುತೂಹಲಕಾರಿಯಾದ, ವಿಸ್ಮಯಕಾರಿಯಾದ ಭಯಂಕರವಾದ ಅರ್ಥಗಳಿವೆ ಅಂದರೆ ನೀವು ನಂಬುವಿರೋ ಇಲ್ಲವೋ ತಿಳಿಯೆ.

ಆದರೆ ನೀವು 'ಬಿಯಾಂಡ್‌ಡೌಟ್' ನಂಬುವಂತೆ ಮಾಡೋದು ನನಗೆ ಕಷ್ಟದ ಕೆಲಸವೇ. ಯಾಕೇಂತಂತಂದ್ರೆ, ಒಂದು ಘಟನೇನ್ನ ಕಣ್ಣಿಗೆ ಕಟ್ಟೋ ಹಾಗೆ ಅಕ್ಷರಗಳಲ್ಲಿ ಮೂಡಿಸಬಹುದು, ಮನಸ್ಸಿನಲ್ಲಿ ಆಗೋ ಭಯ, ಆತಂಕ, ತಳಮಳಗಳನ್ನೂ ಬರವಣಿಗೆಯಲ್ಲಿ ಬಿಂಬಿಸಬಹುದು. ಆದರೆ, ಒಂದು ರಾಗವನ್ನ, ತಾಳವನ್ನ ಅಥವಾ ಅದನ್ನು ಅನುಭವಿಸುವಾಗ ಆಗುವ ಆನಂದವನ್ನು ಪೇಪರಿನ ಮೇಲೆ ಪೆನ್ನಿನಿಂದ ಬರೆದು ಓದುಗರಿಗ 'ತಲುಪಿಸೋದು ಹೇಗೆ ಅನ್ನೋದು ನನಗೆ ದೇವರಾಣೆಗೂ ಗೊತ್ತಿಲ್ಲ. ಆ ಸಾಲಿಗೆ ಸೇರಿದವು ಈ ಏಕಾಕ್ಷರಿಗಳು.

ವಿಷಯ ಪ್ರವೇಶಕ್ಕೆ ಸುಲಭವಾಗಲಿ ಅಂತ 'ರೀ' ಅಕ್ಷರದಿಂದ ಪ್ರಾರಂಭಿಸ್ತೀನಿ. ನಿಮಗೆಲ್ಲರಿಗೂ ಗೊತ್ತಿರೋ ಹಾಗೆ ಈ 'ರೀ' ಅನ್ನೋದು ಕರ್ನಾಟಕದಲ್ಲಿ ಅದರಲ್ಲೂ ಬಯಲುಸೀಮೆಯ ಗಂಡ–ಹೆಂಡತಿಯರಿಗೆ ಮಾತ್ರ ಸೀಮಿತ (ಅಪರೂಪಕ್ಕೆ ಗಂಡಸರು–ಗಂಡಸು, ಹೆಂಗಸರು–ಹೆಂಗಸರು, ಗಂಡಸರು–ಹೆಂಗಸರೂ ಬಳಸುವುದುಂಟು)ಅನ್ನೋದು ನನ್ನ ಸೀಮಿತ ಬುದ್ಧಿಗೆ ತಿಳಿದಿರುವ ವಿಷಯ. ಅದರಲ್ಲೂ ಇದು ಹೆಂಡತಿ ಗಂಡನ ಮೇಲೆ ಪ್ರಯೋಗಿಸುವ ಅತ್ಯಂತ ಪ್ರಭಾವಶಾಲಿ ಏಕಾಕ್ಷರಿ.

ಹಂಸತೂಲಿಕಾತಲ್ಪದ ಮೇಲೆ ಮಹಾವಿಷ್ಣು ಮಲಗಿದ್ದಾನೆ. ಅವನ ಚರಣಕಮಲಗಳ ಬಳಿ ಲಕ್ಷ್ಮಿ ಕುಳಿತಿದ್ದಾಳೆ. ಎಲೆಗೆ ಸುಣ್ಣ ಹಚ್ಚಿ ಸುಗಂಧಪೂರಿತ ಅಡಿಕೆಪುಡಿಯನ್ನು ಅದರಲ್ಲಿಟ್ಟು ತ್ರಿಕೋನಾಕೃತಿಯಲ್ಲಿ ಮಡಿಸಿ ಕೊಡಹೋದಾಗ ವಿಷ್ಣು ಅದರತ್ತ ಕೈ ಚಾಚುತ್ತಾನೆ. ಆದರೆ, ಲಕ್ಷ್ಮಿಯು ಅದನ್ನು ಕೈಗೆ ಕೊಡದೆ ವಿಷ್ಣುವಿನ ಬಾಯಿಯ ಹತ್ತಿರ ತೆಗದುಕೊಂಡು ಹೋಗಿ ಇನ್ನೇನು ಬಾಯಿಗಿಡಬೇಕು. (ಇದಿಷ್ಟನ್ನು ನೀವು ನಿಮ್ಮ ನಿಮ್ಮ ವಯಸ್ಸಿಗೆ ತಕ್ಕಂತೆ, ಇಂದಿನ ನಿಮ್ಮ ನಿಮ್ಮ ಪರಿಸ್ಥಿತಿಗೆ ಅನುಗುಣವಾಗಿ ಕಲ್ಪಿಸಿಕೊಳ್ಳಬಹುದು).

ಲಕ್ಷ್ಮಿ 'ರೀ' ಅಂತಾಳೆ. ಈ 'ರೀ'ನ ಉದ್ದದ ಲೆಕ್ಕದಲ್ಲಿ ಪ್ಲುತದ ಮೂರರಷ್ಟೋ ನಾಲ್ಕರಷ್ಟೋ. ಈ ಹ್ರಸ್ವ, ದೀರ್ಘ, ಪ್ಲುತಗಳು ಕೇವಲ ಉಚ್ಚರಿಸೋಕೆ ಬೇಕಾಗೋ ಸಮಯಾನ್ನ ಸೂಚಿಸುತ್ತಷ್ಟೆ. ಅಷ್ಟನ್ನು ಮಾತ್ರ ಬೇಕಾದರೆ ಮೈಕ್ರೋಸೆಕೆಂಡ್‌ನಲ್ಲಿ ಅಳೆದು ಹೇಳಬಹುದು. ಮಿಕ್ಕಿದ್ದು? ಅಂದರೆ, ಸಾಂದ್ರತೆ, ಶೃತಿ, ತಾಳ, ಲಯ, ರಾಗಗಳನ್ನು ಹೇಗೆ ವಿವರಿಸಲೀ? ಆದರೆ ಆ ಉಲಿ ಏನನ್ನ ತಿಳಿಸತ್ತೆ ಅರ್ಥಾತ್ ಏನನ್ನು ಧ್ವನಿಸುತ್ತದೆ ಅನ್ನೋದನ್ನ ಮಾತ್ರ ನಿಖರವಾಗಿ ಹೇಳಬಹುದು. ಇದು ಮದುವೆಯಾದ ಎಲ್ಲ ಗಂಡಂದಿರಿಗೂ ಸ್ಪಟಿಕಸ್ಪಷ್ಟವಾಗಿ ತಿಳಿದಿರುವಂತಹ ಸಾರ್ವತ್ರಿಕ ಸತ್ಯ. ಮದುವೆಯಾಗದ ಹೈಕಳುಗಳಿಗೆ ಅದರ ಅರಿವನ್ನು ಈಗಲೇ ಮೂಡಿಸುವುದು ಹಿರಿಯರಾದ ನಮ್ಮಂಥವರ ಕರ್ತವ್ಯವಲ್ಲ. ಅವರೇ ಸ್ವಯಂ ತಿಳಿದುಕೊಳ್ಳಬೇಕಾದ ವಿಷಯ ಅದು. ಇನ್ನು ಇದೇ 'ರೀ'ಯನ್ನ ಎರಡು ಸಲ ಹೇಳಿದ ಮೇಲೂ ಆಕೆ ಹೇಳಿದ ಕೆಲಸವನ್ನ ಮಾಡದಿದ್ದಾಗ 'ಗಂಟಲಿನಿಂದ ಗುಡುಗಿನಂತೆ ಬರುವ 'ಒಂದೂವರೆ ಹ್ರಸ್ವದ ಸಿಡಿಲು. ಯಾವ ಗಂಡೂ ಈ 'ರೀ'ಗೆ ಬೆಚ್ಚದಿರಲಾರ. ಇನ್ನೊಂದು ರೀತಿಯ 'ರೀ' ಇದೆ. ಅದು ಸಾಮಾನ್ಯವಾಗಿ ಅಡುಗೆ ಮನೆಯಿಂದ ಬರುವಂಥದು ರೀ, ಆ ಫ್ರಿಜ್ಜಲ್ಲಿ ಬದನೆಕಾಯಿದೆ ತೊಗೊಂಬನ್ನಿ; ಮಳೆ ಬರೋ ಹಾಗಿದೆ ಒಣಗಿ ಹಾಕಿರೋ ಬಟ್ಟೆಗಳನ್ನೆಲ್ಲ ತಂದುಬಿಡ್ರಿ, ನನಗೆ ಬಿಡುವಿಲ್ಲ ಟೈಪು. ಅವೆಲ್ಲ ಅಪ್ಪಣೆಸುವ ಬಗೆಗಳು. ಮತ್ತೊಂದು ಬಗೆಯದ್ದೆಂದರೆ ಭಯ ಹುಟ್ಟಿಸುವಂಥದ್ದು. ಇದರಲ್ಲಿ ಈ 'ರ್‍ರೀ' ಗಡುಸಾಗಿದ್ದು, ಕೇಳಿದ ಕೂಡಲೇ ಮೈ ನಡುಗುವಂತಿದ್ದು, ಕೈಗಳನ್ನು ಮುಂದೆ ಕಟ್ಟಿಕೊಂಡು ತಲೆ ತಗ್ಗಿಸಿ ನಿಲ್ಲುವಂತೆ ಮಾಡುವ 'ರ್‍ರೀ'. ಇದೂ ಅಷ್ಟೇ, ಹ್ರಸ್ವಕ್ಕಿಂತಲೂ ಸ್ವಲ್ಪ ದೀರ್ಘವಾಗಿದ್ದು ದೀರ್ಘಕ್ಕಿಂತಲೂ ಸ್ವಲ್ಪ ಹ್ರಸ್ವವಾದದ್ದು. 'ನಿನ್ನೆ ಸಾಯಂಕಾಲ ಎಲ್ಲಿಗೆ ಹೋಗಿದ್ದಿರಿ?'; 'ಆಫೀಸಿನಲ್ಲಿ ಕಾಮಾಕ್ಷಿ ಜೊತೆ ಕಾಪಿ ಕುಡಿದಿರಾ?' ಇತ್ಯಾದಿಗಳ ರಖಂನವು. ಮೇಲೆದ್ದು ಕೆಳಕ್ಕಿಳಿಯುವ 'ರೀ'. ಆ 'ರ್‍ರೀ' ಪದ್ದಿಯ ಬಾಯಿಂದ ಹೊರಬೀಳ್ತಿದ್ದ ಹಾಗೇನೇ ಗೊತ್ತಾಗಿಬಿಡತ್ತೆ 'ನಿಮಗೇನಾದರೂ ಬುದ್ಧಿ ಗಿದ್ದಿ ಇದೆಯೇನ್ರೀ?'ಅಂತ ಕೇಳೇ ಕೇಳ್ತಾಳೆ ಅಂತ. ನಿಮಗೆ ಬೋರ್ ಹಿಡಿಸಲ್ರೀಯಪ್ಪ. ಕೊನೇ ಒಂದು 'ರೀ' ಹೇಳಿಬಿಡ್ತೀನಿ ಕೇಳ್ಬಿಡ್ರಿ. ಅದನ್ನು ಕೇಳಿದ ಮೆದುಳು ಸರ್ವಾಂಗಗಳಿಗೂ ಚಾಟಿ ಏಟು ಕೊಟ್ಟು ಎಚ್ಚರಿಸಿ ಎಬ್ಬಿಸಿಬಿಡತ್ತೆ. 'ರ್‍ರೀ, ಜಿರಳೆ ನನ್ನ ಕಡೇನೇ ಬರ್ತಾಇದೆ ಓಡಿಸ್ರೀ' ಮಾದರಿಯವು. ಭಾರಿ ಅನಾಹುತ ಕಾದಿದೆ ಅನ್ನೋ ಸೂಚನೆ ಕೊಡೋಂಥ 'ರ್‍ರೀ'ಅದು.

ಮೇಲಿನ ಎಲ್ಲಾ ಡೈಲಾಗುಗಳಲ್ಲೂ 'ರ್‍ರೀ' ಅನ್ನೋದೊಂದೇ ನಾನು ಹೇಳಬೇಕಾದದ್ದು. ಆದರೆ, ನಾನು ಮೊದಲೇ ಹೇಳಿದ ಹಾಗೆ ನನಗೆ ರಾಗ ತಾಳಗಳ ಜ್ಞಾನವಿಲ್ಲದ್ದರಿಂದ ಸಂಭಾಷಣೆಯನ್ನು ಬರೆದಿದ್ದೇನೆ ನಿಮಗೆ ಸ್ಪಷ್ಟಪಡಿಸುವ ಸಲುವಾಗಿ.

ನಮ್ಮ ಅಪ್ಪ-ಅಮ್ಮಂದಿರ ಕಾಲದಲ್ಲಿ ಅಮ್ಮ, ಅಪ್ಪನನ್ನ ಎಲ್ಲರೆದುರಿಗೂ ಕರೀತಾನೇ ಇರಲಿಲ್ಲ. ನಮ್ಮ ಕಾಲದಲ್ಲಿ 'ರೀ' ಅನ್ನೋದು ಷುರುವಾಯಿತು. ನಾವು ಹಂಡತಿಯ ಹೆಸರನ್ನು ಹಿಡಿದು ಕರಿಯೋದು ನಡೀತಿತ್ತು. ಆಮೇಲಾಮೇಲೆ ಹೆಂಡತಿ ಹೆಸರನ್ನ ಮೊಟಕು ಮಾಡಿ ಕರಿಯೋದನ್ನ ಷುರು ಹಚ್ಚಿಕೊಂಡೆವು. ಕಾವೇರೀನ ಕಾವೀ, ಪದ್ಮಾವತಿಯನ್ನ ಪದ್ದಿ, ಸರಸ್ವತಿಯನ್ನ ಸರೂ ಅಂತೆಲ್ಲ ಕರೀತಾ ಇದ್ದೆವು. ಎಲ್ಲೋ ಕೆಲವರು ಅದನ್ನು ಬಿಟ್ಟು ಪ್ರೀತಿಯಿಂದ 'ಲೇ' ಅಂತಲೂ ಕರೀತಾ ಇದ್ದರು. ಕೆಲವರು ಅದನ್ನು ಹೆಣ್ಣಿನ

ಮೇಲಿನ ದೌರ್ಜನ್ಯಅಂತ ತಿಳಿಯುತ್ತಿದ್ದರು. ಆದರೆ ಈಗೀಗ ಗಂಡ ಹೆಂಡತೀರು, ಮನೆಯಲ್ಲಿ ಯಾರೇ ಇರಲಿ, ಒಬ್ಬರನ್ನೊಬ್ಬರು ಹೆಸರಿನಿಂದ ಕರೆಯೋದಷ್ಟೇ ಅಲ್ಲದೇ 'ಹೋಗೋ' 'ಬಾರೋ' ಅಂತಲೂ ಕರೀತಾರೆ. ಹೆಸರು ಉದ್ದವಿದ್ದರೆ ಕರೆಯೋದು ಕಷ್ಟ ಅಂತ ಮೊಟಕುಗೊಳಿಸುತ್ತಾರೆ, ಪಕ್ಕದ ಮನೆಯ ನರಸಿಂಹಮೂರ್ತಿಗಳ ಮಗನ ಹೆಸರು 'ಲೋ'ಕೇಶ, ಸೊಸೆಯ ಹೆಸರು 'ಲೇ'ಪಾಕ್ಷಿ. ಮೂರ್ತಿಗಳು 'ನನಗೆ ಕಿವುಡಾದರೂ ಬರಬಾರದೆ' ಅಂತ ನಮ್ಮೆದುರಿಗೆ ಅಲವತ್ತುಕೊಳ್ಳುತ್ತಾರೆ.

ಮುಂದಿನ ಏಕಾಕ್ಷರಿ 'ಊಂ'. ಕಂಠ್ಯ, ತಾಲವ್ಯ, ಮೂರ್ಧನ್ಯ, ದಂತ್ಯ, ಓಷ್ಠ್ಯ ಅಂತೆಲ್ಲ ಹೇಳಲಾಗದ ಸ್ಥಾನದಿಂದ ಉಗಮವಾಗುವಂಥದು. ಇವನ್ನೂ ಅಷ್ಟೇ, ಒಂದು 'ಊಂ'ಕಾರದಿಂದಲೇ ಅದನ್ನು ಅರ್ಥ ಮಾಡಿಕೊಳ್ಳಬೇಕಾದುದು ಅವಶ್ಯವಾದರೂ, ಹಾಗೆ ಮಾಡಿಕೊಳ್ಳುವುದು ಎಲ್ಲರಿಗೂ ಸಾಧ್ಯವಿಲ್ಲವಾದುದರಿಂದ ಒಂದು ಸಂಭಾಷಣೆಯನ್ನು ಸೇರಿಸಲೇಬೇಕಾಗುತ್ತದೆ. ಇದೊಂದೇ ನನಗೆ ಉಳಿದಿರುವ ಏಕತ್ರದಾರಿ. ಒಂದು ಗುಂಪು. ಏನೋ ಗಾಢವಾದ ಚರ್ಚೆಯಲ್ಲಿ ತೊಡಗಿದೆ. ಆಗ ಒಬ್ಬ/ಒಬ್ಬಳ ಎಂಟ್ರಿ. ಗುಂಪಿನಲ್ಲಿ ಒಬ್ಬರ ಕಡೆಯಿಂದ 'ಊಂ' ಕೇಳಿಸುತ್ತದೆ. 'ಇವನು/ಳು ಬಂದ/ಬಂದಳು. ಇನ್ನಿದರ ಕಥೆ ಮುಗಿದ ಹಾಗೇನೇ' ಅನ್ನೋದೇ ಅದರರ್ಥ. ಸಾಮಾನ್ಯವಾಗಿ ಇದನ್ನು ಹೆಚ್ಚು ಬಳಸುವವರು ಹೆಣ್ಣು ಮಕ್ಕಳೇ. ಸಂದರ್ಭಾನುಸಾರ 'ಇನ್ನು ಏನೇನು ಕಥೆ ಆಗುತ್ತೋ' ಅನ್ನೋ ಆರ್ಥಾನ್ನೂ ಮಾಡಿಕೋಬಹುದು. ಇದೇ ಅಕ್ಷರವನ್ನ ಇನ್ನೊಂದು ಸಂದರ್ಭದಲ್ಲೂ ಉಪಯೋಗಿಸ್ತೀವಿ. 'ಯಾಕೋ ಈ ಕೆಲಸಾನ್ನ ಬಿಟ್ಟುಬಿಟ್ಟೆ?'ಅಂತ ಕೇಳಿದರೆ ಅವನು ಒಂದುದೊಡ್ಡ ಪುರಾಣವನ್ನೇ ಊದುತ್ತಾನೆ. ಅದು ಸರಿಯಾಗಿಯೂ ಇರುತ್ತದೆ. ಆಗ ಅದನ್ನು ಒಪ್ಪಿಕೊಳ್ಳುವ ಪರಿಯೇ ಈ 'ಊಂ'.'ಸರಿಯಪ್ಪ' ಅಂತ ಎಕ್ಸಟ್ರಾ ಪದವನ್ನ ಸೇರಿಸ್ತೀವಿ.

ಬೇಡದ ವಿಷಯವನ್ನು ಎಳೆದೆಳೆದು ಹೇಳುತ್ತಿರುವಾಗ ಶ್ರೋತೃ ಮಹಾಶಯ 'ಕೇಳು'ತ್ತಿರುವಾಗ ಅವನ ಕಾಯದಿಂದ ಹೊರಡುವ ಸ್ವರ ಈ 'ಉ' ಅಥವಾ 'ಹು'.ಕೇಳುವ 'ಆಸಕ್ತಿ' ಎಷ್ಟಿರುತ್ತದೆಂದರೆ ಹೇಳುತ್ತಿರುವಾತ ಮಾತು ನಿಲ್ಲಿಸಿದರೂ 'ಉ/ಹು'ಗುಟ್ಟುತ್ತಿರುವುದು ಮಾತ್ರ ಮುಂದುವರೀತಿರತ್ತೆ!

ಒಮ್ಮೊಮ್ಮೆ ತತ್‌ಕ್ಷಣದಲ್ಲಿಯೇ ಮಾತನಾಡಬೇಕಾಗತ್ತೆ. ಬಟ್ ಆದರೆ, ಆಗ ಬಾಯಲ್ಲಿ ಏನನ್ನೋ ತಿನ್ನುತ್ತಾ ಇಲ್ಲ ಕುಡಿಯುತ್ತಾ ಇರುತ್ತೇವೆ. ಬಾಯಲ್ಲಿರೋದನ್ನ ನುಂಗೋವರೆಗೂ ಬಾಯನ್ನ ತೆಗೆಯೋಕಾಗಲ್ಲ. ಅಂಥಾ ಸಮಯದಲ್ಲಿ ಉದ್ಗರಿಸುವ ಏಕಾಕ್ಷರಿಯೇ 'ಉಂ/ಊಂ'. ಅಗೈನ್, ಅದರರ್ಥ ಸಂದರ್ಭಕ್ಕನುಸಾರವಾಗಿ 'ಒಕೆಒಕೆ' ಅಂತಲೋ, 'ತಡಿತಡಿ' ಅಂತಲೋ, 'ಬೇಡ ಬೇಡ' ಅಂತಾನೋ, 'ಕೂಡಲೇಕೂಡದು' ಅಂತಾನೋ ಏನು ಬೇಕಾದರೂ ಆಗಬಹುದು. ಅರ್ಥವನ್ನು ಸ್ಪಷ್ಟಪಡಿಸೋಕೋಸ್ಕರ ಕಯ್ಯಿ, ಮಯ್ಯಿ, ತಲೆಗಳೂ ಚಕಚಕನೆ ಚಲಿಸಿ ಆ ಉದ್ಗಾರದೊಡನೆ ಸೇರಿಕೊಳ್ಳುತ್ತವೆ.

ಇನ್ನೊಂದು ಅಕ್ಷರ ಎಂದರೆ 'ಹ್ಞಾ'.ಬಿಳೀ ಹೆಂಡ್ತಿ 'ಹಳ್ಳಿ'ಯ ಬದಲು 'ಹಲ್ಲಿ ಹಲ್ಲಿ' ಅಂತಿದ್ದು ಮೂರನೇ ಪ್ರಯತ್ನದಲ್ಲಿ 'ಹಳ್ಳಿ' ಅಂದಾಗ ಆರತಿ 'ಹ್ಞಾ' ಅನ್ನುತ್ತಾರೆ. 'ಹಳ್ಳಿ'ಯನ್ನು ಅವಳ ಬಾಯಿಂದ ಹೊರಡಿಸುವ ಪ್ರಯತ್ನದಲ್ಲಿ ಗೆದ್ದ ಖುಷಿ, ಸರಿಯಾಗಿ ಹೇಳಿದುದಕ್ಕೆ ಪ್ರಶಂಸೆ ಎಲ್ಲವೂ ಇದರಲ್ಲಿ ಅಡಗಿರುತ್ತದೆ.

ಈ 'ಹ್ಞಾ' ಕೇಳಿದಾಗಲೆಲ್ಲ ನನಗೆ 'ಪ್ರೊಜೆಕ್ಟೈಲ್'(ಕಲ್ಲೊಂದನ್ನು ಮೇಲಕ್ಕೆಸೆದಾಗ ಅದು ಮೇಲಕ್ಕೇರಿ ಕೆಳಕ್ಕೆ ಬೀಳುವಾಗ ಅದು ಸಾಗುವ ಪಥ) ಅನ್ನೋ ಒಂದು ಸುಂದರ ವಕ್ರರೇಖೆಯ ನೆನಪಾಗುತ್ತದೆ. ಜೋರಾದಧ್ವನಿಯಲ್ಲಿ ಪ್ರಾರಂಭವಾಗಿ ನಿಧಾನಗತಿಯಲ್ಲಿ ಮೃದುವೂ ಆಗಿ ಸಾಗುವ ಈ ದನಿಯೂ ಅಷ್ಟೇ ಸುಂದರ.

ಇನ್ನು ಕ್ವಿಝ್ ಕಾರ್ಯಕ್ರಮಗಳಲ್ಲಿ 'ಕನ್ನಡಕ್ಕೆ ಎಷ್ಟು ಜ್ಞಾನಪೀಠ ಪ್ರಶಸ್ತಿ ಲಭಿಸಿದೆ?'ಎನ್ನುವ ಪ್ರಶ್ನೆಗೆ 'ಹತ್ತು' ಎಂಬ ಉತ್ತರ ಬಂದಾಗ ಕ್ವಿಜ್‌ಮಾಸ್ಟರ್ ಆಶ್ಚರ್ಯದಿಂದ ಹೊರಡಿಸುವ 'ಆಹ' ಅಥವಾ 'ಓಹೊ' ಅಕ್ಷರಗಳಲ್ಲಿ ಆ 'ಹ', 'ಹೊ'ಗಳನ್ನು ಪೂರ್ತಿ ಉಚ್ಚರಿಸದೇ ಅರ್ಧಂಬರ್ಧ ಉಚ್ಚರಿಸುವುದರಿಂದ ಅವನ್ನೂ ಏಕಾಕ್ಷರಿಯೆಂದೇ ಪರಿಗಣಿಸಿದರೆ ನಿಮ್ಮ ಅಭ್ಯಂತರವಿಲ್ಲವೆಂದು ನಂಬಿದ್ದೇನೆ.

ಕೊನೆಯದಾಗಿ 'ಹೋ','ಏ', 'ಓ' ಮುಂತಾದವುಗಳು ತಮ್ಮ ಮುಂದೆ ! ಚಿಹ್ನೆಯನ್ನು ಹೊತ್ತ ಆಶ್ಚರ್ಯ ಸೂಚಕ ಏಕಾಕ್ಷರಿಗಳು. ಅದರ ಬಗ್ಗೆ ನಿಮಗೆ ಗೊತ್ತಿಲ್ಲದಿರುವ ವಿಷಯ ಏನಿಲ್ಲ.

ಹೀಗೇ, ನಾನಾರ್ಥಗಳನ್ನು ಸೂಚಿಸುವ ಅನೇಕಾನೇಕ ಏಕಾಕ್ಷರಿಗಳಿರಬಹುದು. ಅವನ್ನೆಲ್ಲಾ ಹೇಳೋಕೆ ಹೋದರೆ ನೀವು 'ಹಂ' ಅಂದು 'ಸಾಕು ನಿಲ್ಲಿಸು' ಅಂತ ಸೂಚಿಸಬಹುದು. ಹಾಗಾಗಿ ನಾನೂ 'ಹಂ' ಅಂದು 'ಸಾಕಿಷ್ಟು' ಅನ್ನೋ ಸೂಚನೆ ನೀಡುತ್ತೇನೆ.

ಮರೆತ ವಿಷಯ.ಇಲ್ಲಿ ನಾನೆಲ್ಲೂ ಈ ಏಕಾಕ್ಷರಿಗಳನ್ನು ಉಚ್ಚರಿಸುವ ರೀತಿಯನ್ನು ಹೇಳದಿದ್ದರೂ ನೀವೇ ಅದನ್ನು ನಿಮ್ಮ ಬಾಯಲ್ಲಿ/ಗಂಟಲಲ್ಲಿ/ಮೂಗಿನಲ್ಲಿ/ ಹೇಳಿಕೊಂಡಿರುತ್ತೀರಿ ಅನ್ನೋದರಲ್ಲಿ ನನಗೆ ಯಾವುದೇ ಅನುಮಾನವಿಲ್ಲ. ಹೌದೋ ಅಲ್ಲವೋ? ■



# ಸ್ಪೇಸ್ ಲೈನ್

● ನುಗ್ಗೆಹಳ್ಳೀ ಪಂಕಜ

"ಅರೆರೆ! ನಿಮಗೆ ಸ್ಪೇಸ್ ಲೈನ್ ಇದೆಯಲ್ಲಾ ಸ್ವಾಮಿ! ಇದೆಲ್ಲಿಂದ ಬಂತು?"– ಜ್ಯೋತಿಷಿ ಉದ್ಗರಿಸಿದ, ದಿಗ್ಭ್ರಮೆಯಿಂದ.

"ಅಂದರೆ?"– ನಾನು ಕಕ್ಕಾಬಿಕ್ಕಿಯಾದೆ– "ಅಲ್ಲಾರೀ, ಫಾರಿನ್ ಲೈನ್ ಬಗ್ಗೆ ಏನೋ ಚೆನ್ನಾಗಿ ಗೊತ್ತುಂಟು–ಆದರಿದು?"

"ಯಾರಿಗೂ ಇಲ್ಲದಿರೋ ಯೋಗ ಸಾರ್!"– ಹುಚ್ಚನಂತೆ ಕುಣಿಯತೊಡಗಿದ– "ಹಿಂದೆಲ್ಲೂ ಕಾಣದ ಕೇಳದ ರೇಖೆ! ಫಾರಿನ್ ಲೈನ್ ಬಿಡಿ ಸಾರ್, ಈಗೇನು, ಎಲ್ರಿಗೂ ಇರತ್ತೆ–ಕಾಸಿಗೊಂದು, ಕೊಸರಿಗೆರಡು ಎಂಬಂತೆ–ಆದ್ರಿದು! ಅದೇ, ನಿಮಗಿರೋ ಸ್ಪೇಸ್ ಲೈನು! ಯಾರಿಗಿದೆ? ಬೇಕಾದ್ರೆ ವಿಚಾರಿಸಿ, ವೈಟ್‌ಹೌಸ್ ಜ್ಯೋತಿಷಿಯನ್ನ! ಏನ್ಸಾರ್, ಚಂದ್ರಲೋಕಕ್ಕೇ ಹೋಗ್ತೀರೋ, ಇಲ್ಲ, ಮಂಗಳ ಲೋಕಕ್ಕೆ ಹೋಗ್ತೀರೋ? ವೀನಸ್, ನೆಪ್ಚೂನ್, ಮಾರ್ಸ್ . . . . "

ಇನ್ನೂ ಎಂಥೆಂಥಾ ಲೋಕಗಳ ಪಟ್ಟಿಯನ್ನ ಕೊಡುತ್ತಿದ್ದನೋ, ಅಷ್ಟರಲ್ಲಿ, "ನಾ ಹೋದರೆ ಚಂದ್ರಲೋಕಕ್ಕೇ ಹೋಗೋದು"– ಎಂಬ ದೃಢ ನಿರ್ಧಾರವನ್ನ ತೆಗೆದುಕೊಂಡೇಬಿಟ್ಟೆ ಅವನ ಎದುರಲ್ಲಿ!

ಹೇಗಿದ್ರೂ ಜಪಾನೀಯರು ಒಂದು ದೊಡ್ಡ ಸೆಮೆಟರಿಯನ್ನೇ ಕಟ್ತಾರಂತೆ, ಚಂದ್ರಲೋಕದಲ್ಲಿ (ಅವರ ಊರಲ್ಲಿ ಸ್ಥಳದ ಅಭಾವ ಅಂತ! ಹಾಗೇಂತ ಜನ ಸಾಯದೆ ಇರೊಕ್ಕಾಗತ್ಯೇ?) ಪತ್ರಿಕೆಗಳಲ್ಲಿ ಯಾವಾಗಲೋ ಓದಿದ್ದ ನೆನಪು. . . ಅದಕ್ಕಾಗಿ ಈಗಿನಿಂದಲೇ ಸ್ಪೆಶಲ್ ಸ್ಪೇಸ್–ವಿಮಾನಗಳ ಏರ್ಪಾಡು. . . . ಗೋರಿಸ್ಥಾನ ಬಂದ ಮೇಲೆ ಜನವಸತಿಗೂ ಏರ್ಪಾಡನ್ನ ಮಾಡಿಕೊಡಲೇ ಬೇಕಲ್ಲವೇ? ಜನಾನೇ ಅಲ್ಲಿ ಇಲ್ಲದಿದ್ರೆ, ಆ ಗೋರಿಗಳನ್ನ ಹೇಗೆ ತುಂಬಿಸೋದು? ಭೂಲೋಕದಿಂದ ಸ್ಮಶಾನಯಾತ್ರೆ ಮಾಡಿಸೊಕ್ಕಾಗತ್ಯೆ, ಪ್ರತಿಯೊಂದು ಹೆಣಕ್ಕೂ?

"ನಾನು ಒಪ್ಪಿದೆ ನಿಮ್ಮ ವಾದವನ್ನ –ಜ್ಯೋತಿಷಿ ತಲೆತೂಗಿದ. "ಅಲ್ಲದೆ, ನಮ್ಮಂಥಾವರು ಕೆಲವು ಜನ ಅಲ್ಲಿ ನೆಲಸಿದರೆ ವಾಸಿ– ಅಂತ್ಯಕ್ರಿಯೆಗೆ, ದೇವರ ಪೂಜೆ–ಮದುವೆ ಮುಂಜಿ ಇತ್ಯಾದಿಗೆ. ಆ ಬಳಿಕ ಕೆಲವು ಭಿಕ್ಷುಕರು – ದಾನಧರ್ಮ ಸ್ವೀಕರಿಸೋಕ್ಕೆ. . . ಅವನ್ನೆಲ್ಲಾ ಈ ಭೂಲೋಕಕ್ಕೆ ತೋರಿಸೋಕ್ಕೆ ಟಿವಿ–ವೀಡಿಯೋ– ಮೊಬೈಲ್, ಬೇಡವೇ? ಅವಲ್ಲಿ ಕೆಲಸ ಮಾಡೋದಿಕ್ಕೆ ಜನ ಬೇಕೇ ಬೇಕು; ಆಗ ನಿಜಕ್ಕೂ ಐಡಿಯಲ್ ಲೋಕ ಅಗತ್ತೆ ನಮ್ಮ ಚಂದ್ರಲೋಕ! ಯಾರಿಗ್ಗೊತ್ತು, ನೀವೇ ಅಲ್ಲಿಯ ಪ್ರೆಸಿಡೆಂಟೋ, ಸಿಎಮ್ಮೊ, ಆಗಬಹುದು!" –ಕನಸುಗಳನ್ನ ಮುಂದಿಟ್ಟ.

ಉಬ್ಬಿದೆ–ಬೆಲೂನಿನಂತೆ! ಮುಖ್ಯವಾಗಿ ನಮ್ಮಲ್ಲಿಯ ನೂರೆಂಟು ಕರ್ಫ್ಯೂ, ಜಾತಿಗಲಭೆ, ಈ ಬಂದ್–ಆ ಬಂದ್, ಅವೆಲ್ಲಾ ಅಲ್ಲೇನೂ ಇಲ್ಲದಿದ್ರೆ ಸಾಕು; ಶಾಂತವಾಗಿ ಕೂತು, ಚಂದ್ರಾಯಣ ಎಂಬ ಪುರಾಣವನ್ನ ಬರೆದು, ಇಂದ್ರಪ್ರಶಸ್ತಿಯನ್ನ ತೆಗೆದುಕೊಳ್ಳಬೇಕು!

"ಅಲ್ಲಾನು ಸೆಟಲ್ ಆದ ತಕ್ಷಣ ನಿಮಗೆ ಹೇಳಿಕಳಿಸ್ತೀನಿ"–ಆಹ್ವಾನಿಸಿದೆ, ನನ್ನದೇ

ಆ ಚಂದ್ರಮಂಡಲ, ಎಂಬಂತೆ. . . . . .

" ನಿಮ್ಮ ಮನೆಯಲ್ಲೇ ಇದ್ದುಬಿಡ್ತೀನಿ–ಸಂಸಾರ ಸಮೇತ"–ಮಾತುಕೊಟ್ಟ. ಅವನ ಸಂಸಾರ–ಕುರು ಸಂಸಾರ!

ನನ್ನ ಮದುವೆ ಫಿಕ್ಸ್ ಆಗಿತ್ತು. "ಸೂಟುಬೂಟು ಏನೂ ಬೇಡ– ಒಂದಷ್ಟು ಸ್ಪೇಸ್‌ಡ್ರೆಸ್ಸನ್ನ ನಮ್ಮಿಬ್ಬರಿಗೂ ಕೊಡಿ ಸಾಕು"– ವುಡ್ಬಿ ಮಾವನವರಿಗೆ ಹೇಳಿದೆ. ಅವರಿಗೆ ಖುಶಿಯಾಯಿತು. "ಮಗಳ ಬಾಣಂತನಕ್ಕೆ ಅಂತ ಖಾರ–ಲೇಹ್ಯ ಸಮೇತ ತುದಿಗಾಲಲ್ಲಿ ನಿಂತಿದಾಳೆ ನನ್ನಾಕೆ! ಅದಕ್ಕೇ ನಾವೂ ಬರ್ತೀವಿ, ಸುಂದರ ಚಂದ್ರಗ್ರಹಕ್ಕೆ. . . .ಹಾ! ಮದುವೇನೂ ಅಲ್ಲೇ ಮಾಡೋಣ–ಅಕ್ಕಪಕ್ಕದ ಗ್ರಹದವರನ್ನೆಲ್ಲಾ ಕರೆದು; ಗಸಗಸೆ ಪಾಯಸ, ಒಬ್ಬಟ್ಟು–ಪುಳಿಯೋಗರೆ, ಎರಡು ಜಾಡಿ ಉಪ್ಪಿನಕಾಯಿ, ಬೆಂಗಳೂರು ಅವರೆ ಕಾಳು ಮೈಸೂರು ವಿಳ್ಯೇದೆಲೆ– ಮಲ್ಲಿಗೆ ಹೂವು, ತಿಪಟೂರಿನ ತೆಂಗಿನಕಾಯಿ ಮೂಟೆ ಮೂರು ನಾಲಕ್ಕು, ನೂರು ಬೂದಗುಂಬಳ ಕಾಯಿ, ವಾಲಗದವರು, ಪುರೋಹಿತರು, ಅಷ್ಟಿಷ್ಟು ನೆಂಟರು–ಒಂದು ಸ್ಪೆಶಲ್ ಸ್ಪೇಪ್ಸ್‌ಶಿಪ್ಪನ್ನೇ ಬುಕ್ಮಾಡಿ ಬಿಡಿ–ಜೊತೆಗೆ ವೀಡಿಯೋ' . . ."

ಏನು, ಶ್ರೀನಿವಾಸ ಕಲ್ಯಾಣದ ಸ್ಟೈಲ್‌ನಲ್ಲಿ ಮಾಡೋದಿಕ್ಕೆ ಹೊರಟಿದಾರೋ, ಮಗಳ ಮದುವೇನ? ಬದುಕಿದ ಹಾಗೇ! ಕುಸಿದೆ; 'ಬಾರಯ್ಯ ಬೆಳದಿಂಗಳೇ, ನಮ್ಮೂರ. . . . . . . . .' ■

---

# ದಿನಾಚರಣೆ

ಸರಿಯಾದ ಹುಡುಗಿಯನ್ನು ಮದುವೆಯಾದರೆ ನಿತ್ಯವು

***ಪ್ರೇಮಿಗಳ ದಿನಾಚರಣೆ***

ಸೋಮಾರಿ ಹುಡುಗಿಯನ್ನು ಮದುವೆಯಾದರೆ ನಿತ್ಯವು

***ಕಾರ್ಮಿಕರ ದಿನಾಚರಣೆ***

ಶ್ರೀಮಂತ ಹುಡುಗಿಯನ್ನು ಮದುವೆಯಾದರೆ ನಿತ್ಯವು

***ಹೊಸವರ್ಷದ ಆಚರಣೆ***

ಮೋಸ ಮಾಡುವ ಹುಡುಗಿಯನ್ನು ಮದುವೆಯಾದರೆ ನಿತ್ಯವು

***ಮೂರ್ಖರ ದಿನಾಚರಣೆ***

ಪೆದ್ದಿ ಹುಡುಗಿಯನ್ನು ಮದುವೆಯಾದರೆ ನಿತ್ಯವು

***ಮಕ್ಕಳ ದಿನಾಚರಣೆ***

ಇಷ್ಟ ಇಲ್ಲದ ಹುಡುಗಿಯನ್ನು ಮದುವೆಯಾದರೆ ನಿತ್ಯವು

***ಹುತಾತ್ಮ ದಿನಾಚರಣೆ***

ಮದುವೇನೇ ಆಗದಿದ್ದರೆ ನಿತ್ಯವೂ

***ಸ್ವಾತಂತ್ರ್ಯ ದಿನಾಚರಣೆ***

# ಜಾರುವ ಸಮಯ

● ಸಾಯಿಲಕ್ಷ್ಮಿ

"ವಯಸ್ಸಾದವರು ಬೀಳಬಾರದು. ಅದರ ಪರಿಣಾಮ ಒಳ್ಳೆಯದಲ್ಲ"

ಅಮ್ಮ ನಮ್ಮ ಬಾಲ್ಯದಲ್ಲಿ ಆಡುತ್ತಿದ್ದ ಈಗ ಉಲ್ಲೇಖ ಮಾಡಿದ ಅನುಭವದ ಮಾತು ಇತ್ತೀಚೆಗೆ ಸ್ಮೃತಿಪಟಲದಿಂದ ಎದ್ದುಬಂತು.

ನಮ್ಮ ಕೆಳಮನೆಯ ವಾಸಸ್ಥಾನದ ಸುತ್ತಲ ಜಾಗವನ್ನು ಮಹಾನಗರ ಪಾಲಿಕೆಯ ಕಾನೂನು ಚೌಕಟ್ಟಿನ ವ್ಯಾಪ್ತಿಯ ಪ್ರಕಾರವಷ್ಟೇ ಗೆರೆ ಕೊಯ್ದು ಹಾಗೆ ಬಿಟ್ಟಿದ್ದೇವೆ. 30X40 ಈ ಅಳತೆಯೇ ಬಂಗ್ಲೆ ನಿವೇಶನ ಸಮಾನವಾದ ಬೆಂಗಳೂರಿನ ಗಗನಮುಖಿ ದರದಲ್ಲಿ ಹೆಚ್ಚು ಸ್ಥಳ ಬಿಡುವುದು ಸಾಧ್ಯವೇ?

ಆ ಹಿತ್ತಲ ಭಾಗದಲ್ಲೇ ನೀರಿನ ಡ್ರಮ್, ಒರಳುಕಲ್ಲು, ಗ್ಯಾಸ್ ಸಿಲಿಂಡರ್ ಎಲ್ಲಕ್ಕೂ ಸ್ಥಳ ಕಲ್ಪಿಸಿ ಶುದ್ಧೀಕರಣ ಕ್ರಿಯೆಗೆ ಪೊರಕೆ ಹಿಡಿದ ಒಬ್ಬರು ಓಡಾಡಬಹುದಷ್ಟೇ. ಪಾತ್ರೆ ತೊಳೆಯುವುದು ಅಲ್ಲೇ. ಅದಕ್ಕಾಗಿ ಒಂದು ಪುಟ್ಟ ಸ್ಟೂಲಿನ ವ್ಯವಸ್ಥೆಯೂ ಇದೆ. ಅಡುಗೆಮನೆಯ ನೀರಿನ ಫಿಲ್ಟರ್ ಇದರಿಂದ ಶುದ್ಧೀ ಕ್ರಿಯೆ ಪೂರೈಸಿ ಮಲಿನಗೊಂಡ ನೀರು ಹಿತ್ತಲ ಡ್ರಮ್‌ನಲ್ಲಿ ತುಂಬುತ್ತದೆ. ಅದನ್ನು ನಾನಾಕೆಲಸಗಳಿಗೆ ಬಳಸಬಹುದು. ಬಳಸುತ್ತೇವೆ. ಅದು ಹೆಚ್ಚಾಗಿ ತುಂಬಿ ಹರಿಯುವುದು ಉಂಟು. ಅಲ್ಲಿ ಅಗಾಗ ಬ್ಲೀಚಿಂಗ್ ಪೌಡರ್ ಹಾಕಿ ಸ್ವಚ್ಛ ಮಾಡುತ್ತಿದ್ದರೆ ಜಾರದಂತೆ ಜೀವ ಉಳಿಯುತ್ತದೆ. ನಮ್ಮ ಲಕ್ಷ್ಯ ಕಡಿಮೆಯಾಗಿ ಕೆಲಸದವರ ಅಲಕ್ಷ್ಯ ಹೆಚ್ಚಾಯಿತೆಂದಿಟ್ಟುಕೊಳ್ಳಿ. ಚಂದ್ರಲೋಕದ ಪರಿಸ್ಥಿತಿ. ಗ್ರ್ಯಾವಿಟೇಶನ್ ಕೆಲಸ ಮಾಡುವುದಿಲ್ಲ. ಅಲ್ಲಿ ಕಾಲಿಟ್ಟವರು ತೇಲಾಡುವುದು ಖಂಡಿತ. ಇನ್ನು ಮೈಕೈ ಸ್ಥಿತಿ ಊಹಿಸಿಕೊಳ್ಳಿ.

ಈ ಹಿಂದೆ ನನಗೊಬ್ಬ ಸಹಾಯಕ ಶಿರೋಮಣಿ ಚಂದ್ರಿಕಾ ಎಂಬುವವಳಿದ್ದಳು. ಶುರುವಿಗೆ ತಕ್ಕಮಟ್ಟಿಗೆ ಮನೆಗೆಲಸ ಮಾಡುತ್ತಿದ್ದವಳು ಬರಬರುತ್ತ ಮಿಂಚಿನವೇಗದ ಸರದಾರಣಿಯಾಗಿ ಮಾರ್ಪಟ್ಟಳು. ಅವಳಿಗೂ ಐಟಿ ಬಿಟಿಯವರ ಮನೆಗಳ ಸಂಪರ್ಕವೇರ್ಪಟ್ಟು ಒಪ್ಪಂದವಾಗಿ ಬೆಳಿಗ್ಗೆ 7.30ಕ್ಕೆ ನಮ್ಮಮನೆಯಲ್ಲಿ ಅವಳ ದರ್ಶನವಾದರೆ 8.15ಕ್ಕೆ ಸಾಫ್ಟ್ ವೇರ್ ಉದ್ಯೋಗಿ ಮನೆಯಲ್ಲಿ ಅವಳು ಪೊರಕೆ ಹಿಡಿದು 9.15 ಕ್ಕೆ ಬೇಗ ಬೇಗ ಧಾವಿಸಿ ಬೇಗ ಸಹಾಯಕ್ಕೆ ನಿಲ್ಲಬೇಕು. ಇದು ಅವಳ ವೇಳಾಪಟ್ಟಿ.

ಚಂದ್ರಿಕಾ ನಮ್ಮಲ್ಲಿಗೆ ಬೇಗ ಬಾರಳು. ಕಾರಣ ಅವಳು ಮಕ್ಕಳನ್ನು ಶಾಲೆಗೆ ಕಳಿಸುವ ತಯಾರಿಯಲ್ಲಿರುತ್ತಾಳೆ. ಪೂರಕವಾದ ಪಾಕ ಸಾಮಗ್ರಿಗಳನ್ನು ಅಣಿಗೊಳಿಸಿ ಗಂಡನಿಗೆ ನಿರ್ದೇಶನ ನೀಡಿ ಬರುವಲ್ಲೇ ಅವಳಿಗೆ ಸಮಯ ಸಾಕಾಗುವುದಿಲ್ಲವಂತೆ. ಅವನು ಸ್ಟೌ ಹಚ್ಚಿ ಅಟ್ಟಿ ಡಬ್ಬಿಗೆ ಹಾಕುವುದಷ್ಟೇ.

"ಚಂದ್ರಿಕಾ ಯಾವ ಕೆಲಸವೂ ಸರಿಯಾಗಿ ಅಗ್ತಾ ಇಲ್ಲ, ಎಲ್ಲರ ಮನೆ ಮುಗಿಸಿ ಬಾ". ಎಂದರೆ ಅವಳದು ಸಿದ್ಧ ಉತ್ತರ.

"ಆಂಟಿ ಟೈಲರಿಂಗ್ ಕ್ಲಾಸ್ ವಾರದಲ್ಲಿ ಎರಡು ದಿನ ಇರತ್ತೆ. ಎಂಬ್ರಾಯಿಡರಿ ಕಲಿಯೋಕೆ ಇನ್ನು ಎರಡು ದಿನ ಹೋಗತೀನಿ. ಅದೂ ಅಲ್ಲದೆ ಎರಡೆರಡು ಸಲ ಇಷ್ಟು ದೂರ ಬಂದು ಹೋಗೋಕ್ಕೆ ಆಗೋಲ್ಲ. ಕಾಲು ವಿಪರೀತ ನೋಯತ್ತೆ."

ಎಲ್ಲ ಮಾಡಿಕೊಡುತ್ತಾಳೆ ಎಂಬ ವಾಗ್ದಾನದ ಪ್ರಕಾರ ತಿಂಗಳ ಸಂಬಳ ನಾಲ್ಕು ಸಾವಿರಕ್ಕೆ ಏರಿದ ನಂತರ ಬೇರೆ ಮನೆಗಳನ್ನು ಅನುಕೂಲಕ್ಕೆ ತಕ್ಕಂತೆ ಹುಡುಕಿಕೊಂಡಿದ್ದಳು ಚಾಣಾಕ್ಷೆ. ಈ ಗದ್ದಲ ಸಡಗರದಲ್ಲೇ ನಮ್ಮ ಹಿತ್ತಲು ಸಂಪೂರ್ಣ ಅವಜ್ಞೆಗೊಳಗಾಗಿ ಅವಳು ಒಬ್ಬಳು ಮಾತ್ರ ಹೇಗೋ ಅಲ್ಲಿ ತೂರಿ ಇಲ್ಲಿ ಜಾರದೆ ನಿಮಿಷ ಮಾತ್ರದಲ್ಲಿ ಪಾತ್ರೆ ತೊಳೆದು ಹಾರಿ ತಂದಿಡುವಳು. ನನಗೆ ಬೇರೆ ವಿವೇಕ ಭೋದನೆ.

"ಅಂಟಿ ನೀವು ಮಾತ್ರ ಹಿಂದೆ ಓಡಾಡಬೇಡಿ".

ಹಿತ್ತಲು ಅವಳ ಕರಸ್ಪರ್ಶ ಕಾಣದೆ ನಿರ್ವಹಣೆಯಿಲ್ಲದೆ ಪಾಚಿಮಯವಾಗಿತ್ತು. ತುರ್ತಿದ್ದಾಗ ಜೀವ ಕೈಯಲ್ಲಿ ಹಿಡಿದು ಹೋಗಬೇಕು. ಹೇಳಿ ಹೇಳಿ, ಏಗಿ ಏಗಿ ಸಾಕಾಯಿತು. ನನ್ನ ಮುನಿಸನ್ನು ನಗುನಗುತ್ತಲೇ ಮರೆಸಿ ಊಟೋಪಚಾರವನ್ನು ಹರ್ಷಚಿತ್ತದಿಂದ  ಸ್ವೀಕರಿಸಿ ಕೆಲಸ ಮುಂದೂಡುತ್ತ ಮಾಯವಾಗುವಳು ಆ ಚತುರೆ.

ಆ ದಿನ ಗ್ಯಾಸ್ ಮುಗಿದು ಹೋಗಿಲ್ಲದೆ ಇದ್ದರೆ ಅವಳ ಕೆಲಸಗಳ್ಳತನದ ವಿಷಯಪತ್ತೆ ಈ ವಿಷಮಕ್ಕೆ ಮುಟ್ಟುತ್ತಿರಲಿಲ್ಲವೇನೋ. ಕಾಲ ಕೂಡಿ ಬಂದಿರಬೇಕು.

ದಿನನಿತ್ಯದಂತೆ ಬೆಳಗಿನ ತಿಂಡಿ ಸೇವನೆಯಾಗಿ ಚಂದ್ರಿಕಾ ಕಾಣದಂತೆ ಮಾಯವಾದ ಮೇಲೆ  ಕಾಫಿಗಾಗಿ ಸ್ಟೌ ಹಚ್ಚಿದೆ. ಅದು ಹತ್ತಲಿಲ್ಲ. ಅದರ ಚೈತನ್ಯದ ಅನಿಲ ಮುಗಿದಿತ್ತು. ಆ ಹೊತ್ತಲ್ಲಿ ಮನೆಯಲ್ಲಿ ನಾನೊಬ್ಬಳೇ. ನನಗೆ ಸಿಲಿಂಡರ್ ಬದಲಾಯಿಸುವ ಕಲೆ ಸಿದ್ಧಿಸಿಲ್ಲ. ಪತಿಮಹಾಶಯರು ಅ ವಿದ್ಯೆಯ ಸೂಕ್ಷ್ಮ ಬಿಟ್ಟುಕೊಡದೆ ಅವರ ಪ್ರಾಮುಖ್ಯತೆಯನ್ನು ಉಳಿಸಿಕೊಂಡು ಬಂದಿದ್ದಾರೆ.

ಒಂದು ಕ್ಷಣ ಯಾರನ್ನು ಕರೆಯಲಿ? ಎಂದು ಯೋಚಿಸಿದೆ. ಅಸಹಾಯಕಳಾಗಿ ಎರಡು ಕೈಯೆತ್ತಿ ಕರೆದರೆ ಕೃಷ್ಣ ಬಂದಾನು ಗ್ಯಾಸ್ ಬದಲಾಯಿಸಲು ಎನಿಸಿದರೂ ಅಷ್ಟು ಅತಿಯಾಗಿ ದೇವರು ದಿಂಡರು ಎಂದು ಒದ್ದಾಡದ ನಾನು ಈಗ ಕರೆಯುವುದು ಉಚಿತವೇ? ತರವಲ್ಲವೆನಿಸಿ ಸುಮ್ಮನಾದೆ.

ಪಕ್ಕದ ಅಂಗಡಿಗೆ ಓಡಿದೆ. ಅಲ್ಲಿ ಕೆಲಸ ಮಾಡುವ ಹುಡುಗರನ್ನು ಸ್ನೇಹದಿಂದ ಮಾತನಾಡಿಸುವ ರೂಢಿ. ದಿನಸಿ ಭಾರವಾದಾಗ ಮನೆಗೆ ತಂದುಕೊಡುವಷ್ಟು ಉದಾರಿಗಳು.  ಅವರನ್ನು ಗ್ಯಾಸ್ ಬದಲಾಯಿಸುವ ಪ್ರಾವೀಣ್ಯದ ಬಗ್ಗೆ ವಿಚಾರಿಸಿದೆ. ಅವರ್ಯಾರೂ ಆ ವಿದ್ಯೆಯಲ್ಲಿ ನಿಪುಣರಲ್ಲವೆಂದು ತಿಳಿದು ವಾಪಸಾದೆ. ವಿಷಯ ತಿಳಿದ ಎದುರು ಅಂಗಡಿಯವರು "ಅಕ್ಕ  ನಮ್ಮನೆ ಹತ್ತಿರ ಸಿಲಿಂಡರ್ ಅಸ್ಫೋಟ ಅಗಿ ನನಗೆ ಗ್ಯಾಸ್ ಅಂದರೆ ಭಯ. ನಮ್ಮ ಯಜಮಾನರಿಗೂ ಬದಲಾಯಿಸೋಕೆ ಬರೋಲ್ಲ. ನಾವೇ ಅಲ್ಲಿ ಹತ್ತಿರ ಇರೋರನ್ನ ಕರೆಸಿ ಹೊಸ ಸಿಲಿಂಡರ್ ಹಾಕಿಸ್ಕೋತೀವಿ"

ಸಂತ ತ್ಯಾಗರಾಜರ "ಎಂದರೋ ಮಹಾನುಭಾವುಲು _ಅಂದರಿಕೀ ವಂದನಾಮು" ಶ್ರೀರಾಗದ ಪಂಚರತ್ನ ಕೃತಿ  ಸ್ಮರಣೆಗೆ ಬಂತು.

"ಆಹಾ ಗ್ಯಾಸ್ ಸಿಲಿಂಡರ್ ಬದಲಾವಣೆ ಎಂತಹ ಬ್ರಹ್ಮವಿದ್ಯೆ. ಅ ಕಲೆ ಬಲ್ಲವರು ಜಗತ್ತಿನ ಅತಿಶ್ರೇಷ್ಠರು" ಎಂದು ತೋರಿದ್ದು. ನಿಜ. ಯಾರ್ಯಾರೋ ಕಣ್ಣೆದುರು ಕುಣಿದಾಡಿದರು. ಯಾರೂ ಈ ಕೆಲಸಕ್ಕೆ ಲಾಯಕ್ಕಾದವರಲ್ಲ ಎನಿಸಿತು. ಯಾವ ಬಾಯಲ್ಲಿ ಕರೆಯುವುದು? ಏನೆಂದುಕೊಂಡಾರೋ ಎಂಬ ಕಳವಳ.

ಇಷ್ಟೆಲ್ಲ ವಿಷಯ ಮಂಥನ ತಲೆಯಲ್ಲಾಗುವಾಗ ಗಡಿಯಾರದ ಮುಳ್ಳು ನಿರ್ದಾಕ್ಷಿಣ್ಯವಾಗಿ ಹನ್ನೆರಡನ್ನು ಸಮೀಪಿಸಿತ್ತು. ಇನ್ನೆರಡು ಗಂಟೆಗೆ ಮಗಳು ಊಟಕ್ಕೆ ಬರುತ್ತಾಳೆ ಎಂದು ಬುದ್ಧಿ ಎಚ್ಚರಿಸಿತು. ಸಾರು, ಹುಳಿ, ಪಲ್ಯ, ಗೊಜ್ಜು. ಮುಂತಾದ ಅಡುಗೆ ವೈವಿಧ್ಯಗಳು ಬೆಳಿಗ್ಗೆಯೇ ಸಿದ್ಧವಾಗಿದ್ದರೂ ಅನ್ನ, ರಾಗಿಮುದ್ದೆ ಎಲ್ಲ ಊಟದ ವೇಳೆಗೆ ಮಾಡಿ ಸವಿಯುವ ಪಾಕ ಸಂಪ್ರದಾಯ ನಮ್ಮದು. ಹಾಗಾಗಿ ಅನ್ನ ಸೃಷ್ಟಿಯಾಗಬೇಕು. ಮನೆಯ ಸಮೀಪದ ಐದು ನಿಮಿಷದ ನಡಿಗೆಯ ಹಿರಿಯ ಗೆಳತಿ ನಾಗರತ್ನಮ್ಮ ಜ್ಞಾಪಕಕ್ಕೆ ಬಂದರು. ಅವರನ್ನು ಕೇಳಿದರೆ ಅನ್ನ ಮಾಡಿಕೊಟ್ಟಾರು ಎಂಬ ಧೈರ್ಯ ಜಾಗೃತವಾಯಿತು. ಸುಪ್ತಮನಸ್ಸು ಮಾತ್ರ ಈ ಘನಕಾರ್ಯಕ್ಕೆ ಯಾರನ್ನಾದರೂ ಹುಡುಕುವ ಸಂಕಲ್ಪದಲ್ಲೇ ತಲ್ಲೀನವಾಗಿತ್ತು. ಯಾವುದೋ ಕೆಲಸದ ಮೇಲೆ ಹೊರಬಂದೆ. ಪರಿಚಿತ ಎಂಬತ್ತರ ಪ್ರಾಯದ ನಾರಾಯಣರಾಯರು ಬಳಲಿದ ಮೊಗ ಹೊತ್ತು ಬರುತ್ತಿದ್ದವರು "ನಮಸ್ಕಾರ" ಎಂದರು. ಅವರು ಸರ್ಕಾರದ ಸ್ವಾಮ್ಯದ ಡಿಫೆನ್ಸ್ ಸಂಸ್ಥೆಯಿಂದ ನಿವೃತ್ತರಾದವರು. ಅವರು ಎರಡು ದಿನಕ್ಕೊಮ್ಮೆಯಾದರೂ ನಮ್ಮಲ್ಲಿಗೆ ಬಂದು ಒಂದು ಕಾಫಿ ಕುಡಿದು ಕಷ್ಟಸುಖ ಮಾತಾಡಿ ಹೋಗುವ ಪರಿಪಾಠ. ಮನೆಯೂ ಹತ್ತಿರವೇ. ಇಂತಹ ಸಂಕಟ ಪರಿಸ್ಥಿತಿಯಲ್ಲಿ ನಾರಾಯಣರಾಯರು ಥೇಟ್ ಶಂಖಚಕ್ರಗಧಾಧಾರಿಯಾದ ವಿಷ್ಣುವಿನಂತೆ ಕಂಡರು. ನನಗಾದ ಸಂತೋಷ ಬಚ್ಚಿಡಲಾಗದಷ್ಟು.

ನಾನು "ನಮಸ್ಕಾರ" ಎಂದೆ ಆ ಆತ್ಮೀಯರಿಗೆ.

"CGHS ಗೆ ಹೋಗಿ ಬರ್ತಿದೀನಿ. ಅದೇನು ರಣಬಿಸಿಲು. ಸಾಕಾಗಿಹೋಯ್ತು" ಎಂದರವರು.

ಕೂಡಲೇ ನಾನು "ಒಳಗೆ ಬನ್ನಿ ಸಾರ್ ಕಾಫಿ ಕುಡಿಯೋಣ" ಎಂದು ಭಂಡತನದಲ್ಲಿ ಅಹ್ವಾನಿಸಿದೆ. ಅವರು ಒಳಬಂದು ತಿರುಗುತ್ತಿದ್ದ ಫ್ಯಾನಿನ ಅಡಿಯಲ್ಲಿ ಕೂತರು. ಹಿಂದೆಯೇ ಬಂತು ನನ್ನ ಪ್ರಶ್ನೆ.

"ಸಾರ್ ನಿಮ್ಮನೇಲಿ ಗ್ಯಾಸ್ ಮುಗಿದು ಹೋದರೆ ಏನು ಮಾಡ್ತೀರಾ?"

ಪಟ್ ಬಂತು ಅವರ ಉತ್ತರ

"ಏನಿಲ್ಲ ಎರಡು ಸಿಲಿಂಡರ್ ಇದೆ. ಒಂದು ಮುಗಿದರೆ ಮತ್ತೊಂದು ರೆಡಿ ಇರತ್ತೆ. ನಮಗೆ ಸಮಸ್ಯೆಯೇ ಇಲ್ಲ" ಎಂದರು. "ನಮ್ಮಲ್ಲೂ ನಾಲ್ಕಿದೆ" ಎಂದು ಕೊಚ್ಚಿಕೊಳ್ಳುವ ಸಮಯವದಲ್ಲ.

ಅವರಿಗೆ ನನ್ನ ಪ್ರಶ್ನೆಯ ಜಾಡು ಪಾಪ ತಿಳಿಯಲಿಲ್ಲವೆನಿಸುತ್ತೆ. ನನ್ನ ವಿಚಾರಣೆ ಮುಂದುವರೆಸಿದೆ.

"ಅದ್ಸರಿ ಸಾರ್. ಗ್ಯಾಸ್ ಮುಗಿದು ಹೋದಾಗ ಸಿಲಿಂಡರ್ ಬದಲಾಯಿಸೋರು ಯಾರು?"

ಹೆಮ್ಮೆಯಿಂದ "ನಾನೇ" ಎಂದರು. ನನ್ನ ಪಡಿಪಾಟಲು ವಿವರಿಸಿದೆ.

"ಅಯ್ಯೋ ಅಷ್ಟೇ ತಾನೆ. ನಾನೇ ಸಿಲಿಂಡರ್ ಚೇಂಜ್ ಮಾಡ್ತೀನಿ. ಎಲ್ಲೀಂತ ತೋರಿಸಿ"

ಅವರು ಎದ್ದು ಬರುವ ಮುನ್ನ ಹಿತ್ತಲಬಾಗಿಲು ತೆರೆದೆ. ಅಲ್ಲಿ ಕಂಡದ್ದು ಪಾಚಿಪ್ರಪಂಚ. ಈ ವಯೋವೃದ್ಧರು ಜಾರಿಬಿಟ್ಟರೆ ಎಂಬ ಆತಂಕಕ್ಕೆ ಎದೆ ಹೊಡೆದುಕೊಳ್ಳಲಾರಂಬಿಸಿತು. ಅದೇ ವೇಳೆಗೆ ಆ ಪಾಚಿಕಟ್ಟುವಿಕೆಗೆ ಮೂಲವಾದ

ಚಂದ್ರಿಕಾಳ ಮೇಲೆ ಅಸಾಧ್ಯ ಸಿಟ್ಟು ಹುಟ್ಟಿತು. ಭಯಪಟ್ಟರೆ ಕೆಲಸ ನೆರವೇರದು ಎಂಬ ಪ್ರಜ್ಞೆ ಜೀವಂತವಾಗಿ ಮೆಲ್ಲಮೆಲ್ಲನೆ ಹೆಜ್ಜೆ ನಮಸ್ಕಾರ ಮಾಡುವಷ್ಟು ವ್ಯವಧಾನದಿಂದ ಅವರನ್ನು ಗ್ಯಾಸ್ ಸಿಲಿಂಡರ್ ಬಳಿ ತಂದು ನಿಲ್ಲಿಸಿ ಗೋಡೆ ಹಿಡಿದು ಹೆಜ್ಜೆ ಹಾಕಿ ಆ ತುದಿಯಿಂದ ತುಂಬಿದ ಸಿಲಿಂಡರ್ ಎಳೆದು ತಂದೆ.

ಅವರನ್ನು ನಿಂತ ಜಾಗದಿಂದ ಕದಲದಂತೆ ಎಚ್ಚರವಹಿಸಿದೆ.

ಅವರು ಸಿಲಿಂಡರ್ ಬದಲಾಯಿಸುವಾಗ ಅವರು ಜಾರದಂತೆ ಬೀಳದಂತೆ ನಾನು ನೀರಿನ ಡ್ರಮ್‌ಗೆ ಆತುಕೊಂಡಿದ್ದೆ. ಅಂತೂ ನಾರಾಯಣರಾಯರು ಅವರಿಗೆ ವಹಿಸಿದ ಸಿಲಿಂಡರ್ ಬದಲಾಯಿಸುವ ಕಾರ್ಯ ಸುಸೂತ್ರವಾಗಿ ನೆರವೇರಿಸಿದರು. ಅವರು ಅಲ್ಲಿಂದ ಮರಳುವಾಗ ನಾನು ಅವರನ್ನು ಬೆಂಗಾವಲು ವಾಹನದಂತೆ ಹಿಂಬಾಲಿಸಿ ಹುಷಾರಾಗಿ ಕುರ್ಚಿ ಸೇರಿಸಿದೆ.

ಈ ಜೋಪಾನ, ಕಳಕಳಿ ಇವೆಲ್ಲ ನನ್ನ ವೃತ್ತಿ ಕ್ಷೇತ್ರವಾದ ಆಕಾಶವಾಣಿ ಕಲಿಸಿದ ತರಬೇತಿ ಪಾಠಗಳು. ನಾನು ಆ ಪ್ರತಿಷ್ಠಿತ ಸಂಸ್ಥೆಯಲ್ಲಿ ಅನೇಕ ವರ್ಷಗಳು ಹಿರಿಯರಿಗಾಗಿ "ಬಾಳಬೆಳಕು" ಕಾರ್ಯಕ್ರಮದ ನೇತೃತ್ವ ನಿರ್ವಹಿಸಿರುವ ಅನುಭವದ ಹಿನ್ನಲೆಯ ಬೆಳಕಿದೆ.

ನಮ್ಮ ಸ್ಟುಡಿಯೋದಲ್ಲಿ ಸಂದರ್ಶನಕ್ಕಾಗಿ ಬರುವ ಅತಿಥಿಗಳನ್ನು ಕೂರಿಸಲೆಂದೇ ಹೊಸದಾಗಿ ಕಂಪ್ಯೂಟರ್ ಚೇರ್‌ಗಳನ್ನು ಪರಿಚಯಿಸಲಾಗಿತ್ತು. ಭಾಷಣದ ಸ್ಟುಡಿಯೋದಲ್ಲೇ ಇಂತಹ ಬದಲಾವಣೆ ಹಾಗು ಮಾತುಕತೆ ಕಾರ್ಯಕ್ರಮಗಳು ಅಲ್ಲೇ ಮುದ್ರಿತವಾಗುವುದು ಸಹ. ಅಂದ ಮೇಲೆ ಹಿರಿಯರ ಕಾರ್ಯಕ್ರಮಕ್ಕೆ ಬರುವವರು ಅಲ್ಲೇ ಕೂರಬೇಕು. ಅಭ್ಯಾಸವಿಲ್ಲದವರು ಅದರ ಮೇಲೆ ಕೂತ ಕೂಡಲೇ ಜಾರಿಬೀಳುವುದು ಶತಸಿದ್ಧ. ಹಾಗೊಂದು ವೇಳೆ ಬಿದ್ದು ಕೈ ಕಾಲು ಬೆನ್ನುಮೂಳೆ ಮುರಿದರೆ ಸುಧಾರಿಸಿಕೊಳ್ಳಲಾಗದ ಪ್ರಾಯದಲ್ಲಿ ಅವರ ಪಾಡು ದೇವರಿಗೇ ಪ್ರೀತಿ. ಮಕ್ಕಳು ಮೊಮ್ಮಕ್ಕಳಿಂದ ಸಹಸ್ರ ನಾಮಾರ್ಚನೆ. ಜೊತೆಗೆ ಅಕಾಶವಾಣಿ ಅವರ ಜೀವನದ ಕಹಿನೆನಪು ಅಗುವ ಸಂಭವ. ಈ ಎಲ್ಲ ಕಾರಣ ಯೋಚಿಸಿ ಅವರು ಸರಿಯಾಗಿ ಕುರ್ಚಿಯಲ್ಲಿ ಕೂತು ಹಿಂದಕ್ಕೆ ಒರಗುವವರೆಗೂ ಅವರ ಕ್ಷೇಮ ಗಮನಿಸಿ ಮೈಕಿನ ಅಂತರ ಹೊಂದಿಸಿ ಅವರಿಗೊಂದು ನೆಮ್ಮದಿಯ ವಾತಾವರಣ ಕಲ್ಪಿಸಿ ಸಂದರ್ಶನ ಮಾಡುತ್ತಿದ್ದೆ. ಇದರಿಂದ ಸಮಯ ಹೆಚ್ಚು ಹಿಡಿಯುತ್ತಿದ್ದುದು ನಿಜವಾದರೂ ನನಗೆ ತೃಪ್ತಿಯ ಭಾವ ಮೂಡುತ್ತಿತ್ತು.

ಮಾತುಕತೆ ಮುಗಿದ ಮೇಲೂ ಅವರು ಕುರ್ಚಿಯಿಂದ ಇಳಿಯುವವರೆಗೂ ಜೊತೆಗಿರುತ್ತಿದ್ದೆ. ಅವರಿಗನಿಸಿರಬಹುದು ಇದ್ಯಾಕೆ ಈಕೆ ಹೀಗೆ ಹಿಂದೆಮುಂದೆ ಸುಳಿದಾಡುತ್ತಾಳೆಂದು.

ನಾನು ದೊಡ್ಡಸ್ತಿಕೆಗೆ ಈ ವಿಷಯ ಪ್ರಸ್ತಾಪ ಮಾಡುತ್ತಿಲ್ಲ ಬದಲಿಗೆ ಇವೆಲ್ಲ ಹಿರಿಯರ ಕುರಿತು ನಮ್ಮ ದೃಷ್ಟಿಯನ್ನು, ಜೀವನಕ್ರಮವನ್ನು ಹೇಗೆ ಬದಲಾಯಿಸುತ್ತವೆ ಎಂಬುದಕ್ಕೆ ನಿದರ್ಶನವಷ್ಟೆ.

ಅಂತೂ ಕಡೆಗೆ ಆ ಹೊತ್ತು ನಾರಾಯಣರಾಯರು ನಾನು ಪ್ರಪಂಚದ ಅನೇಕ ಸಂಗತಿಗಳ ಬಗ್ಗೆ ಮಾತನಾಡುತ್ತ ಕಾಫಿ ಸವಿದೆವು. ಅದರೆ ಚಂದ್ರಿಕಾಗೆ ಮಾತ್ರ ಹೊತ್ತುಗಾಲ ಬಂದಿತ್ತು.

ಜಾರುವ ಸಮಯ ತಂದೊಡ್ಡಿದ ಅವಳ ಸೇವೆ ಅಂದಿಗೆ ಕೊನೆಯಾಯಿತು.

# ಕೊಡೆ ಬಣ್ಣದ ಕೊಡೆ

● ಎನ್. ಶೈಲಜಾ ಹಾಸನ್

ಛತ್ರಿ, ಕೊಡೆ, ಅಂಬ್ರಲಾ ಹೀಗೆ ನಾನಾ ಹೆಸರಿನಿಂದ ಕರೆಸಿಕೊಳ್ಳುವ ಈ ವಸ್ತು ಮಳೆಗಾಲದ ನೆಂಟ ಹಾಗು ಬಿಸಿಲಿನ ಭಂಟ. ಈ ನೆಂಟ ಇಲ್ಲದೆ ಹೋದರೆ ಮಳೆಗಾಲದಲ್ಲಿ ಹೊರ ಹೋಗುವಂತೆಯೇ ಇಲ್ಲ. ಸುರಿಯುವ ಮಳೆಯಲಿ ನೆನೆಯದಂತೆ ರೈನ್ ಕೋಟು, ಜರ್ಕಿನ್ ಇನ್ನೂ ಅದೇನೇನೋ ಹೊಸ ಹೊಸ ವಸ್ತುಗಳ ಆವಿಷ್ಕರಿಸಲಾಯಿತಾದರೂ ಈ ಕೊಡೆಯ ಮುಂದೆ ಅವ್ಯಾವುವೂ ನಿಲ್ಲಲಾರವು.

ಬಾಲ್ಯದಲ್ಲಿ ಸಿನಿಮಾ ನೋಡಲು ಹೋದಾಗ "ಮಳೆಯಲಿ ಬಿಸಿಲಲಿ ಅರಳುವ ಹೂ ಯಾವುದೆಂದು" ಸಿನಿಮಾ ನಾಯಕ ಕೇಳಿದರೆ ನಾಯಕಿ ಉತ್ತರ ಗೊತ್ತಿಲ್ಲದೆ ಬೆಬ್ಬೆಬ್ಬೆ ಎನ್ನುವಾಗ ನಾಯಕ ಉತ್ತರ ಹೇಳುವ ಮುಂಚೆಯೇ ಸಿನಿಮಾ ನೋಡುತ್ತಿದ್ದ ನಾವು ಛತ್ರಿ ಛತ್ರಿ ಅಂತ ಎಲ್ಲರೂ ಕೇಳುವಂತೆ ಕಿರುಚಿ ಅಪ್ಪ ಅಮ್ಮನಿಂದ ಚೆನ್ನಾಗಿ ಬೈಸಿಕೊಂಡಿದ್ದು ಉಂಟು.

ಈ ಕೊಡೆ ಬಗ್ಗೆ ಇನ್ನೊಂದು ಸ್ವಾರಸ್ಯಕರ ಘಟನೆ ನೆನಪಾಗುತ್ತದೆ. ಲೀಫ್ ಲೋಟಸ್ ಪರ್ಲ್ ಅಂಬ್ರಲಾ ಅಂದರೆ ಏನು ಅಂತ ಕನ್ನಡದಲ್ಲಿ ಹೇಳು ಅಂತ ಹೈಸ್ಕೂಲಿನಲ್ಲಿದ್ದಾಗ ಎಲ್ಲಾ ಗೆಳತಿಯರಿಗೂ ಕೇಳಿ "ಎಲೆ ಕಮಲ ಮುತ್ತು ಕೊಡೆ' ಅಂತ ಉತ್ತರ ಪಡೆದು ಜೋರಾಗಿ ನಗುತ್ತಿದ್ದ ತುಂಟ ಗೆಳತಿಯರ ನೆನಪಾಗಿ ಈಗಲೂ ತುಟಿ ಮೇಲೆ ನಗು ಅರಳುತ್ತದೆ.

ಈ ಕೊಡೆಗಳ ಉಪಯೋಗ ಬರಿ ಮಳೆಯಿಂದ ಮತ್ತು ಬಿಸಿಲಿನ ತಾಪದಿಂದ ರಕ್ಷಿಸಿಕೊಳ್ಳುವುದಕ್ಕೆ ಮಾತ್ರವೇ ಅಲ್ಲ. ರಸ್ತೆಯಲ್ಲಿ ಕೊಡೆ ಹಿಡಿದು ನಡೆದುಕೊಂಡು ಹೋಗುವಾಗ ನಮಗೆ ಸಾಲ ಕೊಟ್ಟವರೊ, ನಮಗೆ ಕಿರಿಕಿರಿ ಮಾಡುವವರೋ, ನಮಗೆ ಬೇಡವಾದವರೊ ಎದುರಿಗೆ ಬಂದಾಗ, ನಮ್ಮ ಕೊಡೆಯಿಂದ ಎದುರಿಗೆ ಬರುವವರೆಗೆ ನಮ್ಮ ಮುಖ ಕಾಣದಂತೆ ಮರೆ ಮಾಡಿ ಕೊಂಡು ಅವರಿಗೆ ನಾವು ಅಂತ ಗೊತ್ತಾಗದಂತೆ ತಪ್ಪಿಸಿಕೊಂಡು ಹೋಗಿ ಬಿಡಬಹುದು.

ಕೊಡೆಯಿಂದ ಕೆಲವೊಮ್ಮೆ ನಮ್ಮನ್ನು ರಕ್ಷಿಸಿಕೊಳ್ಳುವುದು ಹೇಗೆಂದರೆ ಕೈಯಲ್ಲಿ ಕೊಡೆ ಇದ್ದರೆ ಆಪತ್ ಕಾಲದಲ್ಲಿ ರಕ್ಷಣೆಗೆ ಬರುತ್ತದೆ. ಹಸುವೊ ಎಮ್ಮೆಗಳೊ ತಿವಿಯಲು ಬಂದರೆ ಆಯುಧದಂತೆ ಕೊಡೆಯನ್ನು ಉಪಯೋಗಿಸಿಕೊಂಡು ಎಮ್ಮೆಗೆ ಹೊಡೆದು ಓಡಿಸಬಹುದು. ರಸ್ತೆಯಲ್ಲಿ ನಾಯಿಗಳು ಅಟ್ಟಿಸಿಕೊಂಡು ಕಚ್ಚಲು ಬಂದರೆ ವೀರರಂತೆ ಕೊಡೆ ಬೀಸಿ ನಾಯಿಗಳನ್ನು ಹೆದರಿಸಬಹುದು. ರೌಡಿಗಳು ಅಥವಾ ಶತ್ರುಗಳು ಧಾಳಿಮಾಡಿದರೂ ಕೊಡೆಯಿಂದ ಕೈಲಾದಷ್ಟು ಹೋರಾಟ ಮಾಡಿ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡ ಬಹುದು. ಬಟ್ಟೆ ಒಣಗಿಸಲು ಜಾಗ ಸಾಲದಾದಾಗ ಕೊಡೆಯನ್ನು ಆಗಲಿಸಿ ಅದರ ಮೇಲೆ ಬಟ್ಟೆ ಹಾಕಿ ಒಣಗಿಸ ಬಹುದು. ಮಕ್ಕಳು ಕೊಡೆಗಳನ್ನು ಅಜ್ಜನ ಕೊಡೆಯಿದು ನನ್ನಯ ಕುದುರೆ ಅಂತ ಆಟ ಆಡಿ ಖುಷಿ ಪಟ್ಟಿರುವುದು ಉಂಟು. ಒಂದೆ ಎರಡೇ ಈ ಕೊಡೆಯ ಉಪಯೋಗ. ಹತ್ತು ಹಲವಾರು ಇವೆ. ಒಟ್ಟಿನಲ್ಲಿ ಇದು ಒಂಥರಾ ಅಪತ್ಭಾಂದವ. ಇಂತಹ ಕೊಡೆ ಅಥವಾ ಛತ್ರಿಯನ್ನು ಹೇಗೆ ತಯಾರಿಸುತ್ತಾರೆಂದರೆ ಕಟ್ಟಿಗೆ ಅಥವಾ ಲೋಹದ ಅಡ್ಡಪಟ್ಟಿಗಳಿಂದ ಆಧಾರಪಡೆದ, ಸಾಮಾನ್ಯವಾಗಿ ಒಂದು ಕಟ್ಟಿಗೆಯ, ಲೋಹದ, ಅಥವಾ ಪ್ಲಾಸ್ಟಿಕ್ ಕೋಲಿನ ಮೇಲೆ ಆರೋಹಿತವಾದ

ಒಂದು ಮಡಚಬಲ್ಲ ಮೇಲಾವರಣವನ್ನು ಮಾಡಿರುತ್ತಾರೆ. ಕೆಲವು ಕೇವಲ ಮಳೆಯಿಂದ, ಮತ್ತೆ ಕೆಲವು ಸೂರ್ಯನಿಂದ ರಕ್ಷಣೆ ಒದಗಿಸಲು ವಿನ್ಯಾಸಗೊಂಡಿರುತ್ತವೆ. ಹಲವು ವೇಳೆ ಇಂತಹ ಕೊಡೆಗಳಲ್ಲಿ ವ್ಯತ್ಯಾಸ ಮೇಲಾವರಣಕ್ಕೆ ಬಳಸಲ್ಪಡುವ ವಸ್ತುವಿನಲ್ಲಿರುತ್ತದೆ; ಕೆಲವು ಕೊಡೆಗಳು ಜಲನಿರೋಧಕವಾಗಿರುವುದಿಲ್ಲ. ಕೊಡೆಗಳ ಮೇಲಾವರಣಗಳನ್ನು ಬಟ್ಟೆ ಅಥವಾ ಮೆದುವಾದ ಪ್ಲಾಸ್ಟಿಕ್ನಿಂದ ತಯಾರಿಸಿರಬಹುದು. ಕೊಡೆಗಳು ಮುಖ್ಯವಾಗಿ ವೈಯಕ್ತಿಕ ಬಳಕೆಗೆ ಬರುವಷ್ಟು ಗಾತ್ರ ಹೊಂದಿರುವ, ಕೈಯಲ್ಲಿ ಹಿಡಿಯುವ, ಸಾಗಿಸಬಲ್ಲ ಸಾಧನಗಳಾಗಿರುತ್ತವೆ. ಗಾಲ್ಫ್ ಕೊಡೆಗಳು ಅತ್ಯಂತ ದೊಡ್ಡ ಕೈ ಹಿಡಿಯ ಕೊಡೆಗಳಾಗಿವೆ. ಕೊಡೆಗಳನ್ನು ಎರಡು ವರ್ಗಗಳಾಗಿ ವಿಭಜಿಸಬಹುದು. ಸಂಪೂರ್ಣವಾಗಿ ಬಾಗಿಕೊಳ್ಳಬಹುದಾದ ಕೊಡೆಗಳು, ಇವುಗಳಲ್ಲಿ ಮೇಲಾವರಣವನ್ನು ಆಧರಿಸಿರುವ ಲೋಹದ ಕೋಲು ಒಳಸರಿಯುತ್ತದೆ, ಮತ್ತು ಹೀಗೆ ಕೊಡೆಯು ಕೈಚೀಲದಲ್ಲಿ ಹಿಡಿಸುವಷ್ಟು ಚಿಕ್ಕದಾಗುತ್ತದೆ; ಮತ್ತು ಬಾಗಿಕೊಳ್ಳದ ಕೊಡೆಗಳು, ಇವುಗಳಲ್ಲಿ ಆಧಾರ ದಂಡವು ಒಳಸರಿಯುವುದಿಲ್ಲ ಮತ್ತು ಕೇವಲ ಮೇಲಾವರಣವನ್ನು ಬಾಗಿಸ ಬಹುದು. ಕೈಯಾರೆ ನಿರ್ವಹಿಸಲಾದ ಕೊಡೆಗಳು ಮತ್ತು ಲಂಘಕವನ್ನು ಹೊಂದಿದ ಸ್ವಯಂಚಾಲಿತ ಕೊಡೆಗಳ ನಡುವೆ ಮತ್ತೊಂದು ವ್ಯತ್ಯಾಸವನ್ನು ಮಾಡಬಹುದು. ಲಂಘಕವಿರುವ ಕೊಡೆಗಳು ಗುಂಡಿ ಒತ್ತುತ್ತಿದ್ದಂತೆ ತೆರೆದುಕೊಳ್ಳುತ್ತವೆ. ಇದು ಕೊಡೆಯ ಇತಿಹಾಸ. ಈ ಕೊಡೆಯ ಬಗ್ಗೆ ನನ್ನದೊಂದು ಹಳೆಯ ನೆನಪಿದೆ. ಆಗಷ್ಟೇ ಹೈಸ್ಕೂಲು ದಾಟಿ ಕಾಲೇಜು ಸೇರಿದ್ದೆ. ಬಣ್ಣದ ಛತ್ರಿ ತಗೋಬೇಕು ಅಂತ ಬಯಕೆ ಹುಟ್ಟಿ ಬಿಟ್ಟಿತು. ಅದಕ್ಕಾಗಿ ಅಪ್ಪ ನನ್ನ ಖರ್ಚಿಗೆ ಕೊಡುತ್ತಿದ್ದ ಹಣದಲ್ಲಿ ಕಷ್ಟ ಪಟ್ಟು ಉಳಿತಾಯ ಮಾಡಿ ಬಣ್ಣದ ಕೊಡೆ ತಂದು ಕೊಡಿ ಅಂತ ಅಪ್ಪನಿಗೆ ಆ ಹಣವನ್ನು ಕೊಟ್ಟು ಸಂಜೆ ಅಪ್ಪ ತರುವ ನನ್ನ ಕನಸಿನ ಬಣ್ಣದ ಛತ್ರಿಗಾಗಿ ಕಾಯುತ್ತಿದ್ದೆ. ಅಪ್ಪ ಡ್ಯೂಟಿ ಮುಗಿಸಿ ಸಂಜೆ ಬರುವಾಗ ಮರೆಯದೆ ಕೊಡೆಯೊಂದಿಗೆ ಬಂದಿದ್ದರು.ಅಪ್ಪ ಬಂದೊಡನೆ ನಾನೆ ಬಾಗಿಲು ತೆಗೆದು ಅಪ್ಪನ ಕೈಯಲ್ಲಿ ಇದ್ದ ಕೊಡೆ ನೋಡಿ ನಿರಾಶೆ, ನೋವು, ಕೋಪ ಅಳು ಒಟ್ಟಿಗೆ ಒತ್ತರಿಸಿಕೊಂಡು ಬಂದು ಬಿಟ್ಟಿದ್ದವು. ಬಣ್ಣದ ಕೊಡೆಯೊಂದಿಗೆ ಅಪ್ಪನ ನಿರೀಕ್ಷೆಯಲ್ಲಿದ್ದ ನನಗೆ ಅಪ್ಪ ತಂದ ಉದ್ದ ಕೋಲಿನ ಪುರುಷರು ಬಳಸುವ ಕೊಡೆ ನೋಡಿ ಹೇಗಾಗಿರ ಬೇಡ. ಈ ಉದ್ದದ ಕೊಡೆಯನ್ನು ನಾನು ಕಾಲೇಜಿಗೆ ತೆಗೆದುಕೊಂಡು ಹೋಗಲು ಸಾಧ್ಯವೆ. ಅಳುವನ್ನು ತಡೆದು ಕೊಳ್ಳುತ್ತಲೇ ಕೋಪದಿಂದ ಕಿರುಚಾಡಿದ್ದೆ. ಅಪ್ಪ ನನ್ನನ್ನು ಸಮಾಧಾನ ಮಾಡುತ್ತ "ನೋಡು ಮಗಳೇ, ಆ ಬಣ್ಣದ ಕೊಡೆ ಗಾಳಿ, ಮಳೆಗೆ ತಡಿಯುವುದಿಲ್ಲವಂತೆ. ಇದು ಗಟ್ಟಿ ಮುಟ್ಟಾಗಿದೆ. ಎಂತಹ ಮಳೆಗೂ ಗಾಳಿಗೂ ಅಲ್ಲಾಡುವುದಿಲ್ಲ ಅಂತೆ ಅದಕ್ಕೆ ಇದನ್ನೇ ತಂದಿದ್ದಿನಿ" ಅಂತ ಹೇಳುತ್ತಿದ್ದರೆ ಕೋಪದಿಂದ ಮೈ ಮನಸ್ಸು ಉರಿದು ಹೋಗಿತ್ತು. ಯಾರು ಎಷ್ಟು ಸಮಾಧಾನ ಹೇಳಿದರೂ ಸಮಾಧಾನವಾಗದೆ ಮುಸುಕಿಕ್ಕಿ ಮಲಗಿ ಬಿಟ್ಟೆ. ಅದೇ ಕೋಪದಲ್ಲಿ ಮಾರನೆ ದಿನ ಮಳೆ ಸುರಿಯುತ್ತಿದ್ದರೂ ಆ ಕೊಡೆಯನ್ನು ಮುಟ್ಟದೆ ಮಳೆಯಲಿ ನೆನೆದುಕೊಂಡೆ ಕಾಲೇಜು ತಲುಪಿದ್ದೆ. ಮಳೆಯಲಿ ನಾನು ಹಾಕಿಕೊಂಡಿದ್ದ ನೀಲಿ ಕೋಟು ತನ್ನ ಬಣ್ಣವನ್ನು ನನ್ನ ಹೊಸ ಬಿಳಿ ಬಣ್ಣದ ಮ್ಯಾಕ್ಸಿ ಮೇಲೆ ಇಳಿಸಿ ಹೊಸ ಚಿತ್ತಾರ ಮೂಡಿಸಿತ್ತು. ಹೊಸ ಡ್ರೆಸ್ ಹಾಳಾದ ಸಂಕಟ ಒಂದು ಕಡೆ, ಬಣ್ಣದ ಕೊಡೆ ತರದ ಅಪ್ಪನ ಮೇಲೆ ಕೋಪ ಇನ್ನೊಂದು ಕಡೆ. ಅಂದೆಲ್ಲ ಸಂಕಟ. ನಾನು ಮನೆಗೆ ಬರುವಷ್ಟರಲ್ಲಿ ಅಪ್ಪ ಗುಲಾಬಿ ಬಣ್ಣದ ಕೊಡೆ ತಂದು ನನಗಾಗಿ ಕಾಯುತ್ತಿದ್ದದ್ದನ್ನು ಕಂಡು ನನ್ನ ಸಂಕಟ ಕೋಪ ಎಲ್ಲವೂ ಮಾಯವಾಗಿ ಗುಲಾಬಿ ಕೊಡೆ ಹಿಡಿದು ಹಿರಿ ಹಿರಿ ಹಿಗ್ಗಿದ್ದೆ.

■

# ಸಿನಿಮಾ ಸಂಬಂಧ

● ಡಾ. ಶ್ಯಾಮಲಾ ರವಿಶಂಕರ್

ನನಗೂ ಸಿನಿಮಾಗೂ ಬಹಳ ದೂರ. ಜನ ಯಾಕೆ ಸತ್ಕೊಂಡು ಬಿದ್ಕೊಂಡು ಸಿನಿಮಾ ನೋಡೋಕೆ ಹೋಗ್ತಾರೆ ಅಂತ ನನಗೆ ಇಂದಿಗೂ ಅರ್ಥ ಆಗಿಲ್ಲ. ಅದೂ ಈ ಕಾಲದಲ್ಲಿ ನೂರಾರು ರೂಪಾಯಿ ಟಿಕೆಟ್‌ಗೆ ಹತ್ತಾರು ರೂಪಾಯಿ ವ್ಯಾಲೇ ಪಾರ್ಕಿಂಗ್‌ಗೆ ತೆತ್ತು ಅದರ ಜೊತೆಗೆ ಇನ್ನೆಷ್ಟೋ ಅನಿವಾರ್ಯವಾದ ಖರ್ಚುಗಳನ್ನ ತಲೆ ಮೇಲೆ ಹಾಕ್ಕೋತಾರಲ್ಲಾ, ಯಾಕೆ ಹೀಗೆ ಅನ್ನೋದು ನನಗೆ ಬಿಡಿಸಲಾಗದ ಒಗಟು. ನನಗೆ ಮೂರು ಘಂಟೆ ಒಂದ್ಕಡೆ ಕೂತ್ಕೊಳ್ಳೋಕೆ ಸಾವಧಾನಾನೇ, ಇರೋಲ್ಲ. ಇನ್ನೂ ಇವರುಗಳು ಅರ್ಥಾತ್ ಸಿನಿಮಾಭಕ್ತರು ಅದೆಷ್ಟು ಸಾವಧಾನವಂತರೋ! ಯಾರಾದರೂ ಜೊತೆಗೆ ಬಾ ಅಂದರೂ ನಾನು ಏನಾದ್ರೂ ಪಿಳ್ಳೆ ನೆಪ ಹೇಳಿ ತಪ್ಪಿಸಿಕೊಂಡು ಬಿಡ್ತೀನಿ.

ಇಷ್ಟೆಲ್ಲ ಆದ್ರೂನೂ ಕೆಲವು ಬಾರಿ ನಾನು ಹೋಗಲೇಬೇಕಾದ ಸಂದರ್ಭಗಳು ತಲೆ ಮೇಲೆ ಬಿದ್ದು ಹೋಗಿದ್ದೇನೆ. ಹಿಂದಿ ಎಂಬುದೊಂದು ಭಾಷೆ ಇದೆ ಎಂದು ಗೊತ್ತಾಗೋ ಮೊದಲೇ 'ಇನ್ಸಾನಿಯತ್' ಅನ್ನೋ ಸಿನಿಮಾ ಸೆಂಟ್ರಲ್ ಟಾಕೀಸ್‌ನಲ್ಲಿ ಮನೆಮಂದಿ ನೆರೆಹೊರೆ ಎಲ್ಲ ಸೇರಿ ಒಂದು ಭಂಡಿ ಜನ ಹೊರಟ ನೆನಪು. ಇಷ್ಟಕ್ಕೂ ನನಗೆ ಕನ್ನಡ ಮಾತು ಬರ್ತಿತ್ತೋ ಏನೋ ಅಷ್ಟೇ. ಚಿತ್ರದ ಕಥೆ ಹೇಗೆ ಅರ್ಥ ಆಗತ್ತೆ? ನನಗೆ ಏನು, ಬೇಜಾನ್ ನಮ್ಮವರಿಗೂ ಅಷ್ಟೇ ಇರಬಹುದು. ಅಲ್ಲಿನ ಹೀರೊ (ನಿಮಗೇನಾದ್ರು ಗೊತ್ತಿದ್ರೆ ಜ್ಞಾಪಕ ಇದ್ರೆ ಜ್ಞಾಪಿಸ್ಕೊಳ್ಳಿ) ಒಂದು ಹಾರುವ ಕುರ್ಚಿಲಿ ಕೂತು ಮನೋವೇಗದಲ್ಲಿ ಸ್ಕ್ರೀನ್ ತುಂಬಾ ಹಾರಾಡ್ತಾ ಇರ್ತಾನೆ. ಮಾಯಾವಿ ಇರಬೇಕು, ಆಗಾಗ 'ಸೋಜಾವ್, ಉಠಾ' ಅಂತ ಗುಟುರು ಹಾಕ್ತಾ ಇರ್ತಾನೆ. ಅವನ ಆಜ್ಞೆಯನ್ನ ಭೂತವೊಂದು ಪಾಲಿಸ್ತಾ ಅವನ ಕೆಲಸಗಳನ್ನ ಮಾಡತ್ತೆ. ಇದಿಷ್ಟು ನನಗೆ ಅರ್ಥವಾಗಿದ್ದು. ಭೂತ ಅಂದ್ರೆ ಹೆದರೋಷ್ಟೂ ಗೊತ್ತಿರ್ಲಿಲ್ಲ. ಆಮೇಲೆ ಎಷ್ಟೋ ವರ್ಷಗಳಾದ ಮೇಲೆ ಭೂತ ಪಿಶಾಚಿ ಅಂದ್ರೇನೇ, ಮುಖ ವಿವರ್ಣ ಆಗಿ ಬಿಡತಾ ಇತ್ತು. ಇರಲಿ, ಈಗ ನನ್ನ ಭೂತ ಭಯ ಪ್ರಕರಣ ಅನುಚಿತ. ಈ ಸಿನಿಮಾದಿಂದ ನಮ್ಮ ಕಸಿನ್ಸ್ ಗುಂಪಿನ ನಾಲೆಜ್ ಬ್ಯಾಂಕಿಗೆ ''ಸೋಜಾ, ಉಟಾವ್' ಪದಗಳು ಆಕ್ಶನ್ ಸಮೇತ ಸೇರಿಕೊಂಡವು. ಇನ್ನು ಸಿನಿಮಾ ನಟನೆ. ಅಜ್ಜಿಮನೆಯ ಪಶ್ಚಿಮಾಭಿಮುಖವಾಗಿದ್ದ ಒಂದು ಕೋಣೆ ನಮ್ಮ ಥಿಯೇಟರ್. ಅಲ್ಲಿದ್ದ ಚಾಪೆ, ಮೇಜು, ಕುರ್ಚಿಗಳು ನಮ್ಮ ಪೀಠೋಪಕರಣಗಳು. ಬಾಗಿಲು ಮುಚ್ಚಿ, ಕಿಟಕಿ ಸ್ವಲ್ಪವಷ್ಟೆ ತೆಗೆದು ಬೀದಿಯಲ್ಲಿ ಓಡಾಡುವರ ನೆರಳಿಗಾಗಿ ಕಾಯುವುದು ಸಭಿಕರ ಕೆಲಸ. ಆಗ ಈಗಿನ ಹಾಗೆ ಮೂರೂ ಹೊತ್ತೂ ಜನ ಬೀದಿ ಸುತ್ತುತ್ತಾ ಇರ್ತಿರಲಿಲ್ಲ. ಆಗೊಬ್ಬ ಈಗೊಬ್ಬ ಓಡಾಡಿದರೆ ನಮ್ಮ ಕತ್ತಲೆ ಕೋಣೆಲಿ ನೆರಳು ಸಂಚಾಲಿತ. ಎಷ್ಟೋಸಲ ನೆರಳಿನ ಸೋರ್ಸಿಗಾಗಿ ಕಾದುಕಾದು ಬೇಸತ್ತು ನಮ್ಮಲ್ಲೇ ಒಬ್ಬೊಬ್ಬರು ಸರದಿ ಮೇರೆಗೆ ಎದ್ದು ಹೋಗಿ ರೋಡಿನಲ್ಲಿ ಅಡ್ಡಾಡಿ ಬರುವುದು. ಇದನ್ನು ನೋಡಿದ ಮಿಕ್ಕ ಕಪಿಗಳು ಆವೇಶ - ಉದ್ವೇಗಗಳೊಡನೆ ಜಯಕಾರ ಮಾಡುವುದು, ನಮ್ಮ ಸಿನಿಮಾ. ಆಗಾಗ ಒಬ್ಬೊಬ್ಬ ಚಿಕ್ಕಮ್ಮನೋ ಅತ್ತೆಯೋ ಬಂದು ಯಾಕೆ ಇವುಗಳ ಸುಳಿವೇ

ಇಲ್ಲವಲ್ಲ ಅಂತ ನೋಡಿ, ಸದ್ಯ ನಾವಿನ್ನು ಮಲಗೋಣ ಎಂದು ಹೊರಟು ಹೋಗುತ್ತಿದ್ದರು. ಯಾರೋ ಒಬ್ಬರು, 'ಸಿನಿಮಾನಲ್ಲಿ ಹಾಡುಗಳೂ ಇರತ್ತವೆ ಕಣ್ರೋ' ಅಂದಾಗ ತೊಗೊಳ್ಳಿ ಇಷ್ಟಬಂದ ಟ್ಯೂನಿನಲ್ಲಿ ತೋಚಿದ ಲಿರಿಕ್ಸ್ ಹಾಕಿ ಹಾಡಿದ್ದು ಮುಂದಿನ ಹಂತ. ಹೀಗೆ ನಡೀತಿತ್ತು ನಾವೇ ಪ್ರೊಡ್ಯೂಸ್, ಡೈರೆಕ್ಟ್ ಮಾಡಿ ಮ್ಯೂಸಿಕ್ ಡೈರೆಕ್ಟೂ ಮಾಡಿ ಹಾಡಿದ ಸಿನಿಮಾ ಹೇಗೆ ಶುರು ಆಯಿತೊ ಹಾಗೆ ಮುಕ್ತಾಯ ಹೊಂದಿತು. ಈ ನಿಟ್ಟಿನಲ್ಲಿ ವೀರ ಪಾಂಡ್ಯ ಕಟ್ಟ ಬೊಮ್ಮನ್ (ಈ ಕಾಲದಲ್ಲಿ ಹೇಳೋದಾದ್ರೆ ವೀ ಪೀ ಕೇ ಬೀ)ನ ಹಾಗೆ ಅನಾಹುತ ಆಗ ಬಾರದೂಂತ ನಮ್ಮ ಹಿರಿಯರಿಂದ ಈ ಆಕ್ಟಿವಿಟೀ ಬ್ಯಾನ್ ಮಾಡಲಾಯಿತು.

ಯಾರೋ ಹಿರಿಯಾಕೆ ಟೈಮ್ ಪಾಸ್ಗೆಂದು ಹತ್ತಿರದಲ್ಲೇ ಇದ್ದ ಟಾಕೀಸ್ಗೆ ಹೋಗಿ ಎರಡಾಣೆ ಟಿಕೆಟ್ ತೊಗೊಂಡು ತೋರಿಸಿದ ಸಿನಿಮಾ ನೋಡಿಕೊಂಡು ಬಂದು ಪಿಸು ಮಾತಿನಲ್ಲಿ ಸಮಾವೇಶ ನಡೆಸುತ್ತಿದ್ದಾಗ ನನ್ನ ಕಿವಿಗೆ ಬಿದ್ದ ಮಾತು; 'ಏನು ನಾಚಿಕೆ ಇಲ್ಲದವಳು ಅಂತೀಯಾ. ಹೇಗೆ ಫೋಟೋ ತೆಗಿಸಿಕೊಂಡಳೋ ಏನೋ. ಛೀ ಛೀ...' ಎಷ್ಟೋ ವರ್ಷ ಆದ ಮೇಲೆ ಈ ಒಗಟು ಬಿಡಿಸಲಾಯಿತು. ಆ ಸಿನಿಮಾ ಹೆಸರು; ಬರ್ತ್ ಆಫ್ ಆ ಬೇಬೀ'! ಹೀಗೆ ನಮ್ಮ ಗುಂಪಿನಲ್ಲಿ ಸಿನಿಮಾಗೆ ಹೋಗೋದು ಒಂದು ಬೃಹತ್ ಸಾಧನೆ, ಹಾಗೂ ಅದರ ವಿಶ್ಲೇಷಣೆ ನಡೆಯುತ್ತಿತ್ತು.

ದಶಕಗಳೇ ಕಳೆದ ಮೇಲೆ ಶಂಕರಾಭರಣಂ ಸಿನಿಮಾ ಬಂತು, ಎಲ್ಲರ ಬಾಯಲ್ಲೂ ಅದರ ಮಾತೆ. ಎಲ್ಲರ ಶಿಫಾರಸು, ಬಲವಂತ ಹಾಗೂ ಅವರ ಬಾಯಿ ಮುಚ್ಚಿಸಲು ಎಂಟು ವರ್ಷದ ಮಗಳ ಜೊತೆ ಮಾಡಿಕೊಂಡು ನಾನು ಹೊರಟೇ ಬಿಟ್ಟೆ, ನೋಡೇಬಿಡೋಣ ಅದೇನು ಅಷ್ಟು ಸ್ಪೆಷಲ್ಲೋ ಅಂತ. ಒಳಗೆ ಹೋಗಿ ಸೆಟ್ಲ್ ಆದ ಒಡನೆಯೇ ಶುರು ಆಯಿತು ಪಂಚಾಯ್ತಿ. ಒಬ್ಬ ಬಂದು ನೀವು ನನ್ನ ಜಾಗದಲ್ಲಿ ಕೂತಿದ್ದೀರಾ ಅಂತ ಒಂದು ಕಡೆ ಆದ್ರೆ ಪರದೆ ಮೇಲೆ ವಿಂಟರ್ ಡ್ರೆಸ್ ಹಾಕಿದ್ದ ಹೀರೊ ಸ್ವಿಮ್ ವೇರ್ ಹಾಕಿದ್ದ ನಾಕಾರು ಹುಡಿಗಿಯರ ಜೊತೆ ಕುಣಿದು ಕುಪ್ಪಳಿಸ್ತ ಇದ್ದ. ನನ್ನ ದಿಗ್ಭ್ರಮೆ ನಿಮ್ಮ ಊಹೆಗೆ ಬಿಟ್ಟಿದ್ದು. ನನ್ನ ಹಿತೈಷಿಗಳೆಲ್ಲ ನನ್ನ ಮೇಲೆ ಪ್ರ್ಯಾಕ್ಟಿಕಲ್ ಜೋಕು ಮಾಡಿದ್ದಾರೆ. ಅಂದು ಅವ್ರನ್ನ ಶಪಿಸ್ತಾ ಮಗಳ ಜೊತೆ ಹೊರಕ್ಕೆ ನಡೆದೆ. ಅದು ಇನ್ನೂ ತಪ್ಪಾಯಿತು, ಈ ಕಳಪೆ ಸಿನಿಮಾ ನೋಡೋಕೆ ಜನ ಜಂಗುಳಿ, ಟಿಕೆಟ್‌ಗಾಗಿ ಹೊಡೆದಾಟ ಇತ್ಯಾದಿಗಳ ಮಧ್ಯೆ ಸಖತ್ತಾಗಿ ಸಿಕ್ಕಿ ಹಾಕಿಕೊಂಡ್ವಿ. ಹತ್ತಾರು ಜನ ಬ್ಲ್ಯಾಕ್‌ನಲ್ಲಿ ನಮ್ಮ ಟಿಕೆಟ್ ಕೊಂಡ್ಕೊಳ್ಳೋಕೆ ನಮ್ಮ ಹಿಂದೆ ಬಿದ್ದರು. ನನಗೆ ದಿಕ್ಕೆ ತೋಚದೆ ಶುದ್ಧ ಪಿಟಿಪಿಟಿ ಭೂಪ ಕೇಳೆಂದ. ಅನ್ನೋ ಹಾಗಿತ್ತು ನನ್ನ ಪರಿಸ್ಥಿತಿ. ಅಷ್ಟರಲ್ಲಿ ಉದ್ಧರಿಸಲೋಸುಗ ಒಬ್ಬ ಬಂದು ನನ್ನ ಟಿಕೆಟ್ ತಾನು ಕೊಂಡ್ಕೊಳ್ತಾನೆ ಅಂತ ಹೇಳಿದ ಯಾಂತ್ರಿಕವಾಗಿ ಟಿಕೆಟ್ ಅವನಿಗೆ ನೀಡಿ ಹೊರಗೆ ಬರುತ್ತಿದ್ದ ನನಗೆ ಎಷ್ಟೋ ನೋಟುಗಳನ್ನ ತುರುಕಿದ. ಜೊಂಬಿಯಂತಿದ್ದ ನನಗೆ ಇದ್ದಕ್ಕಿದ್ದಂತೆ ಜ್ಞಾನೋದಯವಾಗಿ ಎಷ್ಟಕ್ಕೆ ಕೊಂಡೆನೋ ಅಷ್ಟು ತೊಗಂಡು ಹೊರಗೆ ನಡೆದೆ. ಆಗ ಯಾರೋ ಹೇಳಿತಿದ್ರು ಪಾಪ, 70 ಎಮೆಮ್ ಥರ್ಟಿ ಎಮೆಮ್ ಅಂತ ಬೇರೆ ಬೇರೆ ಇರೋದೂ ಗೊತ್ತಿಲ್ಲದ ಅಮಾಯಕರು ಆಕೆ. ಆಗ ಪಕ್ಕದಲ್ಲಿದ್ದ ಸಣ್ಣ ಥಿಯೇಟರ್ ಒಳಗೆ ಹೋಗಿ ಸಿನಿಮಾ ನೋಡಿದ್ವಿ ಅಂತ ಹೇಳಬೇಕಾಗಿಲ್ಲ, ಇದಾದ ಮೇಲಂತೂ ನನಗೆ ಸಿನಿಮಾ ಮೇಲೆ ಇನ್ನೂ ಅಸಡ್ಡೆ.

ಒಮ್ಮೆ ರಾತ್ರಿ ಬಸ್ಸಿನಲ್ಲಿ ಪ್ರಯಾಣಿಸುವಾಗ ಬಲವಂತ ಮಾಘ ಸ್ನಾನದಂತೆ ಸಿನಿಮಾ ನೋಡಬೇಕಾದಾಗ ತಾಲ್ ಎಂಬ ಸಿನಿಮಾ ಹಾಕಿದ್ರು. ನಿದ್ದೆ ಡಿಸ್ಟರ್ಬ್ ಆಗಿದ್ದಕ್ಕೂ ಹಾಗೂ ಐಶ್ವರ್ಯರಾಯ್ ಯಾರನ್ನ ಮದುವೆ ಆಗ್ತಾಳೋ ಅನ್ನೋ ಯೋಚನೆಗೂ ಸಿಲುಕಿ ಒದ್ದಾಡಿ, ಮಗಳು 'ಅದು ಅವಳ ಬಯೋಪಿಕ್ ಅಲ್ಲಮ್ಮ' ಅಂತ ರೇಗಿಸಿದ್ದಕ್ಕೆ ಅಕ್ಕ ಪಕ್ಕ ದವರೆಲ್ಲರ ಡಿಸ್ಟರ್ಬ್ ಆಯ್ತೂಂತ ಕೆಂಗಣ್ಣು ನೋಟಕ್ಕೆ ತುತ್ತಾದೆ. ಈಚೆಗೆ ಬಸ್ಸಿನಲ್ಲಿ 'ಭರತ್ ಅನೆ ನೇನು' ಸಿನಿಮಾ ಹಾಕಿದ್ರು. ನಾನು ಕಣ್ಣು ಮುಚ್ಚಿ ಕಾಲ ಕಳೆದೆ. ನನ್ನ ಕರ್ಮಕ್ಕೆ ಊರಿಂದ ವಾಪಸ್ಸು ಬರೋವಾಗ ಕೂಡ ಅದನ್ನೇ ಹಾಕಿದ್ರೆ?. ಅದೂ ಬೇರೆ ಪ್ರೈವೇಟ್ ಬಸ್ಸು? ಎಷ್ಟೇ ಕಣ್ಣು ಮುಚ್ಚಿದ್ರೂ ಡೈಲಾಗ್ಸಾಯಿಗೆ ಬಂದು ಬಿಡಬೇಕಾ? ಇನ್ನು ಮೇಲೆ ಕಿವಿಗೆ ಪ್ಲಗ್‌ಗಳನ್ನೂ ತಗೊಂಡು ಹೋಗಬೇಕು, ಅಷ್ಟೇ.

ನೋಡಿದ್ರಾ ಇಂಗ್ಲಿಷ್‌ನ ಗಾದೆ ಇದೆಯಲ್ಲ ಅದೇ, ಒಬ್ಬನ ಆಹಾರ ಇನ್ನೊಬ್ಬನ ವಿಷ ಅಂತ. ಹಾಗೆ ನನಗೆ ಸಿನಿಮಾ ಅಂದ್ರೆ ಎಷ್ಟು ಬೇಜಾರೋ ಮಿಕ್ಕೆಷ್ಟೋ ಜನಕ್ಕೆ ಅದು ಮನೋರಂಜನೆ, ಅಷ್ಟೇ ತಾನೇ? ■

---

# ಲಿಮರಿಕ್ಸ್

ಸಿ.ಪಿ.ರವಿಕುಮಾರ್

## ಸೆಮಿನಾರಿಗೆ

ಎಲ್ಲಿಗೆ ಹೊರಟಿರಿ ಸವಾರಿ ಅಪರಾತ್ರಿ ಹೊತ್ತು?
ಎಂದು ಕೇಳಿದ ಪೊಲೀಸ್ ಪೇದೆಗೆ ಹೇಳಿದನು ಗುಟ್ಟು
ಕುಡಿತದ ದುಷ್ಪರಿಣಾಮಗಳ ಕುರಿತ ಸೆಮಿನಾರಿಗೆ ಹೊರಟೆ
ಯಾರು ಕೊಡುತ್ತಾರೆ ಸೆಮಿನಾರ್ ಈ ಹೊತ್ತು, ತಲೆಹರಟೆ!
ನನ್ನ ಹೆಂಡತಿ ಎಂದ ಬಾಡಿದ ಮುಖ ಹೊತ್ತು

## ಸಂದರ್ಶನ

ನೋಡಿ ಈ ಉದ್ಯೋಗ ಬೇಡುವ ಜವಾಬ್ದಾರಿ ಅಸಾಮಾನ್ಯ!
ಹೊರಬಲ್ಲಿರಾ ನೀವು? ಎಂದಾಗ ಕೆರಳಿ ಸ್ವಾಭಿಮಾನ
ಸರ್ ಯೋಚನೆಯೇ ಬೇಡ ನಿಮಗೆ ಈ ವಿಷ0ಯದಲ್ಲಿ!
ಅಸಂಖ್ಯ ನಿದರ್ಶನ ಕೊಡಬಲ್ಲೆ ಪೂರ್ವ ಉದ್ಯೋಗದಲ್ಲಿ
ಇದಕ್ಕೆ ನೀವೇ ಜವಾಬ್ದಾರಿ ಎನ್ನುತ್ತಿದ್ದದ್ದು ಬಹಳ ಸಾಮಾನ್ಯ

# ಮಾಬ್ಲಣ್ಣನ ಥಾಯ್ಲೆಂಡ್ ಪ್ರವಾಸ

●ಎಚ್. ಶಾಂತರಾಜ ಐತಾಳ್

ಕಾಕಾಂಚಲ ರಾಜ್ಯದ ಮುಕುಂದಾಪುರ ಗ್ರಾಮ ಯಾರಿಗೆ ತಾನೆ ಗೊತ್ತಿಲ್ಲ? ಮುಕುಂದಾಪುರವೆಂದ ಮೇಲೆ ಅಲ್ಲಿಯ ಮಾಬ್ಲಣ್ಣನ ಒಡನಾಟ ಇಲ್ಲದವರಾರು? ಯಾಕೆಂದರೆ ಈ ಮಾಬ್ಲಣ್ಣ ಎನ್ನೋ ಸ್ವಯಂಘೋಷಿತ ಸರ್ವಜ್ಞನಿಗೆ ಗೊತ್ತಿಲ್ಲದ್ದು ಯಾವುದೂ ಇಲ್ಲ.

ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಎರಡೆರಡು ಬಾರಿ ಡುಂಕಿ ಹೊಡೆದು ಓದಿಗೆ ವಿದಾಯ ಹೇಳಿದ ಮಾಬ್ಲಣ್ಣನ ಬಳಿ ಎಲ್ಲ ರೀತಿಯ ಸಲಹೆ ಕೇಳಲು ಜನ ದುಂಬಾಲು ಬೀಳುತ್ತಾರೆ. ತಮ್ಮ ಜಿಲ್ಲೆಯ ಎಲ್ಲ ಬಡಜನರೆಂದು ಗುರುತಿಸಲ್ಪಟ್ಟವರಿಗೆ ಧರ್ಮಾರ್ಥ ಅಕ್ಕಿ, ಗೋದಿ, ಕಟ್ಟಿಗೆ ವಿತರಿಸಿದರೂ, ಮೊನ್ನೆ ಮೊನ್ನೆ ನಡೆದ ಉಪಚುನಾವಣೆ ಒಂದರಲ್ಲಿ ತಮ್ಮ ಪಕ್ಷ ಸೋತಿತಲ್ಲ– ಇದನ್ನು ಹೇಗೆ ಸುಧಾರಿಸಬಹುದು –ಎಂದು ರಾಜಕೀಯ ಪಕ್ಷದ ಪುಢಾರಿಯೊಬ್ಬ ಮಾಬ್ಲಣ್ಣನ ಬಳಿ ತನ್ನ ಅಳಲನ್ನು ತೋಡಿಕೊಂಡಿದ್ದ. ಆಗ ಮಾಬ್ಲಣ್ಣ

'ಹಾಂಗೆಲ್ಲ ನಿಮ್ಮ ಅನ್ನ ಭಾಗ್ಯಕ್ಕೆ ಈಗ ಯಾರೂ ಮರ್ಲಾತ್ತಿಲ್ಲೆ ಬಲ್ರಿಯಾ ಹಳ್ಳಿ ಬದಿಗೆ ಶೇಂದಿ ಭಾಗ್ಯ ಯೋಜನೆ, ಚಿಕನ್ ಭಾಗ್ಯ ಯೋಜನೆ ಎಲ್ಲ ಮಾಡಿ ಕಾಂಬ– ಯಾಕಾತ್ತಿಲ್ಲೆ?

'ಅಲ್ದೆ ಮಾಬ್ಲಣ್ಣ–ಶೇಂದಿ ಭಾಗ್ಯ ಅಂತ ಹೇಳ್ತ್ರಿಯಲೇ–ಇದೆಲ್ಲ ಪೂರೈಸುವ ಜಂಬ್ರವೇ!'–ಎಂದು ಮತ್ತೆ ಪುಢಾರಿ ಉಲಿದಾಗ

'ಹಾಂಗೆಲ್ಲ ವಟ್ರಾಶಿ ಕೊಡುದಲ್ಲ. ಒಂದು ಲೆಕ್ಕ ಇಟ್ಕಣೆ, ಐವತ್ತು ಕೆ.ಜಿ.ತೂಕಕ್ಕೆ ಒಂದು ಕ್ವಾಟರ್ ಮತ್ತೆ ಪ್ರತೀ ಹತ್ತು ಕೆ.ಜಿ ಹೆಚ್ಚಾದಂಗೆಲ್ಲ ನೈಂಟಿ ಹೆಚ್ಚಿಗೆ ಕೊಟ್ಟು ಬಿಟ್ರೆ ಆಯ್ತುಲೆ. ಶೇಂದಿ ಭಾಗ್ಯ ಯೋಜನೆಗೆ ಎಲ್ಲ 'ಜೈ' ಅಂತ ಹೇಳಿ ಕೋಣಿಯುಕೇ ಶುರು ಮಾಡಿದ್ರೆ ಸೈಯಲೇ. ಇದರೊಟ್ಟಿಗೆ ಚಿಕನ್ ಭಾಗ್ಯವೂ ಸೇರಿಬಿಟ್ರೆ ನಿಮ್ಮನ್ನು ಹಿಡಿವವ್ರೇ ಇಲ್ಲೆ ಆತ್ತು ಕಾಣಿ'– ಎಂಬ ಪರಿಹಾರ ಬಂತು ಮಾಬ್ಲಣ್ಣನಿಂದ.

ಮುಕುಂದಾಪುರದ ಒಂದು ಸೆಟ್ ಭಜನಾಸಕ್ತರು ಮಾಬ್ಲಣ್ಣನ್ನ ನೋಡೋದಕ್ಕೆ ಬಂದಿದ್ರು. 'ನಂ ಕೇರಿಯಾಂಗೆ ನಾವೆಲ್ಲ ಸೇರ್ಕಂಡು ಒಂದು ಭಜನಾ ಮಂಡಳಿ ಮಾಡಿದ್ದೊ, ಮಾಬ್ಲಣ್ಣ. ಇದಕ್ಕೊಂದು ಗನಾದ್ದು ಹೆಸರು ಹೇಳಿ ಕಾಂಬ' ಎಂಬ ಅಹವಾಲನ್ನು ಮಾಬ್ಲಣ್ಣನ ಮುಂದೆ ಇಟ್ಟರು. ಮಾಬ್ಲಣ್ಣ ತುಸು ಯೋಚನೆ ಮಾಡಿ ಹೇಳ್ತಾರೆ–'ಭಜನಾ ಮಂಡಳಿಗೆ ನಾಮಕರಣ ಅಂತ ಹೇಳ್ರೆ ಸಂಸ್ಕೃತ ಶಬ್ದ ಸೇರ್ಸಿರೆ ಒಂದು ಗತ್ತು ಅಲ್ದೆ? ಹೀಂಗಾಯಿ ಅಪಸ್ವರಂ ಭಜನಾಮಂಡಳಿ ಅಂತ ಇರ್ಲಿ ಆಗದಾ?' ಎಂದು ಬಿಟ್ರಂತೆ. ಬಂದವರ ಪ್ರತಿಕ್ರಿಯೆ ಹೇಗಿತ್ತೋ ವರದಿಯಾಗಿಲ್ಲ!

ಎರಡು ಗಂಡು ಮಕ್ಕಳ ಅಪ್ಪನಿಗೆ ಮೂರನೇ ಸಲವೂ ಪುತ್ರ ಸಂತಾನವೇ ಪ್ರಾಪ್ತಿಯಾದಾಗ ಆ ಮಗುವಿಗೆ ನಾಮಕರಣ ಮಾಡುವಾಗಲೂ ಇದೇ ಮಾಬ್ಲಣ್ಣ ಸಹಕರಿಸಿದ್ದರಂತೆ.

'ಹ್ಯಾಂಗಿತ್ತಾ ಮಗು?' ಎಂದು ಕೇಳಿದಾಗ 'ಮಗು ಸಾಪ್ ಇತ್ತೆ. ಆರೆಕೂರ್ ಮಂಡಿ ಹಾಕ್ಕಂಡ್ ಇಡೀ ದಿನ ಮರ್ಕಿ, ಮರ್ಕಿ ನನಗೆ ಸಾಕು, ಬೇಕು ಮಾಡಿ ಬಿಡತ್ತ್ ಮಾಬ್ಲಣ್ಣ'

'ಶುರುವಿನ ಮಕ್ಕಳಿಗೆ ಎಂತ ಹೆಸರಿಟ್ಟಿದ್ದೆ' ಎಂದು ಮತ್ತೆ ಕೇಳ್ತಾರೆ ಮಾಬ್ಲಣ್ಣ

'ಒಬ್ಬ ಪ್ರತಾಪ, ಇನ್ನೊಬ್ಬ ಪ್ರದೀಪ' ಎಂಬ ಉತ್ತರ ಬಂತು. 'ಹಂಗಾರೆ ಇದು ಇಡೀ ದಿನ ಮರ್ಕತ್ತು ಅಂತ ಹೇಳ್ತಿಯಲೆ– ಪ್ರಲಾಪ ಅಂತ ಕರದ್ರೆ ಹೇಂಗೆ' ಎಂದು ಕೇಳ್ತಾರೆ ಮಾಬ್ಲಣ್ಣ. ಇದನ್ನು ಕೇಳಿ ಅಪ್ಪನ ಸವಾರಿ ಅಲ್ಲಿಂದ ಪರಾರಿ.

ಮುಕುಂದಾಪುರದಲ್ಲಿ ನಾಗಪ್ಪಯ್ಯ ಭಾರೀ ದೊಡ್ಡ ಬಿಲ್ಡರ್. ಚಿಕ್ಕಂದಿನಿಂದಲೂ 'ಹ್ಯಾಂಗಾರೂ ಮಾಡಿ ದುಡ್ಡು ಮಾಡ್ಕು ಕಾಣಿ' ಎನ್ನುತ್ತಾ ಕಡು ಬಡತನದಿಂದ ಈ ಮಟ್ಟಕ್ಕೇರಿದ ಆಸಾಮಿ. ಆತ ಕಟ್ಟಿಸಿದ ಮನೆಗಳಿಗೆ ಮಳೆಗಾಲದಲ್ಲಂತೂ ಮೇಘೋತ್ಪನ್ನ ನೀರು ಪೂರೈಕೆ ಯೋಜನೆಯನ್ವಯ ಅಬಾಧಿತ ನೀರು ಪೂರೈಕೆಯಾಗುತ್ತಿತ್ತು. ಪ್ರಥಮ ಮಳೆಗೇ ಎಲ್ಲ ಕಟ್ಟಡಗಳಲ್ಲೂ ಏಕರೂಪಿ ಜಲ ಸೋರಿಕೆ ಸವಲತ್ತು ಲಭಿಸುತ್ತಿತ್ತು. ಇದನ್ನು ನಿವಾರಿಸುವ ಉಪಾಯವನ್ನೂ ನಾಗಪ್ಪಯ್ಯನೇ ಸೂಚಿಸುತ್ತಿದ್ದ. 'ಮಳೆ ನೀರು ಮನಿ ವಳಗೆ ಬಂದ್ರೆ ವರುಣದೇವ್ರೇ ಬಂದ ಹಾಂಗೆ. ನಿಮಗದು ಬ್ಯಾಡಾದ್ರ ಹೇಳಿ. ಮೇಲಿಂದ ಶೋಕಿನ ತಗಡು ಹಾಕ್ಸಿಕೊಡ್ತೆ. ಇಲ್ಕಣಿ, ಮತ್ತೆ ಒಂದು ಹನಿ ನೀರು ಸೋರಿರೂ ನಿಮ್ಕೊಂದೆ'–ಎಂದು ಆಣಿ ಭಾಷೆ ಹಾಕಿ, ಆ ಕಟ್ಟಡಗಳಿಗೆಲ್ಲ ಶೀಟ್ ಹಾಕಿಸೋ ಕೆಲಸವನ್ನೂ ಗಿಟ್ಟಿಸಿಕೊಳ್ಳುತ್ತಿದ್ದ. ಒಮ್ಮೆ ಹೊಸ ಕಟ್ಟಡಗಳ ಸಮುಚ್ಚಯ– ಅಪಾರ್ಟ್‌ಮೆಂಟ್–ಕಟ್ಟಿಸಿ ಅದಕ್ಕೊಂದು 'ಲಾಯಿಕಿನ ಹೊಸರು ಕೇಂಬುಕೆ' ಮಾಬ್ಲಣ್ಣನ ಹತ್ತಿರ ಬಂದಿದ್ದ. ನಾಗಪ್ಪಯ್ಯ–ಇವನ 'ಜಾಪ್' ಎಲ್ಲ ಗೊತ್ತಿದ್ದ ಮಾಬ್ಲಣ್ಣ ಮಂಡೆ ಖರ್ಚು ಮಾಡದೇ ಹೇಳಿದ್ರು–'ಶಿಥಿಲ ಅಪಾರ್ಟ್‌ಮೆಂಟ್ಸ್ ಸಮಾ ಒಪ್ಪುತ್ತು ನಾಗಪ್ಪಯ್ಯ' ನಿನ್ನ ಹಡಬೀ ಬುದ್ಧಿ ನಂಗೊತ್ತಿಲ್ಯ' ಹೀಗೆ ಹೇಳುತ್ತಾ ಇರುವಾಗ ನಾಗಪ್ಪಯ್ಯ ದುರ್ದಾನ ಪಡೆದವರಂತೆ ಅಂತರ್ಧಾನನಾಗಿದ್ದಂತೂ ಸುಳ್ಳಲ್ಲ.

ಒಂದು ಹೆಸರಿನಿಂದ ಏನೆಲ್ಲ ಅನಪೇಕ್ಷಿತ ಅಬದ್ಧ ಘಟನೆಗಳು, ನಡೆದಿಲ್ಲ ಎಂದು ಮಾಬ್ಲಣ್ಣ ಕೆಲವೊಮ್ಮೆ ಉದಾಹರಿಸುವುದುಂಟು. ಯಾಕೋ ಹೇಳಿದ್ದನ್ನು ಕೇಳಿಸಿಕೊಂಡು ತನ್ನದೇ ಮೂಸೆಯಿಂದ ಹೊರ ಹಾಕಿ, ಮೀಸೆ ತಿರುಗಿಸ್ತಿದ್ದ ಮಹಾಶಯ ಈತ.

'ಈ ಕಾರ್ ಕಂಪನಿ ಹೆಡ್‌ಕ್ವಾರ್ಟರ್ಸ್ ಅಮೆರಿಕದಲ್ಲಿಪ್ಪು ಜನರಲ್ ಮೋಟರ್ಸ್ ಅಂಬ್ರು. ಅಲ್ಲಿ ಒಂದು ಸರಿ 'ನೋವಾ' ಕಾರ್ ತಯಾರ್ ಮಾಡಿರಂಬ್ರು. ಅದಕ್ಕೆ ಮಾರ್ಕೆಟ್ ಬೇಕಲೇ. ಯುರೋಪಿಗೇ ಕಳ್ಸುವಾ ಅಂತ ಗ್ರೆಸಿಕೊಂಡು ಸ್ಪೆಯಿನ್ ದೇಶಲ್ಲಿ ಈ ಕಾರಿಗೆ ಗಿರಾಕಿ ಹುಡುಕುಕೆ ಹೋದ್ರಂಬ್ರು. ಈ ಕಿಚ್ಚಿಡಿದ ಸ್ಪೆಯಿನ್ ದೇಶದವು ಈ ಕಾರಿನ ಮೂಸಿ ಸಾ ಕಾಣುಲ್ಲೆಂಬ್ರು; ಹ್ವಾಯ್, ಕಡೀಕೆ ಕೇಂಬೊತಿಗೆ ಸ್ಪೆಯಿನ್ ಬಾಶೆಲಿ ನೋವಾ– ಅಂತ ಹೇಳ್ರೆ–ಒಂದೇ ಕಡೆ ಕೂಕಂಡು ಇಪ್ಪುದು–ಅಂತ ಅರ್ಥ ಬತ್ತಂಬ್ರು. ಹೀಂಗೆ ಬಿಸಿ ಬಿಸಿ ದುಡ್ಡು ಕೊಟ್ಟು ಒಂದೇ ಕಡೇಲಿ ಕೂಕಂಡಿಪ್ಪು ಕಾರು

ತೆಕಂಬುಕೆ ಅವುಕ್ಕೇನ್ ಗಿರ್‌ವಾ? ಹಾಂಗಾಯಿ ಒಂದು ಹೆಸ್ರಿಂದಾಯಿ ಈ ಕಾರೇ ಕವುಂಚಿ ಬಿತ್ತಂಬ್ರು. ಮೊನ್ನೆ ನಮ್ಮ ಸಣ್ಮಾವ ಅಮೆರಿಕದಿಂದ ಬಂದಂತ ಈ ಕತಿ ಹೇಳ್ದ ಕಾಣೆ; ಈ ಕಾರ್ ಕಂಪೆನಿಯವರದ್ದು ವಾಲಿ ಕಳಿಯ'– ಎಂದು ಮಂಗಳೂರನ್ನು ಸಹ ನೋಡಿರದ ತನ್ನ ಸಣ್ಣ ಮಾವನನ್ನು ಅಮೆರಿಕಕ್ಕೆ ಕಳುಹಿಸಿ, ವಿಷಯ ಸಂಗ್ರಹಿಸದ್ದರು ಮಾಬ್ಲಣ್ಣ.

ಈ ಮಾಬ್ಲಣ್ಣನ ಬಾಯಿಗೆ ಕೋಲು ಹಾಕುವ ಜನರೂ ಇಲ್ಲದಿಲ್ಲ. ಯಾರೋ ಒಮ್ಮೆ ಅವರನ್ನು ಚುಡಾಯಿಸಲಿಕ್ಕಂತಲೇ ಕೇಳ್ತಾರಂತೆ.

'ಹೌದಾ ಮಾಬ್ಲಣ್ಣ–ನೀವು ಇಷ್ಟೆಲ್ಲ ಕಾರ್‌ಬಾರ್ ಮಾಡ್ತ್ರಿಯಲೆ. ನಾವು ಟೂರ್ ಹೋಪುದಾರೆ ಯಾವ ದೇಶಕ್ಕೆ ಹೋಯ್ಲುಕ್ಕು ಹೇಳಿ ಕಾಂಬ'– ಅಂತ

ಅದಕ್ಕೆ ಮಾಬ್ಲಣ್ಣ–'ಈ ಭೂಮಿಲಿ ಹುಟ್ಟಿದ ಮೇಲೆ ಒಂದ್ಸರಿ ತಾಯ್‌ಲೆಂಡ್ ದೇಶ ಇತ್ತಲೆ–ಅಲ್ಲಿಗೆ ಹೋಯಿ ಬರ್ಕು. ಯಂತದೇ ಅಲ್ಲಿ, ರಾತ್ರಿ ಹಗಲು ಹೆಣ್ಣು, ಗಂಡು; ಸಣ್ಣವರು, ದೊಡ್ಡವರು–ಯತ್ಯಾಸವೇ ಇಲ್ಲೆ. ಒಟ್ಟು ಗಂಜಲ್ ಹೊಡಿ ಹಾರಸಲಕ್ಕು; ಯಂತ ಬೇಕಾರ್ ಮಾಡಲಕ್ಕು' ಎಂದು ರೈಲು ಬಿಡುತ್ತಿರುವಾಗ ಮತ್ತೆ ಅವರನ್ನು ಕೇಳ್ತಾರಂತೆ.

'ಹಂಗರೆ ನೀವು ಯಾಗಳಿಗೆ ಅಲ್ಲಿಗೆ ಹೋಯಿದ್ರಿ ಮಾಬ್ಲಣ್ಣ?' ಎಂದಾಗ– ಮಾಬ್ಲಣ್ಣ ಬಾಯಿ ಆಕಳಿಸುತ್ತಾ ಉತ್ತರಿಸ್ತಾರಂತೆ,

'ನಾನಲ್ದೆ ಹ್ವಾದ್ ತಿಂಗಳು ನನ್ನ ಮಿಸೆಸ್ ಹೋಯಿ ಬಂದ್ಲು?' ■

---

## ಲಿಮಿರಿಕ್ಸ್

ಸಿ.ಪಿ.ರವಿಕುಮಾರ್

### ಫಿಲಾಸಫಿ

ನಿಟ್ಟುಸಿರಿಟ್ಟು ಅವನೆಂದ: ಬದುಕೆಂದರೆ
ಅಷ್ಟೇ!
ಒಂದು ಬಾಗಿಲು ಮುಚ್ಚಿದರೆ ಇನ್ನೊಂದು
ತೆರೆಯುತ್ತೆ!
ಇರಬಹುದು ಸರ್, ಆದರೆ ಕಾರಿನ
ರಿಪೇರಿ
ನೀವು ಈಗಲೇ ಮಾಡಿಸಲಿಲ್ಲಾಂದ್ರೆ
ಭಾರೀ
ಡಿಸ್ಕೌಂಟ್ ನಮಗೆ ಕೊಡಬೇಕು ಮತ್ತೆ!